ಬುಧವಾರ, ಡಿಸೆಂಬರ್ 14, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**

ಫೋನ್ ನಂಬರ್ ಜತೆ ಕರೆ ಮಾಡಿದವರ ಹೆಸರು ಕೂಡ ಕಾಣುವಂತಾಗಬೇಕು ಎಂದು ಟ್ರಾಯ್ ಅಭಿಪ್ರಾಯಿಸಿದೆ

ನಮ್ಮ ಕ್ಲಿನಿಕ್

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

## ನಮ್ಮ ಆರೋಗ್ಯ, ನಮ್ಮ ಸಮೀಪ.

## ನಮ್ಮ ಕ್ಲಿನಿಕ್.

ಸರ್ವರಿಗೂ ಉತ್ತಮ ಚಿಕಿತ್ಸಾ ಸೌಕರ್ಯಗಳು.
ಅನಾರೋಗ್ಯಪೀಡಿತರು ಯಾರೇ ಆಗಿರಲಿ, ಉತ್ತಮ ಚಿಕಿತ್ಸೆ ಹಾಗೂ ಕಾಳಜಿಯುತ ಸೇವೆಗಳಿಗಾಗಿ ನಮ್ಮ ಕ್ಲಿನಿಕ್ ನಿಮ್ಮೊಂದಿಗಿದೆ.

ಡಾ. ಕೆ. ಸುಧಾಕರ್,
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು
ನಮ್ಮ ಕ್ಲಿನಿಕ್ಕಿನ ಚಾಲನೆ ಕುರಿತಂತೆ ಚರ್ಚಿಸುತ್ತಿರುವ ಸಂದರ್ಭ.

## ಭಾರತದಲ್ಲಿ ಪ್ರಪ್ರಥಮ ಬಾರಿಗೆ, ಏಕಕಾಲಕ್ಕೆ 100 ಕ್ಲಿನಿಕ್ಕುಗಳಿಗೆ ಚಾಲನೆ.

• ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳು • ರಾಜ್ಯಾದ್ಯಂತ 438 ಕ್ಲಿನಿಕ್ ಗಳ ಸ್ಥಾಪನೆ • ನಿರೀಕ್ಷಣಾ ಕೊಠಡಿ, ತಪಾಸಣಾ ಕೊಠಡಿ, ಪ್ರಯೋಗಶಾಲೆ, ಯೋಗ ಕೊಠಡಿ, ಔಷಧ ಕೊಠಡಿಗಳನ್ನು ಒಳಗೊಂಡ ವಿಶಾಲವಾದ ಆರೋಗ್ಯ ಕೇಂದ್ರ • ಪ್ರತಿ 15000-20000 ಜನಸಂಖ್ಯೆಗೆ ಒಂದರಂತೆ ನಮ್ಮ ಕ್ಲಿನಿಕ್ ಅನ್ನು ಅನುಷ್ಠಾನಗೊಳಿಸಲು ಉದ್ದೇಶಿತ ಯೋಜನೆ • ಉಚಿತ ಆರೋಗ್ಯ ತಪಾಸಣೆ, ಔಷಧಗಳು, ಪ್ರಯೋಗಶಾಲೆಗಳು ಹಾಗೂ ಇತರೇ ಹದಿನಾಲ್ಕು ಪರೀಕ್ಷೆಗಳು

## ನಿಮ್ಮ ಆರೋಗ್ಯ, ನಮ್ಮ ಬದ್ಧತೆ.

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ · ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ · ಗುಂಪು ಸೇರುವುದನ್ನು ತಪ್ಪಿಸಿ · ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬೇಡಿ · ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಹೊರವಲಯದಲ್ಲೂ ಸಮಸ್ಯೆ ತೀವ್ರ • ಸಾಲುಗಟ್ಟಿ ನಿಲ್ಲುವ ವಾಹನಗಳು • ರಸ್ತೆ ದಾಟಲು ಶಾಲಾ ಮಕ್ಕಳಿಗೆ ತೊಂದರೆ

# ಗಂಗಮ್ಮ ವೃತ್ತ: ಸಂಚಾರ ಸಮಸ್ಯೆಗಳ ಹುತ್ತ

• ಆದಿತ್ಯ ಕೆ.ಎ.

ಗಂಗಮ್ಮ ವೃತ್ತದಲ್ಲಿ ಮಂಗಳವಾರ ಸಂಜೆ ಕಂಡುಬಂದ ವಾಹನಗಳ ಸಾಲು – ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

**ಬೆಂಗಳೂರು:** ಪ್ರಮುಖ ವೃತ್ತ ಹಾಗೂ ರಸ್ತೆ ಅಲ್ಲದೇ ನಗರದ ಹೊರವಲಯದ ಸಣ್ಣಪುಟ್ಟ ರಸ್ತೆಗಳಲ್ಲೂ ಸಂಚಾರ ದಟ್ಟಣೆಯಿಂದ ಜನರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ.

ಗಂಗಮ್ಮ ವೃತ್ತದಿಂದ ಬಿಇಎಲ್ ವೃತ್ತದ ಕಡೆಗೆ ಹಾಗೂ ಅದೇ ವೃತ್ತದಿಂದ ಜಾಲಹಳ್ಳಿ ಕ್ರಾಸ್‌ವರೆಗೂ ಬೆಳಿಗ್ಗೆ-ಸಂಜೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ವಾಹನ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಹರಸಾಹಸಪಡುತ್ತಿದ್ದಾರೆ.

ಪ್ರಮುಖ ವೃತ್ತಗಳಲ್ಲಿ ದಟ್ಟಣೆ ನಿಯಂತ್ರಿಸುವ ಪೊಲೀಸರು, ಸಣ್ಣಪುಟ್ಟ ರಸ್ತೆಗಳ ಕಡೆಗೆ ಅಷ್ಟಾಗಿ ಗಮನಹರಿಸುತ್ತಿಲ್ಲ ಎಂಬ ಆರೋಪವಿದೆ.

ಗಂಗಮ್ಮ ವೃತ್ತ ಹಾಗೂ ಬಿಇಎಲ್‌ನಲ್ಲಿ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರನ್ನು ನಿಯೋಜಿಸಿದ್ದರೂ ಜನರು ಕೆಲಸಕ್ಕೆ ತೆರಳುವ ಅವಧಿಯಲ್ಲಿ ಹಾಗೂ ಶಾಲಾ-ಕಾಲೇಜುಗಳು ಆರಂಭವಾಗುವ ಮತ್ತು ಬಿಡುವ ಸಮಯದಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಈ ಭಾಗದಲ್ಲಿ ರಸ್ತೆಗಳೂ ಕಿರಿದಾಗಿದ್ದು, ಸಮಸ್ಯೆ ಹೆಚ್ಚಲು ಕಾರಣವಾಗಿದೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಗಂಗಮ್ಮ ವೃತ್ತದ ಮೂಲಕವೇ ಯಲಹಂಕ, ಎಂ.ಎಸ್. ಪಾಳ್ಯ, ವಿದ್ಯಾರಣ್ಯಪುರ, ಮತ್ತಿಕೆರೆ, ಯಶವಂತಪುರ, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ ಕಡೆಗೆ ವಾಹನಗಳು ಸಂಚರಿಸಬೇಕು. ಇದೂ ದಟ್ಟಣೆಗೆ ಕಾರಣವಾಗಿದೆ.

ಹಾಸನ, ಬಳ್ಳಾರಿ, ತುಮಕೂರು ಕಡೆಯಿಂದ ಮತ್ತಿಕೆರೆ ಕಡೆಗೆ ಬರುವ ವಾಹನಗಳು ರಾಷ್ಟ್ರೀಯ ಹೆದ್ದಾರಿ ಬದಲಿಗೆ ಈ ರಸ್ತೆಯನ್ನು ಅವಲಂಬಿಸಿದ್ದು, ಈ ಮಾರ್ಗದಲ್ಲಿ ವಾಹನ ದಟ್ಟಣೆ ವಿಪರೀತವಾಗುತ್ತಿದೆ. ಹಿಂದೆ ಈ ಮಾರ್ಗದಲ್ಲಿ ಈ ಸ್ಥಿತಿ ಇರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಮಸ್ಯೆ ತೀವ್ರವಾಗುತ್ತಿದೆ ಎಂದು ಗಂಗಮ್ಮನ ಗುಡಿ ಬಳಿಯ ಟೀ ವ್ಯಾಪಾರಿ ಅಫ್ತಾಬ್ ಹೇಳುತ್ತಾರೆ.

ದಟ್ಟಣೆ ಬವಣೆ 3

'ಮಧ್ಯಾಹ್ನದ ಸಮಯದಲ್ಲಿ ಈ ಮಾರ್ಗದಲ್ಲಿ ಅಷ್ಟು ದಟ್ಟಣೆ ಇರುವುದಿಲ್ಲ. ಬೆಳಿಗ್ಗೆ 7ರಿಂದ 10ರ ತನಕ ಹಾಗೂ ಸಂಜೆ 5ರಿಂದ ರಾತ್ರಿ ಗಂಟೆಯ ತನಕ ಗಂಗಮ್ಮ ವೃತ್ತದಲ್ಲಿ ವಿಪರೀತ ಸಮಸ್ಯೆ ಇರುತ್ತದೆ' ಎಂದೂ ಅಳಲು ತೋಡಿಕೊಂಡರು.

ಎಸ್.ಎಂ. ರಸ್ತೆಯು ಕಿರಿದಾಗಿದ್ದು, ಸಮಸ್ಯೆ ತೀವ್ರವಾಗಿದೆ. ಜಾಲಹಳ್ಳಿ ವೆಸ್ಟ್‌ನಲ್ಲಿ ಕೇಂದ್ರೀಯ ವಿದ್ಯಾಲಯ ಹಾಗೂ ಫಾತಿಮಾ ಶಾಲೆಗಳಿವೆ. ರಸ್ತೆ ಬದಿಯಲ್ಲೇ ಶಾಲೆಗಳಿದ್ದು, ಈ ಪ್ರದೇಶವು ದಟ್ಟಣೆ ವಲಯವಾಗಿ ಮಾರ್ಪಟ್ಟಿದೆ. ನಾಗರಿಕರು ನಿತ್ಯವೂ ಗೋಳು ಅನುಭವಿಸುತ್ತಿದ್ದಾರೆ. ಇಲ್ಲಿ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಾಹನ ಚಾಲಕರು ದೂರುತ್ತಾರೆ.

**'ನಿತ್ಯ ಪೊಲೀಸರ ನಿಯೋಜಿಸಿ':** ಜಾಲಹಳ್ಳಿ ವೆಸ್ಟ್ ಬಳಿ ನಿತ್ಯ ಟ್ರಾಫಿಕ್ ಪೊಲೀಸರು ಇರುವುದಿಲ್ಲ. ಕೆಲವೊಮ್ಮೆ ಮಾತ್ರ ಬರುತ್ತಾರೆ. ಶಾಲೆ ಆರಂಭಗೊಳ್ಳುವ ಸಂದರ್ಭದಲ್ಲಿ ದಟ್ಟಣೆಯಿದ್ದು, ಮಕ್ಕಳು ರಸ್ತೆ ದಾಟಲು ಪರದಾಡುತ್ತಿರುತ್ತಾರೆ. ಬಸ್, ಲಾರಿ, ಕಾರು ವೇಗವಾಗಿ ಬರುತ್ತವೆ. ನಿತ್ಯವೂ ಕಮ್ಮಗೊಂಡನಹಳ್ಳಿ ವೃತ್ತದಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಬೇಕು ಎಂದು ವಿದ್ಯಾರಣ್ಯಪುರದ ನಿವಾಸಿ ರಮೇಶ್ ಆಗ್ರಹಿಸಿದ್ದಾರೆ.

ಎಸ್.ಎಂ. ರಸ್ತೆಯ ಅಯ್ಯಪ್ಪ ದೇವಸ್ಥಾನ ಬಳಿಯೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ದಾಸರಹಳ್ಳಿ, ಪೈಪ್‌ಲೈನ್ ಕಡೆಗೆ ಕಿರಿದಾದ ರಸ್ತೆಯಲ್ಲೇ ವಾಹನಗಳು ಸಾಗಬೇಕಿದೆ. ಈ ಸ್ಥಳದಲ್ಲಿ ಸಿಗ್ನಲ್ ವ್ಯವಸ್ಥೆ ಕೂಡ ಇಲ್ಲ. ಸಂಚಾರ ಪೊಲೀಸರು ಇಡೀ ದಿನ ಸ್ಥಳದಲ್ಲಿದ್ದರೂ ದಟ್ಟಣೆ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಇದೇ ರಸ್ತೆಯ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿಯಿಂದ ಜಾಲಹಳ್ಳಿ ವೃತ್ತದವರೆಗೂ ರಾತ್ರಿ ವೇಳೆ ಲಾರಿ, ದ್ವಿಚಕ್ರ ವಾಹನ, ಕಾರು ಹಾಗೂ ಬಿಎಂಟಿಸಿ ಬಸ್‌ಗಳು ನಿಂತಿರುತ್ತವೆ. ಸಮಸ್ಯೆ ತೀವ್ರವಾಗಿದೆ.

## ಸಂಚಾರ ಕಿರಿಕಿರಿ; ಸೂಚಿಸಿ ಪರಿಹಾರ

ಸಂಚಾರ ಕಿರಿಕಿರಿ ಹಾಗೂ ದಟ್ಟಣೆಯಲ್ಲಿ ಸಿಲುಕಿ ಗೋಳು ಅನುಭವಿಸುತ್ತಿದ್ದೀರಾ? ಹಾಗಿದ್ದರೆ ನಿಮ್ಮ ಸಮಸ್ಯೆ ಬರೆದು ಕಳುಹಿಸಿ. ಅದಕ್ಕೆ ಕ್ರಿಯಾತ್ಮಕ ಪರಿಹಾರವಿದ್ದಲ್ಲಿ ಅದನ್ನೂ ಸೂಚಿಸಿ. ನಿಮ್ಮ ಬರಹ 50 ಪದಗಳ ಮಿತಿಯಲ್ಲಿರಲಿ. ಯಾವ ಸ್ಥಳದಲ್ಲಿ ಸಮಸ್ಯೆ ಇದೆ ಎನ್ನುವುದನ್ನು ಸ್ಪಷ್ಟವಾಗಿ ನಮೂದಿಸಿ. ನಿಮ್ಮ ಹೆಸರು, ಪೂರ್ಣ ವಿಳಾಸವೂ ಇರಲಿ.

**ವಾಟ್ಸ್‌ಆ್ಯಪ್ ನಂಬರ್:**

**9606038256**

## ಜನ ಅನುಭವಿಸಿದ ಕಿರಿಕಿರಿ...

### ರಸ್ತೆಯಲ್ಲೇ ಬಸ್‌ಗಳ ಕಾಯುವಿಕೆ!

ಪ್ರಸನ್ನ ಚಿತ್ರಮಂದಿರದ ಬಳಿ ಸದಾ ವಾಹನ ದಟ್ಟಣೆ ಇರುತ್ತದೆ. ಇಲ್ಲಿ ಮಾಗಡಿ ಕಡೆಗೆ ಸಂಚರಿಸುವ ಖಾಸಗಿ ಮತ್ತು ಕೆಎಸ್‌ಆರ್‌ಟಿಸಿ ಬಸ್ಸುಗಳು ದಟ್ಟಣೆ ಅವಧಿಯಲ್ಲಿ ಒಂದರ ಹಿಂದೆ ಒಂದು ನಿಲ್ಲುತ್ತಿವೆ. ಕಿರಿದಾದ ರಸ್ತೆಯಲ್ಲಿ ಅಕ್ಕಪಕ್ಕ ನಿಲ್ಲಿಸಿ ದಿನವೂ ವಾಹನ ಸಂಚಾರಕ್ಕೆ ಅನನುಕೂಲ ಮಾಡಲಾಗುತ್ತಿದೆ. ಪರಿಣಾಮ ಇಲ್ಲಿನ ಸಿಗ್ನಲ್‌ಗಳಲ್ಲಿ ಎರಡರಿಂದ ಮೂರು ಬಾರಿ ಕಾಯಬೇಕಾದ ಸ್ಥಿತಿಯಿದೆ. ಸಂಜೆ ವೇಳೆ ಸಮಸ್ಯೆ ಹೆಚ್ಚು. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕಿದೆ.

**ಎಂ.ಉಮಾ ಶಂಕರಬಾಬು,** ಕೆಂಪಾಪುರ ಅಗ್ರಹಾರ, ಮಾಗಡಿ ರಸ್ತೆ

### ದ್ವಿಚಕ್ರ: ಪ್ರತ್ಯೇಕ ಪಥ ನಿರ್ಮಿಸಿ

ದ್ವಿಚಕ್ರ ವಾಹನಗಳಿಗೆ ಪ್ರತ್ಯೇಕ ಪಥ ನಿರ್ಮಿಸಬೇಕು. ಸಂಚಾರ ದಟ್ಟಣೆ ಉಂಟಾದರೆ ಅಕ್ಕಪಕ್ಕದ ರಸ್ತೆಯಲ್ಲಿ ವಾಹನ ಸಾಗಲು ಸೂಚನೆ ನೀಡಬೇಕು. ಸಂಚಾರ ಸಮಸ್ಯೆ ನಿವಾರಿಸಲು ಪೊಲೀಸ್ ಇಲಾಖೆ ಪ್ರತ್ಯೇಕ ಎಸ್‌ಒಪಿ ಸಿದ್ಧಪಡಿಸಿ ಅನುಷ್ಠಾನಕ್ಕೆ ತರಬೇಕು. ಸಿಗ್ನಲ್‌ರಹಿತ ವೃತ್ತಗಳಲ್ಲಿ ಟ್ರಾಫಿಕ್ ಅನ್ನು ಸರಿಯಾಗಿ ನಿರ್ವಹಣೆ ಮಾಡಬೇಕು.

**ಎನ್.ಗಂಗಾಧರ,** ಜೆ.ಪಿ. ನಗರ

## ಸುದ್ದಿ 2 ನಿಮಿಷ

### ತಿಂಡಿ–ತಿನಿಸು ವ್ಯಾಪಾರದ ಅವಧಿ ವಿಸ್ತರಣೆ

**ಬೆಂಗಳೂರು:** ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯಗಳು ಡಿ.14 ಹಾಗೂ 15ರಂದು ನಡೆಯಲಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ತಿಂಡಿ–ತಿನಿಸು ವ್ಯಾಪಾರ ನಡೆಸುವ ಅವಧಿಯನ್ನು ವಿಸ್ತರಿಸಿ ಹೆಚ್ಚುವರಿ ಪೊಲೀಸ್ ಆಯುಕ್ತ (ಆಡಳಿತ) ಡಾ.ಎ. ಸುಬ್ರಮಣ್ಯೇಶ್ವರ ರಾವ್ ಆದೇಶ ಹೊರಡಿಸಿದ್ದಾರೆ.

ವ್ಯಾಪಾರ ಅವಧಿಯನ್ನು ರಾತ್ರಿ 1ರಿಂದ ಮುಂಜಾನೆ 3.30ರ ತನಕ ವಿಸ್ತರಣೆ ಮಾಡಲಾಗಿದೆ. ಫೆಡರೇಷನ್ ಆಫ್ ಕ್ಲಬ್ ಸದಸ್ಯರ ಮನವಿ ಮೇರೆಗೆ ಈ ಆದೇಶ ಮಾಡಲಾಗಿದೆ. ಷರತ್ತಿಗೆ ಒಳಪಡಿಸಿದಂತೆ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮುಂಜಾನೆ 3.30ರಿಂದ ಬೆಳಿಗ್ಗೆ 6 ಗಂಟೆ ತನಕ ವ್ಯಾಪಾರ ನಡೆಸಿದರೆ ಕ್ರಮ ಕೈಗೊಳ್ಳಲಾಗುವುದು. ಅಬಕಾರಿ ಪರವಾನಗಿ ಪಡೆದು ಮದ್ಯ ಮಾರಾಟ ಮಾಡುವ ಬಾರ್, ರೆಸ್ಟೋರೆಂಟ್, ಕ್ಲಬ್ ಹಾಗೂ ಹೋಟೆಲ್‌ಗಳ ವಹಿವಾಟು ಅವಧಿಯು (ಸಿಎಲ್9, ಸಿಎಲ್4, ಸಿಎಲ್7) ಅಬಕಾರಿ ನಿಯಮ ಹಾಗೂ ಷರತ್ತುಗಳಿಗೆ ಒಳಪಟ್ಟಿರುತ್ತವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ರೈಲು ನಿಲ್ದಾಣ ಹಾಗೂ ಬಸ್ ನಿಲ್ದಾಣಗಳಲ್ಲಿ ಈ ಆದೇಶವು ಅನ್ವಯ ಆಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

## ಪ್ರಥಮ ಚಿಕಿತ್ಸಾ ಕೇಂದ್ರ ಪ್ರಾರಂಭ

**ಬೆಂಗಳೂರು:** ಬಿ.ಟಿ.ಎಂ.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮುನಿಚಿನ್ನಪ್ಪ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ಥಾಪಿಸಲಾದ ಆರೋಗ್ಯ ಪ್ರಥಮ ಚಿಕಿತ್ಸಾ ಕೇಂದ್ರವನ್ನು ಸ್ಥಳೀಯ ಶಾಸಕ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು.

ಈ ಪ್ರೌಢಶಾಲೆಯಲ್ಲಿ ಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಮತ್ತು ಬಾಂಧವ ಸಂಸ್ಥೆ ಸಹಯೋಗದಲ್ಲಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕ, ಗ್ರಂಥಾಲಯ ಹಾಗೂ ಸ್ಯಾನಿಟರಿ ಪ್ಯಾಡ್ ವಿತರಿಸುವ ಯಂತ್ರವನ್ನೂ ಲೋಕಾರ್ಪಣೆ ಮಾಡಿದರು.

'ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಆರ್ಥಿಕವಾಗಿ ಹಿಂದುಳಿದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಶ್ರೀಮಂತರ ಮಕ್ಕಳಿಗೆ ಸಿಗುವ ಹೈಟೆಕ್ ಶಿಕ್ಷಣ ಸೌಲಭ್ಯಗಳು ಸರ್ಕಾರಿ ಶಾಲೆಯ ಮಕ್ಕಳಿಗೂ ಸಿಗಬೇಕು. ಬಿ.ಟಿ.ಎಂ.ವಿಧಾನಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಅಭಿವೃದ್ಧಿ ಪಡಿಸಲಾಗುತ್ತಿದೆ' ಎಂದು ರಾಮಲಿಂಗಾರೆಡ್ಡಿ ಹೇಳಿದರು. 'ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಶಾಲೆಯ ಮಕ್ಕಳು ಹಾಗೂ ಶಿಕ್ಷಕರ ಆರೋಗ್ಯ ಸುರಕ್ಷತೆಗೆ ಪ್ರಥಮ ಚಿಕಿತ್ಸೆ ಕೊಠಡಿಯನ್ನ ಸರ್ಕಾರಿ ಶಾಲೆಯಲ್ಲಿ ಆರಂಭಿಸಲಾಗಿದೆ' ಎಂದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಕೇರಳಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ ಡಿಕ್ಕಿ ಹೊಡೆದು ಹೆಣ್ಣಾನೆಯೊಂದು ಮೃತಪಟ್ಟಿರುವುದು

## ಲಾರಿ ಡಿಕ್ಕಿ ಹೊಡೆದು ಆನೆ ಸಾವು

**ಗುಂಡ್ಲುಪೇಟೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಕೇರಳಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ (ಎನ್ ಎಚ್ 766) ಲಾರಿ ಡಿಕ್ಕಿ ಹೊಡೆದು ಹೆಣ್ಣಾನೆಯೊಂದು ಮಂಗಳವಾರ ರಾತ್ರಿ ಮೃತಪಟ್ಟಿದೆ.

ಮದ್ದೂರು ವಲಯದಲ್ಲಿ ಈ ಘಟನೆ ನಡೆದಿದೆ. ಕೇರಳ ಕಡೆಯಿಂದ ಬರುತ್ತಿದ್ದ ತಮಿಳುನಾಡು ನೋಂದಣಿಯ ಲಾರಿ ಆನೆಗೆ ಡಿಕ್ಕಿ ಹೊಡೆದಿದೆ. ರಾತ್ರಿ 9 ಗಂಟೆ ನಂತರ ಈ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ನಿಷೇಧವಿದ್ದು, ಅದಕ್ಕೂ ಮೊದಲೇ ಈ ಘಟನೆ ನಡೆ ದಿದೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧವಾದ ಬಳಿಕ ವಾಹನ ಅಪಘಾತದಲ್ಲಿ ದೊಡ್ಡ ಪ್ರಾಣಿಯೊಂದು ಮೃತಪಡುತ್ತಿರುವುದು ಇದೇ ಮೊದಲು.

## ಒಪಿಎಸ್ ಜಾರಿಗೆ ಒತ್ತಾಯ

**ಸಂಸತ್ ರಕ್ಷಣೆ ವೇಳೆ ಹುತಾತ್ಮರಾದ ಯೋಧರಿಗೆ ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಮಂಗಳವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹಳೆ ಪಿಂಚಣಿ ಯೋಜನೆ (ಒಪಿಎಸ್) ಮರುಸ್ಥಾಪಿಸುವಂತೆ ಒತ್ತಾಯಿಸಲಾಯಿತು**

– ಪ್ರಜಾವಾಣಿ ಚಿತ್ರ

## ನೀರಿನ ಅದಾಲತ್ ನಾಳೆ

**ಬೆಂಗಳೂರು:** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ ಡಿ. 15ರಂದು (ಗುರುವಾರ) ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯ ವರೆಗೆ ಅದಾಲತ್ ನಡೆಯಲಿದೆ. ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಲಸೆ ವೀಸಾಕ್ಕೆ ಪ್ರಯಾಣಿಕರ ಪರದಾಟ

## ವಿಮಾನ ನಿಲ್ದಾಣದ ನಿರ್ವಹಣೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬೇಸರ

ಪ್ರಜಾವಾಣಿ ವಾರ್ತೆ

ವಿಮಾನ ನಿಲ್ದಾಣದಲ್ಲಿ ವಲಸೆ ವೀಸಾ ಪಡೆಯಲು ಸಾಲುಗಟ್ಟಿ ನಿಂತಿರುವ ಪ್ರಯಾಣಿಕರು

**ದೇವನಹಳ್ಳಿ:** ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ತಡರಾತ್ರಿ ವಲಸೆ ವೀಸಾ ಪಡೆಯಲು ಪ್ರಯಾಣಿಕರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ವಿಮಾನ ನಿಲ್ದಾಣದ ನಿರ್ವಹಣೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರಯಾಣಿಕ ಪ್ರಶಾಂತ್ ದಯಾಳ್ ಟ್ವೀಟ್ ಮಾಡಿ, 'ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಮಿಗ್ರೇಷನ್ ಪ್ರಕ್ರಿಯೆ ಭಯಾನಕವಾಗಿದೆ. ನಿಜವಾಗಿಯೂ ನಾವು ಮುಂದೆ ಸಾಗುತ್ತಿದ್ದೇವೆಯೇ ಎಂಬ ಅನುಮಾನ ಮೂಡುತ್ತದೆ. ಪ್ರಯಾಣಿಕರ ಸಾಮರ್ಥ್ಯ ನಿರ್ವಹಿಸಲು ಸಾಧ್ಯವಿಲ್ಲದಿದ್ದರೆ ಇಷ್ಟೊಂದು ವಿಮಾನಗಳ ಹಾರಾಟ ಏಕೆ' ಎಂದು ಪ್ರಶ್ನಿಸಿದ್ದಾರೆ.

ಲೇಖಕಿ ನಂದಿತಾ ಅಯ್ಯರ್ ಇಲ್ಲಿನ ವ್ಯವಸ್ಥೆ ಬಗ್ಗೆ ಟ್ವೀಟ್ ಮೂಲಕ ಬೇಸರ ವ್ಯಕ್ತಪಡಿಸಿದ್ದಾರೆ. 'ಏರ್‌ಪೋರ್ಟ್‌ನಲ್ಲಿ ಟ್ರಾಫಿಕ್ ನಿರ್ವಹಣೆಗೆ ಸಿಬ್ಬಂದಿ ಇದ್ದರೂ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ. ಬುಕ್ ಮಾಡಿದ್ದ ಕ್ಯಾಬ್ ಸ್ಥಳಕ್ಕೆ ತಲುಪಲು 40 ನಿಮಿಷ ಬೇಕಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಬಿಐಎಎಲ್, 'ಸಂಬಂಧಪಟ್ಟ ಇಲಾಖೆಗೆ ಮಾಹಿತಿ ರವಾನಿಸಿದ್ದು, ನಿಮ್ಮ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಲಾಗುವುದು. ಹಬ್ಬದ ಸೀಸನ್ ಆಗಿರುವುದರಿಂದ ಜನದಟ್ಟಣೆ ಉಂಟಾಗಿದೆ. ಬೆಂಗಳೂರಿನ ವಿಮಾನ ನಿಲ್ದಾಣ ಅತ್ಯುತ್ತಮ ನಿರ್ವಹಣೆಯಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ರಜಾ ದಿನಗಳಲ್ಲಿ ಜನದಟ್ಟಣೆ ನಿಯಂತ್ರಿಸಲು ವಿಮಾನ ನಿಲ್ದಾಣದ ಸಿಬ್ಬಂದಿ ಶ್ರಮಿಸುತ್ತಿದ್ದಾರೆ' ಎಂದು ಪ್ರತಿಕ್ರಿಯಿಸಿದೆ.

## ಪೇಟಿಎಂ ಷೇರು ಮರುಖರೀದಿ

**ನವದೆಹಲಿ (ಪಿಟಿಐ):** ಪೇಟಿಎಂ ಬ್ರ್ಯಾಂಡ್ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಒನ್97 ಕಮ್ಯುನಿಕೇಷನ್ಸ್ ಕಂಪನಿಯು ₹ 850 ಕೋಟಿ ಮೌಲ್ಯದ ಷೇರುಗಳನ್ನು ಮರುಖರೀದಿ ಮಾಡುವುದಾಗಿ ಹೇಳಿದೆ. ಕಂಪನಿಯು ಪ್ರತಿ ಷೇರಿಗೆ ₹ 810 ಬೆಲೆ ನಿಗದಿ ಮಾಡಿದೆ.

ಷೇರು ಮರುಖರೀದಿಯನ್ನು ಕಂಪನಿಯು ಆರು ತಿಂಗಳಲ್ಲಿ ಪೂರ್ಣಗೊಳಿಸುವ ಉದ್ದೇಶ ಹೊಂದಿದೆ. ಮಂಗಳವಾರ ನಡೆದ ಕಂಪನಿಯ ಆಡಳಿತ ಮಂಡಳಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

'ಸ್ವತಂತ್ರ ನಿರ್ದೇಶಕರು ಸೇರಿದಂತೆ ಸಭೆಯಲ್ಲಿ ಪಾಲ್ಗೊಂಡಿದ್ದ ಕಂಪನಿಯ ಎಲ್ಲ ನಿರ್ದೇಶಕರು ಷೇರು ಮರುಖರೀದಿಗೆ ಒಕ್ಕೊರಲಿನಿಂದ ಸಮ್ಮತಿ ನೀಡಿದ್ದಾರೆ' ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

# ಬಿಜಿಎಸ್ ಬಿ.ಇ. ತರಗತಿಗಳ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿಯ ಬಿಜಿಎಸ್ ಐಟಿಯಲ್ಲಿ ಬಿಇ ಮೊದಲ ವರ್ಷದ ತರಗತಿಗಳಿಗೆ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಮಂಗಳವಾರ ಚಾಲನೆ ನೀಡಿದರು. ಬಿಜಿಎಸ್ ಹಾಗೂ ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ನಟಿ ಭಾವನಾ ಇದ್ದಾರೆ

**ಕೆಂಗೇರಿ:** ವೈಯಕ್ತಿಕ ಅಸ್ತಿತ್ವ ಉಳಿಸಿಕೊಳ್ಳುವುದರ ಜೊತೆಗೆ ಸಮಾಜದ ಉನ್ನತಿಗೆ ಶ್ರಮಿಸಬೇಕು. ಆಗ ಮಾತ್ರ ಮಾನವ ಜನ್ಮ ಸಾರ್ಥಕ ಎಂದು ಆದಿ ಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಕೆಂಗೇರಿಯ ಬಿಜಿಎಸ್ ತಾಂತ್ರಿಕ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮೊದಲನೆ ಬಿ.ಇ. ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜೀವರಾಶಿಗಳಲ್ಲಿ ಮಾನವ ಜನ್ಮ ಅತ್ಯಂತ ಶ್ರೇಷ್ಠವಾದುದು. ಈ ಜನ್ಮವನ್ನು ಸಮಾಜ ಹಾಗೂ ಸಕಲ ಜೀವಿಗಳ ಅಭ್ಯುದಯಕ್ಕಾಗಿ ಉಪಯೋಗಿಸಬೇಕು. ಕೇವಲ ಸ್ವಾರ್ಥಕ್ಕಾಗಿ ಬಳಸಿಕೊಂಡರೆ ನಮಗೂ ಇನ್ನಿತರ ಜೀವ ಸಂಕುಲಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂದು ತಿಳಿಸಿದರು.

'ಯಶಸ್ಸಿಗೆ ಅನ್ಯ ಮಾರ್ಗಗಳಿಲ್ಲ. ಸ್ವಯಂ ನಂಬಿಕೆ, ಗುರುಭಕ್ತಿ, ಇಂದ್ರಿಯ ನಿಗ್ರಹ ಮತ್ತು ಸಮತಾಭಾವ, ಬೇಕುಬೇಡಗಳ ಅರಿವಿನೊಂದಿಗೆ ಶ್ರಮಿಸಿದಾಗ ಯಶಸ್ಸು ನಮ್ಮದಾಗುತ್ತದೆ' ಎಂದು ಹೇಳಿದರು. ಮಕ್ಕಳ ಏಳಿಗೆಗೆ ಶ್ರಮಿಸುವ ಪೋಷಕರನ್ನು ಮುಪ್ಪಿನಲ್ಲಿ ಕಾಯ್ದುಕೊಳ್ಳಬೇಕು ಎಂದು ಹೇಳಿದರು.

ಇಸ್ರೋ ಸಿಬಿಪಿಒ ನಿರ್ದೇಶಕ ಸುಧೀರ್ ಕುಮಾರ್ ಮಾತನಾಡಿ, 'ಪೂರಕವಾದ ವಾತಾವರಣವಿದ್ದಾಗ ಮಾತ್ರ ಬೆಳವಣಿಗೆ ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಹಿನ್ನೆಲೆಯ ಬಿಜಿಎಸ್ ಅಂಗಳದಲ್ಲಿ ಶಿಕ್ಷಣವೆಂಬ ಬೀಜ ಬಿತ್ತಿದರೆ ಉತ್ತಮ ಫಸಲು ಬರುವುದರಲ್ಲಿ ಅನುಮಾನವಿಲ್ಲ' ಎಂದು ಶ್ಲಾಘಿಸಿದರು. ವಿದ್ಯಾರ್ಥಿಗಳ ಸಾಧನೆಯನ್ನು ಸಂಭ್ರಮಿಸುವ ಪ್ರಥಮ ವ್ಯಕ್ತಿ ಗುರು. ಗುರುವಿನ ಮಾರ್ಗದರ್ಶನದಲ್ಲಿ ಮುಂದುವರಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಹೇಳಿದರು.

'ನೃತ್ಯ ಕಲಾವಿದೆಯಾಗಿ ವೃತ್ತಿ ಜೀವನ ಆರಂಭಿಸಿದೆ. ನಟಿಯಾಗಿ ಬೆಳೆದೆ. ಜನಸೇವೆ ಮಾಡುವ ಹಂಬಲದಿಂದ ಪ್ರಸ್ತುತ ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಹುಡುಕುತ್ತಿದ್ದೇನೆ. ಜನ ಬೆಂಬಲ ದೊರೆತರೆ ಮುಂದಿನ ಜೀವನವನ್ನು ಜನಸೇವೆಯಲ್ಲಿ ಕಳೆಯುವೆ' ಎಂದು ನಟಿ ಭಾವನಾ ಹೇಳಿದರು. ಸಮಾಜಕ್ಕೆ ವೇದ್ಯವಾದ ಯಾವುದೇ ಕೆಲಸ ಮಾಡಲು ಯಾವುದೇ ಹಿಂಜರಿಕೆ ಬೇಡ. ಧೈರ್ಯವಾಗಿ ಮುನ್ನಡೆಯಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಬಿಜಿಎಸ್ ಹಾಗೂ ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ಗುರುರಾಜ್ ಪಾರ್ವತಿ, ಶಿವರಾಜ್ ಜಯದೇವಪ್ಪ ಕುಬ್ಸದ್, 'ಈ ಸಂಜೆ' ಪತ್ರಿಕೆ ಸಂಪಾದಕ ಟಿ.ವೆಂಕಟೇಶ್ ಇತರರಿದ್ದರು.

## ಚಿತ್ರಾವಳಿ

ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗ ಆಯೋಜಿಸಿದ್ದ 'ಹವಾಮಾನ ಬದಲಾವಣೆ ಮತ್ತು ಮಣ್ಣಿನ ಸಾಮರ್ಥ್ಯ' ಎಂಬ ಸಮ್ಮೇಳನವನ್ನು ಕುಲಪತಿ ಪ್ರೊ. ಜಯಕರ ಎಂ.ಎಸ್. ಉದ್ಘಾಟನೆ ಮಾಡಿದರು. ಕೃಷಿ ವಿಶ್ರಾಂತ ಕುಲಪತಿ ಎಸ್. ರಾಜೇಂದ್ರ ಪ್ರಸಾದ್, ಕುಲಸಚಿವ ಎನ್. ಮಹೇಶ್ ಬಾಬು, ಎಸ್. ಮನೋಜ್ ರಾಜನ್, ವಿಭಾಗದ ಮುಖ್ಯಸ್ಥ ಅಶೋಕ್ ಡಿ. ಹಂಜಗಿ ಇದ್ದರು

ವಿವಿ ಪುರಂನಲ್ಲಿ 'ತಿಂಡಿ ಬೀದಿ' ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಿದ ನಂತರ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್, ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ತಿಂಡಿ ಸವಿದರು

## ರಾಜೀವ್ ಗಾಂಧಿ ವಿ.ವಿ: ಸಿಂಡಿಕೇಟ್ ಸದಸ್ಯರ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಆರು ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

ಸದಸ್ಯತ್ವದ ಅವಧಿ ಮುಂದಿನ ಮೂರು ವರ್ಷ ಅಥವಾ ಸರ್ಕಾರದ ಮುಂದಿನ ಆದೇಶಗಳಲ್ಲಿ ಯಾವುದು ಮೊದಲೇ ಅಲ್ಲಿಯವರೆಗೆ ಇರಲಿದೆ.

ಡಾ.ಸಿ. ಜಗದೀಶ್, ಇಂದಿರಾನಗರ ಬೆಂಗಳೂರು. ಡಾ. ವೇಣುಗೋಪಾಲ್, ಪವನ್ ಆಸ್ಪತ್ರೆ, ಶ್ರೀನಿವಾಸಪುರ, ಕೋಲಾರ. ಡಾ.ಬಿ.ಎನ್.ರವಿಕುಮಾರ್, ಜಯನಗರ, ಬೆಂಗಳೂರು. ಡಾ. ಕ್ರಾಂತಿಕಿರಣ್, ಬಾಲಾಜಿ ಇನ್‌ಸ್ಟಿಟ್ಯೂಟ್ ಆಫ್ ನ್ಯೂರೋ ಸೈನ್ಸಸ್, ಉಣಕಲ್, ವಿದ್ಯಾನಗರ, ಹುಬ್ಬಳ್ಳಿ. ಡಾ. ಶೋಭಾ ಎಸ್. ನಿಸ್ಸಿಮ್ ಗೌಡ್ರ, ಮಣ್ಣಿಗ್ರಾಮ, ಸವಣೂರು, ಹಾವೇರಿ. ಡಾ.ಎಚ್.ಜೆ. ಜೈಕೃಷ್ಣ, ಕೋರಮಂಗಲ, ಬೆಂಗಳೂರು.

ಜಿ20 ಶೃಂಗಸಭೆ: ವಿದೇಶಿಯರಿಗೆ 'ಬ್ರ್ಯಾಂಡ್ ಕರ್ನಾಟಕ' ಪರಿಚಯ

# ಗಣ್ಯರಿಗೆ ಸಾಂಸ್ಕೃತಿಕ ರಸದೌತಣ

ಪ್ರಜಾವಾಣಿ ವಾರ್ತೆ

ಜಿ20 ಶೃಂಗ ಸಭೆಗೆ ಆಗಮಿಸುವ ಗಣ್ಯರಿಗೆ ಸ್ವಾಗತ ಕೋರುತ್ತಿರುವ ಗಜ ಪಡೆ

**ದೇವನಹಳ್ಳಿ:** ಇಲ್ಲಿನ ನಂದಿಬೆಟ್ಟ ರಸ್ತೆಯ ಜೆಡಬ್ಲ್ಯು ಮ್ಯಾರಿಯೆಟ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಜಿ20 ಶೃಂಗಸಭೆಗೆ ಆಗಮಿಸುತ್ತಿರುವ ಅಂತರರಾಷ್ಟ್ರೀಯ ಗಣ್ಯರಿಗೆ 'ಬ್ರ್ಯಾಂಡ್ ಕರ್ನಾಟಕ'ವನ್ನು ಪರಿಚಯ ಮಾಡಲು ಹೋಟೆಲ್ ಆವರಣದಲ್ಲಿ ವೈವಿಧ್ಯಮಯವಾದ ಮಳಿಗೆಗಳನ್ನು ತೆರೆಯಲಾಗಿದೆ.

35ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳಿಗೆ ಕೆಂಪು ಹಾಸಿನ ಸ್ವಾಗತ ಕೋರಲಾಗುತ್ತಿದೆ. ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ 'ಒಂದು ರಾಜ್ಯ ಹಲವು ಜಗತ್ತು' ಅಡಿಬರಹದಡಿ ಇಲ್ಲಿನ ಶಿಲ್ಪಕಲೆ, ಚಿತ್ರ ಕಲಾವಿದರಿಂದ ತಯಾರಾದ ವಿವಿಧ ವಿಗ್ರಹಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪ್ರವಾಸೋದ್ಯಮ ಉತ್ಪನ್ನಗಳನ್ನು ಇಡೀ ಜಗತ್ತಿಗೆ ಪ್ರದರ್ಶನ ಮಾಡಲು ಜಿ20 ಉತ್ತಮ ವೇದಿಕೆಯೆಂದು ಪರಿಗಣಿಸಲಾಗಿದೆ. ಅತಿಥಿಗಳಿಗೆ ನಾಡಿನ ಶ್ರೀಮಂತ ಸಾಂಸ್ಕೃತಿಕ ವೈಭವದ ಪರಿಚಯದ ಹೆಬ್ಬಾಗಿಲಿನಂತೆ ಶೃಂಗಸಭೆಯನ್ನು ಮಾರ್ಪಡಿಸಲಾಗಿದೆ. ಬೆಂಗಳೂರಿನಲ್ಲಿ 11, ಮೈಸೂರು 1, ಹಂಪಿಯಲ್ಲಿ 2 ಸೇರಿದಂತೆ ಒಟ್ಟು 14 ಸಭೆಗಳು ರಾಜ್ಯದಲ್ಲಿ ನಡೆಯಲಿವೆ.

ಬೆಂಗಳೂರಿನಲ್ಲಿ ಸಭೆ ನಡೆಯುವಾಗ ನಂದಿ ಬೆಟ್ಟ, ಭೋಗ ನಂದೀಶ್ವರ ದೇಗುಲ, ಮೈಸೂರು ಹಾಗೂ ಹಂಪಿಯಲ್ಲಿ ಪ್ರವಾಸಿ ತಾಣಗಳಿಗೆ ಪ್ರವಾಸ ಆಯೋಜಿಸಲಾಗಿದೆ. ಇದರೊಂದಿಗೆ ದಕ್ಷಿಣ ಭಾರತದ ಏಕೈಕ ಐಷಾರಾಮಿ ರೈಲು ಆದ ಗೋಲ್ಡನ್ ಚಾರಿಯೇಟ್‌ನಲ್ಲಿ ಪ್ರತಿನಿಧಿಗಳು ಪ್ರಯಾಣ ಮಾಡುತ್ತಾರೆ.

**ನಿತ್ಯ ಸಾಂಸ್ಕೃತಿಕ ಸಂಜೆ:** ಜಿ20 ಸಭೆಯಲ್ಲಿ ಭಾಗಿಯಾಗಲು ಆಗಮಿಸುತ್ತಿರುವ ಪ್ರತಿನಿಧಿಗಳಿಗೆ ನಿತ್ಯ ಸಂಜೆ ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಸ್ಕೃತಿ ಮತ್ತು ಪರಂಪರೆ, ರಾಜ್ಯದ ಕೈಗಾರಿಕಾ ಮತ್ತು ತಂತ್ರಜ್ಞಾನದ ಸಾಮರ್ಥ್ಯಗಳನ್ನು ಪ್ರದರ್ಶಿಸಲಾಗುತ್ತದೆ. ಇದರೊಂದಿಗೆ 'ಒಂದು ಜಿಲ್ಲೆ, ಒಂದು ಉತ್ಪನ್ನ' ಯೋಜನೆಯ ಉತ್ತೇಜನಕ್ಕಾಗಿ ಸಮಾರಂಭದ ಸ್ಥಳದಲ್ಲಿ ರೇಷ್ಮೆ, ಕಾಫಿ, ಕರಕುಶಲ ವಸ್ತುಗಳ ಪ್ರದರ್ಶನವೂ ನಡೆಯುತ್ತಿದೆ.

**ವಿಭಿನ್ನ ಆಹಾರ:** ಗಣ್ಯರು ರಾಜ್ಯದಲ್ಲಿ ದೊರೆಯುವ ಹಾಲು, ಕಾಫಿ, ಜೇನು ತುಪ್ಪದ ಸವಿ ಸವಿಯುತ್ತಿದ್ದಾರೆ. ಜೊತೆಗೆ ಕೋಟೆಗಳು, ವಾಸ್ತುಶಿಲ್ಪದ ಅದ್ಭುತ ಸೇರಿದಂತೆ ವಿಶ್ವ ಪರಂಪರೆಯ ತಾಣಗಳು ಹಾಗೂ ಯಾತ್ರಾ ಸ್ಥಳಗಳು, ಕರಾವಳಿ ದೃಶ್ಯಗಳು, ರಾಷ್ಟ್ರೀಯ ಉದ್ಯಾನಗಳ ಬಗ್ಗೆ ನಿರಂತರವಾಗಿ ಮಾಹಿತಿ ನೀಡುವ ಕೆಲಸವೂ ನಡೆಯುತ್ತಿದೆ.

# ಬಿಡಿಎಯಿಂದ ಮಣ್ಣು ಸ್ಥಿರೀಕರಿಸಿ ರಸ್ತೆ ನಿರ್ಮಾಣ

**ಬೆಂಗಳೂರು:** ರಾಜ್ಯದಲ್ಲಿ ಮೊದಲ ಬಾರಿಗೆ ಸಾಯಿಲ್ ಸ್ಟೆಬಿಲೈಸೇಷನ್ ಟೆಕ್ನಾಲಜಿ (ಮಣ್ಣು ಸ್ಥಿರೀಕರಣ ತಂತ್ರಜ್ಞಾನ) ಬಳಸಿ ₹40 ಕೋಟಿ ವೆಚ್ಚದಲ್ಲಿ 15 ಕಿ.ಮೀ ರಸ್ತೆ ನಿರ್ಮಿಸಲು ಬಿಡಿಎ ನಿರ್ಧರಿಸಿದೆ.

ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅವರು ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್‌ನಿಂದ ಕಾಚೋಹಳ್ಳಿವರೆಗಿನ ರಸ್ತೆ ನಿರ್ಮಾಣಕ್ಕೆ ಮಂಗಳವಾರ ಚಾಲನೆ ನೀಡಿದರು.

ಜರ್ಮನ್ ಮೂಲದ ಐದು ಯಂತ್ರಗಳನ್ನು ಬಳಸಿ ಈ ರಸ್ತೆಯನ್ನು ನಿರ್ಮಾಣ ಮಾಡಲಾಗುತ್ತದೆ. ಈ ಯಂತ್ರಗಳ ಸಹಾಯದಿಂದ ದಿನಕ್ಕೆ ಸುಮಾರು ಅರ್ಧ ಕಿಲೋಮೀಟರ್ ಉದ್ದದ ರಸ್ತೆಯನ್ನು ನಿರ್ಮಾಣ ಮಾಡಲಾಗುತ್ತದೆ ಎಂದರು.

ಈ ಕಾಂಕ್ರೀಟ್ ರಸ್ತೆಗೆ ಆಗುವುದಕ್ಕಿಂತ ಕಡಿಮೆ ವೆಚ್ಚವಾಗಲಿದೆ. ಜನವರಿ ಅಂತ್ಯಕ್ಕೆ ಕಾಮಗಾರಿ ಮುಗಿಯಲಿದೆ. ಪ್ರಾಯೋಗಿಕವಾಗಿ ಈ ರಸ್ತೆ ನಿರ್ಮಿಸಿ, ಕಾರ್ಯಕ್ಷಮತೆ ಪರಿಶೀಲಿಸಿದ ನಂತರ ಇತರೆ ರಸ್ತೆಗಳನ್ನೂ ಇದೇ ತಂತ್ರಜ್ಞಾನದಲ್ಲಿ ನಿರ್ಮಿಸಲು ಯೋಜಿಸಲಾಗುವುದು ಎಂದು ಹೇಳಿದರು. ಬಿಡಿಎ ಎಂಜಿನಿಯರ್ ಸದಸ್ಯ ಶಾಂತರಾಜಣ್ಣ, ಎಂಜಿನಿಯರ್‌ಗಳಾದ ಸುಷ್ಮಾ, ಸುರೇಶ್, ಪ್ರಕಾಶ್ ಇದ್ದರು.

**ಟೆಕ್ನಾಲಜಿ ಏನು?:** ಒಂದು ಅಡಿ ಆಳದವರೆಗೆ ಡಾಂಬರ್, ಜಲ್ಲಿ ಮತ್ತು ಮಣ್ಣನ್ನು ಜರ್ಮನ್‌ನಿಂದ ತರಿಸಿರುವ ಯಂತ್ರಗಳಿಂದ ಪುಡಿ ಮಾಡಿ ಪೇಸ್ಟ್ ರೀತಿಯಲ್ಲಿ ಮಾರ್ಪಡಿಸಿ ಅದಕ್ಕೆ ಸಿಮೆಂಟ್, ರಾಸಾಯನಿಕ ಮತ್ತು ನೀರನ್ನು ಸೇರಿಸಿ ಮಣ್ಣನ್ನು ಸ್ಥಿರೀಕರಿಸಲಾಗುತ್ತದೆ. ಇದನ್ನು ಮೂರು ದಿನ ಕ್ಯೂರಿಂಗ್ ಮಾಡಲಾಗುತ್ತದೆ. ಅದರ ಮೇಲೆ ಜಿಯೋ ಟೆಕ್ಸ್‌ಟೈಲ್‌ನ ತೆಳುವಾದ ಪ್ಲಾಸ್ಟಿಕ್ ಶೀಟ್, ಅದರ ಮೇಲೆ ಡಾಂಬರು ಹಾಕಲಾಗುತ್ತದೆ.

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಚೀನಾ: ಗಡಿ ತಂಟೆಗಿಲ್ಲ ಕೊನೆ
'ಸಶಸ್ತ್ರ ಪಡೆ: ಮಹಿಳೆಯರ ಸಂಖ್ಯೆ ಕಡಿಮೆ' 9
ಗಡಿ ವಿವಾದ: ಅಮಿತ್ ಶಾ ನೇತೃತ್ವದಲ್ಲಿ ಸಭೆ ಇಂದು 9
ಇಂದು ತಂತ್ರಜ್ಞಾನ 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 62,533 ▲ | 18,608 ▲ | ₹55,580 (ಬೆಂಗಳೂರು) ▲ | ₹68,800 (ಬೆಂಗಳೂರು) ▲ | 82.60 ▼ |

### ಎಲ್‌ಎಸಿಯ ಆಚೆಗೆ ಸೇನಾ ಚಟುವಟಿಕೆ ಹೆಚ್ಚಿಸಿದ ಚೀನಾ, ನುಸುಳುವ ಯತ್ನ

# ಗಡಿಯಲ್ಲಿ ಕಣ್ಗಾವಲು ಹೆಚ್ಚಳ

**ನವದೆಹಲಿ (ಪಿಟಿಐ):** ಅರುಣಾಚಲ ಪ್ರದೇಶದ ತವಾಂಗ್ ವಲಯದಲ್ಲಿ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಭಾರತದ ಭಾಗದಲ್ಲಿ ಭಾರತೀಯ ವಾಯುಪಡೆಯು ಕಣ್ಗಾವಲನ್ನು ಹೆಚ್ಚಿಸಿದೆ. ಎಲ್‌ಎಸಿಯ ಚೀನಾದ ಭಾಗದಲ್ಲಿ ಆ ದೇಶದ ಸೇನೆಯ ಚಟುವಟಿಕೆ ಹೆಚ್ಚಳವಾದ ಕಾರಣ ಭಾರತದ ವಾಯುಪಡೆಯು ಈ ಕ್ರಮ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ. ಡಿ. 9ರಂದು ಭಾರತದ ಭೂಪ್ರದೇಶಕ್ಕೆ ನುಗ್ಗಲು ಚೀನಾದ ಸೈನಿಕರು ಯತ್ನಿಸುವುದಕ್ಕೂ ಮುನ್ನ ಈ ಪ್ರದೇಶದಲ್ಲಿ ಚೀನಾವು ಡ್ರೋನ್‌ಗಳನ್ನು ನಿಯೋಜಿಸಿತ್ತು.

ತವಾಂಗ್ ವಲಯದ ಯಾಂಗ್‌ತ್ಸೆಯಲ್ಲಿ ಎಲ್‌ಎಸಿಯನ್ನು ದಾಟಿ ಅತಿಕ್ರಮಣ ನಡೆಸಲು ಚೀನಾ ಯತ್ನಿಸಿದೆ. ಆದರೆ ಅದಕ್ಕೆ ಭಾರತದ ಯೋಧರು ದೃಢವಾದ ಪ್ರತ್ಯುತ್ತರ ನೀಡಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂಸತ್ತಿಗೆ ಮಾಹಿತಿ ಕೊಟ್ಟಿದ್ದಾರೆ. ಚೀನಾ ಸೈನಿಕರು ನುಗ್ಗಲು ಯತ್ನಿಸಿದ್ದರು ಎಂಬ ಮಾಹಿತಿಯನ್ನು ಸೇನೆಯು ಸೋಮವಾರವೇ ಬಹಿರಂಗಪಡಿಸಿತ್ತು.

ಎಲ್‌ಎಸಿ ಸಮೀಪದಲ್ಲಿ ಚೀನಾದ ಹಲವು ಡ್ರೋನ್‌ಗಳು ಹಾರಾಟ ನಡೆಸಿದ್ದರಿಂದಾಗಿ ಭಾರತೀಯ ವಾಯು ಪಡೆಯು ಯುದ್ಧವಿಮಾನಗಳನ್ನು ಆ ಪ್ರದೇಶಕ್ಕೆ ಕಳುಹಿಸಿದೆ. ಯುದ್ಧ ಸನ್ನದ್ಧತೆಯನ್ನು ಹೆಚ್ಚಿಸಲಾಗಿದೆ. ಈ ಪ್ರದೇಶದಲ್ಲಿನ ಒಟ್ಟಾರೆ ಕಣ್ಗಾವಲನ್ನು ಹೆಚ್ಚಿಸಲಾಗಿದೆ. ವಾಯುಪಡೆಯ ವಿಮಾನಗಳು ಇಲ್ಲಿ ಸುತ್ತಾಡುವುದನ್ನು ಹೆಚ್ಚಿಸಲಾಗಿದೆ.

ಡಿ. 9ರ ಘಟನೆಯ ಬಳಿಕ, ವಾಯು ಪಡೆಯ ಮುಖ್ಯಸ್ಥ ವಿ.ಆರ್. ಚೌಧರಿ ಅವರು ವಾಯುಪಡೆಯ ಕಾರ್ಯಾಚರಣೆ ಸನ್ನದ್ಧತೆಯನ್ನು ಪರಿಶೀಲಿಸಿದ್ದಾರೆ.

ತೇಜಪುರವೂ ಸೇರಿದಂತೆ ಪೂರ್ವದ ಗಡಿ ಭಾಗದ ನೆಲೆಗಳಲ್ಲಿ ಯುದ್ಧ ವಿಮಾನಗಳ ಸಂಖ್ಯೆ ಹೆಚ್ಚಿಸಲಾಗಿದೆ. ಅಲ್ಲಿ ಎಸ್‌ಯು–30 ವಿಮಾನಗಳನ್ನು ನಿಯೋಜಿಸಲಾಗಿದೆ. ಪಶ್ಚಿಮ ಬಂಗಾಳದ ಹಾಸಿಮಾರ ವಾಯುನೆಲೆಯಲ್ಲಿ ರಫೇಲ್ ಯುದ್ಧ ವಿಮಾನಗಳ ಒಂದು ತುಕಡಿಯನ್ನು ನಿಯೋಜಿಸಲಾಗಿದೆ. ಪೂರ್ವದ ಗಡಿ ಪ್ರದೇಶದ ಮೇಲೆ ಈ ವಿಮಾನಗಳು ನಿಗಾ ಇರಿಸಿವೆ.

**'ಅತಿಕ್ರಮಣ ಬೇಡ':** ಗಡಿ ಉಲ್ಲಂಘನೆಯ ಪ್ರಯತ್ನದಿಂದ ಚೀನಾವು ದೂರ ಇರಬೇಕು. ಅತಿಕ್ರಮಣ ಪ್ರಯತ್ನಗಳು ಗಡಿ ಪ್ರದೇಶದ ಶಾಂತಿ ಮತ್ತು ನೆಮ್ಮದಿಯನ್ನು ಕದಡುತ್ತವೆ. ಸೇನಾ ಸಂಘರ್ಷದ ವಿಚಾರವನ್ನು ರಾಜತಾಂತ್ರಿಕ ಮಾರ್ಗದ ಮೂಲಕ ಚೀನಾಕ್ಕೆ ತಿಳಿಸಲಾಗಿದೆ ಎಂದು ರಾಜನಾಥ್ ಸಂಸತ್ತಿಗೆ ತಿಳಿಸಿದ್ದಾರೆ.

9ನೇ ಪುಟ ನೋಡಿ

## ಸಂಸತ್ತಿನಲ್ಲಿ ಕೋಲಾಹಲ

ರಾಜನಾಥ್ ಸಿಂಗ್ ಅವರು ಸಂಘರ್ಷದ ಕುರಿತು ಸಂಸತ್ತಿನಲ್ಲಿ ಹೇಳಿಕೆ ನೀಡಿದ ಕೂಡಲೇ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿದವು. ಆದರೆ, ಅದಕ್ಕೆ ಅವಕಾಶ ಕೊಡದ ಕಾರಣ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದವು.

ಇನ್ನಷ್ಟು ಸುದ್ದಿ 9

## ರಾಜನಾಥ್ ಹೇಳಿದ್ದೇನು?

ಅರುಣಾಚಲ ಪ್ರದೇಶದ ತವಾಂಗ್ ವಲಯದ ಯಾಂಗ್‌ತ್ಸೆ ಪ್ರದೇಶದಲ್ಲಿ ಯಥಾಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಾಯಿಸಲು ಯತ್ನಿಸಿದ ಚೀನಾ ಸೇನೆಯ ಪ್ರಯತ್ನವನ್ನು ಭಾರತದ ಸೈನಿಕರು ದಿಟ್ಟವಾಗಿ ತಡೆದಿದ್ದಾರೆ. ಈ ಸಂಘರ್ಷದಲ್ಲಿ ಭಾರತದ ಕಡೆ ಸಾವು ಸಂಭವಿಸಿಲ್ಲ. ಗಂಭೀರವಾದ ಗಾಯಗಳೂ ಆಗಿಲ್ಲ ಎಂದು ಸಂಸತ್ತಿನಲ್ಲಿ ನೀಡಿದ ಹೇಳಿಕೆಯಲ್ಲಿ ರಾಜನಾಥ್ ತಿಳಿಸಿದ್ದಾರೆ. ಭಾರತದ ಸೈನಿಕರು ಎದುರಿಸಿದ್ದರಿಂದಾಗಿ ಚೀನಾದ ಸೈನಿಕರು ತಮ್ಮ ನೆಲೆಗಳಿಗೆ ಮರಳಿದರು. ಭಾರತದ ಕಮಾಂಡರ್‌ಗಳ ಸಕಾಲಿಕ ಮಧ್ಯ ಪ್ರವೇಶದಿಂದ ಇದು ಸಾಧ್ಯವಾಗಿದೆ ಎಂದು ರಾಜನಾಥ್ ಹೇಳಿದ್ದಾರೆ.

## 'ಸೂಕ್ಷ್ಮ ವಿಚಾರಕ್ಕೆ ಸ್ಪಷ್ಟನೆ ಇಲ್ಲ'

ಸೂಕ್ಷ್ಮ ವಿಚಾರಗಳ ಕುರಿತು ಸದನದಲ್ಲಿ ಸ್ಪಷ್ಟೀಕರಣ ನೀಡಲು ಅವಕಾಶ ಇಲ್ಲ ಎಂದು ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಅವರು ಹೇಳಿದ್ದಾರೆ. ಸೂಕ್ಷ್ಮ ವಿಚಾರಗಳ ಬಗ್ಗೆ ಸ್ಪಷ್ಟೀಕರಣ ನೀಡದ ನಾಲ್ಕು ಪೂರ್ವ ನಿದರ್ಶನಗಳನ್ನು ಉಲ್ಲೇಖಿಸಿದರು.

# ಒಳ ಮೀಸಲಾತಿಗೆ ಉಪಸಮಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಳ ಮೀಸಲಾತಿಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಈ ಬಗ್ಗೆ ಪರಿಶೀಲಿಸಿ ಶಿಫಾರಸು ಮಾಡಲು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಿದೆ.

ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ, ಮೀನುಗಾರಿಕೆ ಸಚಿವ ಎಸ್.ಅಂಗಾರ, ಪಶು ಸಂಗೋಪನೆ ಸಚಿವ ಪ್ರಭು ಚವ್ಹಾಣ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸಮಿತಿಯ ಸದಸ್ಯರು. ಈ ಸಮಿತಿಗೆ ಸಮಾಜ ಕಲ್ಯಾಣ ಇಲಾಖೆ ಅಗತ್ಯ ನೆರವು ನೀಡಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ನ. 17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳ ಮೀಸಲಾತಿ) ಕುರಿತು ಸಂಪುಟ ಉಪ ಸಮಿತಿ ರಚಿಸಲು ನಿರ್ಣಯಿಸಲಾಗಿತ್ತು. ಆದರೆ, ಸಮಿತಿ ರಚನೆ ಆಗಿರಲಿಲ್ಲ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಅನೇಕ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯವೇ ಸಿಕ್ಕಿಲ್ಲ. ಮೀಸಲಾತಿಯ ಫಲ ಸಿಗಬೇಕಾದರೆ ಒಳಮೀಸಲಾತಿ ನೀಡುವಂತೆ ಶಿಫಾರಸು ಮಾಡಿದ್ದ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿಯನ್ನು ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಬೇಕು. ಮೀಸಲಾತಿಯನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘಟನೆಗಳು ಪ್ರತಿಭಟಿಸುತ್ತಿವೆ.

9ನೇ ಪುಟ ನೋಡಿ

## ಸದಾಶಿವ ಆಯೋಗದ ವರದಿಗೆ ವಿರೋಧ

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಚರ್ಚೆಗೆ ಒಳಪಡಿಸದೇ ಕೇಂದ್ರಕ್ಕೆ ಶಿಫಾರಸು ಮಾಡಬಾರದು ಎಂದು ಆಗ್ರಹಿಸಿ ಹೋರಾಟ ನಡೆಸಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಸಜ್ಜಾಗಿದೆ.

ಚಿತ್ರದುರ್ಗದ ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಚರ್ಚೆಗಳು ಆರಂಭವಾಗಿವೆ. ಭೋವಿ, ಲಂಬಾಣಿ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳ ಸ್ವಾಮೀಜಿಗಳು ಮತ್ತು ಮುಖಂಡರ ಜತೆ ಡಿ.17ರಂದು ಹೋರಾಟದ ಪೂರ್ವಭಾವಿ ಸಭೆ ನಡೆಯಲಿದೆ.

'ನ್ಯಾ. ಸದಾಶಿವ ಆಯೋಗದ ವರದಿಯನ್ನು ಬಚ್ಚಿಟ್ಟು ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು. ಸೋರಿಕೆಯಾಗಿರುವ ವರದಿ ಪ್ರಕಾರ, ಮೀಸಲಾತಿಯ ಆಶಯ ಮತ್ತು ಪರಿಶಿಷ್ಟರ ಏಕತೆಗೆ ಅಡ್ಡಿಯಾಗಬಹುದಾದ ಅನೇಕ ಅಂಶಗಳು ಇದ್ದಂತಿವೆ. ಹೀಗಾಗಿ, ಏಕಮುಖವಾಗಿ ಕೇಂದ್ರಕ್ಕೆ ಶಿಪಾರಸ್ಸು ಮಾಡುವುದನ್ನು ತಡೆಹಿಡಿಯಬೇಕು. ತಕ್ಷಣ ಸಾರ್ವಜನಿಕ ಚರ್ಚೆಗೆ ವರದಿ ಬಿಡಬೇಕು. ಸಂಬಂಧಿತ 101 ಸಮುದಾಯಗಳಿಗೆ ವರದಿಯ ದೃಢೀಕೃತ ಪ್ರತಿ ನೀಡಿ ಆಕ್ಷೇಪಣೆ ಪಡೆಯಬೇಕು. ಆ ನಂತರ ಸೂಕ್ತ ಅಧ್ಯಯನ ನಡೆಸಿ ಪರಿಶಿಷ್ಟರ ಜಾತಿಗಳ ಜನಸಂಖ್ಯೆವಾರು ಮೀಸಲಾತಿಗೆ ಶಾಸನ ರೂಪಿಸಲಿ. ಈ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಲಿ ಎಂಬುದು ನಮ್ಮ ಮನವಿ' ಎಂದು ಒಕ್ಕೂಟದ ಕಾರ್ಯಾಧ್ಯಕ್ಷ ಎನ್.ಅನಂತನಾಯಕ 'ಪ್ರಜಾವಾಣಿ'ಗೆ ತಿಳಿಸಿದರು.

## ಚಿನಕುರಳಿ

ಪ್ರಕಾಶ್ ಶೆಟ್ಟಿ

### ಗೋದಾವರಿ–ಕೃಷ್ಣಾ–ಕಾವೇರಿ ಯೋಜನೆಯಲ್ಲಿ ರಾಜ್ಯದ ಪಾಲು ಕಡಿತ

# ನದಿ ಜೋಡಣೆ: ಕರ್ನಾಟಕ ತಕರಾರು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಗೋದಾವರಿ–ಕೃಷ್ಣಾ– ಕಾವೇರಿ ನದಿ ಜೋಡಣೆ ಯೋಜನೆಯ ನೀರು ಹಂಚಿಕೆ ವಿಧಾನಕ್ಕೆ ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ 36ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ನದಿ ಜೋಡಣೆ ಸಮಿತಿಯ 20ನೇ ಸಭೆಯಲ್ಲಿ ಪಾಲ್ಗೊಂಡ ಕರ್ನಾಟಕದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ರಾಜ್ಯದ ನಿಲುವನ್ನು ತಿಳಿಸಿದರು.

'ಕೃಷ್ಣಾ ಮತ್ತು ಕಾವೇರಿ ಕಣಿವೆಯಲ್ಲಿ ಮಹಾನದಿ ಮತ್ತು ಗೋದಾವರಿ ಕಣಿವೆ ನದಿ ಜೋಡಣೆಯ ಮೂಲಕ ನೀರು ತಿರುವುಗೊಳಿಸುವ ಯೋಜನೆಯಲ್ಲಿ ಕರ್ನಾಟಕದ ಪಾಲನ್ನು ಕಡಿತಗೊಳಿಸಲಾಗಿದೆ' ಎಂದು ಸಚಿವರು ಸಭೆಯ ಗಮನಕ್ಕೆ ತಂದರು.

9ನೇ ಪುಟ ನೋಡಿ
'ಕಷ್ಟ ಹೇಳಿಕೊಂಡ ಮೋದಿ' 9

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರೊಂದಿಗೆ ಗೋವಿಂದ ಕಾರಜೋಳ ಸಮಾಲೋಚಿಸಿದರು

# ಮುರುಘಾ ಮಠದ ಟ್ರಸ್ಟ್‌ಗೆ ವಸ್ತ್ರದ್ ಆಡಳಿತಾಧಿಕಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗದ ಮುರುಘಾ ಮಠದ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಗೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿ, ಅವರು ನ್ಯಾಯಾಂಗ ಬಂಧನದಲ್ಲಿರುವ ಕಾರಣ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸಬೇಕು ಎಂಬ ಒತ್ತಾಯ ಕೇಳಿ ಬಂದಿತ್ತು.

ರಾಜ್ಯ ಸರ್ಕಾರ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯ ಕೋರಿದಾಗ, ಶಿವಮೂರ್ತಿ ಶರಣರು ಬಂಧನದಲ್ಲಿರುವುದರಿಂದ ಟ್ರಸ್ಟಿನ ಸ್ವತ್ತು ರಕ್ಷಿಸಲು ಆಡಳಿತಾಧಿಕಾರಿಯನ್ನು ನೇಮಿಸಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಪಿ.ಎಸ್. ವಸ್ತ್ರದ್

ನವೆಂಬರ್ 10ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದ ಚಿತ್ರದುರ್ಗ ಜಿಲ್ಲಾಧಿಕಾರಿ, 'ಶಿವಮೂರ್ತಿ ಶರಣರು ಬಂಧನದಲ್ಲಿರುವುದರಿಂದ ಮಠದ ಸ್ಥಿರಾಸ್ತಿ, ಹಣಕಾಸು ನಿರ್ವಹಣೆ ಕಷ್ಟವಾಗಿದ್ದು, ಟ್ರಸ್ಟ್ ಮತ್ತು ವಿದ್ಯಾಸಂಸ್ಥೆ ನಿರ್ವಹಣೆಗೂ ತೊಂದರೆ ಆಗುತ್ತಿದೆ. ಸಂಸ್ಥೆಗಳ ದೈನಂದಿನ ಕಾರ್ಯಗಳಿಗೆ ಅನನುಕೂಲ ತಪ್ಪಿಸಲು ಕಾನೂನು ರೀತ್ಯ ಕ್ರಮ ಕೈಗೊಳ್ಳುವ ಅವಶ್ಯ ಇದೆ' ಎಂದು ಪ್ರತಿಪಾದಿಸಿದ್ದರು.

## ಒಳ ಪುಟಗಳು

ಮೋದಿ ಹತ್ಯೆ ಹೇಳಿಕೆ: ಕಾಂಗ್ರೆಸ್ ಮುಖಂಡ ರಾಜ ಬಂಧನ 12
5, 8ನೇ ತರಗತಿಗೆ ಇನ್ನು ವಾರ್ಷಿಕ ಪರೀಕ್ಷೆ 8
ಬಿಹಾರ: ತೇಜಸ್ವಿಗೆ ಉತ್ತರಾಧಿಕಾರ? 9

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com
dentsu/pv blr/17/22

ಕಾಂಕ್ರೀಟ್, ಪೇವರ್ಸ್ ಅಳವಡಿಸುವ ಅಧಿಕಾರಿಗಳಿಗೆ ಸಾಮಾನ್ಯ ಜ್ಞಾನ ಕೊರತೆ: ಪರಿಸರ ಪ್ರೇಮಿಗಳ ಆಕ್ರೋಶ

## ರಸ್ತೆ ಬದಿ ಮರಗಳ ಬುಡಕ್ಕೆ ಕಾಂಕ್ರೀಟ್ ಕುತ್ತು

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರಿನ ವಿಜಯನಗರದ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಮುಖ್ಯ ಬಸ್ ನಿಲ್ದಾಣ ನೂತನ ಪಾದಚಾರಿ ಕಾಮಗಾರಿಯಿಂದ ಅಲ್ಲಿರುವ ಮರಗಳ ಬುಡಕ್ಕೆ ಕಾಂಕ್ರೀಟ್ ಹಾಕಿ ಮುಚ್ಚಿರುವುದು (ಎಡಚಿತ್ರ) ವಿಜಯನಗರದ ಪಾದಚಾರಿ ಮಾರ್ಗದಲ್ಲಿರುವ ಮರದ ಬುಡಕ್ಕೆ ಕಾಂಕ್ರೀಟ್ ಹಾಕಿರುವುದು. – ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಒಂದೆಡೆ ಉದ್ಯಾನ ನಗರಿಯ ಅಭಿವೃದ್ಧಿಯ ಹೆಸರಿನಲ್ಲಿ ಮರಗಳ ಹನನವಾಗುತ್ತಿದ್ದರೆ, ಮತ್ತೊಂದೆಡೆ ರಸ್ತೆ ಬದಿಯಲ್ಲಿರುವ ಮರಗಳ ಬುಡಕ್ಕೆ ಕಾಂಕ್ರೀಟ್ ಸುರಿದು, ಪೇವರ್ಸ್ ಅಳವಡಿಸುತ್ತಿರುವುದಕ್ಕೆ ಸಾರ್ವಜನಿಕರ ಹಾಗೂ ಪರಿಸರ ಪ್ರೇಮಿಗಳ ಕಳವಳ ವ್ಯಕ್ತಪಡಿಸಿದ್ದಾರೆ.

ವಿಜಯನಗರದ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಬಸ್ ನಿಲ್ದಾಣದ ನೂತನ ಪಾದಚಾರಿ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದ್ದು, ಅಲ್ಲಿರುವ 8–10 ಮರಗಳ ಬುಡಕ್ಕೆ ಈಗಾಗಲೇ ಕಾಂಕ್ರೀಟ್ ಹಾಕಿ ಮುಚ್ಚಲಾಗಿದೆ. ಅದರ ಮೇಲೆ ಪೇವರ್ಸ್ ಅಳವಡಿಸುವ ಕಾಮಗಾರಿ ಭರದಿಂದ ಸಾಗಿದೆ. ಈ ರೀತಿ ಅವೈಜ್ಞಾನಿಕವಾಗಿ ಪಾದಚಾರಿ ಮಾರ್ಗ ನಿರ್ಮಿಸುತ್ತಿರುವುದರಿಂದ ಇಲ್ಲಿರುವ ಹತ್ತಾರು ಮರಗಳಿಗೆ ಕುತ್ತು ಬಂದೊದಗಿದೆ.

ಏಳೆಂಟು ವರ್ಷಗಳ ಹಿಂದೆ ನೆಡಲಾಗಿದ್ದ ಅರಳಿ ಸಸಿಯು ಈಗ ಮರವಾಗಿ ಬೆಳೆಯುತ್ತಿದೆ. ಆದರೆ ಬಿಬಿಎಂಪಿ ನೂತನವಾಗಿ ನಿರ್ಮಿಸುತ್ತಿರುವ ಪಾದಚಾರಿ ಮಾರ್ಗದಿಂದ ಅದರ ಬೆಳವಣಿಗೆಗೆ ಅಪಾಯ ಎದುರಾಗಿದೆ. ಅವುಗಳು ಭವಿಷ್ಯದಲ್ಲಿ ಬೆಳೆಯದ ರೀತಿಯಲ್ಲಿ ಕಾಮಗಾರಿ ಕೈಗೊಂಡಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ಮರಗಳ ಬೆಳವಣಿಗೆಗೆ ಪೂರಕವಾಗಿ ಬೇರುಗಳಿಗೆ ನೀರು ಮತ್ತು ಪೋಷಕಾಂಶ ಅಗತ್ಯ. ಹೊಸದಾಗಿ ಬೆಳೆಯುತ್ತಿರುವ ಮರಗಳ ಬೇರುಗಳು ನೆಲದಾಳಕ್ಕೆ ಹೋಗಿರುವುದಿಲ್ಲ. ಹೀಗಾಗಿ ಬೆಳವಣಿಗೆಯ ಹಂತದಲ್ಲಿರುವ ಮರಗಳು ಬುಡದ ಭಾಗದಿಂದಲೇ ನೀರನ್ನು ಹೀರುತ್ತವೆ. ಇಂಥ ಮರಗಳ ಬುಡವನ್ನು ಸಂಪೂರ್ಣವಾಗಿ ಕಾಂಕ್ರೀಟ್ ಮತ್ತು ಪೇವರ್ಸ್ ಅಳವಡಿಸಿ ಮುಚ್ಚಿದರೆ ಬೇರುಗಳಿಗೆ ನೀರು ಸಿಗದೇ ಮರಗಳು ಒಣಗಿ ಹೋಗುತ್ತವೆ.

ಈ ಪಾದಚಾರಿ ಮಾರ್ಗದಲ್ಲಿರುವ ಮರಗಳ ಬುಡಕ್ಕೆ ಕಾಂಕ್ರೀಟ್ ಹಾಕಲಾಗಿದ್ದು, ಅದರ ಮೇಲೆ ಎಂಸ್ಯಾಂಡ್ ಹಾಕಿ ಪೇವರ್ಸ್ ಅಳವಡಿಸುತ್ತಿದ್ದಾರೆ.

‘ಇಲ್ಲಿರುವ ಕೆಲವು ಮರಗಳು ಬೆಳೆದು ದೊಡ್ಡದಾಗಿವೆ. ಒಂದೆರಡು ಮರಗಳು ಇನ್ನೂ ಬೆಳೆಯುತ್ತಿವೆ. ಅವುಗಳ ಸುತ್ತಲೂ ಎರಡರಿಂದ ಮೂರು ಅಡಿ ಜಾಗ ಬಿಡಬೇಕು. ಇದರಿಂದ ನೀರು ನಿಲ್ಲುವುದಕ್ಕೆ, ಇಂಗುವುದಕ್ಕೆ ಮತ್ತು ಬೇರುಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದರೆ, ಅವುಗಳ ಬೆಳಣಿಗೆಗೆ ಕುಂಟಿತಗೊಳಿಸುವ ರೀತಿಯಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸುತ್ತಿರುವ ಅಧಿಕಾರಿಗಳಿಗೆ ಸಾಮಾನ್ಯ ಜ್ಞಾನ ಇಲ್ಲದಿರುವುದು ದುರಂತವೇ ಸರಿ’ ಎಂದು ಪರಿಸರ ಪ್ರೇಮಿ ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

‘ಮರಗಳ ಬುಡಕ್ಕೆ ಸಿಮೆಂಟ್ ಹಾಕುವುದರಿಂದ ಆಗುವ ಹಾನಿಯ ಬಗ್ಗೆ ಪಾಲಿಕೆ ಹಾಗೂ ಬಿಬಿಎಂಪಿ ಅರಣ್ಯ ಅಧಿಕಾರಿಗಳು, ರಸ್ತೆ ಕಾಮಗಾರಿ ನಡೆಸುವ ಗುತ್ತಿಗೆದಾರರಿಗೆ ಈ ಕುರಿತು ಅರಿವು ಮೂಡಿಸಬೇಕು. ಈಗಾಗಲೇ ರಸ್ತೆ ಬದಿಯಲ್ಲಿನ ಮರಗಳ ಬುಡಕ್ಕೆ ಹಾಕಿರುವ ಸಿಮೆಂಟ್ ಅನ್ನು ತೆಗೆಸುವ ಕೆಲಸವನ್ನೂ ತ್ವರಿತವಾಗಿ ಮಾಡಬೇಕು’ ಎಂದು ಒತ್ತಾಯಿಸಿದರು.

> ಮರಗಳ ಬುಡಕ್ಕೆ ಕಾಂಕ್ರೀಟ್, ಪೇವರ್ಸ್ ಡಾಂಬರು ಹಾಕುವಂತಿಲ್ಲ, ಹಾಕಿದ್ದರೆ ಕೂಡಲೇ ಅದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
>
> **ಸಾವಿತ್ರಿ,** ಕಾರ್ಯಪಾಲಕ ಎಂಜಿನಿಯರ್, ರಸ್ತೆ ಮೂಲ ಸೌಕರ್ಯ, ಬಿಬಿಎಂಪಿ

> ನಗರೀಕರಣದ ಜೊತೆಗೆ ಪರಿಸರವನ್ನೂ ಸಂರಕ್ಷಿಸಬೇಕು. ಮರಗಳನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.
>
> **ಶ್ರೀನಿವಾಸ್,** ವಿಜಯನಗರ ನಿವಾಸಿ

**ಮುಖ್ಯಾಂಶಗಳು**

- ಅವೈಜ್ಞಾನಿಕವಾಗಿ ಪಾದಚಾರಿ ಮಾರ್ಗ
- ಬೇರು ನೆಲದಾಳಕ್ಕೆ ಹೋಗಲು ತೊಂದರೆ

## ‘ಎನ್‌ಇಪಿ ರಾಷ್ಟ್ರದ ಬೆಳವಣಿಗೆಗೆ ಪೂರಕ’

ಪ್ರಜಾವಾಣಿ ವಾರ್ತೆ

ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಬಿಇ ಮೊದಲನೇ ವರ್ಷದ ತರಗತಿಗಳಿಗೆ ವಿಟಿಯು ಕುಲಪತಿ ಡಾ.ವಿದ್ಯಾಶಂಕರ್ ಚಾಲನೆ ನೀಡಿದರು. ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎ.ಆರ್.ಕೃಷ್ಣಮೂರ್ತಿ, ಟ್ರಸ್ಟಿ ಶಿವಮಲ್ಲು, ಪ್ರಾಂಶುಪಾಲೆ ಡಾ.ಮೀನಾಕ್ಷಿ, ಡಾ.ಎನ್.ಸಿ.ಶಿವಪ್ರಕಾಶ್ ಇದ್ದರು

ಕೆಂಗೇರಿ: ರಾಷ್ಟ್ರೀಯ ಶಿಕ್ಷಣ ನೀತಿ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಿಂತ ವಿಶಿಷ್ಟವಾಗಿದೆ. ಔದ್ಯೋಗಿಕ ಬೇಡಿಕೆಗಳಿಗೆ ಪೂರಕವಾಗಿ ರಚಿತಗೊಂಡಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅವರು ಹೇಳಿದರು.

ಮಲ್ಲತ್ತಹಳ್ಳಿಯ ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೊದಲನೇ ವರ್ಷದ ಬಿ.ಇ ತರಗತಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ತಂತ್ರಜ್ಞಾನ ಕ್ಷೇತ್ರ ನಿರಂತರ ಬದಲಾವಣೆ ಹಾಗೂ ಹೊಸತನದಿಂದ ಕೂಡಿದ ವಿಷಯವಾಗಿದೆ. ಬದಲಾವಣೆ, ಪ್ರಸ್ತುತ ಬೇಡಿಕೆ ಹಾಗೂ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಗಳನ್ನು ನವೀಕರಿಸಬೇಕಿದೆ. ಪ್ರಾಪಂಚಿಕ ಜ್ಞಾನದ ವಿವಿಧ ಮಗ್ಗುಲುಗಳನ್ನು ಅಲ್ಪಾವಧಿಯಲ್ಲಿ ಪ್ರಾಯೋಗಿಕವಾಗಿ ಅರಿಯಬೇಕಿದೆ. ಈ ಎಲ್ಲ ಸಾಧ್ಯತೆಗಳಿಗೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅವಕಾಶ ನೀಡುತ್ತದೆ ಎಂದು ವಿದ್ಯಾಶಂಕರ್ ಅಭಿಪ್ರಾಯಪಟ್ಟರು.

ತಾಂತ್ರಿಕತೆ ವಿಕಸನಗೊಂಡಂತೆ ನೂತನ ಆಲೋಚನೆಯೊಂದಿಗೆ ವಿದ್ಯಾರ್ಥಿಗಳು ಸಜ್ಜುಗೊಳ್ಳಬೇಕು. ಇದಕ್ಕೆ ಪೂರಕವಾಗಿ ಶಿಕ್ಷಕರು ಕೂಡ ಕೌಶಲವನ್ನು ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ, ‘ವಿದ್ಯಾಭ್ಯಾಸದ ಅವಧಿಯಲ್ಲಿ ದೃಢ ಮನೋಭಾವವನ್ನು ಹೊಂದಿರಬೇಕು. ಗುರಿ ಮುಟ್ಟುವವರೆಗೂ ಯಾವುದೇ ಬಾಹ್ಯ ಆಕರ್ಷಣೆಗೆ ಒಳಗಾಗದೆ ಯಶಸ್ಸು ಸಾಧಿಸಬೇಕು’ ಎಂದು ಕಿವಿಮಾತು ಹೇಳಿದರು.

ಪಿವಿಪಿ ಟ್ರಸ್ಟಿ ಶಿವಮಲ್ಲು ಅವರು ಮಾತನಾಡಿ, ‘ಇಡೀ ವಿಶ್ವಕ್ಕೆ ತಾಂತ್ರಿಕ ಹಾಗೂ ವೈದ್ಯಕೀಯ ತಜ್ಞರನ್ನು ಕಾಣಿಕೆಯಾಗಿ ನೀಡುವ ಭಾರತ ಇಂದಿಗೂ ಅಭಿವೃದ್ಧಿ ರಾಷ್ಟ್ರವಾಗಿಲ್ಲ. ಯುವಕರ ಮೊದಲ ಚಿತ್ತ ರಾಷ್ಟ್ರ ನಿರ್ಮಾಣದತ್ತ ಇರಬೇಕು. ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಮೊದಲ ಪ್ರಾಶಸ್ತ್ಯ ನೀಡಬೇಕು’ ಎಂದು ಹೇಳಿದರು.

## ಬೀದಿ ಬದಿ ವ್ಯಾಪಾರಿಗಳ ಕಾಯ್ದೆ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ರಾಷ್ಟ್ರೀಯ ನಗರ ಜೀವನೋಪಾಯ ಮತ್ತು ಸಂರಕ್ಷಣೆಯ ಬೀದಿ ಬದಿ ವ್ಯಾಪಾರಿಗಳ ಕಾಯ್ದೆ ಜಾರಿಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಕರ್ನಾಟಕ ಬೀದಿಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟ ಆರೋಪಿಸಿದೆ.

‘ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ₹10 ಸಾವಿರ ಸಾಲ ನೀಡಬೇಕು. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ನಿರ್ದೇಶನ ನೀಡಿದ್ದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಅಶ್ವತ್ಥನಾರಾಯಣ ಅನುಷ್ಠಾನಗೊಳಿಸಲು ಹಿಂದೇಟು ಹಾಕುತ್ತಿದ್ದಾರೆ’ ಎಂದು ಒಕ್ಕೂಟದ ಅಧ್ಯಕ್ಷ ಸಿ.ಈ. ರಂಗಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಪ್ರಧಾನಿ ಸ್ವ–ನಿಧಿ ಯೋಜನೆ ಅಡಿಯಲ್ಲಿ ಅರ್ಜಿ ಹಾಕಿರುವ ಎಲ್ಲರಿಗೂ ಸಾಲ ನೀಡಬೇಕು. ಇದುವರೆಗೂ ರಾಜ್ಯದಲ್ಲಿ 3.10 ಲಕ್ಷ ಬೀದಿ ಬದಿ ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದು, ಇವರಲ್ಲಿ ಕೇವಲ 1.60 ಲಕ್ಷ ವ್ಯಾಪಾರಿಗಳಿಗೆ ಸಾಲ ನೀಡಲಾಗಿದೆ. ರಾಜ್ಯದ ಎಲ್ಲಾ ಬೀದಿ ಬದಿ ವ್ಯಾಪಾರಿಗಳಿಗೆ ಮಾರುಕಟ್ಟೆ ವಲಯನ್ನು ಸ್ಥಾಪಿಸಿ ಅವರನ್ನು ಅಲ್ಲಿಗೆ ಸ್ಥಳಾಂತರ ಮಾಡಬೇಕು. ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಿ ಅವರಿಗೆ ಪ್ರಮಾಣಪತ್ರ ಮತ್ತು ಗುರುತಿನ ಚೀಟಿಗಳನ್ನು ವಿತರಣೆ ಮಾಡಬೇಕು’ ಎಂದು ಆಗ್ರಹಿಸಿದರು.

‘277 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಟ್ಟಣ ವ್ಯಾಪಾರ ಸಮಿತಿ ಸರಿಯಾಗಿ ರಚನೆಯಾಗಿಲ್ಲ. ಮಾರುಕಟ್ಟೆ ವಲಯ ಅಭಿವೃದ್ಧಿಪಡಿಸುವವರೆಗೂ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸುವಂತಿಲ್ಲ’ ಎಂದರು.

2014ರ ಬೀದಿ ಬದಿ ವ್ಯಾಪಾರಿಗಳ ಕಾಯ್ದೆಯನ್ನು ಅನುಷ್ಠಾನಗೊಳಿಸಿ ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಬೇಕು. ಬೀದಿ ಬದಿ ವ್ಯಾಪಾರಿಗಳ ಪಟ್ಟಿಯನ್ನು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಪೊಲೀಸರೊಂದಿಗೆ ಹಂಚಿಕೊಂಡರೆ ಪೊಲೀಸ್ ಕಿರುಕುಳವನ್ನು ತಪ್ಪಿಸಬಹುದು’ ಎಂದು ಅವರು ಒತ್ತಾಯಿಸಿದರು.

### ಸುದ್ದಿ 2 ನಿಮಿಷ

## ಬೆಂಗಳೂರಿನ ನೌಕರರ ಎಚ್‌ಆರ್‌ಎ ಶೇಕಡ 50ಕ್ಕೆ ಹೆಚ್ಚಳ: ಮನವಿ

ನವದಹಲಿ: ಬೆಂಗಳೂರು ನಗರದ ಸಂಬಳದಾರ ವರ್ಗದ ಮನೆ ಬಾಡಿಗೆ ಭತ್ಯೆಯನ್ನು ಶೇ 40ರಿಂದ ಶೇ 50ಕ್ಕೆ ಏರಿಸಬೇಕು ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ‘ಬೆಂಗಳೂರು ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಇತರ ಸಮನಾದ ನಗರಗಳನ್ನು ದೇಶದ ಮಹಾನಗರಗಳ ಪಟ್ಟಿಗೆ ಸೇರ್ಪಡೆಗೊಳಿಸುವ ಮೂಲಕ, ಮಧ್ಯಮ ವರ್ಗದ ಸಂಬಳದಾರರ ಹಿತಾಸಕ್ತಿ ಕಾಯಬೇಕು’ ಎಂದು ಆಗ್ರಹಿಸಿದರು.

‘ಬೆಂಗಳೂರು ಮಹಾನಗರವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅತ್ಯಂತ ಪ್ರಮುಖ ನಗರವಾಗಿದ್ದು, ಸಂಬಳದಾರ ವರ್ಗವು ಅತಿ ಹೆಚ್ಚು ವಾಸಿಸುವ ದೇಶದ ಮುಖ್ಯ ನಗರವಾಗಿದೆ. ದೆಹಲಿ, ಚೆನ್ನೈ, ಮುಂಬೈ ಮತ್ತು ಕೊಲ್ಕತ್ತಾ ಸಾಲಿಗೆ ಬೆಂಗಳೂರನ್ನು ಕೂಡ ಸೇರಿಸಿದಲ್ಲಿ, ನಗರದ ಮಧ್ಯಮ ವರ್ಗದ ಸಂಬಳದಾರ ವರ್ಗದ ಜನತೆಗೆ ಸಾಕಷ್ಟು ಅನುಕೂಲವಾಗಲಿದೆ. ಆದಾಯ ತೆರಿಗೆ ನಿಯಮಾವಳಿಗಳನ್ನು ಪರಾಮರ್ಶಿಸುವ ಮೂಲಕ ಬೆಂಗಳೂರು ನಗರದ ಜನತೆಯ ಮನೆ ಬಾಡಿಗೆ ಭತ್ಯೆ ಹೆಚ್ಚಳ ಮಾಡಬೇಕು’ ಎಂದು ಅವರು ಹೇಳಿದರು.

## ‘ಪಕ್ಷ ತೊರೆದವರನ್ನು ಪಕ್ಷಕ್ಕೆ ಕರೆತನ್ನಿ’

ಪೀಣ್ಯ ದಾಸರಹಳ್ಳಿ: ಕ್ಷೇತ್ರದಲ್ಲಿ ಪಕ್ಷ ಬಿಟ್ಟು ಹೋದವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಬಾಗಲಗುಂಟೆಯ ಸಾಯಿ ಕಲ್ಯಾಣ ಮಂಟಪದಲ್ಲಿ ಮಾಜಿ ಶಾಸಕ ಎಸ್. ಮುನಿರಾಜು ನೇತೃತ್ವದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

‘ಮೋದಿ ಅವರು 15 ದಿನಕ್ಕೊಮ್ಮೆ ರಾಜ್ಯಕ್ಕೆ ಬರುವುದಾಗಿ ಹೇಳಿದ್ದಾರೆ. ಅಮಿತ್ ಶಾ ಕೂಡ ತಿಂಗಳಲ್ಲಿ ನಾಲ್ಕೈದು ಬಾರಿ ಪ್ರವಾಸ ಮಾಡಿ ಪಕ್ಷ ಗೆಲ್ಲಿಸುವ ಪ್ರಯತ್ನ ಮಾಡುತ್ತಾರೆ. ಕಾಂಗ್ರೆಸ್‌ನಲ್ಲಿ ಡಿಕೆಶಿ ಮತ್ತು ಸಿದ್ದರಾಮಯ್ಯ ಅವರಿಗೆ ಜಗಳವಿದೆ. ಆಮ್ ಆದ್ಮಿ ಪಕ್ಷವು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಮತಗಳನ್ನು ಸೆಳೆಯುವುದರಿಂದ ಬಿಜೆಪಿ ಗೆದ್ದು ಅಧಿಕಾರಕ್ಕೆ ಬರಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಸ್. ಮುನಿರಾಜು, ನೆಲ ನರೇಂದ್ರ ಬಾಬು, ಮರಿಸ್ವಾಮಿ, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ಉಮಾದೇವಿ ನಾಗರಾಜು, ಸುಜಾತ ಮುನಿರಾಜು, ಶೆಟ್ಟಿಹಳ್ಳಿ ಸುರೇಶ್, ಪಿ.ಎಚ್.ರಾಜು, ಭರತ್ ಸೌಂದರ್ಯ, ಶಿವಕುಮಾರ್ ಉಪಸ್ಥಿತರಿದ್ದರು.

### ಚಿತ್ರಾವಳಿ

ವೈಭವ ವೇದ ಗ್ರೀನ್ ವೆಂಚರ್ಸ್ ಮತ್ತು ಡಾ. ಸಮನ್ವಯ್ ಫೌಂಡೇಷನ್ ನೂತನ ಲೋಗೋ ಮತ್ತು ವೆಬ್‌ಸೈಟ್ ಅನ್ನು ಇತ್ತೀಚಿಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಲೋಕಾರ್ಪಣೆ ಮಾಡಲಾಯಿತು. (ಎಡದಿಂದ ಬಲಕ್ಕೆ) ಹಾಸನ ಹಾಲು ಉತ್ಪಾದಕರ ಸಂಘದ ವ್ಯವಸ್ಥಾಪಕ ನಿರ್ದೇಶಕ ಗೋಪಾಲಯ್ಯ, ಶಾಸಕ ಸಿ.ಕೆ. ಬಾಲಕೃಷ್ಣ, ಮಹಾಂತೇಶ್, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಎಡಿಜಿಪಿ ಎಂ. ನವೀನ್ ಕುಮಾರ್, ಶಿಲ್ಪಾ ಎಚ್. ನವೀನ ಇದ್ದಾರೆ.

ಎ.ಜಿ. ರತ್ನ ಕಾಳೇಗೌಡ ಅವರ ‘ತಾಯಿ ಎಂದರೆ ಸೃಷ್ಟಿ ತಾಯಿ ಪದ್ಯಗಳು’ ಮತ್ತು ‘ವ್ಯೂಹ ಕಥಾ ಸಂಕಲನ’ವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ಬಿಡುಗಡೆ ಮಾಡಲಾಯಿತು. ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್, ಮೀರಾ ಸಾಬಿಹಳ್ಳಿ ಶಿವಣ್ಣ, ಅಗ್ರಹಾರ ಕೃಷ್ಣಮೂರ್ತಿ, ಬೈರಮಂಗಲ ರಾಮೇಗೌಡ ಇದ್ದರು.

ರಮೇಶ್ ರಜಿನಿ ಅವರು ಬರೆದಿರುವ ‘ಫ್ರಿಕ್ಷನ್ ಫ್ರೀ ಪೇರೆಂಟಿಂಗ್’ ಪುಸ್ತಕವನ್ನು ಇತ್ತೀಚಿಗೆ ಬಿಡುಗಡೆ ಮಾಡಲಾಯಿತು. ದಿವ್ಯಾ ಅಮರನಾಥ್, ವಿಶ್ವೇಶ್ ಭಟ್, ಯತೀಶ್ ಸಿದ್ದಕಟ್ಟೆ, ಸುರೇಶ್ ಮಾಯಸಂದ್ರ, ಮನೋಜ್ ರನ್ನೋರೆ, ಡಾ. ಉಮಾಕಾಂತ್ ಅಡಿಗ, ಶ್ರೀನಿವಾಸ್ ಪಾರ್ಥಸಾರಥಿ ಇದ್ದರು.

ಪೂರ್ಣಕಾಲಿಕ ಸೇವೆ ಸಲ್ಲಿಸಿದ ಅರಣ್ಯ ಪ್ರೇರಕರಿಗೆ ಸಂಪೂರ್ಣ ಹಣ ಬಿಡುಗಡೆಗೆ ಆಗ್ರಹಿಸಿ, ನೊಂದ ಅರಣ್ಯ ಪ್ರೇರಕರ ಒಕ್ಕೂಟದ ಸದಸ್ಯರು ಇತ್ತೀಚೆಗೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸಚಿವ ಸೋಮಶೇಖರ್ ಸೂಚನೆ

# 14 ಗ್ರಾಮಗಳಿಗೆ ಬಿಡಿಎಯಿಂದ ನೀರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಡಪ್ರಭು ಕೆಂಪೇಗೌಡ ಬಡಾವಣೆ ವ್ಯಾಪ್ತಿಯಲ್ಲಿನ 14 ಗ್ರಾಮಗಳಿಗೆ ಬಿಡಿಎ ವತಿಯಿಂದಲೇ ಕುಡಿಯುವ ನೀರು ಪೂರೈಕೆ ಮಾಡುವುದರ ಜೊತೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ವಿಕಾಸಸೌಧದಲ್ಲಿ ಕೆಂಪೇಗೌಡ ಬಡಾವಣೆಗೆ ಭೂಮಿ ನೀಡಿದ ರೈತರು ಹಾಗೂ ಬಿಡಿಎ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ವಲಗೇರಹಳ್ಳಿಯಲ್ಲಿ ಬಿಡಿಎ ನಿರ್ಮಿಸಿರುವ ವಸತಿಸಮುಚ್ಚಯಕ್ಕೆ ಮೂಲಸೌಕರ್ಯ ಕಲ್ಪಿಸಿದ ಬಳಿಕವಷ್ಟೇ ಪಾಲಿಕೆಗೆ ಹಸ್ತಾಂತರಿಸಬೇಕು. ಯಾವುದೇ ನ್ಯೂನತೆ ಇಲ್ಲದ ರೀತಿಯಲ್ಲಿ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಿ ಹಸ್ತಾಂತರಿಸಬೇಕು ಎಂದು ಹೇಳಿದರು.

ಕೆಂಪೇಗೌಡ ಬಡಾವಣೆಗಾಗಿ ಭೂಮಿ ನೀಡಿದ ಶೇ 90ರಷ್ಟು ರೈತರಿಗೆ ನಿವೇಶನ ನೀಡಲಾಗಿದ್ದು, ಉಳಿದ ಶೇ 10ರಷ್ಟು ರೈತರಿಗೆ ಶೀಘ್ರದಲ್ಲಿ ನಿವೇಶನ ಹಂಚಿಕೆ ಮಾಡಬೇಕು. ಭೂಮಿ ನೀಡಿದ ರೈತರು ನಿವೇಶನಕ್ಕಾಗಿ ಬಿಡಿಎ ಕಚೇರಿಗೆ ಅಲೆದಾಡುವುದು ತಪ್ಪಬೇಕು. ನಿವೇಶನ ನೀಡುವಿಕೆಯಲ್ಲಿ ವಿಳಂಬವಾಗಬಾರದು ಎಂದರು.

ಬಡಾವಣೆಯಲ್ಲಿ ಸಿಎ, ಪಾರ್ಕ್ ಜಾಗ ಕಬಳಿಕೆಯಾಗದಂತೆ ನೋಡಿಕೊಳ್ಳಬೇಕು. ರೆವಿನ್ಯೂ ಬಡಾವಣೆಯಲ್ಲಿ ನೋಂದಣಿಯಾಗಿರುವ ನಿವೇಶನ ಹಾಗೂ ಕಟ್ಟಿರುವ ಮನೆಗಳಿಗೆ ಖಾತೆ ಮಾಡಿಕೊಡುವ ಸಂಬಂಧ ನೋಟಿಫಿಕೇಷನ್ ಹೊರಡಿಸಲಾಗಿದೆಯಾದರೂ ಇದುವರೆಗೂ ಈ ಬಗ್ಗೆ ಕ್ರಮ ವಹಿಸಿಲ್ಲ. ಈ ಕುರಿತು ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

‘ಭೂಮಿ ನೀಡಿದ ರೈತರಿಗೆ ತ್ವರಿತಗತಿಯಲ್ಲಿ ನಿವೇಶನ ನೀಡಲಾಗುವುದು. ಇಸಿಡಿ ಮಾಡಿಸಿ ರೈತರಿಗೆ ನಿವೇಶನ ಹಂಚಿಕೆ ಮಾಡಲಾಗುವುದು. ಲಾಟರಿ ಪದ್ಧತಿ ಇರುವುದಿಲ್ಲ. ಈ ಕುರಿತು ಈಗಾಗಲೇ ಸಭೆ ನಡೆಸಲಾಗಿದ್ದು, ತ್ವರಿತವಾಗಿ ನಿವೇಶನ ಹಂಚಿಕೆ ಮಾಡಲಾಗುವುದು’ ಎಂದು ಬಿಡಿಎ ಅಧ್ಯಕ್ಷರಾದ ಎಸ್.ಆರ್.ವಿಶ್ವನಾಥ್ ಅವರು ಭರವಸೆ ನೀಡಿದರು.

**ಸಿಬಿಐ ತನಿಖೆಗೆ ಶಿಫಾರಸು:** ಬಾಗಲಕೋಟ ಡಿಸಿಸಿ ಬ್ಯಾಂಕ್ ನಲ್ಲಿ 2015ರಿಂದ 2022ರ ಅವಧಿಯಲ್ಲಿ ನಡೆದಿರುವ ₹12.27 ಕೋಟಿ ದುರುಪಯೋಗ ಪ್ರಕರಣ ಕುರಿತ ತನಿಖೆಯನ್ನು ಕೇಂದ್ರೀಯ ತನಿಖಾದಳ (ಸಿಬಿಐ)ಕ್ಕೆ ವಹಿಸುವಂತೆ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಕೆಂಪೇಗೌಡ ಬಡಾವಣೆಯಲ್ಲಿ ಕೆಂಪೇಗೌಡ ಭವನ ನಿರ್ಮಿಸಿಲು ಮೀಸಲಿಟ್ಟಿರುವ 4 ಎಕರೆ 21 ಗುಂಟೆ ಜಾಗದ ಅಭಿವೃದ್ಧಿ ಸೇರಿದಂತೆ ನಾನಾ ಬೇಡಿಕೆಗಳುಳ್ಳ ಮನವಿ ಪತ್ರವನ್ನು ರೈತರು ಬಿಡಿಎ ಅಧ್ಯಕ್ಷ ಎಸ್‌ಆರ್‌ ವಿಶ್ವನಾಥ್ ಹಾಗೂ ಸಚಿವ ಎಸ್‌ಟಿ. ಸೋಮಶೇಖರ್ ಅವರಿಗೆ ಸಲ್ಲಿಸಿದರು.

**ಮುಖ್ಯಾಂಶಗಳು**

- ರೈತರು ಹಾಗೂ ಬಿಡಿಎ ಅಧಿಕಾರಿಗಳೊಂದಿಗೆ ಸಭೆ
- ಭೂಮಿ ನೀಡಿದ ಶೇ 10ರಷ್ಟು ರೈತರಿಗೆ ಶೀಘ್ರದಲ್ಲಿ ನಿವೇಶನ ಹಂಚಿಕೆ
- ತ್ವರಿತವಾಗಿ ನಿವೇಶನ ಹಂಚಿಕೆ ಮಾಡಲು ಬಿಡಿಎ ಅಧ್ಯಕ್ಷರ ಭರವಸೆ

# ಮಾರುತಿ ಸುಜುಕಿ ಕಾರು ಮೇಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾರುತಿ ಸುಜುಕಿ ಇಂಡಿಯಾ ಕಂಪನಿಯು ನಗರದ ಬಸವನಗುಡಿಯ ಮರಾಠ ಹಾಸ್ಟೆಲ್ ಮೈದಾನದಲ್ಲಿ ಮೆಗಾ ಕಾರ್ ಫೆಸ್ಟಿವಲ್ ಆಯೋಜಿಸಿದೆ. ಇದು ಗುರುವಾರದವರೆಗೆ ನಡೆಯಲಿದೆ.

ಆಲ್ಟೊದಿಂದ ಆರಂಭವಾಗಿ ಜಾಗ್ವಾರ್‌ವರೆಗೆ ಎಲ್ಲ ಬಜೆಟ್ ವರ್ಗಗಳಿಗೆ ಸೇರಿದ ನೂರಕ್ಕೂ ಹೆಚ್ಚಿನ ಸೆಕೆಂಡ್ ಹ್ಯಾಂಡ್ ಕಾರುಗಳು ಇಲ್ಲಿ ಲಭ್ಯವಿವೆ. ಡೀಲರ್‌ಗಳ ಕಡೆಯಿಂದ ಒಳ್ಳೆಯ ಹಣಕಾಸಿನ ನೆರವು ಕೂಡ ಗ್ರಾಹಕರಿಗೆ ಇಲ್ಲಿ ಸಿಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಹೊಸ ಕಾರುಗಳನ್ನು ಕೂಡ ಇಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಗ್ರಾಹಕರ ಹಳೆಯ ಕಾರುಗಳಿಗೆ ಶುಲ್ಕ ರಹಿತವಾಗಿ ಬೆಲೆ ನಿಗದಿ ಮಾಡಿ, ಹೊಸ ಮಾರುತಿ ಕಾರುಗಳಿಗೆ ಅವುಗಳನ್ನು ಬದಲಾಯಿಸಿಕೊಳ್ಳುವ ಅವಕಾಶ ಕೂಡ ಇದೆ ಎಂದು ಮಾರುತಿ ಸುಜುಕಿ ಪ್ರಕಟಣೆಯಲ್ಲಿ ಹೇಳಲಾಗಿದೆ.

ಸುಧಾ, ಮಯೂರ ಓದಿ

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರೆಲ್ಲರಿಗೂ ತಿಳಿಯಪಡಿಸುವುದೇನೆಂದರೆ, ಟೆಕ್ಸ್‌ಪೋರ್ಟ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ("ಮಾಲೀಕರು") ಈ ಕೆಳಗಿನ ದಾಖಲೆಗಳನ್ನು ಕಳೆದುಕೊಂಡಿರುತ್ತಾರೆ. ಕೈಗಾರಿಕಾ ಪ್ಲಾಟ್ ನಂ. 485/11, 14ನೇ ಅಡ್ಡರಸ್ತೆ, 4ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ, ವಾರ್ಡ್ ನಂ. 41, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು ಇಲ್ಲಿ ರಚಿತವಾಗಿರುವ ಸರ್ವೆ ನಂ. 46, ನಲ್ಲಕಾದರನಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು ಇಲ್ಲಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 205 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 157 ಅಡಿ, ಒಟ್ಟು ವಿಸ್ತೀರ್ಣ 32,185 ಚದರ ಅಡಿ ("ಹೇಳಲಾದ ಭೂಮಿ") ಜೊತೆಗೆ ಕೈಗಾರಿಕಾ ಕಟ್ಟಡವನ್ನು ನೆಲ ಮತ್ತು ಎರಡು ಮೇಲಿನ ಮಹಡಿಗಳಲ್ಲಿ ನಿರ್ಮಾಣ ಮಾಡಲಾಗಿದ್ದು, ಇದರ ಸುಪರ್ ಬಿಲ್ಟಪ್ ಪ್ರದೇಶ ಸುಮಾರು 19,207ಚದರ ಮೀಟರ್ 63,000ಚದರ ಅಡಿ ("ಕಟ್ಟಡ"), ಪ್ರಸಕ್ತ ಮುನ್ಸಿಪಲ್ ಖಾತಾ ಸಂ. 485/11 ("ಹೇಳಲಾದ ಆಸ್ತಿ") ಮತ್ತು ಹೇಳಲಾದ ಆಸ್ತಿಯ ದಾಖಲೆಗಳು ಈವರೆಗೂ ಪತ್ತೆಯಾಗಿರುವುದಿಲ್ಲ.

| ಕ್ರ. ಸಂ. | ಹೇಳಲಾದ ದಾಖಲೆಗಳು |
|---|---|
| 1 | ಕರ್ನಾಟಕ ವೆಲ್ಡಿಂಗ್ ಪ್ರಾಡಕ್ಟ್ಸ್ ಲಿಮಿಟೆಡ್‌ಗೆ ನೀಡಲಾದ ಹಂಚಿಕೆ ಪತ್ರ |
| 2 | ಸ್ವಾಧೀನ ಪತ್ರ ನಂ. ಐಎಡಿಎಂ/3907/1211/1/83–84 |
| 3 | ಕರ್ನಾಟಕ ವೆಲ್ಡಿಂಗ್ ಪ್ರಾಡಕ್ಟ್ಸ್ ಲಿಮಿಟೆಡ್ (ನೋಂದಾಯಿತ ದಾಖಲೆ ಸಂ. 1590/97–98, ಪುಸ್ತಕ–1, ಸಂಪುಟ 5827 ಪುಟ ಸಂ. 144–154, ಉಪ–ನೋಂದಣಾಧಿಕಾರಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು) ಪರವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನೀಡಲಾದ ಕ್ರಯಪತ್ರ ದಿನಾಂಕ 14.05.1997 |
| 4 | ಕರ್ನಾಟಕ ವೆಲ್ಡಿಂಗ್ ಪ್ರಾಡಕ್ಟ್ಸ್ ಲಿಮಿಟೆಡ್ (ನೋಂದಾಯಿತ ದಾಖಲೆ ಸಂ. 29076/02–03 ಪುಸ್ತಕ–1, ಸಿಡಿ ಸಂ. 114ರಲ್ಲಿ ಸಂಗ್ರಹಿಸಿಡಲಾಗಿದ್ದು, ಉಪ–ನೋಂದಣಾಧಿಕಾರಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು) ಪರವಾಗಿ ಮೆ॥ ಚೈತ್ರ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾದ ಕ್ರಯಪತ್ರ ದಿನಾಂಕ 10.03.2003. |
| 5 | ಆಯುಕ್ತರು, ದಾಸರಹಳ್ಳಿ ಪಟ್ಟಣ ಯೋಜನೆ, ಬೆಂಗಳೂರು ಇವರು ರಾಕೇಶ್ ಗೌರ್‌ರವರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಮೆ॥ ಚೈತ್ರ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಿರುವ ಕಟ್ಟಡ ಪರವಾನಿಗೆ ಮತ್ತು ಮಂಜೂರಾತಿ ನಕ್ಷೆ ಎಲ್‌ಪಿ ನಂ. 269/2003/04. |
| 6 | ಗೌರ್ ರಾಕೇಶ್ ಮತ್ತು ಇತರರು ಮತ್ತು ಸತೀಶ್ ಕುಮಾರ್ ಗೋಯೆಂಕಾ ಮತ್ತು ಇತರರ ನಡುವಿನ ಒಪ್ಪಂದ ಪತ್ರ. |
| 7 | ಗೌರ್ ರಾಕೇಶ್ ಮತ್ತು ಇತರರು ಹಾಗೂ ಸತೀಶ್ ಕುಮಾರ್ ಗೋಯೆಂಕಾ ಮತ್ತು ಇತರರ ನಡುವಿನ 06.12.2004 ರ ದಿನಾಂಕದ ಷೇರು ವರ್ಗಾವಣೆ ಒಪ್ಪಂದ. |
| 8 | ಚೈತ್ರ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿ ಮಾರ್ಪಾಡಾದ ದಿನಾಂಕ 02.01.1995 ರ ಸಂ. 08/16861ರ ಪ್ರಮಾಣಪತ್ರ |
| 9 | ವಿಶೇಷ ರೆಸಲ್ಯೂಷನ್ ದಿನಾಂಕ 07.01.2008ರ ಸಂ. ಯು70200ಕೆಎ1995ಪಿಟಿಸಿ016861 ಚೈತ್ರ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಆಗಿ ನೋಂದಣಿಯಾದ ಪ್ರಮಾಣಪತ್ರ. |
| 10 | ರಿಜಿಸ್ಟ್ರಾರ್ ಆಫ್ ಕಂಪನೀಸ್, ಕರ್ನಾಟಕ ಇವರಿಂದ ಚೈತ್ರ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ನಿಂದ ಟೆಕ್ಸ್‌ಪೋರ್ಟ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಎಂದು ಹೆಸರು ಬದಲಾಯಿಸಿದಾಗ ನೀಡಲಾದ ಪ್ರಮಾಣಪತ್ರ ಸಂ. ದಿನಾಂಕ ಯು70200ಕೆಎ1995ಪಿಟಿಸಿ016861 ದಿನಾಂಕ 07.01.2008. |
| 11 | ಟೆಕ್ಸ್‌ಪೋರ್ಟ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್‌ನ ದಿನಾಂಕ 16.12.1994ರ ಮೆಮರಾಂಡಮ್ ಆಫ್ ಅಸೋಸಿಯೇಶನ್ |
| | 2007–08ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚೈತ್ರ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಪಾವತಿಸಿದ ತೆರಿಗೆ ಪಾವತಿ ರಸೀತಿ |
| 12 | ಚೈತ್ರ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಮತ್ತು ಕರ್ನಾಟಕ ವೆಲ್ಡಿಂಗ್ ಪ್ರಾಡಕ್ಟ್ಸ್ ಲಿಮಿಟೆಡ್ ಪರವಾಗಿರುವ ಖಾತಾ ಎಂಡೋರ್ಸ್‌ಮೆಂಟ್ ಸರ್ಟಿಫಿಕೇಟ್ ಮತ್ತು ಎಕ್ಸ್‌ಟ್ರ್ಯಾಕ್ಟ್. |

ಮಾಲೀಕರು, ದಾಖಲೆ ಕಳೆದು ಹೋಗಿದೆ ಎಂಬುದಕ್ಕಾಗಿ ಜಿ ಎಸ್‌ಸಿ ಸಂ. ಪಿ01349220600731 ಅಡಿ ಬೆಂಗಳೂರು ಅಪರಾಧ ವಿಭಾಗ, ಬೆಂಗಳೂರು ನಗರ ಪೊಲೀಸ್ ಇವರಲ್ಲಿ ದಿನಾಂಕ 03.11.2022ರಂದು ದೂರು ದಾಖಲಿಸಿದ್ದು, ಸಂಬಂಧಪಟ್ಟ ವ್ಯಾಪ್ತಿಯಲ್ಲಿ ಯಾರಿಗಾದರೂ ಈ ದಾಖಲೆಗಳು ದೊರೆತರೆ ಅದನ್ನು ಪೊಲೀಸ್ ಇಲಾಖೆಗೆ ನೀಡಬೇಕಾಗಿ ವಿನಂತಿ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಹೇಳಲಾದ ದಾಖಲೆಗಳು ದೊರೆತರೆ ಅಂಥವರು ಈ ಕೆಳ ಸಹಿದಾರರಿಗೆ ತಿಳಿಸಬಹುದಾಗಿದೆ.

**ಸುನಿತ ಆರ್, ನ್ಯಾಯವಾದಿಗಳು,** ಇಂಡಸ್‌ಲಾ
101, 1ನೇ ಮಹಡಿ, “ಎಂಬೆಸಿ ಕ್ಲಾಸಿಕ್” 11
ವಿಠಲ್‌ಮಲ್ಯ ರಸ್ತೆ, ಬೆಂಗಳೂರು–560001
ದೂ: +91–80–40726600

**ಮೆ॥ ಟೆಕ್ಸ್‌ಪೋರ್ಟ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್**
#86 ಡಿ–1, ಕೈಗಾರಿಕಾ ಸಬರ್ಬ್, 2ನೇ ಹಂತ
ಯಶವಂತಪುರ, ಬೆಂಗಳೂರು–22
ದೂ: + 91 96633 95826

**ಬೆಂಗಳೂರು ದಿನಾಂಕ: 14.12.2022**

## ಬ್ಯಾಂಕ್ ಹಗರಣ: ಸಿಬಿಐ ತನಿಖೆಗೆ ಆಗ್ರಹ

**ಬೆಂಗಳೂರು:** ಬಸವನಗುಡಿಯ ಗುರುರಾಘವೇಂದ್ರ ಬ್ಯಾಂಕ್ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಗುರುರಾಘವೇಂದ್ರ ಬ್ಯಾಂಕ್ ಠೇವಣಿದಾರರ ಮತ್ತು ಷೇರುದಾರರ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

ಬಾಗಲಕೋಟೆ ಡಿಸಿಸಿ ಬ್ಯಾಂಕ್ ಹಗರಣ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡುತ್ತಿರುವ ಸಹಕಾರ ಸಚಿವರು, ಗುರುರಾಘವೇಂದ್ರ ಬ್ಯಾಂಕ್ ಹಗರಣದಲ್ಲಿ ಏಕೆ ಸುಮ್ಮನಿದ್ದಾರೆ ಎಂದು ವೇದಿಕೆ ಮಹಾಪೋಷಕ ಡಾ.ಶಂಕರ ಗುಹಾ ದ್ವಾರಕಾನಾಥ್ ಬೆಳ್ಳೂರು ದೂರಿದ್ದಾರೆ.

‘ಗುರುರಾಘವೇಂದ್ರ ಬ್ಯಾಂಕ್, ವಸಿಷ್ಠ ಸೌಹಾರ್ದ ಸಹಕಾರಿ ಬ್ಯಾಂಕ್, ಗುರುಸಾರ್ವಭೌಮ ಸೊಸೈಟಿ, ಕಣ್ವ ಸೇರಿದಂತೆ ಬೆಂಗಳೂರಿನ ಹಲವು ಸಹಕಾರಿ ಬ್ಯಾಂಕ್‌ಗಳಲ್ಲಿ ₹ 3,800 ಕೋಟಿ ಹಗರಣ ನಡೆದಿದೆ. ಸಮಗ್ರ ತನಿಖೆ ಮಾಡುವುದನ್ನು ಬಿಟ್ಟು ಕೇವಲ ರಾಜಕೀಯ ಉದ್ದೇಶದಿಂದ ₹ 12 ಕೋಟಿ ಹಗರಣವನ್ನು ಸಿಬಿಐಗೆ ವಹಿಸಲು ಮುಂದಾಗಿದ್ದೀರಿ. ಯಾರ ರಕ್ಷಣೆಗಾಗಿ ಈ ತಂತ್ರ. ಆಡಳಿತಾರೂಢ ಬಿಜೆಪಿ ಸರ್ಕಾರದ ವ್ಯವಸ್ಥಿತ ಷಡ್ಯಂತ್ರವೇ’ ಎಂದು ಪ್ರಶ್ನಿಸಿದ್ದಾರೆ.

‘ಹಗರಣ ಬಯಲಾಗಿ ಮೂರು ವರ್ಷವಾದರೂ ಪೂರ್ತಿ ಪ್ರಮಾಣದ ಹಣ ಠೇವಣಿದಾರರಿಗೆ ಇದುವರೆಗೂ ಬಂದಿಲ್ಲ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಈ ಹಗರಣದ ವಿಷಯದಲ್ಲಿ ತೀರಾ ನಿರ್ಲಕ್ಷ್ಯ ವಹಿಸಿದೆ. ಸಿಬಿಐಗೆ ಒಪ್ಪಿಸಿ ಎಂದು ಸತತವಾಗಿ ಕೇಳಿಕೊಂಡು ಬಂದಿದ್ದೇವೆ’ ಎಂದಿದ್ದಾರೆ.

## ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

**ಬೆಂಗಳೂರು:** ಚಿನ್ನಾಭರಣ ಅಡವಿಟ್ಟ ಪ್ರಕರಣದ ಸಂಬಂಧ ನಡೆದ ಗಲಾಟೆಯಲ್ಲಿ ಹಿಟ್ಟಿನ ಕೋಲಿನಿಂದ ಹಲ್ಲೆ ನಡೆಸಿ ಸ್ನೇಹಿತೆಯನ್ನೇ ಕೊಲೆ ಮಾಡಿದ್ದ ಅಪರಾಧಿಗೆ 68ನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶ ನೀಡಿದೆ.

ದೊಡ್ಡಬೊಮ್ಮಸಂದ್ರದ ಚಾಮುಂಡೇಶ್ವರಿ ಬಡಾವಣೆಯ ಲಕ್ಷ್ಮಿ ಶಿಕ್ಷೆಗೆ ಒಳಗಾದವರು. ನ್ಯಾಯಾಧೀಶ ಸಾಬಪ್ಪ ಅವರು ಶಿಕ್ಷೆ ವಿಧಿಸಿ ಆದೇಶ ನೀಡಿದ್ದಾರೆ. ಐಪಿಸಿ ಕಲಂ 320 ಅಡಿಯ ಅಪರಾಧಕ್ಕೆ ಅಪರಾಧಿಗೆ ಜೀವಾವಧಿ ಶಿಕ್ಷೆ, ₹ 5 ಸಾವಿರ ದಂಡ, ಐಪಿಸಿ ಕಲಂ 201 ಅಡಿಯ ಅಪರಾಧಕ್ಕೆ 7 ವರ್ಷ ಸಾದಾ ಶಿಕ್ಷೆ, ₹ 2,500 ದಂಡ ವಿಧಿಸಲಾಗಿದೆ. ಕೊಲೆಯಾದ ಇಂದಿರಾ ಹಾಗೂ ಲಕ್ಷ್ಮಿ ಸ್ನೇಹಿತೆಯರು. ಇಬ್ಬರ ನಡುವೆ ಹಣಕಾಸಿನ ವ್ಯವಹಾರವಿತ್ತು. ಇಂದಿರಾ ಅವರ ಚಿನ್ನದ ಒಡವೆಗಳನ್ನು ದೊಡ್ಡಬೊಮ್ಮಸಂದ್ರದ ಮುತ್ತೂಟ್ ಫೈನಾನ್ಸ್‌ನಲ್ಲಿ ಲಕ್ಷ್ಮಿ ಅಡವಿಟ್ಟಿದ್ದಳು. ಈ ವಿಚಾರಕ್ಕೆ 2013ರ ಸೆ.16ರಂದು ಗಲಾಟೆ ನಡೆದು, ಅಪರಾಧಿಯು ಹಿಟ್ಟಿನ ಕೋಲಿನಿಂದ ಹೊಡೆದು ಕೊಲೆ ಮಾಡಿದ್ದಳು. ಮಂಚದ ಕೆಳಗೆ ಮೃತದೇಹ ಬಚ್ಚಿಟ್ಟಿದ್ದಳು. ರಕ್ತದ ಕಲೆಯನ್ನು ನೀರಿನಿಂದ ತೊಳೆದು ಕೊಲೆ ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದಳು.



ಕರ್ನಾಟಕ ಸರ್ಕಾರ
**ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ**
ದೂರವಾಣಿ ಸಂ : 08482–229332, ಫ್ಯಾಕ್ಸ್ : 08482–225262,
E-Mail: itstaff_dudc_bidar@yahoo.com

ಸಂ: ಎಂಯುಎನ್/ಕಾಮಗಾರಿ/ಬೀಉ/2022–23 ದಿನಾಂಕ: 12–12–2022

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಬೀದರ ನಗರದ ಕೋಟೆ ಆವರಣದಲ್ಲಿ **"ಬೀದರ ಉತ್ಸವ"** ಆಚರಿಸುವ ನಿಮಿತ್ಯ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗಿನ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆನಲೈನ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಕ್ಯೂರ್‌ಮೆಂಟ್‌ನ www.eproc.karnataka.gov.in ಅಥವಾ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

1) ಟೆಂಡರನ್ನು ಇ–ಪ್ರಾಕ್ಯೂರ್‌ಮೆಂಟ್‌ನಲ್ಲಿ ಆನಲೈನ ಮೂಲಕ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : 19–12–2022 04:30 PM. 2) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ : 20–12–2022 05:00 PM

ಕಾಮಗಾರಿಯ ವಿವರ: 1) Providing VIP chairs, fibre chairs, sofa sets, food court stalls, green house and frisking canopes, media room and carpet in fort premises for Bidar Utsav programme in Bidar fort premises for 3 days from 7th January to 9th January 2023 (DMA/2022-23/OW/WORK_INDENT143295/CALL-2)ಇ.ಎಂ.ಡಿ. (ರೂ. ಗಳಲ್ಲಿ)-17050. 2) Illumination in various locations for celebration of Bidar Utsav at Bidar Fort premises for 3 days from 7th January to 9th January 2023 (DMA/2022-23/OW/WORK_INDENT143296/CALL-2). ಇ.ಎಂ.ಡಿ. (ರೂ. ಗಳಲ್ಲಿ)-21148. 3) Providing sound systems and lightings for Bidar Utsav at Bidar Fort premises for 3 days from 7th January to 9th January 2023 (DMA/2022-23/OW/WORK_INDENT143297/CALL-2) ಇ.ಎಂ.ಡಿ. (ರೂ. ಗಳಲ್ಲಿ)-18853. 4) Providing and Fixing of Main Stage Platform of Bidar Utsav at Bidar Fort premises for 3 days from 7th January to 9th January 2023 (DMA/2022-23/OW/WORK_INDENT143298/CALL-2). ಇ.ಎಂ.ಡಿ. (ರೂ. ಗಳಲ್ಲಿ)-9360.

ಸಹಿ/– ಜಿಲ್ಲಾಧಿಕಾರಿಗಳು
ಬೀದರ ಜಿಲ್ಲೆ, ಬೀದರ

ವಾ.ಸಾ.ಸಂ.ಇ/ಬೀದರ/368/ಎಂಸಿ&ಎ/2022–23

# ವಿಟ್ಲ ಖಾಸಗಿ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿ, ಹಿಂದೂ ವಿದ್ಯಾರ್ಥಿನಿ ನಡುವಿನ ಪ್ರಕರಣ

# ಪ್ರೇಮಪತ್ರ ವಿವಾದ: 18 ವಿದ್ಯಾರ್ಥಿಗಳ ಅಮಾನತು

ಪ್ರಜಾವಾಣಿ ವಾರ್ತೆ

**ವಿಟ್ಲ (ದಕ್ಷಿಣ ಕನ್ನಡ):** ಪ್ರೇಮ ಪತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಖಾಸಗಿ ಪದವಿಪೂರ್ವ ಕಾಲೇಜಿನ 18 ವಿದ್ಯಾರ್ಥಿಗಳನ್ನು ಪ್ರಾಂಶುಪಾಲರು ವಾರ್ಷಿಕ ಪರೀಕ್ಷೆಯ ವರೆಗೆ ಕಾಲೇಜಿನಿಂದ ಅಮಾನತು ಮಾಡಿದ್ದಾರೆ.

‘ಕಾಲೇಜಿನಲ್ಲಿ ದ್ವಿತೀಯ ಪಿ.ಯು ವ್ಯಾಸಂಗ ಮಾಡುತ್ತಿರುವ ಮುಸ್ಲಿಂ ವಿದ್ಯಾರ್ಥಿ ಮತ್ತು ಹಿಂದೂ ವಿದ್ಯಾರ್ಥಿನಿ ನಡುವಿನ ಪ್ರೇಮ ಪತ್ರ ಪ್ರಕರಣವು ವಿವಾದದ ಸ್ವರೂಪ ಪಡೆದಿದೆ. ಹೀಗಾಗಿ ಪೋಷಕರ ಸಮ್ಮುಖದಲ್ಲಿ ಆಡಳಿತ ಮಂಡಳಿ ಮತ್ತು ಉಪನ್ಯಾಸಕರು ಮಾತುಕತೆ ನಡೆಸಿ ಮುನ್ನೆಚ್ಚರಿಕೆ ಕ್ರಮವಾಗಿ ಈ ನಿರ್ಧಾರ ಕೈಗೊಂಡಿದ್ದಾರೆ’ ಎಂದು ಕಾಲೇಜಿನ ಮೂಲಗಳು ತಿಳಿಸಿವೆ.

ಅಮಾನತುಗೊಂಡ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಮಾತ್ರ ಕಾಲೇಜಿಗೆ ಬರಬಹುದು ಎಂದು ಸೂಚನೆ ನೀಡಲಾಗಿದೆ.

‘ಪ್ರೀತಿಸುತ್ತಿದ್ದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯ ಪೋಷಕರನ್ನು ಕಾಲೇಜಿನ ಆಡಳಿತ ಮಂಡಳಿಯು ಈ ಮೊದಲೇ ಕಾಲೇಜಿಗೆ ಕರೆಯಿಸಿ, ಅವರಿಬ್ಬರ ಪ್ರೇಮದ ವಿಚಾರವನ್ನು ಗಮನಕ್ಕೆ ತಂದಿತ್ತು. ಆ ಬಳಿಕ ಯಾವುದೇ ಗೊಂದಲವಿಲ್ಲದೆ ತರಗತಿ ನಡೆಯುತ್ತಿತ್ತು. ಆದರೆ, ಈಚೆಗೆ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರೇಮ ಪ್ರಕರಣವು ಮತ್ತೆ ವಿವಾದ ಪಡೆದುಕೊಂಡಿದೆ. ತರಗತಿಯಲ್ಲಿ ವಿದ್ಯಾರ್ಥಿಗಳು ಮೊಬೈಲ್ ಬಳಸುತ್ತಿದ್ದುದ್ದನ್ನು ಉಪನ್ಯಾಸಕರು ಪರಿಶೀಲಿಸಲು ಮುಂದಾದಾಗ, ವಿದ್ಯಾರ್ಥಿನಿಯ ಕೈಯಲ್ಲಿ ಪ್ರೇಮಪತ್ರ ಪತ್ತೆಯಾಗಿದೆ. ಆದರೆ, ಅದನ್ನು ನೀಡಿದ ವಿದ್ಯಾರ್ಥಿ ಅಂದು ಕಾಲೇಜಿಗೆ ಬಂದಿರಲಿಲ್ಲ. ಯುವತಿಯ ಪೋಷಕರಿಗೆ ಈ ವಿಷಯ ತಿಳಿಸಿದ ಕಾಲೇಜು ಆಡಳಿತ ಮಂಡಳಿ, ಪರೀಕ್ಷೆಗೆ ಬರೆಯಲು ಮಾತ್ರ ವಿದ್ಯಾರ್ಥಿನಿಯನ್ನು ಕಾಲೇಜಿಗೆ ಕಳುಹಿಸುವಂತೆ ಸೂಚನೆ ನೀಡಿತ್ತು’ ಎಂಬುದು ಮೂಲಗಳ ಮಾಹಿತಿ.

‘ಪ್ರೇಮಪತ್ರ ಬರೆದ ವಿದ್ಯಾರ್ಥಿಯು ಮರುದಿನ ತರಗತಿಗೆ ಹಾಜರಾದಾಗ, ಹಿಂದೂ ಸಮುದಾಯದ ವಿದ್ಯಾರ್ಥಿಗಳು ಅದನ್ನು ಪ್ರಶ್ನಿಸಿದ್ದರು. ವಿದ್ಯಾರ್ಥಿನಿಗೆ ಕಾಲೇಜಿಗೆ ಬರಬೇಡ ಎಂದು ಹೇಳಿ, ಈ ವಿದ್ಯಾರ್ಥಿಗೆ ಹೇಗೆ ಅವಕಾಶ ನೀಡಿದ್ದೀರಿ ಎಂದು ಕೇಳಿದರು. ವಿಷಯ ವಿವಾದ ಸ್ವರೂಪ ಪಡೆಯುತ್ತಿದ್ದಂತೆ, ಆ ವಿದ್ಯಾರ್ಥಿಯ ಬೆಂಬಲಕ್ಕೆ ನಿಂತವರನ್ನು ಹಾಗೂ ಪ್ರಶ್ನಿಸಲು ಹೋದ ವಿದ್ಯಾರ್ಥಿಗಳನ್ನು ಪೋಷಕರ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಗಿತ್ತು. ಎರಡೂ ಕಡೆಯ ಒಟ್ಟು 18 ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಮಾತ್ರ ಅವಕಾಶ ನೀಡುವ ನಿರ್ಧಾರವನ್ನು ಕಾಲೇಜಿನ ಆಡಳಿತ ಮಂಡಳಿ ತೆಗೆದುಕೊಂಡಿದೆ’ ಎಂದು ಮೂಲಗಳು ತಿಳಿಸಿವೆ.

# ‘ಜನೋಪಯೋಗಿ ಸರ್ಕಾರ ಬೇಕು’

ಪ್ರಜಾವಾಣಿ ವಾರ್ತೆ

**ಚಾಮರಾಜನಗರ:** ‘ಜನಪ್ರಿಯ ಸರ್ಕಾರದಿಂದ ಜನರಿಗೆ ಏನೂ ಲಾಭವಿಲ್ಲ. ಜನೋಪಯೋಗಿ ಸರ್ಕಾರ ವಿರಬೇಕು. ಅಂಥ ಸಚಿವರು, ಶಾಸಕರಿರಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಪ್ರತಿಪಾದಿಸಿದರು.

ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಅವರು, ‘ಸರ್ಕಾರ ಅಭಿವೃದ್ಧಿ ಕಾರ್ಯಗಳ ಮೂಲಕವೇ ಮತ ಕೇಳಬೇಕು. ದೇಶದೆಲ್ಲೆಡೆ ಹಿಂದೆ ನಕಾರಾತ್ಮಕ ಪ್ರಜಾಪ್ರಭುತ್ವವಿತ್ತು. ಒಂದು ಸರ್ಕಾರದ ತಪ್ಪುಗಳನ್ನು ಮುಂದಿಟ್ಟುಕೊಂಡೇ ಇನ್ನೊಂದು ಸರ್ಕಾರ ರಚನೆಯಾಗುತ್ತಿತ್ತು. ರಾಜ್ಯಕ್ಕೆ, ದುಡಿಯುವ ಜನರಿಗೆ ಅನುಕೂಲವಾಗುತ್ತಿರಲಿಲ್ಲ’ ಎಂದರು.

> **ರಾಜ್ಯ ಸರ್ಕಾರ ದುಡಿಯುವ ವರ್ಗಕ್ಕೆ ಹೆಚ್ಚಿನ ಒತ್ತು ನೀಡಿದೆ. ಮೊದಲು ದುಡ್ಡೇ ದೊಡ್ಡಪ್ಪ ಎಂದು ಹೇಳಲಾಗುತ್ತಿತ್ತು. ಈಗ ದುಡಿಮೆಯೇ ದೊಡ್ಡಪ್ಪ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ದೇಶದಲ್ಲಿ ಸಕಾರಾತ್ಮಕ ರಾಜಕಾರಣವಿದ್ದರೆ ಮಾತ್ರ ಜನರಿಗೂ ಅನುಕೂಲವಾಗಿ, ಪ್ರಜಾಪ್ರಭುತ್ವವೂ ಯಶಸ್ವಿಯಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅಂಥ ರಾಜಕಾರಣ ಮಾಡುತ್ತಿದ್ದಾರೆ. ಅಸಾಧ್ಯವಾದುದನ್ನೇ ಸವಾಲಾಗಿ ಸ್ವೀಕರಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಲ ಜೀವನ್ ಮಿಷನ್ ಅದಕ್ಕೆ ಉತ್ತಮ ಉದಾಹರಣೆ’ ಎಂದು ಪ್ರತಿಪಾದಿಸಿದರು.

‘ದೇಶದ 20 ಕೋಟಿ ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಪ್ರಧಾನಿ ಘೋಷಿಸಿದರು. ಎಂಟು ಕೋಟಿ ಮನೆಗಳಿಗೆ ಈಗಾಗಲೇ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಒಂದೂವರೆ ವರ್ಷಗಳಲ್ಲಿ ಎಲ್ಲ ಮನೆಗಳಿಗೂ ನೀರು ಪೂರೈಕೆಯಾಗಲಿದೆ’ ಎಂದರು.

‘ರಾಜ್ಯದಲ್ಲಿ 75 ವರ್ಷಗಳಲ್ಲಿ 25 ಲಕ್ಷ ಮನೆಗಳಿಗಷ್ಟೇ ನೀರು ಪೂರೈಸಲಾಗಿತ್ತು. ಈಗ, ಒಂದೂವರೆ ವರ್ಷದಲ್ಲೇ 30 ಲಕ್ಷ ಮನೆಗಳಿಗೆ ನೀರು ಪೂರೈಸಲಾಗಿದೆ. ಪ್ರಸಕ್ತ ವರ್ಷ 25 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸುವ ಯೋಜನೆ ರೂಪಿಸಲಾಗಿದೆ’ ಎಂದರು.

‘ಚಾಮರಾಜನಗರಕ್ಕೆ ಬಂದರೆ ರಾಜಕೀಯ ಶಕ್ತಿ ಹೆಚ್ಚುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಜಿಲ್ಲೆಯ ಬಗ್ಗೆ ಸುಮ್ಮನೇ ಮೌಢ್ಯ ಹರಡಲಾಗಿದೆ. ಇಲ್ಲಿನ ಜನ ಮುತ್ತಿನಂಥವರು. ಹೃದಯ ಶ್ರೀಮಂತಿಕೆಯುಳ್ಳ ಅವರನ್ನು ಭೇಟಿಯಾಗುವುದು ಶುಭಸೂಚಕ. ನೀವು ಕರೆದಾಗಲೆಲ್ಲ ನಾನು ಬರುತ್ತೇನೆ’ ಎಂದರು.

# ತಂದೆಯ ಕೊಂದು 14 ತುಂಡು ಮಾಡಿದ ಮಗ

ಪರಶುರಾಮ

WANTED PERSONS with real interest to build a career. ITI, Diploma, BE in Electronics, Can be Drop- Outs and having backlog. Send Resume with Confidence to jayaram.kondur@gmail.com

MISTRY ARCITECTS RequiredCIVIL ENGINEERS with 2/3 years of experience @ site/ office. Should have knowledge of specifications & BOQ'S compulsory. Contact: 080-25256266, 41154416, Email-reception@mistrys.com

WANTED DME with CAD for Pvt.Ltd.Co. at Sahakarnagar. Minimum 2 Years Experience,Good Salary. Email to: projectsshakti@gmail.com

### Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

### Wanted

WANTED
TOOL DESIGNER for multinational Tool Room
QUALIFICATION Diploma Mech./ NTTF/GTTC
EXPERIENCE Min 4-5 year experience
CONTACT: 9591071090/ 7483818008
E:ksvenkatesh@srpblr.in

HITHACHINTHANA CHARITABLE TRUST RecruitmentBangalore based NGO looking for Resident Social Worker MSW OR Any NGO WITH 5 years' experience candidates can apply. Send your resumes: ramaswamycnr@gmail.com Contact: 9986896859

### Marketing & Sales

DIPLOMA/DEGREE CANDIDATE with Motorcycle 3 years experience to market Thermal Insulations products in Karnataka shall apply for a company at Nelamangala. insulationsblr@gmail.com 9480056374/9448143883

LONG ESTABLISHED Bangalore Engineering Sales Company dealing with multiple imported products like Fuel Transfer items, Propellor Shafts, Railway Brake Cables, Slewing Rings and Spare Parts needs SALES/ BUSINESS DEVELOPMENT MANAGER age 45 to 50 years. To be technically qualified and commercially experienced with ability to generate new business, prepare targets. meet Senior OEM Departmental Heads and Dealers, close business, lead small Sales Team, Know Word, Excel, Power Point. Will report to Chief Executive. Job involves travelling across India. Salary Rs.30,000 to 35,000 plus 2-wheeler allowance. Apply with details to-officestaffblr@gmail.com

### Accounts & Finance

R.D.BUSINESS SERVICE_PVT_LTD. Executive Accounts, Investments, Office_Administration. Near_Forum-Mall Koramangala, B.Com,English &-Kannada Knowledge, Minimum 3Years Experience,2W & 4W-Driving. mahesh24239@yahoo.com 9342816060/ 9066689879.

WANTED IMMEDIATELY Experienced OFFICE ASSISTANT. Computer knowledge must. 50 Years & Above Excuse. Staying close to Bilekahalli, Bannerghatta Road mail@ayyappa-cnc.com Phone. 080-26585172.

"WANTED PART-TIME Accountant staying in and around B.Narayanapura, good Salary. Contact: 9845981111"

### Multiple Vacancy

A reputed Educational Institution in Bangalore requires experienced person for
MARKETING MANAGER
EDUCATION QUALIFICATION: Candidates with any Degree with Marketing experience
ADMINISTRATIVE OFFICER
EDUCATION QUALIFICATION: Candidates with any Degree with Administrative experience
Email resumes with testimonials & Photo to jobsblr2023@gmail.com

OPPORTUNITY OF Career & Income for Retired Officials, Bankers, Teachers, CAs, Professionals, Homemakers. Call: 8095301555

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

### Security & Detectives

CHECKMATE SERVICES PVT LTD. Indiranagar, Bangalore Require MANAGER. H.R. (Minimum 05 yrs Experience in Statutory & Legal compliances and Payroll Process). Salary Rs 25,000/- & Above based on the experience. Phone: 080- 25200261. Mob: 9900079440. E-Mail: banglore@checkmateservices.com

### Receptionist/ Secretary

LOOKING FOR female candidate who is experience in Govt e - tender of facility management services at Mysore road Bangalore Contact 9739923651

### Overseas

Wanted
Immediately required house help lady care taker for a couple and a small child settled at Singapore. Must know cooking both veg and non veg Salary 30k per month with accommodation and food, age should be below 50 yrs. If no passport, we will support and guide to get it. Interested may contact : +91 9741913516

## PUBLIC NOTICE

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಶ್ರೀ. ಎಂ. ವೆಂಕಟರಮಣ ಬಿನ್ ಎಸ್. ಮುತ್ತುಸ್ವಾಮಿ ಅಯ್ಯರ್ ವಿಳಾಸ ನಂ.2042, ಶೋಭಾ ಪಲಾಡಿಯನ್, ಯಮಲೂರು, ಬೆಂಗಳೂರು-560037 ("ಮಾಲೀಕರು")ಇವರಿಂದ 18ನೇ ಬಿ ಮುಖ್ಯರಸ್ತೆ, ಕೋರಮಂಗಲ 6ನೇ ಬ್ಲಾಕ್, ವಾರ್ಡ್ ನಂ.151- ಕೋರಮಂಗಲ, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ (ಪಿಐಡಿ ನಂ. 67-8-175) ("ಷೆಡ್ಯೂಲ್ ಪ್ರಾಪರ್ಟಿ") ಮುನಿಸಿಪಲ್ ನಂ. 175 (ಹಿಂದಿನ ಬಿಡಿಎ ಸೈಟ್ ನಂ. 175, ಕೋರಮಂಗಲ ಎಕ್ಸ್‌ಟೆನ್ಷನ್, ಬೆಂಗಳೂರು) ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳನ್ನು ಖರೀದಿಸಲು ಉದ್ದೇಶಿಸಿರುತ್ತಾರೆ.

ಯಾವುದೇ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳಿಗಾಗಲಿ, ಹಣಕಾಸು ಸಂಸ್ಥೆಗಳು, ಭಾರತೀಯ ಜೀವ ವಿಮಾ ನಿಗಮ ಮುಂತಾದವರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಅಥವಾ ಯಾವುದೇ ಸ್ವರೂಪದ ಹಕ್ಕು, ಬಾಧ್ಯತೆ ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ, ಅಥವಾ ಷೆಡ್ಯೂಲ್ ಪ್ರಾಪರ್ಟಿಯ ದಾಖಲಾತಿಗಳಿಗೆ ಸಂಬಂಧಿಸಿದಂತೆ ಅಥವಾ ಮಾಲೀಕರ ವಿರುದ್ಧವಾಗಿ ಅಥವಾ ನಮ್ಮ ಕಕ್ಷಿದಾರರ ಸದರಿ ಸ್ವತ್ತಿನ ಖರೀದಿಗೆ ವಿರೋಧವಾಗಿ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿತ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಪೂರಕ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ನಿಗದಿತ ಅವಧಿಯೊಳಗೆ ಕ್ಲೇಮ್‌ಗಳು ಸಲ್ಲಿಕೆಯಾಗದಿದ್ದಲ್ಲಿ, ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳಿರುವುದಿಲ್ಲ ಎಂದು ಪರಿಗಣಿಸಿ, ತಮ್ಮ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್

18ನೇ ಬಿ ಮುಖ್ಯರಸ್ತೆ, ಕೋರಮಂಗಲ 6ನೇ ಬ್ಲಾಕ್, ವಾರ್ಡ್ ನಂ. 151- ಕೋರಮಂಗಲ, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಮುನಿಸಿಪಲ್ ನಂ. 175 (ಹಿಂದಿನ ಬಿಡಿಎ ಸೈಟ್ ನಂ. 175, ಕೋರಮಂಗಲ ಎಕ್ಸ್‌ಟೆನ್ಷನ್, ಬೆಂಗಳೂರು) (ಪಿಐಡಿ ನಂ. 67-8-175) ಹೊಂದಿರುವ, ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ವಿಸ್ತೀರ್ಣವುಳ್ಳ, ಒಟ್ಟಾರೆ 2400 ಚದರ ಅಡಿ ಕ್ಷೇತ್ರಫಲವುಳ್ಳ ಕಟ್ಟಡವನ್ನೂ ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:-

ಪೂರ್ವಕ್ಕೆ: ಸೈಟ್ ನಂ. 187 ಹೊಂದಿರುವ ಖಾಸಗಿ ಸ್ವತ್ತು;
ಪಶ್ಚಿಮಕ್ಕೆ: ರಸ್ತೆ;
ಉತ್ತರಕ್ಕೆ: ಸೈಟ್ ನಂ. 176 ಹೊಂದಿರುವ ಖಾಸಗಿ ಸ್ವತ್ತು; ಮತ್ತು
ದಕ್ಷಿಣಕ್ಕೆ: ಸೈಟ್ ನಂ. 174 ಹೊಂದಿರುವ ಖಾಸಗಿ ಸ್ವತ್ತು.

(ಆರ್.ಸುನೀತಾ), ವಕೀಲರು
ಇಂಡಸ್‌ಲಾ, ನಂ. 101, 1ನೇ ಮಹಡಿ, ಎಂಬೆಸ್ಸಿ ಕ್ಲಾಸಿಕ್, ನಂ. 11, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು 560001.
ಫೋನ್: 080-40726600

Timac AGRO PUBLIC NOTICE
In pursuance of S.O. 2900 (E) dated 24/10/2015 and clause 13 and clause 21 of the Fertilizer (Control) Order, 1985, we hereby intimate our intent to sell the following grades of hundred per cent water soluble fertilizer corresponding to the general specifications of FCO in the state of Karnataka:KSC-I (NPK 14-40-5), KSC-III (NPK 15-5-35) and KSC-V (NPK 8-16-42).
TIMAC AGRO INDIA PRIVATE LIMITED
No. 426, Between 7th and 8th Cross, Sampige Road, Malleswaram, Bangalore 560003
Regd. Office: 8/2, Unique Sterling 3rd Cross, Nungambakkam, Chennai, Tamil Nadu 600034

## RENTAL PROPERTIES

### Accommodation Available

### Commercial

COMMERCIAL SPACE 1950 Sqft Two carpark 25KW with generator Mission Road Cross Near Corporation Circle. Rent 1.10LakhsContact:9048382868

## REAL ESTATE SELLING

### Sites

### Banashankari

SALE - BANASHANKARI 6TH STAGE 4TH BLOCK near Prestige Primrose Hills BDA Corner site 1550 Sqft Contact 8512022233 Brokers Excuse

## BUSINESS

### Business to Business

### Business

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

KELTRON
(Govt. of Kerala Undertaking)
INVITES APPLICATION FOR DEALERSHIP IN KARNATAKA FOR CAPACITORS
For details, Visit www.keltroncomp.org
KELTRON COMPONENT COMPLEX LTD
email: marketing@keltroncomp.org
0497-2780831, 2780735

### Business Offers

### Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

## PERSONAL

### Change of Name

I, SAVITHA RODRIGUES resident of RamamurthyNagar wish to state that SAVITHA RODRIGUES and SAVITHA.S. both names belong to me. vide affidavit dated 12.12.2022 before Notary Gangaraju.B.N. Bangalore

CHANGE OF NAME
I, Chandrappa @ Chandra, Aged about 65 years, S/o. Late Muniswamappa, R/o. #536, 3rd Cross, J.V.V. West Gate, Kacharakanahalli, H.R.B.R. Layout, St. Thomas Town (Post), Bangalore - 84, do hereby change my name from M. Chandrappa @ Chandra to M. Chandregowda for all practical purposes in future. Sworn before Notary Y.R. Chandrasekar on 13.12.2022 at Bangalore.

14817904N HAV Bujharath Ram 2ATC Daughter's name Records GEETANJALI instead of GITANJALI, Notary BM Chandrashekar

CHANGE OF NAME
I, R. PAVITHRA, W/o. R. Surendra Kumar, Aged about: 36 years, R/at: A.J. Complex, K.R. Road, Hoskote Town, Hoskote, Bangalore Rural District, have changed my name from R. PAVITHRA to R. PRATHIBHA. Vide affidavit dated: 31.12.2014 sworn before Advocate & Notary D.G. Shanthappa, Bangalore.

I, JAGADISH Narayan Residing at #399, 1st Cross,2nd Block, 3rd Stage Banashnakari Bangalore-560085 have changed my minor son's name from SIDDHARTH J to SIDDHARTH JAGADISH vide affidavit dated: 13.12.2022 Sworn before notary: P.N.Nagesha, Bangalore

I, THILOTHAMMA Karinje D/O, Raghavendra Charya Karinje R/o No. 10, Apt 202, Berlie St Langford Town, Bangalore- 560025 have changed my name to Thilothama Karinje for all purposes.

I, VASUDEVAN VELLIMEDU RANGARAMANUJAM, R/o No.7, Ferns Meadows, Bengaluru-560077, have changed my minor son's name from ROSHAN VASUDEVAN (Old name) to KEERTHAN VASUDEVAN (New name) vide affidavit dated 13.12.2022 sworn before Notary UDAY KUMAR. K, Bangalore.

## CONNECT

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

### ಬಿಎಂಟಿಸಿ: ಡಿಜಿಟಲ್ ಪೇ ಮೂಲಕ ಲಂಚ ಪಡೆದು ಸಿಕ್ಕಿಬಿದ್ದ ಮೇಲಧಿಕಾರಿಗಳು

# ಗೂಡಂಗಡಿಗಳೇ ಲಂಚ ಸಂಗ್ರಹ ಕೇಂದ್ರ!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

**ಬೆಂಗಳೂರು:** ರಜೆ ಮಂಜೂರು ಮಾಡಲು, ಮಾರ್ಗಗಳನ್ನು ನಿಯೋಜಿಸಲು, ಸುಸ್ಥಿತಿಯಲ್ಲಿರುವ ಬಸ್ ನೀಡಲು ಗೂಗಲ್ ಪೇ, ಫೋನ್ ಪೇ ಮೂಲಕ ಲಂಚ ಪಡೆಯುತ್ತಿದ್ದ ಮೇಲಧಿಕಾರಿಗಳು ಸಿಕ್ಕಿಬಿದ್ದ ಬೆನ್ನಲ್ಲೇ, ಲಂಚ ಪಡೆಯಲು ಅನ್ಯ ಮಾರ್ಗಗಳನ್ನು ಅಧಿಕಾರಿಗಳು ಹುಡುಕುತ್ತಿದ್ದಾರೆ. ಸುತ್ತಮುತ್ತಲ ಕ್ಯಾಂಟೀನ್‌ಗಳು, ಚಿಲ್ಲರೆ ಅಂಗಡಿಗಳು ಈಗ ಲಂಚದ ಕೇಂದ್ರಗಳಾಗಿದ್ದು, ಈ ಜಾಲವನ್ನು ಬೇಧಿಸಲು ಬಿಎಂಟಿಸಿ ಭದ್ರತಾ ಮತ್ತು ಜಾಗೃತ ತಂಡದವರು ಕಸರತ್ತು ನಡೆಸುತ್ತಿದ್ದಾರೆ.

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ರಜೆ ಪಡೆಯುವವರಿಗೆ ಆನ್‌ಲೈನ್ ವ್ಯವಸ್ಥೆ, ಡಿಪೊಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ ಹೆಚ್ಚಳ ಮಾಡುವಂತಹ ಕ್ರಮಗಳನ್ನು ಬಿಎಂಟಿಸಿ ಕೈಗೊಳ್ಳುತ್ತಿದೆ. ಇದರ ನಡುವೆಯೂ ಕೆಳ ಹಂತದ ನೌಕರರಿಂದ ಗೂಗಲ್ ಪೇ ಮೂಲಕ ಹಣ ವರ್ಗಾವಣೆ ಆಗಿರುವ ದಾಖಲೆಗಳನ್ನು ಆಧರಿಸಿ ಅಮಾನತಿನಂತಹ ಶಿಸ್ತುಕ್ರಮಗಳನ್ನೂ ಕೈಗೊಳ್ಳುತ್ತಿದೆ.

ಜಾಗೃತ ದಳದ ಈ ಬಲೆಯನ್ನೂ ನುಸುಳುವ ಕಲೆಯನ್ನು ಡಿಪೊ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ಕಂಡುಕೊಂಡಿದ್ದಾರೆ. 'ಸುತ್ತಮುತ್ತಲ ಅಂಗಡಿಗಳಲ್ಲಿ ನಂಬಿಕಸ್ಥರನ್ನು ಗುರುತಿಸಿ ಅವರಿಗೆ ನಗದು ಅಥವಾ ಗೂಗಲ್ ಪೇ ಮೂಲಕ ಹಣ ತಲುಪಿಸಲು ಸೂಚಿಸುತ್ತಿದ್ದಾರೆ. ಹಣ ಸಂದಾಯವಾಗಿರುವುದು ಖಾತ್ರಿಯಾದ ಬಳಿಕವೇ ಕೆಳಹಂತದ ನೌಕರರ ಅದರಲ್ಲೂ ಚಾಲಕ ಮತ್ತು ನಿರ್ವಾಹಕರ ಮನವಿಗಳಿಗೆ ಸ್ಪಂದನ ದೊರೆಯುತ್ತಿದೆ ಎಂಬ ಆರೋಪಗಳೂ ಇವೆ' ಎಂದು ಬಿಎಂಟಿಸಿ ಭದ್ರತಾ ಮತ್ತು ಜಾಗೃತ ವಿಭಾಗದ ಅಧಿಕಾರಿಗಳು ಹೇಳುತ್ತಾರೆ.

'ಹೀಗೆ ಲಂಚ ಸಂಗ್ರಹಿಸಿಕೊಡುವ ಅಂಗಡಿ ಮಾಲೀಕರಿಗೂ ಕಮಿಷನ್ ಸಿಗುತ್ತಿದ್ದು, ಈ ಜಾಲ ಪತ್ತೆಗೂ ಕಾರ್ಯಾಚರಣೆ ನಡೆಸಲಾಗುತ್ತಿದೆ. ಡಿಪೊಗಳ ಸುತ್ತಮುತ್ತಲ ಅಂಗಡಿಗಳ ಮೇಲೆ ನಿಗಾ ವಹಿಸಲಾಗಿದೆ' ಎಂದು ಬಿಎಂಟಿಸಿ ನಿರ್ದೇಶಕಿ (ಭದ್ರತಾ ಮತ್ತು ಜಾಗೃತ) ರಾಧಿಕಾ ತಿಳಿಸಿದರು.

'ಆನ್‌ಲೈನ್‌ನಲ್ಲಿ ಹಣ ವರ್ಗಾವಣೆ ಆಗಿದ್ದರೆ ಪತ್ತೆಹಚ್ಚುವುದು ಸುಲಭ. ಈ ರೀತಿ ಲಂಚ ಪಡೆದಿದ್ದ ಆರು ಮಂದಿಯನ್ನು ಅಮಾನತು ಮಾಡಲಾಗಿದೆ. ಡಿಪೊ ವ್ಯವಸ್ಥಾಪಕರೂ ಸೇರಿ ಹಲವರ ವಿರುದ್ಧ ತನಿಖೆ ಮುಂದುವರಿದಿದೆ. ಸಿಸಿಟಿವಿ ಸಂಖ್ಯೆಗಳ ಹೆಚ್ಚಳ, ರಜೆ ನೀಡಲು ಆನ್‌ಲೈನ್ ವ್ಯವಸ್ಥೆ ರೀತಿಯ ತಂತ್ರಜ್ಞಾನ ಬಳಕೆ ಹೆಚ್ಚಳದಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಾಗುತ್ತಿದೆ' ಎಂದರು.

## 20 ಮಂದಿ ಅಮಾನತು

ಒಂದು ವರ್ಷದ ಅವಧಿಯಲ್ಲಿ ಫೋನ್ ಪೇ ಮೂಲಕ ಲಂಚ ಪಡೆದಿದ್ದ ಆರೋಪದಲ್ಲಿ 20 ಮಂದಿಯನ್ನು ಬಿಎಂಟಿಸಿ ಅಮಾನತು ಮಾಡಿದೆ.

13 ಮಂದಿ ಸಂಚಾರ ಮೇಲ್ವಿಚಾರಕರು, ಒಬ್ಬರು ಆಡಳಿತ ಮೇಲ್ವಿಚಾರಕರು, ಇಬ್ಬರು ಆಡಳಿತ ಸಿಬ್ಬಂದಿ, ಇಬ್ಬರು ಭದ್ರತಾ ಸಿಬ್ಬಂದಿ ಮತ್ತು ಇಬ್ಬರು ಚಾಲನಾ ಸಿಬ್ಬಂದಿ ಫೋನ್ ಪೇ ಮೂಲಕ ಲಂಚ ಪಡೆದಿದ್ದರು. ತನಿಖೆಯಲ್ಲಿ ಆರೋಪ ದೃಢಪಟ್ಟ ಬಳಿಕ ಅಮಾನತು ಮಾಡಲಾಗಿದೆ ಎಂದು ಬಿಎಂಟಿಸಿ ಭದ್ರತಾ ಮತ್ತು ಜಾಗೃತ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಡಿಪೊಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಹೆಚ್ಚಿಸಲಾಗುತ್ತಿದೆ. ಸದ್ಯ ತಲಾ ನಾಲ್ಕು ಕ್ಯಾಮೆರಾಗಳಿದ್ದು, ಅವುಗಳ ಸಂಖ್ಯೆಯನ್ನು ದುಪ್ಪಟ್ಟು ಮಾಡಲು ಉದ್ದೇಶಿಸಲಾಗಿದೆ. 4,500 ಬಸ್‌ಗಳಲ್ಲಿ ಜಿಪಿಎಸ್‌ಗಳಿದ್ದು, ಇನ್ನೂ ಒಂದು ಸಾವಿರ ಬಸ್‌ಗಳಿಗೆ ಅಳವಡಿಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ರಾಧಿಕಾ ತಿಳಿಸಿದರು.

ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಎರಡು ದಿನಗಳ 'ಡೆಕ್ಸ್ ಟೆರಿಕ್ಸ್– 2022' ಅಂತರಕಾಲೇಜು ತಾಂತ್ರಿಕ ಉತ್ಸವಕ್ಕೆ ಚಾಲನೆ ನೀಡಲಾಯಿತು

## 'ಡೆಕ್ಸ್ ಟೆರಿಕ್ಸ್-2022' ತಾಂತ್ರಿಕ ಉತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಎರಡು ದಿನಗಳ 'ಡೆಕ್ಸ್ ಟೆರಿಕ್ಸ್-2022' ಅಂತರಕಾಲೇಜು ತಾಂತ್ರಿಕ ಉತ್ಸವಕ್ಕೆ ಪೇಟಿಯಂ ಸಂಸ್ಥೆಯ ತಾಂತ್ರಿಕ ನಿರ್ದೇಶಕ ಡೆಬಾರ್ಗೊ ಚಟರ್ಜಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಸ್ಪರ್ಧಾತ್ಮಕ ಮತ್ತು ಜಾಗತೀಕರಣದ ಯುಗದಲ್ಲಿರುವ ನಾವು, ಶಿಕ್ಷಣದ ಜೊತೆಗೆ ಆಧುನಿಕ ತಂತ್ರಜ್ಞಾನದಲ್ಲಿಯೂ ಆಳವಾದ ಜ್ಞಾನ ಪಡೆಯಬೇಕು. ತಾವೂ ಮೇಲ್ದರ್ಜೆಗೇರುವ ಮೂಲಕ ಸಮಾಜಕ್ಕೆ ಒಳಿತಾಗುವ ಕಾರ್ಯಗಳಲ್ಲಿ ತೊಡಗಿಸಿಕೊಂಡು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು' ಎಂದರು.

ಪ್ರಾಂಶುಪಾಲ ಡಾ.ಟಿ.ಎನ್. ಶ್ರೀನಿವಾಸ ಮಾತನಾಡಿ, 'ತಂತ್ರಜ್ಞಾನ ಉತ್ಸವದಲ್ಲಿ ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳ 20ಕ್ಕೂ ಹೆಚ್ಚು ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಈಗಾಗಲೇ 1500 ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ. ಟೆಕ್ ಹಂಟ್, ಲಾಕ್ ಅಂಡ್ ಕೀ, ಬ್ರ್ಯಾಂಡ್ ರಂಗೋಲಿ, ಟೂಲ್ ವಾಕ್, ವಾಟರ್ ಕಬಡ್ಡಿ, ಸೈಕಲ್ ತುಳಿ-ಸಿ ಕಲಿ, ಥಿಂಕ್ ಅಂಡ್ ಈಟ್, 24 ಗಂಟೆಗಳ 'ಮೇಕಥಾನ್' ಮತ್ತಿತರ 35ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದರು.

ಐ.ಎಂ.ಇ ಯು.ಎಸ್.ಡಬ್ಲ್ಯು.ಇ ಸಂಸ್ಥೆಯ ಸಹ ಸಂಸ್ಥಾಪಕ ಅರವಿಂದ್ ಸುಬ್ಬರಾವ್, ಏಟ್ರಿಯಾ ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಿ.ಎಸ್. ಸುಂದರ್ ರಾಜು, ಟ್ರಸ್ಟಿ ಕೆ.ನಾಗರಾಜು, ತಾಂತ್ರಿಕ ನಿರ್ದೇಶಕ ಕೌಶಿಕ್ ಎಸ್. ರಾಜು, ಕಂಪ್ಯೂಟರ್ ಸೈನ್ಸ್ ಮತ್ತು ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ.ಐಶ್ವರ್ಯ ಪಿ. ಮತ್ತಿತರರು ಉಪಸ್ಥಿತರಿದ್ದರು.

### ಸಂಕ್ಷಿಪ್ತ ಸುದ್ದಿ

## ಅತಿಕ್ರಮಣ ಮಾಡುವವರಿಗೆ ತಕ್ಕ ಉತ್ತರ: ಖಂಡು

**ಶಿಲ್ಲಾಂಗ್ (ಪಿಟಿಐ):** 'ಇದು 1962 ಅಲ್ಲ. ಅತಿಕ್ರಮಣ ಮಾಡಲು ಪ್ರಯತ್ನಿಸುವವರಿಗೆ ನಮ್ಮ ಧೀರ ಯೋಧರು ತಕ್ಕ ಪ್ರತ್ಯುತ್ತರ ನೀಡಲಿದ್ದಾರೆ' ಎಂದು ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಮಂಗಳವಾರ ಹೇಳಿದ್ದಾರೆ.

ರಾಜ್ಯದ ತವಾಂಗ್ ಸೆಕ್ಟರ್‌ನ ಯಾಂಗ್‌ಟ್ಸೆಯಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ನಡೆದ ಸಂಘರ್ಷ ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ.

'ಯಾಂಗ್‌ಟ್ಸೆ ನಾನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲಿದೆ. ಪ್ರತಿವರ್ಷ ಈ ಪ್ರದೇಶಕ್ಕೆ ನಾನು ಭೇಟಿ ನೀಡಿ, ಅಲ್ಲಿನ ಗ್ರಾಮಸ್ಥರು ಹಾಗೂ ಯೋಧರನ್ನು ಭೇಟಿ ಮಾಡುತ್ತೇನೆ' ಎಂದು ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

## ₹60,000 ವಾಪಸ್ ನೀಡಿದ ಯುವಕ

ಪ್ರಜಾವಾಣಿ ವಾರ್ತೆ

**ತುಮಕೂರು:** ರಸ್ತೆಯಲ್ಲಿ ಹೋಗುವಾಗ ತಮಗೆ ದೊರೆತ ₹60 ಸಾವಿರ ಹಣವನ್ನು ವಾಪಸ್ ನೀಡುವ ಮೂಲಕ ನಗರದ ನಿವಾಸಿ ವಿನಯ್ ಮಾನವೀಯತೆ ಮೆರೆದಿದ್ದಾರೆ.

ಸುನಿಲ್ ಎಂಬುವರು ಸೋಮವಾರ ತಮ್ಮ ಪರ್ಸ್ ಕಳೆದುಕೊಂಡಿದ್ದರು. ಅದರಲ್ಲಿ ₹60 ಸಾವಿರ ನಗದು, ಎಟಿಎಂ ಕಾರ್ಡ್ ಒಳಗೊಂಡಂತೆ ಕೆಲವು ದಾಖಲೆಗಳಿದ್ದವು. ಸ್ಮಾರ್ಟ್ ಸಿಟಿಯಲ್ಲಿ ಕೆಲಸ ಮಾಡುತ್ತಿರುವ ವಿನಯ್ ಮಂಗಳವಾರ ಭದ್ರಮ್ಮ ಛತ್ರ ವೃತ್ತದ ಬಳಿ ಹೋಗುವಾಗ ಪರ್ಸ್ ಸಿಕ್ಕಿದೆ. ಕೂಡಲೇ ಹೊಸ ಬಡಾವಣೆ ಠಾಣೆಗೆ ಹೋಗಿ ಹಣ ದೊರೆತ ಬಗ್ಗೆ ಮಾಹಿತಿ ನೀಡಿದ್ದಾರೆ.

ಪೊಲೀಸರು ಸುನಿಲ್ ಅವರನ್ನು ಸಂಪರ್ಕಿಸಿ ಪರ್ಸ್, ಹಣವನ್ನು ವಾಪಸ್ ನೀಡಿದ್ದಾರೆ. ಹಣ ಹಿಂದಿರುಗಿಸಿದವರಿಗೆ ಸುನೀಲ್ ಕೃತಜ್ಞತೆ ಸಲ್ಲಿಸಿದರು. ವಿನಯ್ ಪ್ರಾಮಾಣಿಕತೆಗೆ ಪೊಲೀಸರು ಅಭಿನಂದನೆ ಸಲ್ಲಿಸಿ ಬೀಳ್ಕೊಟ್ಟರು.

## ಕನುಗೋಲ್ ಕಚೇರಿ ಮೇಲೆ ಪೊಲೀಸರ ದಾಳಿ

**ಹೈದರಾಬಾದ್ (ಪಿಟಿಐ):** ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಪೋಸ್ಟ್‌ಗಳನ್ನು ಮಾಡಿದ ಆರೋಪದ ಹಿನ್ನೆಲೆಯಲ್ಲಿ, ಕಾಂಗ್ರೆಸ್‌ನ ಚುನಾವಣಾ ನೀತಿ ತಜ್ಞ ಸುನೀಲ್ ಕನುಗೋಲ್ ಅವರ ಕಚೇರಿ ಮೇಲೆ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕನುಗೋಲ್ ಅವರ ಕಚೇರಿಗೆ ಬೀಗ ಜಡಿಯಲಾಗಿದೆ' ಎಂದು ಕಾಂಗ್ರೆಸ್ ಪ್ರಕಟಣೆ ತಿಳಿಸಿದೆ.

ಈ ಘಟನೆಯನ್ನು ಖಂಡಿಸಿ ಬುಧವಾರ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುವಂತೆ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ ರೆಡ್ಡಿ ಅವರು ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

### 18 ದೇವಸ್ಥಾನಗಳಲ್ಲಿ ಕಳವು; ₹19.20 ಲಕ್ಷ ಮೌಲ್ಯದ ಸ್ವತ್ತು ವಶ

# ಬ್ಯಾಡಗಿಯ ಶಿಕ್ಷಕ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಐಶಾರಾಮಿ ಬದುಕು ಸಾಗಿಸಲು ಉತ್ತರ ಕನ್ನಡ, ಹಾವೇರಿ ಹಾಗೂ ಶಿವಮೊಗ್ಗ ಜಿಲ್ಲೆಗಳ 18 ದೇವಸ್ಥಾನಗಳಲ್ಲಿ ಕಳವು ಮಾಡಿದ್ದ ಆರೋಪದಡಿ ಬ್ಯಾಡಗಿ ತಾಲ್ಲೂಕಿನ ಸರ್ಕಾರಿ ಶಾಲೆಯ ಶಿಕ್ಷಕ ಸೇರಿ ಇಬ್ಬರನ್ನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಗಾಳಪೂಜಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂದಿ ಶಿಕ್ಷಕ ವಸಂತ್‌ಕುಮಾರ್ ತಂಬಾಕದ (40) ಹಾಗೂ ರಾಣೆಬೆನ್ನೂರು ತಾಲ್ಲೂಕು ಗುಡ್ಡದಬೇವಿನಹಳ್ಳಿ ಗ್ರಾಮದ ನಿವಾಸಿ, ಕಾರು ಚಾಲಕ ಸಲೀಂ ಕಮ್ಮಾರ (28) ಬಂಧಿತರು.

ಇಬ್ಬರು ಆರೋಪಿಗಳು ಮೂರ್ನಾಲ್ಕು ವರ್ಷಗಳಿಂದ ಕಳ್ಳತನ ಮಾಡುತ್ತಿದ್ದರು. ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆ, ನಗರ ಹಾಗೂ ಹೊಸನಗರ ಠಾಣೆ ವ್ಯಾಪ್ತಿಯಲ್ಲಿ ಐದು, ಹಾವೇರಿ ಜಿಲ್ಲೆಯ ಹಾವೇರಿ ಗ್ರಾಮೀಣ ಠಾಣೆ, ಹಂಸಬಾವಿ ಹಾಗೂ ಹಿರೇಕೆರೂರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಐದು ಹಾಗೂ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಬನವಾಸಿ, ಶಿರಸಿ ಗ್ರಾಮೀಣ ಹಾಗೂ ಅಂಕೋಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಎಂಟು ಸೇರಿ ಒಟ್ಟು 18 ದೇವಸ್ಥಾನಗಳಲ್ಲಿ ಆರೋಪಿಗಳು ಕಳವು ಮಾಡಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ.

ಮಾರುತಿ ನೆಕ್ಸಾ 'ಎಸ್ ಕ್ರಾಸ್' ಕಾರು, ಬಜಾಜ್ ಪ್ಲಾಟಿನಂ ಬೈಕ್, ₹2.29 ಲಕ್ಷ ನಗದು, 9 ಗ್ರಾಂ ಚಿನ್ನ, 400 ಗ್ರಾಂ ಬೆಳ್ಳಿಯ ಆಭರಣ, ಹಿತ್ತಾಳೆಯ 140 ಗಂಟೆಗಳು, 27 ದೀಪದ ಕಂಬ, 22 ಹಿತ್ತಾಳೆಯ ತೂಗು ದೀಪಗಳು, ಏಳು ತಾಮ್ರದ ಕೊಡಗಳು, ಪೂಜಾ ಸಾಮಗ್ರಿಗಳು ಸೇರಿ ಒಟ್ಟು ₹19.20 ಲಕ್ಷ ಬೆಲೆಯ ಸ್ವತ್ತನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ.

ನವೆಂಬರ್ 18ರಂದು ಯಲ್ಲಾಪುರ ಸಮೀಪದ ಮಂಚಿಕೇರಿಯ ಮಹಾಗಜಲಕ್ಷ್ಮೀ ದೇವಸ್ಥಾನದ ಕಾಣಿಕೆ ಹುಂಡಿ ಒಡೆದು ನಗದು ಕಳವು ಮಾಡಲಾಗಿತ್ತು. ಅದೇ ದಿನ ಗುಳ್ಳಾಪುರ ಗ್ರಾಮದ ಶಿವವ್ಯಾಘ್ರೇಶ್ವರ ದೇವಸ್ಥಾನದಲ್ಲೂ ಪೂಜಾ ಸಾಮಗ್ರಿ ಕಳವಾಗಿತ್ತು. ಈ ಪ್ರಕರಣಗಳ ತನಿಖೆ ಕೈಗೊಂಡಿದ್ದ ಯಲ್ಲಾಪುರದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ವಸಂತ್‌ಕುಮಾರ್ ತಂಬಾಕ

ಸಲೀಂ ಕಮ್ಮಾರ

ಆರೋಪಿಗಳನ್ನು ಬಾಡಿವಾರೆಂಟ್ ಮೂಲಕ ಜಿಲ್ಲೆಗೆ ಕರೆತಂದು ಹೆಚ್ಚಿನ ತನಿಖೆಗೆ ಒಳಪಡಿಸಲಾಗುವುದು.
**ಜಿ.ಕೆ.ಮಿಥುನ್‌ಕುಮಾರ್**
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

### ಆರೋಪಿ ಶಿಕ್ಷಕ ಅಮಾನತು: ಡಿಡಿಪಿಐ

ಮೂಲತಃ ಹಿರೇಕೆರೂರು ತಾಲ್ಲೂಕಿನವರಾದ ವಸಂತಕುಮಾರ್ 2007ರಲ್ಲಿ ಶಿಕ್ಷಕ ವೃತ್ತಿಗೆ ಸೇರಿದ್ದರು. ಶಿರಸಿ ತಾಲ್ಲೂಕಿನ ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿದ್ದು, ಕಳೆದ ಮಾರ್ಚ್‌ನಲ್ಲಿ ಗಾಳಪೂಜಿ ಶಾಲೆಗೆ ವರ್ಗಾವಣೆ ಆಗಿ ಬಂದಿದ್ದರು. ಅಕ್ಟೋಬರ್ ನಂತರ ಶಾಲೆಗೆ ಅನಧಿಕೃತವಾಗಿ ಗೈರು ಹಾಜರಾಗಿದ್ದರು ಎಂದು ತಿಳಿದುಬಂದಿದೆ.

'ಬ್ಯಾಡಗಿ ಬಿಇಒ ನೀಡಿದ ವರದಿ ಆಧರಿಸಿ ಶಿಕ್ಷಕ ವಸಂತ್‌ಕುಮಾರ್ ತಂಬಾಕದ ಅವರನ್ನು ಮಂಗಳವಾರ ಅಮಾನತು ಮಾಡಲಾಗಿದೆ' ಎಂದು ಹಾವೇರಿ ಡಿಡಿಪಿಐ ಬಿ.ಎಸ್. ಜಗದೀಶ್ವರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

# ಬಿಐಎಎಲ್: ಮಾಹಿತಿ ಆಯೋಗಕ್ಕೆ ಆದೇಶ

**ಬೆಂಗಳೂರು:** 'ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವು (ಬಿಐಎಎಲ್) ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ವ್ಯಾಪ್ತಿಗೆ ಒಳಪಡುವ ಸಾರ್ವಜನಿಕ ಪ್ರಾಧಿಕಾರ ಹೌದೊ, ಅಲ್ಲವೊ ಎಂಬ ಬಗ್ಗೆ ಪುನಃ ಪರಾಮರ್ಶೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಿ' ಎಂದು ಕರ್ನಾಟಕ ಮಾಹಿತಿ ಹಕ್ಕು ಆಯೋಗಕ್ಕೆ, ಹೈಕೋರ್ಟ್ ಆದೇಶಿಸಿದೆ.

'ವಿಮಾನ ನಿಲ್ದಾಣವನ್ನು ಸಾರ್ವಜನಿಕ ಪ್ರಾಧಿಕಾರ' ಎಂದು ಪರಿಗಣಿಸಿ ಮಾಹಿತಿ ಹಕ್ಕು ಆಯೋಗ ನೀಡಿದ್ದ ಆದೇಶವನ್ನು ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಬಿಐಎಎಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಮಾಹಿತಿ ಹಕ್ಕು ಆಯೋಗದ ಕಲಂ 2ರ(ಎಚ್) ಅನ್ವಯ, ಬಿಐಎಎಲ್ ಸಾರ್ವಜನಿಕ ಪ್ರಾಧಿಕಾರ ವ್ಯಾಪ್ತಿಗೆ ಒಳಪಡಲಿದೆ ಎಂಬ ಬಗ್ಗೆ ಸುಪ್ರೀಂ ಕೋರ್ಟ್ 2013ರಲ್ಲಿ (ಥಲಪ್ಪಾಲಂ ಸರ್ವೀಸ್ ಕೋ ಆಪ್ ಬ್ಯಾಂಕ್ ನಿಯಮಿತ ಅಂಡ್ ಅದರ್ಸ್ ಪ್ರಕರಣ) ನೀಡಿರುವ ತೀರ್ಪಿನ ಪ್ರಕಾರ ಪುನರ್ ಪರಿಶೀಲನೆ ಅಗತ್ಯವಿದೆ. ಸರ್ಕಾರದಿಂದ ಸಬ್ಸಿಡಿ, ಅನುದಾನ, ವಿನಾಯ್ತಿಗಳನ್ನು ಪಡೆದಿದೆಯೇ ಎಂಬುದನ್ನೂ ಗಮನಿಸಬೇಕಾಗಿದೆ. ಹಾಗಾಗಿ, ಈ ವಿಚಾರವನ್ನು ಪುನಃ ಆಯೋಗದ ಪರಿಧಿಗೆ ಒಪ್ಪಿಸಲಾಗುವುದು' ಎಂದು ನ್ಯಾಯಪೀಠ ಹೇಳಿದೆ.

## ವೈದ್ಯಕೀಯ ಸರಬರಾಜು ನಿಗಮಕ್ಕೆ ನೇಮಕ

**ಬೆಂಗಳೂರು:** ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸೋಮಶೇಖರ್ ಎಸ್.ಜೆ ಅವರಿಗೆ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

## ಸಾರ್ವಜನಿಕರಲ್ಲಿ ಭೀತಿ: ರೌಡಿ ಬಂಧನ

**ಬೆಂಗಳೂರು:** ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುತ್ತಿದ್ದ ರೌಡಿ ಬಿ.ಹನುಂತರಾಜು ಅಲಿಯಾಸ್ ಸೂರಿ (29) ಎಂಬಾತನನ್ನು ಗೂಂಡಾ ಕಾಯ್ದೆ ಅಡಿ ಪೊಲೀಸರು ಬಂಧಿಸಿದ್ದಾರೆ.

'ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈತ ರೌಡಿ ಚಟುವಟಿಕೆಯಲ್ಲಿ ತೊಡಗಿದ್ದ. ಈತನ ವಿರುದ್ಧ ಪೀಣ್ಯ, ಸೋಲದೇವನಹಳ್ಳಿ, ಬ್ಯಾಡರಹಳ್ಳಿ ಠಾಣೆಗಳಲ್ಲಿ ಸುಲಿಗೆ, ದರೋಡೆ, ಕೊಲೆ ಯತ್ನ, ಹಲ್ಲೆ, ಹಣ ಸುಲಿಗೆ, ಮನೆಯಲ್ಲಿ ಚಿನ್ನಾಭರಣ ಕಳವು, ಪ್ರಾಣ ಬೆದರಿಕೆ, ಕೃತ್ಯಕ್ಕೆ ಶಸ್ತ್ರಾಸ್ತ್ರ ಬಳಕೆ ಹಾಗೂ ಬೆದರಿಕೆ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'2012ರಿಂದ 2022ರ ವರೆಗೆ ಒಟ್ಟು 17 ಪ್ರಕರಣಗಳು ದಾಖಲಾಗಿದ್ದವು. ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿ ನ್ಯಾಯಾಲಯದ ಷರತ್ತು ಉಲ್ಲಂಘಿಸಿದ್ದ. ನ್ಯಾಯಾಲಯಕ್ಕೂ ಹಾಜರಾಗದೆ ತಲೆಮರೆಸಿಕೊಂಡಿದ್ದ' ಎಂದು ಹೇಳಿವೆ.

# ಜಿಮ್ ತರಬೇತುದಾರ ಪಾನಿಪೂರಿ ಕಿಟ್ಟಿ, ಮಾರುತಿಗೌಡ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಟ ದುನಿಯಾ ವಿಜಯ್ ಹಾಗೂ ಜಿಮ್ ತರಬೇತುದಾರ ಪಾನಿಪೂರಿ ಕಿಟ್ಟಿ, ಆತನ ಸಂಬಂಧಿ ಮಾರುತಿಗೌಡ ನಡುವೆ 2018ರಲ್ಲಿ ನಡೆದಿದ್ದ ಗಲಾಟೆ ಸಂಬಂಧ ಮಂಗಳವಾರ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐದು ವರ್ಷಗಳ ಬಳಿಕ ಪ್ರಕರಣಕ್ಕೆ ಮರುಜೀವ ಬಂದಿದೆ. ಹೈಕೋರ್ಟ್ ಸೂಚನೆ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

'ಅಂದು ವಿಜಯ್ ಪುತ್ರ ಸಾಮ್ರಾಟ್ ಮೇಲೆ ಕಿಟ್ಟಿ ಹಾಗೂ ಮಾರುತಿ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ್ದರು. ಕಾರಿನಲ್ಲಿ ಮಾರುತಿಯನ್ನು ನಟ ವಿಜಯ್ ಕರೆದೊಯ್ದು ಹಲ್ಲೆ ನಡೆಸಿದ್ದರು' ಎಂಬ ಆರೋಪ ಕೇಳಿಬಂದಿತ್ತು. ಪರಸ್ಪರ ದೂರುಗಳು ದಾಖಲಾಗಿದ್ದವು.

'ಸಾಕ್ಷ್ಯಾಧಾರಗಳ ಕೊರತೆಯಿಂದ ಮಾರುತಿ ಹಾಗೂ ಕಿಟ್ಟಿ ವಿರುದ್ಧದ ಪ್ರಕರಣ ಕೈಬಿಡಲಾಗಿತ್ತು. ಅದನ್ನು ಹೈಕೋರ್ಟ್‌ನಲ್ಲಿ ವಿಜಯ್ ಪ್ರಶ್ನಿಸಿದ್ದರು. ನ್ಯಾಯಾಲಯದ ಸೂಚನೆಯಂತೆ ಮತ್ತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಗಲಾಟೆಯಲ್ಲಿ ಹಲ್ಲೆಗೆ ಒಳಗಾಗಿದ್ದ ಮಾರುತಿ ಆಸ್ಪತ್ರೆಯಲ್ಲಿ ಒಂದು ತಿಂಗಳು ಚಿಕಿತ್ಸೆ ಪಡೆದುಕೊಂಡಿದ್ದರು.

**ಘಟನೆ ಏನು?:** 2018ರ ಸೆ.22ರಂದು ಬೆಂಗಳೂರಿನ ವಸಂತ ನಗರದ ಅಂಬೇಡ್ಕರ್ ಭವನದಲ್ಲಿ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲಾಗಿತ್ತು. ಅಲ್ಲಿಗೆ ವಿಜಯ್ ಹಾಗೂ ಅವರ ಪುತ್ರ ಸಾಮ್ರಾಟ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಮುಗಿಸಿ, ವಾಪಸ್ ಬರುವಾಗ ಪಾನಿಪೂರಿ ಕಿಟ್ಟಿ ಹಾಗೂ ನಟ ವಿಜಯ್ ಬೆಂಬಲಿಗರ ನಡುವೆ ಗಲಾಟೆ ನಡೆದಿತ್ತು.

'ಮಾರುತಿಗೌಡ (ಕಿಟ್ಟಿಯ ಅಣ್ಣನ ಮಗ) ನನ್ನ ಪುತ್ರನನ್ನು ನೋಡಿಕೊಂಡು ಜೀವ ಬೆದರಿಕೆ ಹಾಕಿದ್ದ. ಅದಕ್ಕೆ ಸ್ಥಳದಲ್ಲಿ ನನ್ನ ಅಭಿಮಾನಿಗಳು ಆಕ್ರೋಶ ಹೊರಹಾಕಿದ್ದರು' ಎಂದು ಅಂದು ವಿಜಯ್ ನೀಡಿದ್ದ ದೂರಿನಲ್ಲಿ ಉಲ್ಲೇಖಿಸಿದ್ದರು. ಹೈಗ್ರೌಂಡ್ಸ್ ಪೊಲೀಸ್ ಠಾಣೆಯ ಎದುರೂ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿತ್ತು.

2018ರಲ್ಲಿ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಎದುರು ನಡೆದಿದ್ದ ಗಲಾಟೆಯಲ್ಲಿ ದುನಿಯಾ ವಿಜಿ, ಪಾನಿಪೂರಿ ಕಿಟ್ಟಿ (ಸಂಗ್ರಹ ಚಿತ್ರ)

# ಚಿನ್ನಾಭರಣ ಕದಿಯಲು ಬಂದವನಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ರಾಚೇನಹಳ್ಳಿಯಲ್ಲಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಲು ಬಂದಿದ್ದ ಆರೋಪಿಗೆ ಮನೆಯ ಮಾಲೀಕ ಬಂದೂಕಿನಿಂದ ಗುಂಡು ಹಾರಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಾಗಲಕೋಟೆಯ ಲಕ್ಷ್ಮಣ್ (27) ಗುಂಡೇಟು ತಿಂದವನು. ಮನೆ ಮಾಲೀಕ ವೆಂಕಟೇಶ್ ಎಂಬುವವರು ದೂರು ನೀಡಿದ್ದಾರೆ.

ನಗರದಲ್ಲಿ ನೆಲೆಸಿದ್ದ ಲಕ್ಷ್ಮಣ್ ಸೋಮವಾರ ಮಧ್ಯರಾತ್ರಿ ವೆಂಕಟೇಶ್ ಅವರ ಮನೆಯ ಕಾಂಪೌಂಡ್ ಹಾರಿ ಒಳಬಂದಿದ್ದ. ಆತನ ಕೈಯಲ್ಲಿ ಗ್ಯಾಸ್ ಕಟ್ಟರ್ ಇತ್ತು. ನಾಯಿ ಬೊಗಳಿದ ಶಬ್ದ ಕೇಳಿ ಎಚ್ಚರಗೊಂಡ ಮನೆಯ ಮಾಲೀಕ, ಸಿಸಿಟಿವಿ ಕ್ಯಾಮೆರಾದ ಮಾನಿಟರ್‌ನಲ್ಲಿ ಕಳ್ಳ ಬಂದಿರುವುದನ್ನು ಗಮನಿಸಿ ಪರವಾನಗಿ ಪಡೆದ ಬಂದೂಕಿನಿಂದ ಕಳ್ಳನ ಕಾಲಿಗೆ ಗುಂಡು ಹಾರಿಸಿದ್ದಾರೆ. ಆತನ ಬಲಗಾಲಿಗೆ ಗುಂಡು ಬಿದ್ದಿದ್ದರಿಂದ ಸ್ಥಳದಲ್ಲೇ ಕುಸಿದು ಬಿದ್ದಿದ್ದ. ಮಾಲೀಕರೇ ಆಸ್ಪತ್ರೆಗೆ ಸೇರಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿ ವಿರುದ್ಧ ಬೇರೆ ಎಲ್ಲಾದರೂ ಈ ರೀತಿಯ ಪ್ರಕರಣಗಳು ದಾಖಲಾಗಿವೆಯೇ ಎಂಬುದನ್ನು ಪತ್ತೆಹಚ್ಚಲಾಗುತ್ತಿದೆ ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಅವರು ಮಾಹಿತಿ ನೀಡಿದ್ದಾರೆ.

# ಎಟಿಎಂ ಕದ್ದೊಯ್ದ ದುಷ್ಕರ್ಮಿಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಂದೂರಿನಲ್ಲಿ ಬ್ಯಾಂಕ್ ಆಫ್ ಬರೋಡದ ಎಟಿಎಂ ಕೇಂದ್ರಕ್ಕೆ ನುಗ್ಗಿದ ದರೋಡೆಕೋರರು ಯಂತ್ರ ತೆರೆಯಲು ಸಾಧ್ಯವಾಗದೆ ಇಡೀ ಎಟಿಎಂ ಯಂತ್ರವನ್ನೇ ಕಳವು ಮಾಡಿದ್ದಾರೆ.

ಎಟಿಎಂನಲ್ಲಿ ₹ 3.13 ಲಕ್ಷ ಹಣವಿತ್ತು. ಹಣದ ಸಮೇತ ಯಂತ್ರ ಕದ್ದೊಯ್ದಿದ್ದಾರೆ. ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು, ಉಳಿದವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿ. 10ರಂದು ರಾತ್ರಿ ಈ ಘಟನೆ ನಡೆದಿದೆ. ಕಟ್ಟಡದ ಸೆಕ್ಯೂರಿಟಿ ಗಾರ್ಡ್ ನೆಲ ಅಂತಸ್ತಿನಲ್ಲಿ ನಿದ್ರೆಗೆ ಜಾರಿದ್ದ ಸಮಯದಲ್ಲಿ ಆರೋಪಿಗಳು ಈ ಕೃತ್ಯ ಎಸಗಿದ್ದಾರೆ. ಕೇಂದ್ರದ ಒಳಕ್ಕೆ ನುಗ್ಗಿದ ದುಷ್ಕರ್ಮಿಗಳು ಸಿಸಿಟಿವಿ ಕ್ಯಾಮೆರಾಕ್ಕೆ ಬಟ್ಟೆ ಮುಚ್ಚಿ ಯಂತ್ರ ಕಳವು ಮಾಡಿದ್ದಾರೆ. ಪಕ್ಕದ ಮಳಿಗೆಯವರು ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಯಂತ್ರವನ್ನು ಕಂಟೈನರ್‌ನಲ್ಲಿ ತುಂಬಿಸಿಕೊಂಡು ಹೋಗುತ್ತಿದ್ದ ದೃಶ್ಯ ಸೆರೆಯಾಗಿತ್ತು. ಅದನ್ನು ಆಧರಿಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಅಪರಾಧ ಸುದ್ದಿ

## ಬಿಎಂಟಿಸಿ ಬಸ್ ಹರಿದು ಬೈಕ್ ಸವಾರ ಸಾವು

**ಬೆಂಗಳೂರು:** ಬಿಎಂಟಿಸಿ ಬಸ್ಸಿನ ಚಕ್ರಕ್ಕೆ ಸಿಲುಕಿ ಬೈಕ್ ಸವಾರ ದೀಪಕ್ (30) ಎಂಬುವವರು ಮೃತಪಟ್ಟಿದ್ದಾರೆ. ಸೋಮವಾರ ರಾತ್ರಿ ಪೀಣ್ಯದ 14ನೇ ಕ್ರಾಸ್‌ನಲ್ಲಿ ಈ ಘಟನೆ ನಡೆದಿದೆ.

ಉತ್ತರ ಭಾರತದ ದೀಪಕ್ ನಗರದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಮನೆಗೆ ತೆರಳುವಾಗ ಆಯತಪ್ಪಿ ಬಿದ್ದು, ಬಸ್ಸಿನ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬಿಎಂಟಿಸಿ ಬಸ್ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪೀಣ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಾಲ ತೀರಿಸಲು ರಕ್ತಚಂದನ ಮಾರಾಟ

**ಬೆಂಗಳೂರು:** ರಕ್ತಚಂದನ ಮರದ ತುಂಡುಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಾಣಸವಾಡಿ ಪೊಲೀಸರು ಮಂಗಳವಾರ ಬಂಧಿಸಿ, ₹ 12 ಲಕ್ಷ ಮೌಲ್ಯದ 101 ಕೆ.ಜಿ. ರಕ್ತಚಂದನ ವಶಕ್ಕೆ ಪಡೆದಿದ್ದಾರೆ.

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಮತ್ತಿಕೆರೆ ಗ್ರಾಮದ ಕೂಟಕಲ್ಲೇಗೌಡ (27) ಬಂಧಿತ ಆರೋಪಿ.

'ಆರೋಪಿಯಿಂದ ಕಾರು ವಶಕ್ಕೆ ಪಡೆಯಲಾಗಿದೆ. ಬಾಣಸವಾಡಿ ಮುಖ್ಯರಸ್ತೆಯ ಕಾರಿನಲ್ಲಿ ರಕ್ತ ಚಂದನ ತಂದು ಮಾರಾಟಕ್ಕೆ ಮುಂದಾಗಿದ್ದ ವೇಳೆ ಆರೋಪಿ ಬಂಧಿಸಲಾಯಿತು. ಆರೋಪಿ ಚನ್ನಪಟ್ಟಣದಲ್ಲಿ ಜಿಮ್ ತೆರೆದಿದ್ದ. ಜಿಮ್ ನಿರ್ಮಿಸಲು ₹ 25 ಲಕ್ಷ ಖರ್ಚು ಮಾಡಿದ್ದ. ಸಾಲ ತೀರಿಸಲು ರಕ್ತಚಂದನ ಮಾರಾಟ ಮಾಡುವ ಅಕ್ರಮಕ್ಕೆ ಇಳಿದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ರಾಷ್ಟ್ರೀಯ ಹೆದ್ದಾರಿಯಲ್ಲಿ ದರೋಡೆ

**ಚಿಕ್ಕಬಳ್ಳಾಪುರ:** ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಬಳಿಯ ಕೀರ್ತಿ ಡಾಬಾ ಬಳಿ ಹೈದರಾಬಾದ್‌ನ ಶಂಕರದತ್ತ ಎಂಬುವವರನ್ನು ದುಷ್ಕರ್ಮಿಗಳು ಬೆದರಿಸಿ ಹಣ ಮತ್ತು ಮೊಬೈಲ್ ದೋಚಿದ್ದಾರೆ. ಈ ಸಂಬಂಧ ಶಂಕರದತ್ತ ನಂದಿಗಿರಿಧಾಮ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಾನು ಹಾಗೂ ನಮ್ಮ ಅಣ್ಣ ಮುರಳಿ ಶರ್ಮ ಬೆಂಗಳೂರಿಗೆ ಹೋಗಲು ಕಾರಿನಲ್ಲಿ ಬಂದಿದ್ದೆವು. ನಿದ್ದೆ ಬಂದಿದ್ದರಿಂದ ಕೀರ್ತಿ ಡಾಬಾ ಪಕ್ಕದಲ್ಲಿ ವಾಹನ ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿದ್ದೆವು. ಆಗ ಮೂವರು ಅಪರಿಚಿತರು ಕಾರಿನಲ್ಲಿ ಬಂದರು. ನಮ್ಮ ಕಾರ್ ಕಿಟಕಿ ತಟ್ಟಿ ಎಬ್ಬಿಸಿದರು. ಚಾಕು ಕತ್ತಿನ ಬಳಿ ಇಟ್ಟರು. ಸುಮಾರು 30 ಗ್ರಾಂನ ಚಿನ್ನದ ಎರಡು ಸರಗಳು, ₹ 6,900 ನಗದು, ವಾಚ್ ದೋಚಿದರು ಎಂದು ದೂರಿನಲ್ಲಿ ವಿವರಿಸಿದ್ದಾರೆ.

### ಅಮೆರಿಕದ ಆರ್ಸೆನಲ್ ಕನ್ಸಲ್ಟಿಂಗ್ ಕಂಪನಿ ಹೇಳಿಕೆ

# 'ಕಂಪ್ಯೂಟರ್‌ನಲ್ಲಿ ಅಳವಡಿಸಲಾಗಿತ್ತು ಸ್ಟ್ಯಾನ್ ಸ್ವಾಮಿ ವಿರುದ್ಧದ ಡಿಜಿಟಲ್ ಸಾಕ್ಷ್ಯ'

**ನ್ಯೂಯಾರ್ಕ್ (ಪಿಟಿಐ):** ಭೀಮಾ–ಕೋರೆಗಾಂವ ಪ್ರಕರಣದಲ್ಲಿ, ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ ಸ್ಟ್ಯಾನ್ ಸ್ವಾಮಿಅವರನ್ನು ಬಂಧಿಸಲು ಬಳಸಲಾಗಿದ್ದ ಡಿಜಿಟಲ್ ಸಾಕ್ಷ್ಯಗಳನ್ನು ಅವರ ಕಂಪ್ಯೂಟರ್‌ನಲ್ಲಿ 'ಅಳವಡಿಸಲಾಗಿತ್ತು' ಎಂದು ಅಮೆರಿಕದ ವಿಧಿವಿಜ್ಞಾನ ಕಂಪನಿಯೊಂದು ಮಂಗಳವಾರ ಹೇಳಿಕೊಂಡಿದೆ.

'ಸ್ಟ್ಯಾನ್ ಸ್ವಾಮಿ ಅವರ ಕಂಪ್ಯೂಟರ್‌ನ ಎಲೆಕ್ಟ್ರಾನಿಕ್ ನಕಲನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಹ್ಯಾಕರ್ ಒಬ್ಬ ಕಂಪ್ಯೂಟರ್‌ನಲ್ಲಿ ಡಿಜಿಟಲ್ ಸಾಕ್ಷ್ಯಗಳನ್ನು ಸೇರಿಸಿರುವುದು ಕಂಡುಬಂದಿತು' ಎಂದು ಮೆಸಾಚುಸೆಟ್ಸ್ ಮೂಲದ ಡಿಜಿಟಲ್ ವಿಧಿವಿಜ್ಞಾನ ಕಂಪನಿ 'ಆರ್ಸೆನಲ್ ಕನ್ಸಲ್ಟಿಂಗ್' ಹೇಳಿದೆ. ಈ ಕಂಪನಿಯ ಹೇಳಿಕೆಯನ್ನು ಉಲ್ಲೇಖಿಸಿ ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

'ಸ್ವಾಮಿ ಅವರ ಕಂಪ್ಯೂಟರ್‌ನ ಹಾರ್ಡ್‌ವೇರ್‌ನಲ್ಲಿ 50ಕ್ಕೂ ಹೆಚ್ಚು ಫೈಲ್‌ಗಳನ್ನು ಸೃಷ್ಟಿಸಲಾಗಿತ್ತು. ಮಾವೊವಾದಿಗಳ ಬಂಡಾಯ ಹಾಗೂ ಸ್ವಾಮಿ ಅವರಿಗೂ ಸಂಬಂಧವಿತ್ತು ಎಂದು ತೋರಿಸುವ ದಾಖಲೆಗಳು ಸೇರಿದಂತೆ ಹಲವಾರು ಸಾಕ್ಷ್ಯಗಳನ್ನು ಕಂಪ್ಯೂಟರ್‌ನಲ್ಲಿ 'ಅಳವಡಿಸಲಾಗಿತ್ತು' ಎಂದು ಕಂಪನಿಯ ವರದಿಯಲ್ಲಿ ಹೇಳಲಾಗಿದೆ.

ಸ್ಟ್ಯಾನ್ ಸ್ವಾಮಿ

'ಸ್ವಾಮಿ ಅವರ ಬಂಧನವಾಗುವುದಕ್ಕೂ ಒಂದು ವಾರದ ಮೊದಲು, 2019ರ ಜೂನ್ 5ರಂದು ಅವರ ವಿರುದ್ಧದ ದೋಷಾರೋಪಕ್ಕೆ ನೆರವಾಗುವಂತಹ ಕೊನೆಯ ದಾಖಲೆಯನ್ನು ಕಂಪ್ಯೂಟರ್‌ನಲ್ಲಿ ಅಳವಡಿಕೆ ಮಾಡಲಾಯಿತು' ಎಂದು ಆರ್ಸೆನಲ್ ಕನ್ಸಲ್ಟಿಂಗ್ ವರದಿಯಲ್ಲಿ ವಿವರಿಸಲಾಗಿದೆ.

ಈ ಸಾಕ್ಷ್ಯಗಳ ಸತ್ಯಾಸತ್ಯತೆ ಕುರಿತು ತಜ್ಞರು ಸಂಶಯ ವ್ಯಕ್ತಪಡಿಸಿದ್ದರು. ಅದನ್ನು ಲೆಕ್ಕಿಸದೆಯೇ, ಭೀಮಾ– ಕೋರೆಗಾಂವ ಪ್ರಕರಣದಲ್ಲಿ ಸ್ಟ್ಯಾನ್ ಸ್ವಾಮಿ ಅವರನ್ನು ಬಂಧಿಸಲಾಯಿತು ಎಂದು ವರದಿಯಲ್ಲಿ ಹೇಳಲಾಗಿದೆ.

'ಮಾನವ ಹಕ್ಕುಗಳ ಹೋರಾಟಗಾರರಾದ ರೊನಾ ವಿಲ್ಸನ್ ಹಾಗೂ ಸುರೇಂದ್ರ ಗಾಡ್ಲಿಂಗ ಅವರನ್ನು ಬಂಧಿಸಲು ಕೂಡ ಇದೇ ರೀತಿಯಲ್ಲಿ ಸಾಕ್ಷ್ಯಗಳನ್ನು ಅಳವಡಿಕೆ ಮಾಡಲಾಗಿತ್ತು' ಎಂದು ಕಂಪನಿ ಹೇಳಿದೆ.

ಈ ಪ್ರಕರಣದಲ್ಲಿ ಆರೋಪಿಯಾಗಿದ್ದ ಸ್ವಾಮಿ ಅವರಿಗೆ ವೈದ್ಯಕೀಯ ಕಾರಣಗಳಿಂದಾಗಿ ಮಧ್ಯಂತರ ಜಾಮೀನು ನೀಡಲಾಗಿತ್ತು. ಅವರು 2021ರ ಜುಲೈನಲ್ಲಿ ಮೃತಪಟ್ಟರು.

2017ರ ಡಿಸೆಂಬರ್ 31ರಂದು ಪುಣೆಯಲ್ಲಿ ಎಲ್ಗಾರ್–ಪರಿಷತ್ ಸಮಾವೇಶವನ್ನು ಆಯೋಜಿಸಲಾಗಿತ್ತು. ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದವರು ಪ್ರಚೋದನಾಕಾರಿ ಭಾಷಣ ಮಾಡಿದ್ದರು ಎಂದು ಆರೋಪಿಸಲಾಗಿತ್ತು.

ಮರು ದಿನ, ಪುಣೆಯ ಹೊರವಲಯದಲ್ಲಿರುವ ಭೀಮಾ–ಕೋರೆಗಾಂವ ಯುದ್ಧ ಸ್ಮಾರಕದ ಬಳಿ ಹಿಂಸಾಚಾರ ಭುಗಿಲೆದ್ದಿತ್ತು.

ಈ ಹಿಂಸಾಚಾರಕ್ಕೆ ಸಮಾವೇಶದಲ್ಲಿ ಮಾಡಿದ ಪ್ರಚೋದನಾಕಾರಿ ಭಾಷಣಗಳೇ ಕಾರಣ ಹಾಗೂ ಸಮಾವೇಶಕ್ಕೆ ಮಾವೊವಾದಿಗಳ ಬೆಂಬಲ ಇತ್ತು ಎಂದು ಪೊಲೀಸರು ಹೇಳಿದ್ದರು.

## 'ಬಿಜೆಪಿ ಸರ್ಕಾರ ತಂದಿದ್ದೇ ನಾವು'

**ಚನ್ನಪಟ್ಟಣ:** 'ರಾಜ್ಯದಲ್ಲಿ ಬಿಜೆಪಿ ಸರ್ಕಾರ ತಂದಿದ್ದು ನಾವು. ನಾವು ಪಕ್ಷ(ಕಾಂಗ್ರೆಸ್, ಜೆಡಿಎಸ್)ದಿಂದ ಹೊರಬರದೆ ಇದ್ದರೆ, ಬಿಜೆಪಿ ಸರ್ಕಾರ ಎಲ್ಲಿ ರಚನೆಯಾಗುತಿತ್ತು' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಪ್ರಶ್ನಿಸಿದರು.

ತಾಲ್ಲೂಕಿನ ಸಿಂಗರಾಜಪುರ ಗ್ರಾಮಕ್ಕೆ ಮಂಗಳವಾರ ಖಾಸಗಿ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಬಿಜೆಪಿ ಸರ್ಕಾರದಿಂದ ನಾವು ಒಳ್ಳೆಯ ಕಾರ್ಯಕ್ರಮಗಳನ್ನು ನಿರೀಕ್ಷಿಸಿದ್ದೆವು. ನಾವು ಬಯಸಿದ ಕಾರ್ಯಕ್ರಮಗಳನ್ನು ಬಿಜೆಪಿ ಸರ್ಕಾರ ಅನುಷ್ಠಾನ ಮಾಡಲಿಲ್ಲ. ನಮ್ಮ ಆಕಾಂಕ್ಷೆಗಳೆಲ್ಲವೂ ಹುಸಿಯಾಯಿತು. ಸರ್ಕಾರ ಜನರ ಸರ್ಕಾರವಾಗಿ ಉಳಿಯಲಿಲ್ಲ' ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ನನಗೆ ಸಚಿವ ಸ್ಥಾನ ಕೊಟ್ಟರೂ ಬೇಡ. ನಾನು ಸಚಿವ ಆಕಾಂಕ್ಷಿ ಅಲ್ಲ. ಕಾಂಗ್ರೆಸ್‌ನಿಂದ ಆಚೆ ಬಂದಿರುವ ಶಾಸಕರು ಮತ್ತೆ ಸ್ವಪಕ್ಷಕ್ಕೆ ಹೋಗುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾರ ಜೊತೆಯೂ ಮಾತನಾಡಿಲ್ಲ. ಮುಂಬರುವ ವಿಧಾನಸಭಾ ಚುನಾವಣೆ ಮುಗಿಯಲಿ. ಆಮೇಲೆ ನೋಡೋಣ. ಮುಂದಿನ ದಿನಗಳಲ್ಲಿ ಏನಾಗುತ್ತದೊ ಕಾದು ನೋಡೋಣ' ಎಂದರು.

### ನಗರದಲ್ಲಿ ಇಂದು

**ನಿನಾದ ಉತ್ಸವ:** ಅತಿಥಿಗಳು: ಕೆ. ಗೋಪಾಲಯ್ಯ, ಎಸ್. ಸುರೇಶ್ ಕುಮಾರ್, ಅನುರಾಧ ಭಟ್, ವಿವೇಕ್ ಸಿಂಹ, ಶುಭ ಪೂಂಜ, ದೀಪಕ್ ಸುಬ್ರಮಣ್ಯ, ರಜನಿ, ಖುಷಿ ರವಿ, ಅಧ್ಯಕ್ಷತೆ: ಜಿ. ಕೆ. ನಾರಾಯಣ ರೆಡ್ಡಿ, ಎ. ಸಿ. ರಘುರಾಮ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಮಹಿಳಾ ಪದವಿ ಕಾಲೇಜು, ಮಹಾಲಕ್ಷ್ಮಿ ಬಡಾವಣೆ, ಬೆಳಿಗ್ಗೆ 9

**ನಟರಾಜ್ ಹುಳಿಯಾರ್ ಅವರ 'ಎಲ್ಲರ ಗಾಂಧೀಜಿ' ಪುಸ್ತಕ ಬಿಡುಗಡೆ:** ರಾಮಚಂದ್ರ ಗುಹಾ, ಅತಿಥಿಗಳು: ಎಂ.ಎಸ್. ಸತ್ಯು, ಆಯೋಜನೆ: ಪಲ್ಲವ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯ ಹಾಲ್, ನ್ಯಾಷನಲ್ ಕಾಲೇಜ್, ಸಂಜೆ 6

ಎಂ.ಎಸ್. ಸತ್ಯು

**ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ:** ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ರಾಘವನ್ ಪಯ್ಯನಾಡ್, ಎನ್. ಮಂಜುಳಾ, ಪ್ರಕಾಶ್ ಜಿ. ಟಿ. ನಿಟ್ಟಾಲಿ, ಪ್ರಶಸ್ತಿ ಪ್ರದಾನ: ವಿ. ಸುನಿಲ್ ಕುಮಾರ್, ಪ್ರಶಸ್ತಿ ಪುರಸ್ಕೃತರು: ಆರ್. ಅಂಬುಜಾಕ್ಷಿ, ಅಧ್ಯಕ್ಷತೆ: ಚಿರಂಜೀವಿ ಸಿಂಗ್, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10:30

**ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮದ ಉದ್ಘಾಟನೆ:** ರಾಮಚಂದ್ರನ್ ಆರ್., ಉಪಸ್ಥಿತಿ: ಶ್ವೇತ ಜಿ. ಎನ್., ಎಂ. ಎಂ. ಕವಟಗಿಮಟ, ಅಧ್ಯಕ್ಷತೆ: ಶ್ರೀರಾಮ್ ಜಿ.ಕೆ, ಆಯೋಜನೆ: ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಪದವಿಪೂರ್ವ ಶಿಕ್ಷಣ ಇಲಾಖೆ, ಸ್ಥಳ: ಕೆ.ಎಲ್.ಇ. ಸ್ವತಂತ್ರ ಪದವಿಪೂರ್ವ ಕಾಲೇಜು, 2ನೇ ಬ್ಲಾಕ್ ರಾಜಾಜಿನಗರ, ಬೆಳಿಗ್ಗೆ 9:30

**ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರದ ಉದ್ಘಾಟನೆ:** ಶ್ರೀವಿದ್ಯಾ, ಅತಿಥಿಗಳು: ಸಿ.ಎಸ್. ಷಡಾಕ್ಷರಿ, ಅಧ್ಯಕ್ಷತೆ: ಎಲ್. ಭೈರಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ಲಯನ್ಸ್ ಕ್ಲಬ್, ಸ್ಥಳ: ಸರ್ಕಾರಿ ನೌಕರರ ಭವನದ ಸಭಾಂಗಣ, ಕಬ್ಬನ್ ಪಾರ್ಕ್, ಬೆಳಿಗ್ಗೆ 10

ವಾರ್ಷಿಕ ದಿನಾಚರಣೆ: ಸಾನ್ನಿಧ್ಯ: ಈಶಪ್ರಿಯತೀರ್ಥ ಅತಿಥಿಗಳು: ಹರೀಶ್ ರಾಮಸ್ವಾಮಿ, ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ಶಿಕ್ಷಣ ಕೇಂದ್ರ, ಸಂಜೆ 4:30

**ಎಫ್‌ಐಐನ ಪ್ರಾದೇಶಿಕ ಕಚೇರಿ ಉದ್ಘಾಟನೆ:** ಮುರುಗೇಶ್ ನಿರಾಣಿ, ಅತಿಥಿಗಳು: ಎಂ.ಎಂ. ಶರ್ಮ, ಆಯೋಜನೆ: ಫೆಡರೇಶನ್ ಆಫ್ ಇಂಡಸ್ಟ್ರೀಸ್ ಆಫ್ ಇಂಡಿಯಾ–ಟಿಎಂಎ, ಸ್ಥಳ: ಐಸಿಎಟಿಟಿ, ಯಲಹಂಕ ನ್ಯೂ ಟೌನ್, ಸಂಜೆ 5

**ವಿ.ಸೀ. ಶಾಂತಾ ಪ್ರಭುಶಂಕರ, ವೆಂಕಟರಂಗಪ್ಪ, ಚಂದ್ರಶೇಖರ ಶರ್ಮ, ಟಿ.ಎನ್. ಮಹದೇವಯ್ಯ, ಜಿ.ಪಿ. ರಾಜರತ್ನಂ, ರಾಮಚಂದ್ರ ಪಟವಾರಿ, ಬಿಎಂಶ್ರೀ ದತ್ತಿಗಳ ಸಂಯೋಜಿತ ಕಾರ್ಯಕ್ರಮ:** ವಿಷಯ: ಜಿ.ಪಿ. ರಾಜರತ್ನಂ ಅವರ ರತ್ನನ ಪದಗಳು, ಉಪನ್ಯಾಸಕರು: ಅರ್ಚನಾ ಆರ್., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎಂವಿಸಿ ಸಭಾಂಗಣ, ಬಿಎಂಶ್ರೀ ಕಲಾಭವನ, ಸಂಜೆ 5

**ನಕ್ಕು ನಲಿ:** ಉದ್ಘಾಟನೆ: ರಾಮಕೃಷ್ಣ ಬೆಳ್ತೂರು, ಅತಿಥಿಗಳು: ನೀಲಮ್ಮ, ಬೆಳ್ಳೂರು ಶಶಿಧರ್, ಎ.ಕೆ. ಕೃಷ್ಣಪ್ಪ, ಹೇಮಲತ ಬಿ. ಎಸ್., ಪವಿತ್ರ ಜಿ, ಸಂಗೀತ ಸಿ.ಎನ್, ಅಧ್ಯಕ್ಷತೆ: ಅನ್ನಪೂರ್ಣ ಬಿ.ಎಲ್, 'ಸುಬ್ಬಣ್ಣನ ಸಂಸಾರ' ನಾಟಕ ಪ್ರದರ್ಶನ, ನಿರ್ದೇಶನ: ರಂಗನಾಥ್ ಮಾವಿನಕೆರೆ, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 7

# ತಂತ್ರಜ್ಞಾನ



# ಕರೆಯಲ್ಲಿ ಕಾಣಿಸೀತೆ ಕರೆದವನ ಹೆಸರು!

ಕರೆ ಮಾಡುವವರಿಗೆ ಗೌಪ್ಯತೆ ಉಲ್ಲಂಘನೆಯ ಭೀತಿ ಇದ್ದರೆ, ಕರೆ ಸ್ವೀಕರಿಸುವವರಿಗೆ ತಮ್ಮ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದಕ್ಕೆ ಇದು ಅನುಕೂಲಕರ!

**ಕೃಷ್ಣ ಭಟ್**

ಅದು ಲ್ಯಾಂಡ್‌ಲೈನ್ ಟೆಲಿಫೋನ್‌ಗಳ ಕಾಲ. ಮನೆಯ ಮೂಲೆಯಲ್ಲಿ ಒಂದು ಉಣ್ಣೆಯ ಬಟ್ಟೆಯನ್ನು ಮುಚ್ಚಿಕೊಂಡು ಕುಳಿತ ರಿಸೀವರ್ ಪಕ್ಕದಲ್ಲೇ ಒಂದು ಅಂಗೈ ಅಗಲದ ಪುಸ್ತಕ. ಅದರಲ್ಲಿ ಊರಿನವರ, ಸಂಬಂಧಿಕರ ಫೋನ್ ನಂಬರುಗಳು. ಇದು ಆ ಕಾಲದ ಕಾಲರ್ ಐಡಿ. ಆಗ ಲ್ಯಾಂಡ್‌ಲೈನ್‌ನಲ್ಲಿ ಕರೆ ಮಾಡಿದವರ ಫೋನ್ ನಂಬರೂ ಕಾಣಿಸುತ್ತಿರಲಿಲ್ಲವಾದ್ದರಿಂದ ಅವರು ಫೋನ್ ಮಾಡಿದಾಗಲೇ ಹೆಸರೂ, ಫೋನ್ ನಂಬರೂ ಬರೆದಿಟ್ಟುಕೊಳ್ಳಬೇಕಿತ್ತು.

ಆಗ ಬಿಎಸ್‌ಎನ್‌ಎಲ್ ವರ್ಷಕ್ಕೊಮ್ಮೆ ಪ್ರಕಟಿಸುತ್ತಿದ್ದ ಫೋನ್ ನಂಬರ್ ಡೈರೆಕ್ಟರಿಯೇ ಈಗಿನ ಟ್ರೂಕಾಲರ್ ಅಥವಾ ಭಾರತ್ ಕಾಲರ್ ಐಡಿ. ಆ ಬೃಹತ್ ಗಾತ್ರದ ಪುಸ್ತಕವನ್ನು ಹೊತ್ತುಕೊಂಡು ತರುವುದೇ ಒಂದು ಸಾಹಸವೂ ಕುತೂಹಲವೂ ಆಗಿತ್ತು. ಬಹುಶಃ 2007-08ರಲ್ಲೇ ಬಿಎಸ್‌ಎನ್‌ಎಲ್‌ನ ಟೆಲಿಫೋನ್ ಡೈರೆಕ್ಟರಿ ಎಂಬುದು ತನ್ನ ಹಳದಿ ಹೊಳಪನ್ನು ಕಳೆದುಕೊಳ್ಳುತ್ತ ಬಂತು. ಅದಕ್ಕೆ ಮುಖ್ಯ ಕಾರಣವೇ ಆನ್‌ಲೈನ್ ಡೈರೆಕ್ಟರಿ.

ಆಮೇಲೆ, ಮೊಬೈಲ್ ಫೋನ್ ಬಂದ ಮೇಲೆ ಫೋನ್‌ನಲ್ಲೇ ಕಾಂಟ್ಯಾಕ್ಟ್ ಲಿಸ್ಟ್‌ಗಳನ್ನು ಸೇವ್ ಮಾಡಿಕೊಳ್ಳುವ ಅನುಕೂಲ ಇದ್ದುದರಿಂದ ಈ ಫೋನ್ ಡೈರೆಕ್ಟರಿ ಎಂಬ ಪರಿಕಲ್ಪನೆಯನ್ನೇ ಹೊಸಕಿ ಹಾಕಿದವು! ಈಗಲೂ ಆನ್‌ಲೈನ್ ಟೆಲಿಫೋನ್ ಡೈರೆಕ್ಟರಿಗಳಿದ್ದರೂ ಅವು ವಾಣಿಜ್ಯಿಕ ಮಾಹಿತಿಯನ್ನು ನೀಡುವ ಪರ್ಯಾಯ ವಿಧಾನವನ್ನೇ ಮುಖ್ಯವಾಗಿಸಿಕೊಂಡಿವೆ.

ಇನ್ನು ಫೋನ್ ಮಾಡಲು ಬೇಕಾದ ಹೆಸರುಗಳನ್ನು ಹುಡುಕುವುದು ಟೆಲಿಫೋನ್ ಡೈರೆಕ್ಟರಿಯ ಕೆಲಸವಾದರೆ, ಫೋನ್ ಯಾರಿಂದ ಬಂತು ಅನ್ನುವುದರ ಗುರುತು ಕಂಡುಕೊಳ್ಳುವುದು ಕೂಡ ಅಷ್ಟೇ ಮುಖ್ಯ ಎಂಬಂತಾಯಿತು. ಈಗಂತೂ ರೋಬೋ ಕಾಲ್‌ಗಳು (ಕಂಪ್ಯೂಟರ್ ಮೂಲಕ ಕರೆ ಮಾಡಿ ಮೊದಲೇ ಧ್ವನಿ ಮುದ್ರಿಸಿದ ಸಂದೇಶಗಳನ್ನು ಪ್ರಸಾರ ಮಾಡುವುದು) ಬಂದಮೇಲೆ ಈ ಅಗತ್ಯ ಇನ್ನೂ ಹೆಚ್ಚಾಗಿದೆ. ಇದಕ್ಕೆ ಖಾಸಗಿ ಕಂಪನಿಗಳ ಆ್ಯಪ್‌ಗಳು ಅಥವಾ ಸೌಲಭ್ಯಗಳು ಇವೆಯಾದರೂ ಅವುಗಳನ್ನೂ ಮೀರಿಸುವ ತಂತ್ರವನ್ನು ಸ್ಪ್ಯಾಮ್ ಮಾಡುವವರು ಕಲಿತುಕೊಂಡಿದ್ದಾರೆ.

ಇಂಥ ಹೊತ್ತಲ್ಲಿ ಭಾರತೀಯ ಟೆಲಿಕಾಂ ನಿಯಂತ್ರಣಾ ಪ್ರಾಧಿಕಾರ (‘ಟ್ರಾಯ್’) ಒಂದು ಪ್ರಸ್ತಾವನೆಯನ್ನು ಮಂಡಿಸಿದೆ. ಅದೇನೆಂದರೆ, ಫೋನ್ ಮಾಡಿದವರ ಹೆಸರನ್ನೂ ಟೆಲಿಕಾಂ ಸೇವೆ ಪೂರೈಕೆದಾರರು ತಮ್ಮ ಗ್ರಾಹಕನಿಗೆ ತೋರಿಸಬೇಕು ಎಂಬುದು! ಅಂದರೆ, ಕರೆ ಬಂದಾಗ ಯಾರು ಕರೆ ಮಾಡಿದವರು ಎಂಬ ಹೆಸರೂ, ಫೋನ್ ನಂಬರ್ ಜೊತೆಗೇ ಕರೆ ಸ್ವೀಕರಿಸುವವನಿಗೆ ಕಾಣಿಸಬೇಕು ಎಂಬುದು ಈ ಪ್ರಸ್ತಾವನೆಯ ತಿರುಳು. ಸದ್ಯಕ್ಕೆ ಇದು ಪ್ರಸ್ತಾವನೆಯ ಹಂತದಲ್ಲಿದೆ. ಡಿಸೆಂಬರ್ 27ರ ವರೆಗೂ ಜನರು ಈ ಬಗ್ಗೆ ತಮ್ಮ ಸಲಹೆ ಸೂಚನೆಗಳನ್ನು ಒದಗಿಸಬಹುದು.

ಇಂಥದ್ದೊಂದು ವ್ಯವಸ್ಥೆ ಜಾರಿಗೆ ತರುವ ತನ್ನ ಮೂಲ ಉದ್ದೇಶ ಸ್ಪ್ಯಾಮ್‌ಗಳನ್ನು ನಿಲ್ಲಿಸುವುದು ಎಂದು ಟ್ರಾಯ್ ಹೇಳಿದೆ. ಆದರೆ, ವಾಸ್ತವವಾಗಿ ಸ್ಪ್ಯಾಮ್ ನಿಲ್ಲಿಸುವ ಈ ಉದ್ದೇಶಕ್ಕೆ ಪೂರಕವಾಗಿ ಈ ಹಿಂದೆ ‘ವಾಣಿಜ್ಯಿಕ ಕರೆಗಳನ್ನು ಮಾಡುವವರು ನೋಂದಣಿ ಮಾಡಿಕೊಳ್ಳಬೇಕು’ ಎಂಬ ನಿಯಮವನ್ನು ಟ್ರಾಯ್ ತಂದಿತ್ತು. ಆಗ, ಇದಕ್ಕೆ ಬೇರೆ ದಾರಿ ಕಂಡುಕೊಂಡ ಸ್ಪ್ಯಾಮ್ ಕಾಲ್ ಮಾಡುವವರು ಗೃಹಿಣಿಯರು, ಫ್ರೀಲ್ಯಾನ್ಸರ್‌ಗಳನ್ನು ನೇಮಕ ಮಾಡಿಕೊಂಡು, ಅವರ ಹೆಸರಿನಲ್ಲೇ ಫೋನ್ ನಂಬರ್ ತೆಗೆಸಿಕೊಟ್ಟು ಕರೆ ಮಾಡಿಸುತ್ತಿದ್ದರು. ಅದರ ನಂತರ ರೋಬೋ ಕಾಲ್ ಮಾಡುವ ವ್ಯವಸ್ಥೆಯೂ ಬಂತು. ಇವನ್ನೆಲ್ಲ ‘ನೋಂದಣಿ’ ವ್ಯವಸ್ಥೆಯೂ ತಡೆಯಲು ಸಾಧ್ಯವಾಗಲಿಲ್ಲ. ಅದನ್ನು ಮೀರಿಯೂ ಇಂದಿಗೂ ದಿನಕ್ಕೆ 5-6 ಸ್ಪ್ಯಾಮ್ ಕರೆಗಳು ಒಬ್ಬ ವ್ಯಕ್ತಿಗೆ ಬರುತ್ತಿವೆ ಎಂದು ಬಳಕೆದಾರರು ಅಲವತ್ತುಕೊಳ್ಳುವುದು ಮುಂದುವರಿದಿದೆ.

ಹೀಗಾಗಿ, ಸ್ಪ್ಯಾಮ್ ಕರೆಗಳನ್ನು ತಡೆಯುವ ಉದ್ದೇಶ ಈ ಹೊಸ ವ್ಯವಸ್ಥೆಯಿಂದ ಎಷ್ಟು ಪ್ರಮಾಣದಲ್ಲಿ ನೆರವೇರುತ್ತದೆ ಎಂಬ ಬಗ್ಗೆ ಈಗಲೂ ಅನುಮಾನಗಳಿವೆ. ಆದರೆ, ಒಂದಂತೂ ಸ್ಪಷ್ಟ. ಕರೆ ಸ್ವೀಕರಿಸುವವನಿಗೆ ಈ ಕರೆಯನ್ನು ತಾನು ತೆಗೆದುಕೊಳ್ಳಬೇಕೋ ಬೇಡವೋ ಎಂಬುದನ್ನು ನಿರ್ಧರಿಸಲು ಇದು ಇನ್ನಷ್ಟು ಸಹಕಾರಿಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಇನ್ನು ಗೌಪ್ಯತೆ ವಿಷಯದ ಬಗ್ಗೆಯೂ ಈ ಪ್ರಸ್ತಾವನೆ ಚರ್ಚೆಯನ್ನು ಹುಟ್ಟುಹಾಕಿದೆ. ಆದರೆ, ಇದು ಎರಡು ಅಲಗಿನ ಕತ್ತಿ! ಕರೆ ಮಾಡುವವರಿಗೆ ಗೌಪ್ಯತೆ ಉಲ್ಲಂಘನೆಯ ಭೀತಿ ಇದ್ದರೆ, ಕರೆ ಸ್ವೀಕರಿಸುವವರಿಗೆ ತಮ್ಮ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದಕ್ಕೆ ಇದು ಅನುಕೂಲಕರ! ಉದಾಹರಣೆಗೆ, ಕರೆ ಮಾಡುವವರು ತಮ್ಮ ಹೆಸರು ಗೌಪ್ಯವಾಗಿ ಇರಬೇಕು ಎಂದು ಬಯಸಿದರೆ ಅದು ಸಾಧ್ಯವಾಗುವುದಿಲ್ಲ. ಅದೇ ರೀತಿ, ಕರೆ ಸ್ವೀಕರಿಸುವವರಿಗೆ ಹೆಸರು ಕಾಣಿಸುವುದರಿಂದ ಈ ವ್ಯಕ್ತಿಯ ಕರೆಯನ್ನು ಸ್ವೀಕರಿಸಬೇಕೆ ಅಥವಾ ಬೇಡವೇ ಎಂದು ನಿರ್ಧರಿಸಿಕೊಂಡು ಮುಂದುವರಿಯಬಹುದು. ಆಗ ವ್ಯಕ್ತಿಯ ಗೌಪ್ಯತೆ ರಕ್ಷಣೆಯಾಗುತ್ತದೆ. ಕರೆ ಮಾಡಿದವರು ಯಾರು ಎಂದು ಗೊತ್ತಿಲ್ಲದೇ ಬರಿ ಸಂಖ್ಯೆಯನ್ನು ನೋಡಿಕೊಂಡು ಕರೆ ಸ್ವೀಕರಿಸಿ ತೊಂದರೆಗೆ ಒಳಗಾಗುವ ಅಪಾಯ ಕಡಿಮೆಯಗುತ್ತದೆ. ಹೀಗಾಗಿ, ಗೌಪ್ಯತೆ ವಿಷಯದಲ್ಲಿ ನೋಡಿದರೆ ಅನುಕೂಲವೂ ಅನನುಕೂಲವೂ ಸಮಪ್ರಮಾಣದಲ್ಲಿದೆ.

ಈ ಫೋನ್ ನಂಬರ್ ಜೊತೆಗೆ ಹೆಸರನ್ನೂ ತೋರಿಸುವ ಅನುಕೂಲವನ್ನು ಕಲ್ಪಿಸುವುದಕ್ಕಾಗಿ ಟೆಲಿಕಾಂ ಕಂಪನಿಗಳಿಗೆ ನಾಲ್ಕು ಆಯ್ಕೆಗಳನ್ನು ಟ್ರಾಯ್ ನೀಡಿದೆ. ಕೇಂದ್ರೀಯ ಟೆಲಿಫೋನ್ ಡೈರೆಕ್ಟರಿಯಂಥದ್ದನ್ನು ನಿರ್ಮಿಸಿ, ಅದನ್ನು ಎಲ್ಲ ಟೆಲಿಕಾಂ ಪೂರೈಕೆದಾರರೂ ಬಳಸುವುದೂ ಸೇರಿದಂತೆ ಹಲವು ವಿಧಾನಗಳು ಪ್ರಸ್ತಾವನೆಯಲ್ಲಿವೆ. ಆದರೆ, ಕೆಲವು ಪ್ರಸ್ತಾವನೆಗಳನ್ನು ಜಾರಿಗೆ ತಂದಲ್ಲಿ ಅದರಿಂದ ಎರಡು ಮೊಬೈಲ್ ಸಂಖ್ಯೆಯ ಮಧ್ಯೆ ಕರೆ ಸಂಪರ್ಕವಾಗುವಲ್ಲಿ ವಿಳಂಬವಾಗುವ ಸಾಧ್ಯತೆಯೂ ಇದೆ. ಅಲ್ಲದೆ, ಈ ವ್ಯವಸ್ಥೆಯನ್ನು ಹಳೆಯ, ಸ್ಮಾರ್ಟ್‌ಫೋನ್ ಅಲ್ಲದ ಫೋನ್‌ಗಳಲ್ಲಿ ಜಾರಿಗೆ ಹೇಗೆ ತರಲಾಗುತ್ತದೆ ಎಂಬುದೂ ಸವಾಲಿನ ಸಂಗತಿಯೇ ಸರಿ.



# ಉಷ್ಣಮಾಪಕದ ಭೂತ ಭವಿಷ್ಯಗಳು

**ಕ್ಷಮಾ ವಿ. ಭಾನುಪ್ರಕಾಶ್**

ಹವಾಮಾನ ವೈಪರೀತ್ಯ ನಮ್ಮ ಕಣ್ಣೆದುರಿಗಿನ ಸತ್ಯ, ಕನ್ನಡಿ ಬೇಕಿಲ್ಲದ ಅಂಗೈಹುಣ್ಣು. ಚಳಿಗಾಲದಲ್ಲಿ ಮಳೆ, ಮಳೆಗಾಲದಲ್ಲಿ ಬಿಸಿಲು, ಬೇಸಿಗೆಯಲ್ಲಿ ಚಳಿ ಅನುಭವವೇ ಇದಕ್ಕೆ ಸಾಕ್ಷಿ. ದಿನಬೆಳಗಾದರೆ ದಿನಪತ್ರಿಕೆಗಳಲ್ಲಿ, ಸುದ್ದಿಚಾನೆಲ್‌ಗಳಲ್ಲಿ, ಅಷ್ಟೇ ಏಕೆ, ಮೊಬೈಲ್ ಹೋಮ್ ಸ್ಕ್ರೀನ್‌ನ ಮೇಲೂ ದಿನದ ತಾಪಮಾನ, ಗಾಳಿಯಲ್ಲಿನ ತೇವಾಂಶದಂತಹ ವಿವರಗಳನ್ನು ನೋಡುತ್ತೇವೆ ತಾನೆ?

ಇನ್ನು, ಚಳಿಗಾಲದಲ್ಲಂತೂ ಮುಗೀತು. ಒಂಚೂರು ಮೈಬೆಚ್ಚ ಎನಿಸಿದರೂ ಸಾಕು, ‘ಎಲ್ಲಿ ಟೆಂಪರೇಚರ್ ಎಷ್ಟಿದೆ ನೋಡುವ’ ಎಂಬಂತೆ ಥರ್ಮಾಮೀಟರ್ ಬಳಸುವ ಈ ಕಾಲದಲ್ಲಿ, ಅದೊಂದು ಉಸಿರಾಡಿದಷ್ಟೇ ಸಹಜ ಕ್ರಿಯೆ ಎನಿಸಿಬಿಟ್ಟಿದೆ. ಅದರಲ್ಲೂ ಕೊರೊನಾದ ಸಮಯದಲ್ಲಿ ಎಲ್ಲರೂ ಮನೆಯಲ್ಲೇ ಇರಬೇಕಾದ ಪರಿಸ್ಥಿತಿ; ಮನೆಯಿಂದಲೇ ವೈದ್ಯರನ್ನು ಅಂತರ್ಜಾಲದ ಮೂಲಕ ಭೇಟಿ ಮಾಡಬೇಕಾದಾಗ, ಅವರು ‘ಗಂಟೆಗೊಮ್ಮೆ ಟೆಂಪರೇಚರ್, ಉಸಿರಾಟ, ಹೃದಯದಬಡಿತ, ಎಸ್‌ಪಿಓ2 ಮಟ್ಟ ಎಷ್ಟಿದೆ ಎಂದು ದಾಖಲಿಸಿ’ ಎಂದ ಮೇಲಂತೂ, ಮನೆಮನೆಯಲ್ಲೂ ಥರ್ಮಾಮೀಟರ್ ಮತ್ತಿತರ ಸಾಧನಗಳು ಸ್ಥಾನಪಡೆದುಕೊಂಡವು. ಈಗ ಥರ್ಮಾಮೀಟರ್ – ಅಂದರೆ ಉಷ್ಣಮಾಪಕವು – ಡಿಜಿಟಲ್ ಸ್ವರೂಪ ಪಡೆದುಕೊಂಡಿದೆ ತಾನೇ? ಒಳಗೊಂದು ಸೆಲ್ ಹಾಕಿಬಿಟ್ಟರೆ ಮುಗೀತು; ನಾಲಗೆಯ ಕೆಳಗೆ ಅಥವಾ ಕಂಕುಳಿನಲ್ಲಿಟ್ಟು, ತಾಪ ಎಷ್ಟಿದೆ ಎಂದು ತಿಳಿಯಲು ಒಂದು ಗುಂಡಿ ಒತ್ತಿದರೆ, ಸಂಖ್ಯೆಗಳು ಪರದೆಯ ಮೇಲೆ ಮೂಡುತ್ತವೆ. ಆದರೆ, ಹಳೆಯ ಉಷ್ಣಮಾಪಕಗಳು ಹೀಗಿರಲಿಲ್ಲ! ಸುಮಾರು 60 ವರ್ಷಗಳ ಕೆಳಗೂ ಸಾಮಾನ್ಯವಾಗಿ ಬಳಕೆಯಲ್ಲಿದ್ದದ್ದು ಗಾಜಿನ ಉಷ್ಣಮಾಪಕಗಳು; ಅದರ ಮೇಲೆ ಅಂಕೆಗಳು ಮತ್ತು ಒಳಗೆ ಪಾದರಸ.

ಪಾದರಸವು 30 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ತಾಪಮಾನದಲ್ಲೂ ದ್ರವರೂಪದಲ್ಲಿ ಲಭ್ಯವಿರುವ ಲೋಹ. ಸಾಮಾನ್ಯವಾಗಿ ಬಹುತೇಕ ವಸ್ತುಗಳು ಬಿಸಿಮಾಡಿದಾಗ ಹಿಗ್ಗುತ್ತವೆ ಮತ್ತು ತಣಿಸಿದಾಗ ಕುಗ್ಗುತ್ತವೆ; ಆದರೆ, ಪಾದರಸವು ಇತರ ವಸ್ತುಗಳಿಗಿಂತ ಹೆಚ್ಚಿನ ‘ವಿಸ್ತರಣಾ ಗುಣಾಂಕ’ವನ್ನು ಹೊಂದಿದ್ದು, ಕೊಂಚವೇ ತಾಪಮಾನ ಏರಿಕೆಯಾದರೂ ಸುಲಭವಾಗಿ ಗೋಚರಿಸುವಂತೆ ಬೇಗ ಹಿಗ್ಗುತ್ತದೆ; ಇದೇ ಕಾರಣಕ್ಕೆ, ಥರ್ಮಾಮೀಟರ್‌ಗಳಲ್ಲಿ ಬಳಕೆಯಾಯಿತು. ಆದರೆ, ವೈದ್ಯರು ರೋಗಿಯ ಜ್ವರವೆಷ್ಟಿದೆ ಎಂದು ತಿಳಿಯಲು ಈ ಪಾದರಸ ತುಂಬಿದ ಗಾಜಿನ ಥರ್ಮಾಮೀಟರ್‌ಅನ್ನು ಬಾಯಿಗಿಟ್ಟಾಗ, ಚಳಿಯಿಂದ ನಡುಗುವ ರೋಗಿ ಇದನ್ನು ಕಡಿದು, ಬಾಯಿಯ ತುಂಬಾ ಪಾದರಸ ಮತ್ತು ಗಾಜನ್ನು ತುಂಬಿಕೊಂಡು, ವೈದ್ಯರಿಗೂ ಗರಬಡಿಸಿದ ಉಲ್ಲೇಖಗಳಿವೆ. ಇಂತಹ ಉಷ್ಣಮಾಪಕಗಳನ್ನು ತಯಾರಿಸುವ ಮುನ್ನ, ಅಂದರೆ, ನೂರಾರು ಶತಮಾನಗಳ ಮುನ್ನವೂ ಗ್ರೀಕ್, ರೋಮನ್, ಭಾರತೀಯ, ಪರ್ಷಿಯನ್ ನಾಗರಿಕತೆಗಳಲ್ಲಿ ತಮ್ಮದೇ ವಿಧದಲ್ಲಿ ತಾಪಮಾನವನ್ನು ಅಳೆಯುತ್ತಿದ್ದರು. ನೀರಿನೊಳಗೆ ಗಾಳಿ ತುಂಬಿದ, ಒಂದು ಬಾಯಿಯ ಕೊಳವೆಯನ್ನು ಅದ್ದಿ, ಅದರಲ್ಲಿನ ನೀರಿನ ಮಟ್ಟ, ಗಾಳಿಯ ಮಟ್ಟದಲ್ಲಿ ಆಗುವ ಏರುಪೇರಿನ ಆಧಾರದ ಮೇಲೆ ತಾಪಮಾನವನ್ನು ಅಳೆಯುತ್ತಿದ್ದರಂತೆ. ಇವೆಲ್ಲವೂ ಕಾಲಾನುಕ್ರಮದಲ್ಲಿ ಉಷ್ಣಬಲವಿಜ್ಞಾನದ ತತ್ವಗಳ ರಚನೆಗೆ, ಅನ್ವಯಿಕೆಗೆ ಸಹಾಯಕವಾದವು. ಗೆಲಿಲಿಯೋ ಗೆಲಿಲಿ, ಸಾಂಟೋರಿಯೋರಂತಹ ಅನ್ವೇಷಕರು ಉಷ್ಣಾಂಶವನ್ನು ಅಳೆಯಲು ತಯಾರಿಸಿದ್ದ ಸಾಧನಗಳು, ಅವುಗಳ ಆಕಾರ ಹಾಗೂ ಗಾತ್ರದ ಕಾರಣಕ್ಕೆ ಬಳಕೆಗೆ ಸುಲಭವೆನಿಸಲಿಲ್ಲ. ಫರ್ಡಿನಂಡ್ ಮೆಡಿಕಿ ಎಂಬ ಅನ್ವೇಷಕ 1965ರಲ್ಲಿ ಗಾಜಿನ ಕೊಳವೆಯೊಳಗೆ ಆಲ್ಕೋಹಾಲನ್ನು ಬಳಸಿ ತಾಪಮಾನವನ್ನು ಅಳೆಯಲು ಪ್ರಯತ್ನಿಸಿ, ಯಶಸ್ವಿಯೂ ಆದ. 1714ರಲ್ಲಿ ಗಾಜಿನ ಕೊಳವೆಯೊಳಗೆ ಪಾದರಸವನ್ನು ತುಂಬಿ ಉಷ್ಣಮಾಪಕದ ರೂಪವನ್ನು ಕೊಟ್ಟದ್ದು ಭೌತವಿಜ್ಞಾನಿ ಡೇನಿಯಲ್ ಗೇಬ್ರಿಯಲ್ ಫಾರೆನ್ಹೀಟ್. ‘ಡಿಗ್ರಿ ಸೆಲ್ಸಿಯಸ್’, ‘ಕೆಲ್ವಿನ್’ನಂತೆ ಈತನ ಹೆಸರಿನ ‘ಫಾರೆನ್ಹೀಟ್’ ಅನ್ನು ಬಳಸಿಯೂ ತಾಪಮಾನದ ಅಳತೆ, ದಾಖಲೆ ಸಾಮಾನ್ಯವಾಗಿ ಬಳಕೆಯಲ್ಲಿದೆ.

ನಮ್ಮ ಅಥವಾ ಯಾವುದೇ ಪ್ರಾಣಿಯ ದೇಹದ ಉಷ್ಣಾಂಶ ನೋಡುವುದಾದರೆ ಒಂದು ಬಗೆ, ವಾತಾವರಣದಲ್ಲಿ ಒಂದು ಪ್ರದೇಶದ ತಾಪಮಾನವೆಷ್ಟಿದೆ ಎಂದು ನೋಡಲು ಮತ್ತೊಂದು ಬಗೆ, ಆಹಾರದ ತಾಪಮಾನ ಅಳೆಯಲು ಇನ್ನೊಂದು ಬಗೆ, ಅತ್ಯಂತ ಕಡಿಮೆ ತಾಪಮಾನದಲ್ಲಿ ಕಾರ್ಯನಿರ್ವಹಿಸಲು ವಿಶೇಷವಾಗಿ ರೂಪಿಸಿದ ಕ್ರಯೋಮೀಟರ್‌ನಂತಹ ಮಾಪಕವು ಮಗದೊಂದು ಬಗೆ - ಹೀಗೆ ಅವಶ್ಯಕತೆಗೆ ತಕ್ಕ ಹಾಗೆ ಬದಲಾದ ಉಷ್ಣಾಂಶ ಮಾಪಕ ಸಾಧನಗಳು, ಅನೇಕ ಆವಿಷ್ಕಾರಗಳ, ಪ್ರಯೋಗಗಳ ಕೊಡುಗೆಯೇ ಸರಿ. ಈಗಿನ ‘ದ್ರವರೂಪೀ ಸ್ಫಟಿಕ’ದ ಥರ್ಮಾಮೀಟರ್‌ಗಳು ಮತ್ತು ಇನ್ಫ್ರಾರೆಡ್ ಥರ್ಮಾಮೀಟರ್‌ಗಳು ಉಷ್ಣಾಂಶ ಮಾಪನದ ರೀತಿನೀತಿಯನ್ನೇ ಬದಲಾಯಿಸಿಬಿಟ್ಟಿವೆ. ಲೇಸರ್‌ನ ಬಳಕೆಯಿಂದ, ಭೌತಿಕವಾಗಿ ತಾಕದೆಯೇ ದೂರದಿಂದಲೇ ತಾಪಮಾನವನ್ನು ಅಳೆಯುವುದು ಸಾಧ್ಯವಾಗಿದೆ. ರಕ್ಷಣಾಪಡೆಗಳ ಕಾರ್ಯಾಚರಣೆಗಳು ಮತ್ತು ಸಂಶೋಧನೆಗಳಲ್ಲಿ ಇಂತಹ ಥರ್ಮಾಮೀಟರ್‌ಗಳ ಬಳಕೆ ಸಾಮಾನ್ಯ. ಈ ಯಾದಿಗೆ ಹೊಸ ಸೇರ್ಪಡೆ, ಮೆತ್ತನೆಯ ಬಾಗಿ ಬಳುಕಬಲ್ಲ ತಿನ್ನುವ ‘ಜೆಲ್ಲಿ’ಯಂತೆ ಕಾಣುವ ಉಷ್ಣಮಾಪಕ! ಹಾರ್ವರ್ಡ್ ಆನ್ವಯಿಕ ವಿಜ್ಞಾನ ಕಾಲೇಜಿನ ಸಂಶೋಧಕರ ಕೊಡುಗೆ ಇದು. ನೋಡಲು ಪ್ಲಸ್ ಆಕಾರದಂತೆ ಕಾಣುವ ಈ ಉಷ್ಣಮಾಪಕ, ನಾವು ನಮ್ಮ ಬೆರಳುಗಳನ್ನು ಮಡಚಿ, ತೆಗೆದು ಮಾಡಿದಂತೆ ಮಡಚಿಕೊಳ್ಳುತ್ತದೆ ಮತ್ತು ತೆರೆದುಕೊಳ್ಳುತ್ತದೆ. ಅದರೊಳಗೆ ಯಾವುದೇ ವಸ್ತುವನ್ನು ಇಟ್ಟರೂ, ಹತ್ತು ಮಿಲಿಸೆಕೆಂಡುಗಳಲ್ಲಿ ಅದರ ನಿರ್ದಿಷ್ಟ ತಾಪಮಾನವನ್ನು ತಿಳಿಸುತ್ತದೆ. ಇದರ ಉಷ್ಣಮಾಪಕ ಸಂವೇದಕಗಳು 200 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಯನ್ನೂ, ಮೈನಸ್ 100 ಡಿಗ್ರಿ ಸೆಲ್ಸಿಯಸ್‌ನಷ್ಟು ಕೊರೆಯುವ ತಂಪನ್ನೂ ಅತ್ಯಂತ ಚುರುಕಾಗಿ, ನಿರ್ದಿಷ್ಟವಾಗಿ ಅಳೆಯಬಲ್ಲದು; ಇದರ ‘ತಾಪಮಾನ ಅಳತೆ ಶ್ರೇಣಿ’ಯು ಇಷ್ಟೊಂದು ವ್ಯಾಪಕವಾಗಿರುವುದರಿಂದ ಮತ್ತು ಇದು ಮೃದುವಾದ, ಮೆತ್ತನೆಯ ನಮ್ಯತೆಯುಳ್ಳ ವಸ್ತುವಾದ್ದರಿಂದ ಇದರ ಬಳಕೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ಸುಲಭವಾಗಿ ಮಾಡಬಹುದಾಗಿದೆ. ಜೊತೆಗೆ ಈ ನಮ್ಯ-ನವ್ಯ ಉಷ್ಣಮಾಪಕವನ್ನು, ಅವಶ್ಯಕತೆಗೆ ಅನುಗುಣವಾಗಿ, ನ್ಯಾನೋಗಾತ್ರಕ್ಕೆ ಕುಗ್ಗಿಸಬಹುದು, ಬೃಹತ್‌ಗಾತ್ರಕ್ಕೆ ಹಿಗ್ಗಿಸಬಹುದು, ಪಾರದರ್ಶಕವನ್ನಾಗಿಸಬಹುದು, ಸಂವೇದಕಗಳ ಬಗೆಯನ್ನೂ, ಇದರ ಒಳಗೆ ಬಳಸುವ ಎಲೆಕ್ಟ್ರೋಲೈಟ್, ಎಲೆಕ್ಟ್ರೋಡ್‌ಗಳನ್ನೂ ಬದಲಿಸಬಹುದು; ಹಾಗಾಗಿ, ವ್ಯಾಪಕ ಅಂತರಿಕ್ಷದಿಂದ ಕಣ್ಣಿಗೆ ಕಾಣದ ಸೂಕ್ಷ್ಮಾಣುಜೀವಿಗಳವರೆಗೆ ಈ ವಿನೂತನ ಉಷ್ಣಮಾಪಕವು ಬಳಕೆಗೆ ಸೂಕ್ತ ಎನ್ನುತ್ತಾರೆ, ವಸ್ತುವಿಜ್ಞಾನದ ಹಾಗೂ ಉಷ್ಣಬಲವಿಜ್ಞಾನದ ತಜ್ಞರು. ಇವುಗಳನ್ನು ಸದ್ಯಕ್ಕೆ ಬಾಗಿಬಳುಕುವ ಪುಟ್ಟ ರೋಬೋಗಳ ಕೈಗಳ ಭಾಗವಾಗಿ, ‘ಸ್ಮಾರ್ಟ್‌ ಇ-ಬಟ್ಟೆ’ಗಳ ಭಾಗವಾಗಿ ಬಳಕೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ❖




## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

### ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಿ

**6) ಸತ್ಯಶೋಧಕ ಸಮಾಜವು ಹುಟ್ಟಿಕೊಂಡ ಹಿನ್ನೆಲೆ ಏನು?**

**ಉತ್ತರ:**- ಭಾರತದ ಉಳಿದ ಭಾಗಗಳಲ್ಲಿ ಇದ್ದಂತೆ ಮಹಾರಾಷ್ಟ್ರದಲ್ಲಿಯೂ ಜಾತಿ ಮತ್ತು ಲಿಂಗ ನೆಲೆಗಳ ಶೋಷಣೆಗಳು ವ್ಯಾಪಕವಾಗಿದ್ದವು. ಬ್ರಿಟಿಷ್ ವಸಾಹತುಶಾಹಿ ಕಾಲಘಟ್ಟದಲ್ಲಿ ಈ ಬಗೆಯ ಶೋಷಣೆಗಳ ವಿರುದ್ಧ ಅನೇಕ ಚಳವಳಿಗಳು ಹುಟ್ಟಿಕೊಂಡವು. ಆ ಹಿನ್ನೆಲೆಯಲ್ಲಿ 1873ರಲ್ಲಿ ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಉದ್ದೇಶವನ್ನು ಇಟ್ಟುಕೊಂಡು ತನ್ನ ಚಳವಳಿಯನ್ನು ಪ್ರಾರಂಭಿಸಿತು.

**ಅಥವಾ**

**ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಆರ್ಥಿಕವಾಗಿ ಸಬಲರಾಗಲು ಏನನ್ನೆಲ್ಲಾ ಮಾಡಿದರು? ಮತ್ತು ಯಾಕೆ?**

ಉತ್ತರ:- ಹೈದರಾಲಿಯ ಕಣ್ಣೆದುರಿಗೆ ಕರ್ನಾಟಕ ಪ್ರದೇಶದಲ್ಲಿದ್ದ ನವಾಬರು ದಿವಾಳಿಯಾಗಿದ್ದರು. ಇದನ್ನು ಕಂಡ ಹೈದರಾಲಿ ಮತ್ತು ಟಿಪ್ಪು ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಅನೇಕ ನೀತಿ-ನಿಯಮಗಳನ್ನು ರೂಪಿಸಿದ್ದರು. ಶ್ರೀಗಂಧ ಮತ್ತು ತಂಬಾಕು ಮತ್ತಿತರ ಪದಾರ್ಥಗಳನ್ನು ರಾಜ್ಯದ ಏಕಸ್ವಾಮ್ಯದಡಿಗೆ ತಂದಿದ್ದರು. ಫ್ರೆಂಚ್ ತಂತ್ರಜ್ಞರನ್ನು ಕರೆಯಿಸಿ ಮೈಸೂರಿನ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸುವ ಯೋಜನೆಯನ್ನು ಹಾಕಿಕೊಂಡರು.

**7) ಅರಣ್ಯ ಸಂರಕ್ಷಣಾ ವಿಧಾನಗಳ ಬಗ್ಗೆ ಬರೆಯಿರಿ**

**ಉತ್ತರ:**- ಪ್ರಮುಖ ಅರಣ್ಯ ಸಂರಕ್ಷಣಾ ವಿಧಾನಗಳು

1) ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
2) ಅರಣ್ಯ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
3) ಸಸಿಗಳನ್ನು ನೆಡುವುದು
4) ಬೀಜಗಳನ್ನು ಹರಡುವುದು.
5) ಕಾನೂನುಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು.
6) ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು.
7) ಸಾರ್ವಜನಿಕರು ಮರಗಳನ್ನು ನೆಡಲು ಪ್ರೋತ್ಸಾಹಿಸುವುದು.
8) ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಗೊಳಿಸುವುದು.

**ಅಥವಾ**

**ಬ್ಯಾಂಕಿನ ಕಾರ್ಯಗಳನ್ನು ಬರೆಯಿರಿ**

**ಉತ್ತರ:**- ಬ್ಯಾಂಕಿನ ಕಾರ್ಯಗಳು ಹೀಗಿವೆ:

1. ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
2. ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
3. ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
4. ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
5. ಹುಂಡಿಗಳನ್ನು ಸೋಡಿ ಮಾಡುವುದು.
6. ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
7. ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
8. ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿಗಳಲ್ಲಿ ಭದ್ರವಾಗಿಇಟ್ಟುಕೊಳ್ಳುವುದು.
9. ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು.
10. ಸರ್ಕಾರದ(ಕೇಂದ್ರ ಹಾಗೂ ರಾಜ್ಯ) ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

**8) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?**

**ಉತ್ತರ:**- ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:-

1. ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
2. ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣತೊಡಗಿತು.
3. ವೃತ್ತ ಪತ್ರಿಕೆಗಳು ಹುಟ್ಟ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ. ಎಸ್. ಮಿಲ್, ರೂಸೋ, ಮಾಂಟೆಸ್ಕೊ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವೀನ್ಯತೆಯನ್ನು ತಂದವು.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
7. ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಹೀಗೆ ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

**ಅಥವಾ**

**ಯಾವ ಕಾರಣಕ್ಕಾಗಿ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು?**

**ಉತ್ತರ:**- 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯವನ್ನು ಸಾಧಿಸುವ ಜೊತೆಜೊತೆಯಲ್ಲಿ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜನರನ್ನು ತಮ್ಮ ಹಿತಾಸಕ್ತಿಗಳಿಗಾಗಿ ಶೋಷಿಸಲು ತೊಡಗಿದರು. ಈ ಶೋಷಣೆಗಳು ಕರ್ನಾಟಕವೂ ಸೇರಿದಂತೆ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು. ದೇಶೀ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸತೊಡಗಿದರು. ಇದರಿಂದ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು.

**ಉದಾ:**- ಧೋಂಡಿಯಾ ವಾಘನ ಹೋರಾಟ, ಹಲಗಲಿಯ ಬೇಡರ ಹೋರಾಟ, ವೆಂಕಟಪ್ಪ ನಾಯಕನ ಹೋರಾಟ, ಮೊದಲಾದವು ಕರ್ನಾಟಕದಲ್ಲಿ ನಡೆದವು.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

### ಗಣಿತ ವಿಜ್ಞಾನ

## ಮಾದರಿ ಪ್ರಶ್ನೆಗಳು

ಪಿಯುಸಿ

13) $f(x) = \sin(x^2)$ ಉತ್ಪನ್ನದ ನಿಷ್ಪನ್ನವನ್ನು ಕಂಡುಹಿಡಿಯಿರಿ.

**ಪರಿಹಾರ:** ಕೊಟ್ಟಿರುವ ಉತ್ಪನ್ನವನ್ನು ಗಮನಿಸಿದಾಗ ಇದು ಎರಡು ಉತ್ಪನ್ನದ ಸಂಯುಕ್ತವಾಗಿದೆ.

ಈಗ $t = u(x) = x^2$ ಮತ್ತು $v(t) = \sin t$, ಆದಾಗ

$f(x) = (v \circ u)(x) = v(u(x)) = v(x^2) = \sin x^2$ $t = u(x) = x^2$ ಎಂದು ತೆಗೆದುಕೊಂಡಾಗ

$\frac{dv}{dt} = \cos t$ ಮತ್ತು $\frac{dt}{dx} = 2x$ ಆಗಿದ್ದು ಇದು ಅಸ್ತಿತ್ವದಲ್ಲಿರುತ್ತದೆ. ಈಗ ಸರಣಿ ನಿಯಮದಿಂದ

$$\frac{df}{dx} = \frac{dv}{dt}.\frac{dt}{dx} = \cos t.2x = \cos x^2. 2x$$

ಆದರೆ ಸಾಮಾನ್ಯವಾಗಿ ಅಂತಿಮ ಉತ್ತರವನ್ನು x ನಲ್ಲಿ ನಿರೂಪಿಸುವುದು ವಾಡಿಕೆಯಾಗಿದೆ.

**14)** $a$ **ಎಂಬುದೊಂದು ಧನ ಸ್ಥಿರಾಂಕವಾದಾಗ** $a^x$ **ನ್ನು** $x$ **ಗೆ ಸಂಬಂಧಿಸಿದಂತೆ ನಿಷ್ಪನ್ನಿಸಿ.**

**ಪರಿಹಾರ:** $y = a^x$ ಆದರೆ $\log y = x \log a$

ಎರಡೂ ಬದಿಯನ್ನು $x$ ಗೆ ಸಂಬಂಧಿಸಿ ನಿಷ್ಪನ್ನಿಸಿದಾಗ

$$\frac{1}{y}\frac{dy}{dx} = \log a \text{ ಅಥವಾ } \frac{dy}{dx} = y \log a$$

$$\therefore \frac{d}{dx}(a^x) = a^x \log a$$

15) ಒಂದು ಆಯತದ ಉದ್ದ $x$, ಪ್ರತಿ ನಿಮಿಷಕ್ಕೆ 3ಸೆಂ.ಮೀ ನಂತೆ ಕಡಿಮೆಯಾಗುತ್ತಿದೆ ಮತ್ತು ಅದರ ಅಗಲ $y$, ಪ್ರತಿ ನಿಮಿಷಕ್ಕೆ 2 ಸೆಂ.ಮೀ ನಂತೆ ಏರಿಕೆಯಾಗುತ್ತಿದೆ. $x$ = 10ಸೆಂ.ಮೀ ಮತ್ತು $y$ = 6 ಸೆಂ.ಮೀ ಆದಾಗ ಆಯತದ (i) ಸುತ್ತಳತೆ ಮತ್ತು (ii) ವಿಸ್ತೀರ್ಣದಲ್ಲಾಗುವ ಬದಲಾವಣೆಯ ದರವನ್ನು ಕಂಡುಹಿಡಿಯಿರಿ.

**ಪರಿಹಾರ:** ಆಯತದ ಉದ್ದ $x$, ಕಡಿಮೆಯಾಗುತ್ತಿರುವುದರಿಂದ

$\frac{dx}{dt} = -3$ ಸೆಂ/ಮಿ

**ಅಗಲ $y$, ವೃದ್ಧಿಯಾಗುತ್ತಿರುವುದರಿಂದ,**

$\frac{dy}{dt} = 2$ ಸೆಂ/ಮಿ

ಆಯತದ ಸುತ್ತಳತೆ P ಮತ್ತು ವಿಸ್ತೀರ್ಣ A ಆಗಿರಲಿ.

ಆಗ $\mathbf{P = 2(x + y)}$ ಮತ್ತು $\mathbf{A = xy}$ ಆಗುವುದು.

ಆದ್ದರಿಂದ

$$\frac{dp}{dt} = 2\left[\frac{dx}{dt} + \frac{dy}{dt}\right] = 2[-3+2] = -2 \text{ ಸೆಂ/ನಿಮಿಷ.}$$

ಅಂದರೆ ಸುತ್ತಳತೆ ಪ್ರತಿನಿಮಿಷಕ್ಕೆ 2ಸೆಂ. ನಂತೆ ಕಡಿಮೆಯಾಗುತ್ತಿದೆ. (ಋಣಾತ್ಮಕ ಚಿಹ್ನೆ ಕಡಿಮೆದರವನ್ನು ಸೂಚಿಸುವುದು.) $A = xy$ ಹಾಗಾಗಿ

$$\frac{dA}{dt} = y\frac{dx}{dt} + x\frac{dy}{dt} = -3(6) + 10(2) \quad [\because x = 10,\ y = 6]$$

$\frac{dA}{dt} = 2$ ಚ.ಸೆಂ./ನಿಮಿಷ

ವಿಸ್ತೀರ್ಣವು ಪ್ರತಿ ನಿಮಿಷಕ್ಕೆ 2ಚ.ಸೆಂ.ನಂತೆ ಹೆಚ್ಚುತ್ತಿದೆ.

16) $\frac{x^2}{4} + \frac{y^2}{25} = 1$ ವಕ್ರರೇಖೆಯ ಮೇಲಿನ ಯಾವ ಬಿಂದುಗಳಲ್ಲಿ ಸ್ಪರ್ಶಕಗಳು (i) $x$-ಅಕ್ಷಕ್ಕೆ ಸಮಾನಾಂತರವಾಗಿದೆ, (ii) $y$–ಅಕ್ಷಕ್ಕೆ ಸಮಾನಾಂತರವಾಗಿದೆ.

**ಪರಿಹಾರ:** $x$ ಗೆ ಅನುಗುಣವಾಗಿ, $\frac{x^2}{4} + \frac{y^2}{25} = 1$ ಅನ್ನು ನಿಶ್ಪನ್ನಮಾಡಿದಾಗ,

$\frac{x}{2} + \frac{2y}{25}\frac{dy}{dx} = 0$ ಅಥವಾ $\frac{dy}{dx} = \frac{-25}{4}\frac{x}{y}$

**(i) ಸ್ಪರ್ಶಕವು $x$–ಅಕ್ಷಕ್ಕೆ ಸಮಾನಾಂತರವಾಗಿದೆ ಓಟವು 0 ಆಗಿರುತ್ತದೆ.**

ಅಂದರೆ $\frac{-25x}{4y} = 0$ ಅಥವಾ $x=0$

**ಹಾಗೂ $x = 0$ ಆದಾಗ,** $\frac{x^2}{4} + \frac{y^2}{25} = 1$ **ಇಂದ,** $y = \pm 5$

**∴ ಸ್ಪರ್ಶಕವು $x$–ಅಕ್ಷಕ್ಕೆ ಸಮಾನಾಂತರವಾಗುವ ಬಿಂದುಗಳು, (0, 5) ಮತ್ತು (0, –5).**

**(ii) ಸ್ಪರ್ಶಕವು $y$–ಅಕ್ಷಕ್ಕೆ ಸಮಾನಾಂತರವಾದರೆ, ಲಂಬದ ಓಟವು O ಆಗಿರುತ್ತದೆ. ಅಂದರೆ** $\frac{4y}{25} = 0$ **ಅಥವಾ $y = 0$. ಆದ್ದರಿಂದ $y = 0$ ಆದಾಗ,** $\frac{x^2}{4} + \frac{y^2}{25} = 1$ **ಇಂದ, $x = \pm 2$. ಆದ್ದರಿಂದ ಸ್ಪರ್ಶಕವು $y$–ಅಕ್ಷಕ್ಕೆ ಸಮಾನಾಂತರವಾಗುವ ಬಿಂದುಗಳು, (2, 0), (–2, 0)**

17) $f(x) = 3x^2 + 5x + 3$ ಆದಾಗ $f(3.02)$ನ ಸನ್ನಿಹಿತ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ: $x = 3$ ಮತ್ತು $\Delta x = 0.02$ ಎಂದಿರಲಿ

$f(3.02) = f(x + \Delta x) = 3(x + \Delta x)^2 + 5(x + \Delta x) + 3$

$\Delta y = f(x + \Delta x) - f(x)$ ಎಂಬುದನ್ನು ಗಮನಿಸಿ

ಇದರಿಂದಾಗಿ $f(x + \Delta x) = f(x) + \Delta y$

$\simeq f(x) + f'(x)\Delta x$ (ಏಕೆಂದರೆ $dx = \Delta x$)

$\therefore f(3.02) \simeq (3x^2 + 5x + 3) + (6x + 5)\Delta x$

$(3(3)^2 + 5(3) + 3) + (6(3) + 5)(0.02)$ (ಏಕೆಂದರೆ $x = 3$ ಮತ್ತು $\Delta x = 0.02$)

$= (27 + 15 + 3) + (18 + 5)(0.02)$

$= 45 + 0.46 = 45.46$

ಹಾಗಾಗಿ, $f(3.02)$ನ ಸನ್ನಿಹಿತ ಬೆಲೆಯು 45.46 ಆಗಿದೆ.

ಪ್ರಜಾವಾಣಿ ನೋಡಿಯೊ
ಪಿಯುಸಿ ರಸಾಯನವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ರಾಜ್ಯ ಪಠ್ಯಕ್ರಮದ ಶಾಲೆಗಳಿಗೆ ಅನ್ವಯ – ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ

# 5, 8ನೇ ತರಗತಿಗೆ ಇನ್ನು ವಾರ್ಷಿಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನಿಂದ (2022-23) ರಾಜ್ಯ ಪಠ್ಯಕ್ರಮದ ಎಲ್ಲ ಶಾಲೆಗಳಲ್ಲಿ 5 ಮತ್ತು 8ನೇ ತರಗತಿಗೆ ವಾರ್ಷಿಕ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ (ಕೆಎಸ್‌ಇಎಬಿ) ಈ ಪರೀಕ್ಷೆ ನಡೆಸಲಿದೆ. ಈ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಮಕ್ಕಳಲ್ಲಿನ ಕಲಿಕಾ ಕೊರತೆ ನೀಗಿಸಲು ಪ್ರಸಕ್ತ ಸಾಲಿನಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಆದರೆ, 1ನೇ ತರಗತಿಯಿಂದ 9ನೇ ತರಗತಿವರೆಗೆ ಶಾಲಾ ಹಂತದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಾಂಕನ (ಸಿಸಿಇ) ಅಡಿ ವಿಶ್ಲೇಷಣೆ ಮಾಡಲಾಗುತ್ತಿದ್ದು, ವಾರ್ಷಿಕ ಪರೀಕ್ಷೆಗಳನ್ನು ನಿರ್ವಹಿಸುತ್ತಿಲ್ಲ.

ವಾರ್ಷಿಕ ಪರೀಕ್ಷೆ ಇಲ್ಲದೇ ಇರುವುದರಿಂದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳ ಒಟ್ಟಾರೆ ಸಾಧನೆ ಯಾವ ರೀತಿ ಇದೆ ಎಂಬುದನ್ನು ಅಂದಾಜಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳ ಕಲಿಕಾ ಮಟ್ಟವೇನು? ಕೊರತೆಗಳೇನು? ಯಾವ ವಿಷಯದಲ್ಲಿ ಹಿನ್ನಡೆ ಉಂಟಾಗಿದೆ? ಅವುಗಳ ನಿವಾರಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು? ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಈ ಕಾರಣಕ್ಕೆ ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳ ಕಲಿಕಾ ಪ್ರಗತಿ, ಸಾಮರ್ಥ್ಯವನ್ನು ಏಕರೂಪದ ಸಾಧನಾ ಮತ್ತು ತಂತ್ರ ಬಳಸಿ ಮೌಲ್ಯಮಾಪನ ನಡೆಸಿ, ವಿಶ್ಲೇಷಿಸುವ ಅಗತ್ಯವಿದೆ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಕೆಎಸ್‌ಇಎಬಿ ಪ್ರಶ್ನೆ ಪತ್ರಿಕೆ ರೂಪಿಸಿ, ಸರಬರಾಜು ಮಾಡಿ ಶಾಲಾ ಹಂತದಲ್ಲಿ ಈ ಪರೀಕ್ಷೆಯನ್ನು ನಡೆಸಲಿದೆ. ಬಳಿಕ, ಮೌಲ್ಯಾಂಕನ ವಿಶ್ಲೇಷಣೆ ಮೂಲಕ ಕಲಿಕೆ ಕುಂಠಿತವಾಗಿರುವ ವಿಷಯ, ಶಾಲೆ, ಕ್ಲಸ್ಟರ್, ತಾಲ್ಲೂಕುಗಳನ್ನು ಗುರುತಿಸಿ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಕ್ರಿಯಾ ಯೋಜನೆ ರೂಪಿಸಿ, ಬೋಧನೆ ಮತ್ತು ಕಲಿಕಾ ಪ್ರಕ್ರಿಯೆ ಬಲವರ್ಧನೆಗೆ ಇಲಾಖೆ ಮುಂದಾಗಿದೆ.

ಈಗಾಗಲೇ ಅರ್ಧ ಶೈಕ್ಷಣಿಕ ವರ್ಷ ಮುಕ್ತಾಯಗೊಂಡಿರುವುದರಿಂದ, ಉಳಿದ ಅರ್ಧ ವರ್ಷದ ಪಠ್ಯವಸ್ತುವನ್ನು ಆಧರಿಸಿ 5 ಮತ್ತು 8ನೇ ತರಗತಿಗೆ 50 ಅಂಕಗಳಿಗೆ ನಿಗದಿಪಡಿಸಿ 2 ಗಂಟೆ ಅವಧಿಯ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಇದರಲ್ಲಿ 40 ಅಂಕಗಳಿಗೆ ಲಿಖಿತ, 10 ಅಂಕಗಳಿಗೆ ಮೌಖಿಕ ಪರೀಕ್ಷೆ ಇರಲಿದೆ.

ತಾಲ್ಲೂಕು ಮಟ್ಟದಲ್ಲಿ ಮೌಲ್ಯಮಾಪನ ನಡೆಯಲಿದೆ.

ಪರೀಕ್ಷೆ ಮತ್ತು ನಿರ್ವಹಣಾ ವೆಚ್ಚವನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸದೆ, ಕೆಎಸ್‌ಇಎಬಿ ಭರಿಸಲಿದೆ. ಶಾಲಾವಾರು ಮಕ್ಕಳ ಸಂಖ್ಯೆ ಆಧರಿಸಿ 5ನೇ ತರಗತಿಯ ಪರೀಕ್ಷಾ ಕೇಂದ್ರದಲ್ಲಿ ಕನಿಷ್ಠ 25, 8ನೇ ತರಗತಿಯ ಪರೀಕ್ಷಾ ಕೇಂದ್ರದಲ್ಲಿ ಕನಿಷ್ಠ 50 ಮಕ್ಕಳು ಇರುವಂತೆ ಪರೀಕ್ಷಾ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ. ಪಠ್ಯಪುಸ್ತಕ ಮತ್ತು ಕಲಿಕಾ ಚೇತರಿಕೆ ಆಧರಿಸಿ ಮಾದರಿ ಪ್ರಶ್ನೆಪತ್ರಿಕೆಯನ್ನು ಕೆಎಸ್‌ಇಎಬಿ ಸಿದ್ಧಪಡಿಸಲಿದೆ. ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನೆರವು ಪಡೆದು ಜನವರಿ ಎರಡನೇ ವಾರದಲ್ಲಿ ಶಾಲೆಗಳಿಗೆ ಮಾದರಿ ಪ್ರಶ್ನೆಪತ್ರಿಕೆ ಕಳುಹಿಸಿಕೊಡಲಾಗುವುದು ಎಂದೂ ಸುತ್ತೋಲೆಯಲ್ಲಿದೆ.

**ಪರೀಕ್ಷೆಗೆ ತಾತ್ಕಾಲಿಕ ವೇಳಾಪಟ್ಟಿ**

| | |
|---|---|
| ಮಾರ್ಚ್ 9ರಿಂದ 17 | ಪರೀಕ್ಷೆ |
| ಮಾರ್ಚ್ 21ರಿಂದ 28 | ಮೌಲ್ಯಮಾಪನ |
| ಮಾರ್ಚ್ 31ರಿಂದ ಏಪ್ರಿಲ್ 5 | ಫಲಿತಾಂಶ ಸಿದ್ಧಪಡಿಸುವುದು |
| ಏಪ್ರಿಲ್ 8ರಿಂದ 10 | ಫಲಿತಾಂಶ ಪ್ರಕಟಣೆ |

## ಸುತ್ತೋಲೆ ವಾಪಸ್‌ಗೆ 'ರುಪ್ಸ' ಆಗ್ರಹ

'5 ಮತ್ತು 8ನೇ ತರಗತಿಗೆ ಪರೀಕ್ಷೆ ನಡೆಸುವುದು ಅವೈಜ್ಞಾನಿಕ. ಶಿಕ್ಷಣದ ಮೂಲ ಉದ್ದೇಶಕ್ಕೆ ತದ್ವಿರುದ್ಧ. ಹೀಗಾಗಿ, ಈ ಸುತ್ತೋಲೆ ವಾಪಸು ಪಡೆಯಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಪತ್ರ ಬರೆದಿದೆ.

'ಆರ್‌ಟಿಇ ಕಾಯ್ದೆ ಉಲ್ಲೇಖಿಸಿ ಈ ಸುತ್ತೋಲೆ ಹೊರಡಿಸಲಾಗಿದೆ. ಆದರೆ, ಅದೇ ಕಾಯ್ದೆಯಲ್ಲಿ ಶಿಕ್ಷಕರು, ಮೂಲಸೌಕರ್ಯ, ಗುಣಮಟ್ಟದ ಶಿಕ್ಷಣ ವಿಚಾರವಾಗಿ ಇಲಾಖೆ ಯೋಚಿಸುತ್ತಿಲ್ಲವೇಕೆ? ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಮೂಲಸೌಕರ್ಯಗಳ ಕೊರತೆ ಇದೆ. ಪುಸ್ತಕ ನೀಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಾರ್ಷಿಕ ಪರೀಕ್ಷೆ ನಡೆಸಿದರೆ ಮಕ್ಕಳ ಸ್ಥಿತಿ ಏನಾಗಬಹುದು' ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪ್ರಶ್ನಿಸಿದ್ದಾರೆ.

## 'ಮುಂದಿನ ವರ್ಷದಿಂದ ಜಾರಿ ಸೂಕ್ತ'

'5 ಮತ್ತು 8ನೇ ತರಗತಿಗೆ ವಾರ್ಷಿಕ ಪರೀಕ್ಷೆ ನಡೆಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆರೋಗ್ಯಕರ ಬೆಳವಣಿಗೆ. ಆದರೆ, ಇದನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಅನುಷ್ಠಾನ ಮಾಡುವ ಬದಲು ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಂಡು ಮುಂದಿನ ವರ್ಷದಿಂದ ಜಾರಿಗೊಳಿಸುವುದು ಸೂಕ್ತ' ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಗಳ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಹೇಳಿದ್ದಾರೆ.

'ಮಕ್ಕಳಿಗೆ ಕಲಿಕಾ ಬದ್ಧತೆ ಕುಗ್ಗಿ ಹೋಗಿತ್ತು. ಕಲಿಕೆ ಸರಿಯಾಗಿ ಆಗುತ್ತಿರಲಿಲ್ಲ. ಪರೀಕ್ಷೆ ಮೂಲಕ ಮಕ್ಕಳಿಗೆ ಬದ್ಧತೆ ಬರಲು ಅವಕಾಶವಾಗಲಿದೆ. ಇದು ಮಕ್ಕಳು, ಪೋಷಕರು, ಶಿಕ್ಷಕರು ಒಪ್ಪುವಂಥದ್ದು. ಆದರೆ, ಕಲಿಕೆಗೆ ಅವಕಾಶ ಕೊಟ್ಟು, ಮಕ್ಕಳಿಗೆ ಹೊರೆ ಆಗದಂತೆ ಸಹಭಾಗಿತ್ವದಲ್ಲಿ ಪರೀಕ್ಷೆ ನಡೆಸಬೇಕು' ಎಂದೂ ಅಭಿಪ್ರಾಯಪಟ್ಟಿದ್ದಾರೆ.

## ಸುದ್ದಿ 2 ನಿಮಿಷ

### ರೈಟ್‌ಆಫ್ ಆದ ಸಾಲದ ಮೊತ್ತ ₹ 10.09 ಲಕ್ಷ ಕೋಟಿ

**ನವದೆಹಲಿ (ಪಿಟಿಐ):** ಕಳೆದ ಐದು ಹಣಕಾಸು ವರ್ಷಗಳಲ್ಲಿ ಬ್ಯಾಂಕ್‌ಗಳು ಒಟ್ಟು ₹ 10.09 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

'ತಮ್ಮ ಲೆಕ್ಕಪತ್ರವನ್ನು ಸರಿಪಡಿಸಿಕೊಳ್ಳುವುದು, ತೆರಿಗೆ ಪ್ರಯೋಜನ ಪಡೆದುಕೊಳ್ಳುವುದು ಹಾಗೂ ಬಂಡವಾಳವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮಾಮೂಲಿ ಪ್ರಕ್ರಿಯೆಯ ಭಾಗವಾಗಿ ಬ್ಯಾಂಕ್‌ಗಳು ಆರ್‌ಬಿಐ ಮಾರ್ಗಸೂಚಿ ಹಾಗೂ ತಮ್ಮ ಆಡಳಿತ ಮಂಡಳಿಗಳು ಒಪ್ಪಿರುವ ನೀತಿಗಳಿಗೆ ಅನುಗುಣವಾಗಿ ಎನ್‌ಪಿಎಗಳನ್ನು (ವಸೂಲಾಗದ ಸಾಲ) ರೈಟ್‌ಆಫ್ ಮಾಡುತ್ತವೆ' ಎಂದು ನಿರ್ಮಲಾ ಅವರು ಹೇಳಿದ್ದಾರೆ.

ರೈಟ್‌ಆಫ್ ಮಾಡಿರುವ ಸಾಲವನ್ನು ತೀರಿಸುವ ಹೊಣೆಯು ಸಾಲ ಪಡೆದವರ ಮೇಲೆ ಇದ್ದೇ ಇರುತ್ತದೆ. ರೈಟ್‌ಆಫ್ ಆಗಿರುವ ಸಾಲದ ವಸೂಲಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಸಾಲ ಪಡೆದವರಿಗೆ ರೈಟ್‌ಆಫ್ ಮಾಡಿದ್ದರಿಂದಾಗಿ ಪ್ರಯೋಜನವೇನೂ ಆಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ರೈಟ್‌ಆಫ್ ಆಗಿದ್ದ ಸಾಲದ ಪೈಕಿ ಕಳೆದ ಐದು ವರ್ಷಗಳಲ್ಲಿ ವಾಣಿಜ್ಯ ಬ್ಯಾಂಕ್‌ಗಳು ಒಟ್ಟು ₹ 1.32 ಲಕ್ಷ ಕೋಟಿಯನ್ನು ವಸೂಲಿ ಮಾಡಿವೆ ಎಂದು ಅವರು ಹೇಳಿದ್ದಾರೆ.

## ರಥೋತ್ಸವ

ಬಾಗಲಕೋಟೆ ಸಮೀಪದ ಮುಚಖಂಡಿ ವೀರಭದ್ರೇಶ್ವರ ಜಾತ್ರೆಯ ಅಂಗವಾಗಿ ಮಂಗಳವಾರ ರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು –ಪ್ರಜಾವಾಣಿ ಚಿತ್ರ

# ಡಾ.ಮಂಜುನಾಥ್‌ಗೆ 'ಸಿದ್ಧಗಂಗಾಶ್ರೀ' ಪ್ರಶಸ್ತಿ

## 2021ನೇ ಸಾಲಿನ ಪ್ರಶಸ್ತಿ ಪ್ರಭು ಚನ್ನಬಸವ ಸ್ವಾಮೀಜಿಗೆ

ಪ್ರಜಾವಾಣಿ ವಾರ್ತೆ

**ತುಮಕೂರು:** ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಕೊಡ ಮಾಡುವ 2022ನೇ ಸಾಲಿನ 'ಸಿದ್ಧಗಂಗಾಶ್ರೀ' ಪ್ರಶಸ್ತಿಗೆ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹1 ಲಕ್ಷ ನಗದು, ಅಭಿನಂದನಾ ಪತ್ರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುತ್ತದೆ. ಸಿದ್ಧಗಂಗಾ ಮಠದಲ್ಲಿ ಇದೇ 18ರಂದು ನಡೆಯುವ ಸಂಘದ 66ನೇ ಸರ್ವಸದಸ್ಯರ ವಾರ್ಷಿಕ ಮಹಾಧಿವೇಶನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. 2021ನೇ ಸಾಲಿನ 'ಸಿದ್ಧಗಂಗಾಶ್ರೀ' ಪ್ರಶಸ್ತಿಗೆ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಭಾಜನರಾಗಿದ್ದಾರೆ.

ಡಾ.ಸಿ.ಎನ್. ಮಂಜುನಾಥ್

ಪ್ರಭು ಚನ್ನಬಸವ ಸ್ವಾಮೀಜಿ

ಶಿವಕುಮಾರ ಸ್ವಾಮೀಜಿ ಹೆಸರಿನಲ್ಲಿ ನೀಡುವ 'ಸಿದ್ಧಗಂಗಾ ಶಿವಕುಮಾರಶ್ರೀ' ಪ್ರಶಸ್ತಿಗೆ ನಾಲ್ವರನ್ನು ಆಯ್ಕೆ ಮಾಡಲಾಗಿದೆ. ಸಾಹಿತ್ಯ, ಸಾಮಾಜಿಕ, ಶೈಕ್ಷಣಿಕ, ಕೃಷಿ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದವರನ್ನು ಆಯ್ಕೆಗೆ ಪರಿಗಣಿಸಲಾಗಿದೆ. ಕಲಬುರಗಿಯ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಭೀಮಾಶಂಕರ ಚಂದ್ರಶೇಖರ ಬಿಲಗುಂದಿ, ಮೈಸೂರಿನ ಸಾಹಿತಿ ಪ್ರೊ.ಎಸ್.ಮಲೆಯೂರು ಗುರುಸ್ವಾಮಿ, ಬೆಂಗಳೂರಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಡಾ.ವೈ.ಸಿ.ಕಮಲ, ರಾಯಚೂರು ಜಿಲ್ಲೆಯ ಪ್ರಗತಿಪರ ಕೃಷಿಕ ಮಹಿಳೆ ಕವಿತಾ ಮಿಶ್ರಾ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ತಲಾ ₹15 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ.

'ಕಾಯಕಯೋಗಿ' ಪ್ರಶಸ್ತಿಗೆ ಪತ್ರಕರ್ತ ರಂಜಾನ್ ದರ್ಗಾ ಅವರನ್ನು ಆಯ್ಕೆ ಮಾಡಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ 'ಸಂಘಸಿರಿ' ಪ್ರಶಸ್ತಿ ನೀಡುತ್ತಿದ್ದು, ತುಮಕೂರಿನ ಎಚ್.ಜಿ.ಈಶ್ವರಯ್ಯ, ಬೆಂಗಳೂರಿನ ತುಳಸೀರಾಮಯ್ಯ, ಲಕ್ಷ್ಮಯ್ಯ, ಆರ್.ಎಸ್.ಹುಚ್ಚಾಚಾರಿ, ಬಳ್ಳಾರಿ ಚನ್ನನಗೌಡ, ಬೀದರ್‌ನ ದೇವೇಂದ್ರ ಕಾರಂಜಿ, ರಾಯಚೂರಿನ ಮಹೇಶ್ ಶಾಸ್ತ್ರಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## 'ಸದಾಶಿವ ಆಯೋಗದ ವರದಿ ಜಾರಿಗೊಳಿಸಿ'

**ಬೆಂಗಳೂರು:** ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಮನೆಗೆ ಅರೆಬೆತ್ತಲೆಯಾಗಿ ಮುತ್ತಿಗೆ ಹಾಕಲಾಗುವುದು ಎಂದು ಮಾದಿಗ ದಂಡೋರ ಸಮಿತಿ ಮಂಗಳವಾರ ಎಚ್ಚರಿಕೆ ನೀಡಿದೆ.

'ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲ ಅಧಿವೇಶನದಲ್ಲಿ ಸದಾಶಿವ ಆಯೋಗದ ಕುರಿತು ಚರ್ಚಿಸಿ, ಕೇಂದ್ರಕ್ಕೆ ಶಿಫಾರಸು ಮಾಡಬೇಕು. 25 ವರ್ಷಗಳಿಂದ ಒಳಮೀಸಲಾತಿಗೆ ಹೋರಾಟ ಮಾಡುತ್ತಿದ್ದೇವೆ. ಅಧಿಕಾರಕ್ಕೆ ಬಂದ ಪಕ್ಷಗಳು ಆಶ್ವಾಸನೆ ನೀಡುವುದನ್ನು ಬಿಟ್ಟು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಸಮಿತಿ ರಾಜ್ಯಾಧ್ಯಕ್ಷ ಬಿ.ನರಸಪ್ಪ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಡಿ.11ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಪೊಲೀಸರು ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿ ಕಾರ್ಯಕರ್ತರನ್ನು ಬಂಧಿಸಿರುವುದು ಖಂಡನೀಯ. ಚಳಿಗಾಲದ ಅಧಿವೇಶನದಲ್ಲಿ ಒಳಮೀಸಲಾತಿ ಬಗ್ಗೆ ಚರ್ಚಿಸಿ ನಿರ್ಧರಿಸಬೇಕು. ಇಲ್ಲದಿದ್ದರೆ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ' ಎಂದರು.

**ಬೆಂಗಳೂರು:** ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಮನೆಗೆ ಅರೆಬೆತ್ತಲೆಯಾಗಿ ಮುತ್ತಿಗೆ ಹಾಕಲಾಗುವುದು ಎಂದು ಮಾದಿಗ ದಂಡೋರ ಸಮಿತಿ ಮಂಗಳವಾರ ಎಚ್ಚರಿಕೆ ನೀಡಿದೆ.

# ಸಿ.ಎಂ– ಬಿಎಸ್‌ವೈ ಮುನಿಸು?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಮಧ್ಯೆ ಅಸಮಾಧಾನ ಉಂಟಾಗಿದೆ ಎಂಬ ವಿಷಯ ಪಕ್ಷದ ವಲಯದಲ್ಲಿ ಗಂಭೀರ ಚರ್ಚೆಗೆ ಗ್ರಾಸವಾಗಿದೆ.

ತುಮಕೂರು ಮತ್ತು ಕುಣಿಗಲ್‌ನಲ್ಲಿ ನಡೆದಿದ್ದ ಜನಸಂಕಲ್ಪ ಯಾತ್ರೆಗಳಲ್ಲಿ ಯಡಿಯೂರಪ್ಪ ಅವರು ಭಾಗವಹಿಸಿಲ್ಲ. ಈ ಎರಡೂ ಕಾರ್ಯಕ್ರಮಗಳಿಗೆ ಸರಿಯಾದ ರೀತಿಯಲ್ಲಿ ಆಮಂತ್ರಣ ನೀಡದಿರುವುದು ಯಡಿಯೂರಪ್ಪ ಗೈರುಹಾಜರಿಗೆ ಕಾರಣ ಎನ್ನಲಾಗಿದೆ. ಅವರನ್ನು ಆಹ್ವಾನಿಸಬೇಕಾಗುತ್ತದೆ ಎಂಬ ಕಾರಣಕ್ಕೇ, ಚಾಮರಾಜನಗರದ ಪಕ್ಷದ ಕಾರ್ಯಕ್ರಮವನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಪರಿವರ್ತಿಸಲಾಯಿತು ಎಂಬ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬಂದಿವೆ.

ಗುಜರಾತ್ ಮುಖ್ಯಮಂತ್ರಿ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಯಡಿಯೂರಪ್ಪ ಮತ್ತು ಬೊಮ್ಮಾಯಿ ಪ್ರತ್ಯೇಕವಾಗಿ ತೆರಳಿದ್ದರು. ಬೊಮ್ಮಾಯಿ ವಿಶೇಷ ವಿಮಾನವನ್ನು ಮಾಡಿಕೊಂಡು ತೆರಳಿದ್ದರು. ವಾಪಸ್ ಬರುವಾಗ ಯಡಿಯೂರಪ್ಪ ಅವರನ್ನು ಜೊತೆಗೆ ಕರೆದುಕೊಂಡು ಬರಬಹುದಿತ್ತು. ಆದರೆ, ಒಬ್ಬರೇ ಬಂದರು. ಇದು ಬೊಮ್ಮಾಯಿ ಮತ್ತು ಯಡಿಯೂರಪ್ಪ ಮಧ್ಯೆ ಅಂತರ ಹೆಚ್ಚಾಗುತ್ತಿರುವುದರ ಸೂಚಕ ಎಂದು ಪಕ್ಷದ ಪ್ರಮುಖರೊಬ್ಬರು ಹೇಳಿದರು.

ಈ ಚರ್ಚೆಯ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, 'ಮುಖ್ಯಮಂತ್ರಿ ಮತ್ತು ಯಡಿಯೂರಪ್ಪ ಮಧ್ಯೆ ಯಾವುದೇ ಅಸಮಾಧಾನವಿಲ್ಲ. ಎಲ್ಲ ಜನ ಸಂಕಲ್ಪ ಯಾತ್ರೆಗಳಿಗೂ ಇಬ್ಬರೂ ಹೋಗಿದ್ದಾರೆ' ಎಂದರು.

'ನಿನ್ನೆ ಗುಜರಾತ್‌ನಿಂದ ಬೊಮ್ಮಾಯಿ ಬರುವಾಗ ಯಡಿಯೂರಪ್ಪ ಅವರನ್ನೂ 'ಬನ್ನಿ, ಒಟ್ಟಿಗೆ ಹೋಗೋಣ' ಎಂದು ಕರೆದಿದ್ದರು. 'ಇನ್ನೂ ಇಬ್ಬರನ್ನು ಭೇಟಿ ಮಾಡಿ ಬರಲಿಕ್ಕೆ ಇದೆ' ಎಂದು ಯಡಿಯೂರಪ್ಪ ಹೇಳಿದ್ದರಿಂದ ಬೊಮ್ಮಾಯಿ ಒಬ್ಬರೇ ವಾಪಸ್ ಬಂದರು' ಎಂದು ತಿಳಿಸಿದರು.

'ಯಡಿಯೂರಪ್ಪ ಅವರು ಈಗ ರಾಷ್ಟ್ರ ಮಟ್ಟದ ನಾಯಕ. ಅವರಿಗೆ ದೊಡ್ಡ ಜವಾಬ್ದಾರಿಗಳು ಇರುತ್ತವೆ. ರಾಜ್ಯದಲ್ಲಿ 150 ಸ್ಥಾನಗಳನ್ನು ಗೆಲ್ಲಿಸುವ ಸಂಕಲ್ಪ ಮಾಡಿದ್ದಾರೆ. ಬೊಮ್ಮಾಯಿ ಮತ್ತು ಯಡಿಯೂರಪ್ಪ ಒಟ್ಟಾಗಿಯೇ ಆ ಗುರಿಯನ್ನು ಸಾಧಿಸುತ್ತಾರೆ' ಎಂದು ಹೇಳಿದರು.

## ಚುನಾವಣೆಯಲ್ಲಿ ಎಚ್ಚರಿಕೆಯ ಹೆಜ್ಜೆ: ಸಿ.ಟಿ.ರವಿ

**ಬೆಂಗಳೂರು:** ಹಿಮಾಚಲ ಪ್ರದೇಶದ ಸೋಲಿನ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಎಚ್ಚರಿಕೆಯ ಹೆಜ್ಜೆ ಇಡಬೇಕಾಗಿದೆ. ಇಲ್ಲವಾದರೆ, ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮೈಮರೆಯದೇ ಕೆಲಸ ಮಾಡಿದರೆ ಗುಜರಾತ್‌ನಂತೆ ಫಲಿತಾಂಶ ಸಿಗುತ್ತದೆ. ಮೈಮರೆತರೆ ಹಿಮಾಚಲ ಪ್ರದೇಶದಂತೆ ಆಗುತ್ತದೆ. ಗುಜರಾತ್ ಗೆಲುವಿನ ಪ್ರೇರಣೆ ಪಡೆದು ನಾವು ಮುನ್ನಡೆಯಬೇಕಾಗುತ್ತದೆ' ಎಂದರು.

ಈ ಬಾರಿ ಟಿಕೆಟ್ ಹಂಚಿಕೆಯಲ್ಲಿ ಉತ್ತಮ ಸಾಧನೆಯ ಜತೆಗೆ ಅಭ್ಯರ್ಥಿ ನಡವಳಿಕೆಯೂ ಮಾನದಂಡವಾಗಲಿದೆ. ಚುನಾವಣೆ ವಿಚಾರದಲ್ಲಿ ಎಚ್ಚರಿಕೆಯಿಂದ ಪಕ್ಷವನ್ನು ಮುನ್ನಡೆಸಬೇಕಾಗಿದೆ. ಕೆಲ ಶಾಸಕರು ಉತ್ತಮ ಕೆಲಸ ಮಾಡಿದ್ದರೂ, ನಡವಳಿಕೆ ಹೇಳಿಕೊಳ್ಳುವಂತಿಲ್ಲ. ಹೀಗಾಗಿ ಗೆಲುವೊಂದೇ ಮಾನದಂಡವಲ್ಲ. ಎಲ್ಲ ವಿಚಾರವನ್ನು ಪರಿಶೀಲಿಸಿಯೇ ಟಿಕೆಟ್ ನೀಡಲಾಗುತ್ತದೆ. ಈ ವಿಚಾರವಾಗಿ ಆಂತರಿಕವಾಗಿ ಮತ್ತು ಹೊರಗಿನಿಂದಲೂ ಶಾಸಕರ ಕಾರ್ಯಕ್ಷಮತೆ ಬಗ್ಗೆ ವರದಿ ಪಡೆಯಲಾಗುತ್ತಿದೆ ಎಂದು ಹೇಳಿದರು.

ಎಲ್ಲ ವಿಚಾರವನ್ನೂ ಪರಿಗಣಿಸಿ ಟಿಕೆಟ್ ನೀಡಲಾಗುವುದು. ಅವಕಾಶ ವಂಚಿತ ಸಣ್ಣ–ಪುಟ್ಟ ಸಮುದಾಯಗಳಿಗೆ ಟಿಕೆಟ್ ನೀಡುವುದರಲ್ಲಿ ಬಿಜೆಪಿ ಮುಂದಿದೆ. ಸಾಮಾಜಿಕವಾಗಿ ಹಿಂದುಳಿದವರಿಗೆ ಆದ್ಯತೆ ನೀಡಲಾಗುವುದು. ಬೇರೆ ಪಕ್ಷಗಳಿಂದ ಬರುವವರನ್ನು ಸಾರಾ ಸಗಟಾಗಿ ಸೇರಿಸಿಕೊಳ್ಳುವುದಿಲ್ಲ. ಪೂರ್ವಾಪರ ಪರಿಶೀಲಿಸಿದ ಬಳಿಕವೇ ತೀರ್ಮಾನಿಸಲಾಗುವುದು ಎಂದು ರವಿ ತಿಳಿಸಿದರು.

## ನೌಕರ ಆತ್ಮಹತ್ಯೆ: ನ್ಯಾಯಾಧೀಶ ವಿರುದ್ಧ ಪ್ರಕರಣ ದಾಖಲು

**ಜೈಪುರ (ಪಿಟಿಐ):** ಸ್ಥಳೀಯ ಕೋರ್ಟ್‌ನ ನೌಕರ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿ, ನ್ಯಾಯಾಧೀಶ ಕೆ.ಎಸ್. ಚಲಾನಾ ಅವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಎನ್‌ಡಿಪಿಎಸ್ ಕೋರ್ಟ್ ಉದ್ಯೋಗಿ ಸುಭಾಷ್ ಮೆಹ್ರಾ ಎಂಬುವವರು ನ.10ರಂದು ಬೆಂಕಿ ಹಚ್ಚಿಕೊಂಡಿದ್ದರು. ಅಸ್ವಸ್ಥರಾಗಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು. ಅವರ ಕುಟುಂಬದವರು ನೀಡಿದ ದೂರಿನನ್ವಯ ನ್ಯಾಯಾಧೀಶರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಎಸಿಪಿ ಅನಿಲಕುಮಾರ್ ಶರ್ಮಾ ತಿಳಿಸಿದ್ದಾರೆ.

ಇಲ್ಲಿನ ಕಮಲಾ ನೆಹರು ನಗರದಲ್ಲಿರುವ ನ್ಯಾಯಾಧೀಶ ಚಲಾನಾ ಅವರ ಮನೆಯಲ್ಲಿ ಮೆಹ್ರಾ ಕೆಲಸ ಮಾಡುತ್ತಿದ್ದರು.

# ಮುಸ್ಲಿಂ ಮತ: ಕಾಂಗ್ರೆಸ್ ತಂತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಂಬರುವ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಮತಗಳು ಚದುರದಂತೆ ತಡೆಯಲು ಬೇಕಾದ ಕಾರ್ಯತಂತ್ರಗಳ ಕುರಿತು ಕಾಂಗ್ರೆಸ್ ಪಕ್ಷದ ಮುಸ್ಲಿಂ ಮುಖಂಡರು ಮಂಗಳವಾರ ಚರ್ಚಿಸಿದರು. 55ಕ್ಕೂ ಹೆಚ್ಚು ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ಮುಸ್ಲಿಂ ಮತದಾರರು ಹಿಂದಿನಿಂದಲೂ ಕಾಂಗ್ರೆಸ್ ಬೆನ್ನಿಗೆ ನಿಂತಿದ್ದಾರೆ. ಈ ಮತಗಳು ಚದುರದಂತೆ ನೋಡಿಕೊಳ್ಳಬೇಕು. ಜೊತೆಗೆ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಟಿಕೆಟ್ ನೀಡುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಬೇಕೆಂಬ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, 'ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಬೆಲೆ ಏರಿಕೆ, ಅಭಿವೃದ್ಧಿ ವೈಫಲ್ಯ, ಅಲ್ಪಸಂಖ್ಯಾತರ ಕಾರ್ಯಕ್ರಮಗಳ ರದ್ದತಿ ವಿಚಾರವನ್ನು ಅಲ್ಪಸಂಖ್ಯಾತರಿಗೆ ತಿಳಿಸಿ, ಪಕ್ಷಕ್ಕೆ ಶಕ್ತಿ ತುಂಬುವಂತೆ ಮನವಿ ಮಾಡಲು ತೀರ್ಮಾನಿಸಿದ್ದೇವೆ' ಎಂದರು.

**ಪಕ್ಷದ ಟಿಕೆಟ್ ಬಯಸಿ 100ಕ್ಕೂ ಹೆಚ್ಚು ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಿದ್ದಾರೆ. ಅವುಗಳನ್ನು ಪರಿಶೀಲಿಸಿ ಕೆಪಿಸಿಸಿಗೆ ಪರಿಷ್ಕೃತ ಪಟ್ಟಿ ನೀಡಲಾಗುವುದು. ಮುಸ್ಲಿಮರಿಗೆ ಹೆಚ್ಚು ಟಿಕೆಟ್ ನೀಡಬೇಕೆಂದು ಕೋರಲಾಗುವುದು**

**ಸಲೀಂ ಅಹಮದ್,** ಕೆಪಿಸಿಸಿ ಕಾರ್ಯಾಧ್ಯಕ್ಷ

'ಅಲ್ಪಸಂಖ್ಯಾತ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿರುವ ಕುರಿತು ಚರ್ಚಿಸಿದ್ದೇವೆ. ಹೆಸರು ತೆಗೆಯುವ ಮೂಲಕ ಸರ್ಕಾರ ಷಡ್ಯಂತ್ರ ರೂಪಿಸಿದೆ. ಮುಂದಿನ ದಿನಗಳಲ್ಲಿ ಹೇಗೆ ಸರಿಪಡಿಸಬೇಕು ಎಂದೂ ಚರ್ಚಿಸಿದ್ದೇವೆ' ಎಂದು ವಿವರಿಸಿದರು.

'ಜನವರಿ ತಿಂಗಳಲ್ಲಿ ಐದು ವಲಯಗಳಲ್ಲಿ ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಸಮಾವೇಶವನ್ನು ಒಟ್ಟಾಗಿ ಮಾಡುತ್ತೇವೆ' ಎಂದೂ ಹೇಳಿದರು.

'ಮುಸ್ಲಿಂ ಮುಖ್ಯಮಂತ್ರಿ ಬಗ್ಗೆ ಚರ್ಚೆ ಮಾಡಿದ್ದೀರಾ' ಎಂಬ ಪ್ರಶ್ನೆಗೆ, 'ನಮ್ಮ ಗುರಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು. ಬಳಿಕ ನಮ್ಮ ಬೇಡಿಕೆಗಳನ್ನು ಪಕ್ಷ ಹಾಗೂ ಸರ್ಕಾರದ ಗಮನಕ್ಕೆ ತರುತ್ತೇವೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್, ಶಾಸಕರಾದ ಜಮೀರ್ ಅಹಮದ್ ಖಾನ್, ತನ್ವೀರ್ ಸೇಠ್, ರಹೀಂ ಖಾನ್, ಮುಖಂಡರಾದ ರೆಹಮಾನ್ ಖಾನ್, ಐ.ಜಿ.ಸನದಿ, ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾದ ಅಬ್ದುಲ್ ಜಬ್ಬಾರ್ ಮುಂತಾದವರು ಇದ್ದರು.

ಜಿಲ್ಲಾಡಳಿತದಿಂದ ಹೆಚ್ಚುವರಿ ಸಂಚಾರಿ ಶೌಚಾಲಯಗಳ ವ್ಯವಸ್ಥೆ

# ಸೇನಾ ಅಭ್ಯರ್ಥಿಗಳ ನೆರವಿಗೆ ಬಂದ ದಾನಿಗಳು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

**ಬೀದರ್:** ನಗರದಲ್ಲಿ ಅಗ್ನಿ ಪಥದ ಅಗ್ನಿ ವೀರರ ನೇಮಕಾತಿಗೆ ನಡೆಸುತ್ತಿರುವ ರ್‍ಯಾಲಿಗೆ ಬರುತ್ತಿರುವ ಉತ್ತರ ಕರ್ನಾಟಕದ ಜಿಲ್ಲೆಗಳ ಯುವಕರು ವಾರದಿಂದ ಎದುರಿಸುತ್ತಿದ್ದ ಸಮಸ್ಯೆಗಳ ಮೇಲೆ 'ಪ್ರಜಾವಾಣಿ' ಬೆಳಕು ಚೆಲ್ಲುತ್ತಿದ್ದಂತೆಯೇ ಜಿಲ್ಲಾಡಳಿತ ಹೆಚ್ಚುವರಿ ಸಂಚಾರಿ ಶೌಚಾಲಯಗಳ ವ್ಯವಸ್ಥೆ ಮಾಡಿತು.

ಸಾಯಿ ಆದರ್ಶ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯವರು ಯುವಕರಿಗೆ ಉಳಿದುಕೊಳ್ಳಲು ಶಾಲಾ ಕೊಠಡಿಗಳನ್ನು ಬಿಟ್ಟುಕೊಟ್ಟರು.

ಕೇಶವ ಕಾರ್ಯ ಸಂವರ್ಧನ ಸಮಿತಿ ಕಾರ್ಯಕರ್ತರು ಮೈದಾನದಲ್ಲಿ ಅಚ್ಚುಕಟ್ಟಾದ ಟೆಂಟ್ ಹಾಗೂ ನೆಲಹಾಸು ಹಾಕಿ ಅಭ್ಯರ್ಥಿಗಳಿಗೆ ಉಳಿದುಕೊಳ್ಳಲು ಹಾಗೂ ಊಟದ ವ್ಯವಸ್ಥೆ ಮಾಡಿದರು.

'ಎರಡು ಬಾಳೆ ಹಣ್ಣು ತಿಂದು ರಸ್ತೆ ಬದಿಗೆ ಮಲಗಿದ್ದೆವು. ನಮ್ಮ ಅವಸ್ಥೆ ನೋಡಿ ದಾನಿಗಳು ಊಟದ ವ್ಯವಸ್ಥೆ ಮಾಡಿದರು. ಅವರಿಗೆ ನಾವು ಋಣಿಯಾಗಿದ್ದೇವೆ' ಎಂದು ಬೆಳಗಾವಿ ಯುವಕರು ಕೃತಜ್ಞತೆ ವ್ಯಕ್ತಪಡಿಸಿದರು.

'ದೊಡ್ಡ ರ್‍ಯಾಲಿ ನಡೆಸಿದಾಗ ಕೆಲವು ಲೋಪಗಳು ಕಂಡು ಬರುವುದು ಸಹಜ. ಆಡಳಿತದ ತಪ್ಪುಗಳನ್ನು ಸರಿಪಡಿಸಲು ಹಾಗೂ ಸಮಸ್ಯೆಗಳಿಗೆ ಸ್ಪಂದಿಸಲು ಜಿಲ್ಲಾಡಳಿತ ಸಿದ್ಧವಿದೆ' ಎಂದು ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ತಿಳಿಸಿದ್ದಾರೆ.

ಬೀದರ್‌ನ ಸಾಯಿ ಆದರ್ಶ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕೇಶವ ಕಾರ್ಯ ಸಂವರ್ಧನ ಸಮಿತಿ ವ್ಯವಸ್ಥೆ ಮಾಡಿದ ಟೆಂಟ್‌ನಲ್ಲಿ ಆಶ್ರಯ ಪಡೆದ ಸೇನಾ ನೇಮಕಾತಿಗೆ ಬಂದಿರುವ ಬೆಳಗಾವಿ ಜಿಲ್ಲೆಯ ಯುವಕರು

# ಶರಣರ ಜಾಮೀನು ಅರ್ಜಿ ಮುಂದಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗದ ಶಿವಮೂರ್ತಿ ಶರಣರ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಪುನಃ ಮುಂದೂಡಿದೆ.

ಈ ಸಂಬಂಧ ಶಿವಮೂರ್ತಿ ಶರಣರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ಮುಂದುವರಿಸಿತು.

ಶರಣರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು, 'ಜೈಲಿನಲ್ಲಿರುವ ಅರ್ಜಿದಾರ ಶರಣರನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ. ಇನ್ನಷ್ಟು ಸಮಯಾವಕಾಶ ನೀಡಬೇಕು. ಮುಂದಿನ ವಿಚಾರಣೆಯಲ್ಲಿ ಅರ್ಜಿ ವಾಪಸು ಪಡೆಯುವುದೊ ಹೇಗೆ ಎಂಬ ಬಗ್ಗೆ ನ್ಯಾಯಪೀಠಕ್ಕೆ ತಿಳಿಸಲಾಗುವುದು' ಎಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ಇದೇ 19ರಿಂದ ತಿಂಗಳಾಂತ್ಯದವರೆಗೆ ಹೈಕೋರ್ಟ್‌ಗೆ ಕ್ರಿಸ್‌ಮಸ್ ರಜೆ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ನಿಯೋಜಿತ ವಿಶೇಷ ನ್ಯಾಯಪೀಠಗಳು ತುರ್ತು ಪ್ರಕರಣಗಳನ್ನು ಮಾತ್ರವೇ ವಿಚಾರಣೆಗೆ ಕೈಗೆತ್ತಿಕೊಳ್ಳಲಿವೆ. ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಶಿವಮೂರ್ತಿ ಶರಣರನ್ನು ಪೊಲೀಸರು 2022ರ ಸೆ.1ರಂದು ಬಂಧಿಸಿದ್ದು, ಸದ್ಯ ಚಿತ್ರದುರ್ಗ ಜೈಲಿನಲ್ಲಿ ಬಂಧನದಲ್ಲಿದ್ದಾರೆ.

## ಆದೇಶ ಕಾಯ್ದಿರಿಸಿದ ನ್ಯಾಯಾಲಯ

**ಚಿತ್ರದುರ್ಗ:** ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಶರಣರ ಅಧಿಕಾರವನ್ನು ನಿರ್ಬಂಧಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶವನ್ನು ಡಿಸೆಂಬರ್ 15ಕ್ಕೆ ಕಾಯ್ದಿರಿಸಿದೆ.

ಆ. 28ರಂದು ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988ರ ಸೆಕ್ಷನ್ 3 ಮತ್ತು 7ರ ಅಡಿಯಲ್ಲಿಯೂ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ದೋಷಾರೋಪ ನಿಗದಿಗೂ ಮುನ್ನ ನಡೆದ ವಿಚಾರಣೆಯಲ್ಲಿ ಪೀಠಾಧ್ಯಕ್ಷರ ಅಧಿಕಾರ ನಿರ್ಬಂಧಿಸುವಂತೆ ಪ್ರಾಸಿಕ್ಯೂಷನ್ ನ್ಯಾಯಾಧೀಶರನ್ನು ಕೋರಿತ್ತು. ಇದಕ್ಕೆ ಮಠದ ಪರ ವಕೀಲರು ತಕರಾರು ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಆದೇಶವನ್ನು ಕಾಯ್ದಿರಿಸಿದರು.

**ಡಿ.15ರವರೆಗೆ ವಿಸ್ತರಣೆ:** ಶಿವಮೂರ್ತಿ ಮುರುಘಾ ಶರಣರು, ಹಾಸ್ಟೆಲ್ ವಾರ್ಡನ್ ಹಾಗೂ ಪರಮಶಿವಯ್ಯ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ನ್ಯಾಯಾಲಯ ಡಿ. 15ರವರೆಗೆ ವಿಸ್ತರಿಸಿದೆ. ನ್ಯಾಯಾಂಗ ಬಂಧನದ ಅವಧಿ ಮುಕ್ತಾಯಗೊಂಡಿದ್ದರಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಆರೋಪಿಗಳನ್ನು ನ್ಯಾಯಾಧೀಶರ ಎದುರು ಮಂಗಳವಾರ ಹಾಜರುಪಡಿಸಲಾಗಿತ್ತು. ಈ ನಡುವೆ ದೋಷಾರೋಪದಿಂದ ತಮ್ಮನ್ನು ಕೈಬಿಡುವಂತೆ ಕೋರಿ ಹಾಸ್ಟೆಲ್ ವಾರ್ಡನ್ ಹಾಗೂ ಮಠದ ಮಾಜಿ ಆಡಳಿತಾಧಿಕಾರಿ ಪರಮಶಿವಯ್ಯ ನ್ಯಾಯಾಲಯವನ್ನು ಕೋರಿಕೊಂಡಿದ್ದಾರೆ.

### 'ಕಾನೂನು ಹೋರಾಟ ಮಾಡುತ್ತೇವೆ'

ಚಿತ್ರದುರ್ಗದ ಮುರುಘಾ ಮಠದ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಗೆ ಸರ್ಕಾರ ಆಡಳಿತಾಧಿಕಾರಿಯನ್ನು ನೇಮಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಮುರುಘಾ ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ, 'ಮಠದ ಸಲಹಾ ಸಮಿತಿ ಹಾಗೂ ವಿದ್ಯಾಪೀಠದ ಸದಸ್ಯರ ಸಭೆ ಕರೆದು ಚರ್ಚಿಸಲಾಗುವುದು. ಭಕ್ತರು ಹಾಗೂ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಿ, ಕಾನೂನು ಹೋರಾಟ ಮಾಡುತ್ತೇವೆ' ಎಂದಿದ್ದಾರೆ.

'ಹೈಕೋರ್ಟ್ ನಿರ್ದೇಶನದ ಪ್ರಕಾರ ಮಠ ಹಾಗೂ ವಿದ್ಯಾಪೀಠದ ಪವರ್ ಆಫ್ ಅಟಾರ್ನಿಯನ್ನು ಮುರುಘಾ ಶರಣರು ನೀಡಿದ್ದರು. ಅದರಂತೆ ಶ್ರೀಮಠದ ಕಾರ್ಯ, ಆಡಳಿತವನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತಿದ್ದೆವು. ಈ ನಡುವೆ ಆಡಳಿತಾಧಿಕಾರಿ ನೇಮಕ ಮಾಡಿರುವುದು ಭಕ್ತರಿಗೆ ನೋವುಂಟು ಮಾಡಿದೆ. ಆದೇಶ ಹಿಂಪಡೆಯುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೋರಲಾಗುವುದು' ಎಂದರು.

### ಸರ್ಕಾರದ ಕ್ರಮಕ್ಕೆ ಸ್ವಾಗತ: ಏಕಾಂತಯ್ಯ

'ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಬೇಕು ಎಂಬುದು ವೀರಶೈವ ಲಿಂಗಾಯತ ಸಮಾಜದ ಕೋರಿಕೆಯಾಗಿತ್ತು. ಈ ಸಂಬಂಧ ಎರಡು ಬಾರಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಸರ್ಕಾರ ಕೈಗೊಂಡಿರುವ ಕ್ರಮವನ್ನು ಸ್ವಾಗತಿಸುತ್ತೇವೆ' ಎಂದು ಮಾಜಿ ಸಚಿವ ಎಚ್. ಏಕಾಂತಯ್ಯ ಪ್ರತಿಕ್ರಿಯಿಸಿದ್ದಾರೆ.

# ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರ ತೆರವು: ಮಸೂದೆಗೆ ಅಂಗೀಕಾರ

**ತಿರುವನಂತಪುರ (ಪಿಟಿಐ):** ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರನ್ನು ತೆರವುಗೊಳಿಸಿ, ಅಲ್ಲಿಗೆ ಶಿಕ್ಷಣ ತಜ್ಞರನ್ನು ನೇಮಕಗೊಳಿಸುವ ನಿಟ್ಟಿನಲ್ಲಿ ಕೇರಳ ವಿಧಾನಸಭೆಯು ಮಂಗಳವಾರ ವಿಶ್ವವಿದ್ಯಾಲಯ ಕಾನೂನುಗಳ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿದೆ.

ಮಸೂದೆಗೆ ಸಂಬಂಧಿಸಿ ತನ್ನ ಸಲಹೆಗಳನ್ನು ಸ್ವೀಕರಿಸದ ಕಾರಣ ವಿರೋಧ ಪಕ್ಷ ಯುಡಿಎಫ್ ಸದನವನ್ನು ಬಹಿಷ್ಕರಿಸಿದೆ.

ಸುದೀರ್ಘ ಚರ್ಚೆಯ ಬಳಿಕ ಈ ಮಸೂದೆಯನ್ನು ಅಂಗೀಕರಿಸಲಾಗಿದೆ ಎಂದು ವಿಧಾನಸಭೆಯ ಸ್ಪೀಕರ್ ಎ.ಎನ್. ಶಂಸೀರ್ ತಿಳಿಸಿದ್ದಾರೆ.

'ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರನ್ನು ತೆರವುಗೊಳಿಸುವುದನ್ನು ನಾವು ವಿರೋಧಿಸುವುದಿಲ್ಲ. ಆದರೆ ಆ ಸ್ಥಾನಕ್ಕೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ಅಥವಾ ಕೇರಳ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿಗಳನ್ನು ನೇಮಕಗೊಳಿಸಬೇಕು' ಎಂದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹೇಳಿದೆ.

ಕುಲಾಧಿಪತಿಯನ್ನು ಆಯ್ಕೆ ಮಾಡುವ ಸಮಿತಿಯು ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಮತ್ತು ಕೇರಳ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಗಳನ್ನು ಒಳಗೊಂಡಿರಬೇಕು ಎಂದೂ ಬೇಡಿಕೆ ಮುಂದಿರಿಸಿತ್ತು.

ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಪಿ.ರಾಜೀವ್ 'ನ್ಯಾಯಮೂರ್ತಿಗಳು ನೇಮಕಾತಿ ಸಮಿತಿಯಲ್ಲಿರಬಾರದು. ಅದಕ್ಕಿಂತ ಸ್ಪೀಕರ್ ಇದ್ದರೆ ಉತ್ತಮ. ವಿಶ್ವವಿದ್ಯಾಲಯಗಳ ಚುಕ್ಕಾಣಿ ಹಿಡಿಯಲು ನಿವೃತ್ತ ನ್ಯಾಯಮೂರ್ತಿಗಳು ಏಕೈಕ ಆಯ್ಕೆಯಲ್ಲ' ಎಂದಿದ್ದಾರೆ.

ಈ ವಿಚಾರವಾಗಿ ಸರ್ಕಾರ ಭಿನ್ನ ನಿಲುವು ಪ್ರಕಟಿಸಿರುವುದರಿಂದ ವಿರೋಧಪಕ್ಷವು ಸದನವನ್ನು ಬಹಿಷ್ಕರಿಸಿತು.

'ರಾಜ್ಯ ಸರ್ಕಾರವು ತಮಗೆ ಬೇಕಾದವರನ್ನು ನೇಮಕ ಮಾಡುವ ಮೂಲಕ ವಿಶ್ವವಿದ್ಯಾಲಯಗಳನ್ನು ಕಮ್ಯುನಿಸ್ಟ್ ಕೇಂದ್ರಗಳನ್ನಾಗಿ ಮಾಡಲು ಯತ್ನಿಸುತ್ತಿದೆ' ಎಂದೂ ಆರೋಪಿಸಿದೆ.

## '3,000 ಪಿ.ಜಿ ವೈದ್ಯಕೀಯ ಸೀಟುಗಳು ಖಾಲಿ'

**ನವದೆಹಲಿ (ಪಿಟಿಐ):** 2021–22ನೇ ಸಾಲಿನಲ್ಲಿ ಒಟ್ಟು 60,202 ಸ್ನಾತಕೋತ್ತರ ವೈದ್ಯಕೀಯ ಪದವಿ ಸೀಟುಗಳಿದ್ದು, ಕೌನ್ಸೆಲಿಂಗ್ ಬಳಿಕವೂ 3,744 ಸೀಟುಗಳು ಖಾಲಿ ಉಳಿದಿವೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ರಾಜ್ಯಸಭೆಗೆ ಮಂಗಳವಾರ ತಿಳಿಸಿದರು.

92,065 ವೈದ್ಯಕೀಯ ಪದವಿ ಸೀಟಗಳಿದ್ದು, ಕೌನ್ಸೆಲಿಂಗ್ ಬಳಿಕ 197 ಸೀಟುಗಳು ಬಾಕಿ ಉಳಿದಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ವರದಿಯ ಪ್ರಕಾರ 2022ರಲ್ಲಿ 17,64,571 ಅಭ್ಯರ್ಥಿಗಳು ಹಾಜರಾಗಿದ್ದರು ಎಂದಿದ್ದಾರೆ.

## ಹುತಾತ್ಮರಿಗೆ ನಮನ

ಸಂಸತ್ತಿನ ಮೇಲೆ 2001ರಲ್ಲಿ ನಡೆದ ದಾಳಿಯಲ್ಲಿ ಹುತಾತ್ಮರಾದವರಿಗೆ ಸಂಸತ್ ಸಂಕೀರ್ಣದಲ್ಲಿ ಮಂಗಳವಾರ ನಮನ ಸಲ್ಲಿಸಲಾಯಿತು. ಕಾಂಗ್ರೆಸ್ ಸಂಸದೆ ಸೋನಿಯಾ ಗಾಂಧಿ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಪ್ರಧಾನಿ ನರೇಂದ್ರ ಮೋದಿ ನಮನ ಸಲ್ಲಿಸಿದರು –ಪಿಟಿಐ ಚಿತ್ರ

### ಸಂಸತ್ತಿನಲ್ಲಿ ಪ್ರತಿಧ್ವನಿಸಿದ ಭಾರತ–ಚೀನಾ ಸೇನಾ ಸಂಘರ್ಷ: ವಿರೋಧ ಪಕ್ಷಗಳ ಪ್ರತಿಭಟನೆ

# ಚರ್ಚೆಗೆ ನಕಾರ: ವಿಪಕ್ಷ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಅರುಣಾಚಲ ಪ್ರದೇಶದಲ್ಲಿ ಭಾರತ–ಚೀನಾ ಸೇನಾ ಸಂಘರ್ಷದ ಕುರಿತು ಸಂಸತ್ತಿನಲ್ಲಿ ಭಾರಿ ಕೋಲಾಹಲ ಉಂಟಾಯಿತು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂಘರ್ಷದ ಕುರಿತು ಹೇಳಿಕೆ ನೀಡಿದ ಕೂಡಲೇ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿದವು. ಆದರೆ, ಅದಕ್ಕೆ ಅವಕಾಶ ಕೊಡದ ಕಾರಣ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದವು.

ಕಲಾಪವನ್ನು ಅಮಾನತು ಮಾಡಿ, ಡಿಸೆಂಬರ್ 9ರಂದು ನಡೆದ ಸಂಘರ್ಷದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಆರ್‌ಜೆಡಿ ಮತ್ತು ಎಎಪಿಯ ಹಲವು ಸಂಸದರು ಎರಡೂ ಸದನಗಳಲ್ಲಿ ನೋಟಿಸ್ ನೀಡಿದ್ದರು. ಆದರೆ, ಚರ್ಚೆಗೆ ಸರ್ಕಾರ ಒಪ್ಪಲಿಲ್ಲ. ವಿರೋಧ ಪಕ್ಷಗಳ ಪ್ರತಿಭಟನೆಯಿಂದಾಗಿ ಮೊದಲ ನಾಲ್ಕು ತಾಸಿನ ಕಲಾಪದಲ್ಲಿ ಎರಡೂ ಸದನಗಳಲ್ಲಿ ಕಲಾಪ ಮುಂದೂಡಬೇಕಾಯಿತು.

ಸಂಸತ್ತಿನ ಮೇಲೆ ಉಗ್ರರ ದಾಳಿಯಲ್ಲಿ ಹುತಾತ್ಮರಾದವರಿಗೆ ನಮನ ಸಲ್ಲಿಸಿದ ಬಳಿಕ ವಿರೋಧ ಪಕ್ಷಗಳ ಸಂಸದರು ಸಂಘರ್ಷದ ವಿಚಾರ ಎತ್ತಿದರು. ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿಯೇ ಚರ್ಚೆ ನಡೆಯಬೇಕು ಎಂದು ಪಟ್ಟು ಹಿಡಿದು ಘೋಷಣೆಗಳನ್ನು ಕೂಗಲಾರಂಭಿಸಿದರು.

2020ರ ಏಪ್ರಿಲ್‌ನಲ್ಲಿ ಇದ್ದ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ಭಾರತ ಆಗ್ರಹಿಸಿದ್ದರೂ ಭಾರತದ ಭೂ ಪ್ರದೇಶವನ್ನು ಬಿಟ್ಟುಹೋಗಲು ಚೀನಾ ಒಪ್ಪಿಲ್ಲ. 'ನಮ್ಮ ಭೂಪ್ರದೇಶ-ದೊಳಕ್ಕೆ ಯಾರೂ ಬಂದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2020ರ ಜೂನ್ 20ರಂದು ಹೇಳಿದ್ದನ್ನು ಚೀನಾ ಗುರಾಣಿಯಾಗಿ ಬಳಸುತ್ತಿದೆ ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಭಾರತದ ಯೋಧರ ಶೌರ್ಯವನ್ನು ಖರ್ಗೆ ಅವರು ಕೊಂಡಾಡಿದರು. ಚೀನಾವು ಭಂಡತನದಿಂದ ಭಾರತದೊಳಕ್ಕೆ ಅತಿಕ್ರಮಣ ಮಾಡಿದೆ. ದೆಪ್ಸಾಂಗ್ ಬಯಲಿನ ವೈ ಜಂಕ್ಷನ್ ವರೆಗೆ ಅಪ್ರಚೋದಿತವಾಗಿ ಮತ್ತು ಅಕ್ರಮವಾಗಿ ಚೀನಾ ಬಂದಿದೆ ಮತ್ತು ಇವತ್ತಿನ ವರೆಗೂ ಈ ಪ್ರದೇಶದಿಂದ ಹೊರಗೆ ಹೋಗಿಲ್ಲ ಎಂದು ಖರ್ಗೆ ಹೇಳಿದರು. ಪೂರ್ವ ಲಡಾಖ್‌ನ ಗೋಗ್ರಾ ಮತ್ತು ಹಾಟ್‌ಸ್ಪ್ರಿಂಗ್ಸ್ ಪ್ರದೇಶದಲ್ಲಿಯೂ ಚೀನಾ ಅತಿಕ್ರಮಣ ಮಾಡಿದೆ. ಪ್ಯಾಂಗಾಂಗ್ ಸರೋವರದಲ್ಲಿ ಚೀನಾದ ನಿರ್ಮಾಣ ಕಾಮಗಾರಿಗಳನ್ನು ಮೋದಿ ನೇತೃತ್ವದ ಸರ್ಕಾರವು ನಿರಂತರವಾಗಿ ನಿರ್ಲ-ಕ್ಷಿಸುತ್ತಲೇ ಬಂದಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

'ಈ ಪ್ರದೇಶದಲ್ಲಿ ಹೊಸತೊಂದು ರೇಡಾರ್ ಗುಮ್ಮಟ ಮತ್ತು ಎರಡು ಅತಿ ಹೆಚ್ಚು ಫ್ರೀಕ್ವೆನ್ಸಿಯ ಮೈಕ್ರೋವೇವ್ ಗೋಪುರಗಳನ್ನು ಚೀನಾ ನಿರ್ಮಿಸುತ್ತಿ-ರುವುದು ಹಾಗೂ ಇನ್ನಿತರ ಸ್ಥಳಗಳಲ್ಲಿ ಚೀನಾದ ನಿರ್ಮಾಣ ಕಾಮಗಾರಿ ಕುರಿತು ಸರ್ಕಾರಕ್ಕೆ ಅರಿವೇ ಇಲ್ಲ. ಪ್ಯಾಂಗಾಂಗ್ ಸರೋವರಕ್ಕೆ ಸೇತುವೆ ನಿರ್ಮಿಸಲಾ-ಗುತ್ತಿದ್ದು, ಅದು ಸಾಧ್ಯವಾದರೆ ಚೀನಾ ಸೈನಿಕರ ಓಡಾಟ ಸುಲಭವಾಗಲಿದೆ. ಈ ಬಗ್ಗೆಯೂ ಸರ್ಕಾರಕ್ಕೆ ನಿರ್ಲಕ್ಷ್ಯವೇ ಇದೆ' ಎಂದು ಖರ್ಗೆ ಆರೋಪಿಸಿದ್ದಾರೆ.

ರಾಜನಾಥ್ ಅವರು ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಹೇಳಿಕೆ ನೀಡಬೇಕಿತ್ತು. ಆದರೆ, ಮಧ್ಯಾಹ್ನ 12.30ಕ್ಕೇ ಹೇಳಿಕೆ ನೀಡಲಾಗುವುದು ಎಂದು ಸದನ ನಾಯಕ ಪೀಯೂಷ್ ಗೋಯಲ್ ಅವರು ತಿಳಿಸಿದರು. ಹೇಳಿಕೆಯ ಬಳಿಕ ಚರ್ಚೆಗೆ ಅವಕಾಶ ಇದೆಯೇ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿದವು. ಸರ್ಕಾರದ ಕಡೆಯಿಂದ ಯಾವುದೇ ಭರವಸೆ ದೊರೆಯಲಿಲ್ಲ. ಹೀಗಾಗಿ, ವಿರೋಧ ಪಕ್ಷಗಳು ಪ್ರತಿಭಟನೆಗೆ ಇಳಿದವು. ಸದನವನ್ನು ಮಧ್ಯಾಹ್ನ 12ರವರೆಗೆ ಮುಂದೂಡಲಾಯಿತು.

ರಾಜನಾಥ್ ಅವರು ಹೇಳಿಕೆ ಪೂರ್ಣಗೊಳಿಸಿದ ಕೂಡಲೇ ಖರ್ಗೆ ಅವರು ಚರ್ಚೆಗೆ ಪಟ್ಟು ಹಿಡಿದರು. ಹರಿವಂಶ್ ಅವರು ಪ್ರಶ್ನಾ ವೇಳೆಯನ್ನು ಕೈಗೆತ್ತಿಕೊಂಡಾಗ ಖರ್ಗೆ ಅವರು ಸಭಾತ್ಯಾಗ ಮಾಡುವುದಾಗಿ ಘೋಷಿಸಿದರು.

ಲೋಕಸಭೆಯಲ್ಲಿಯೂ ಇದೇ ಪರಿಸ್ಥಿತಿ ಇತ್ತು. ಸಂಸದರಾದ ಅಧೀರ್ ರಂಜನ್ ಚೌಧರಿ, ಗೌರವ್ ಗೊಗೊಯ್ (ಕಾಂಗ್ರೆಸ್), ಟಿ.ಆರ್. ಬಾಲು (ಡಿಎಂಕೆ) ಮತ್ತು ಅಸಾದುದ್ದೀನ್ ಒವೈಸಿ (ಎಐಎಂಐಎಂ) ಪ್ರಶ್ನಾ ವೇಳೆಯಲ್ಲಿ ವಿಷಯ ಎತ್ತಿದರು. ನಂತರ ನಡೆದ ಪ್ರತಿಭಟನೆಯಿಂದಾಗಿ ಸದನವನ್ನು ಮುಂದೂಡಬೇಕಾಯಿತು.

ಚರ್ಚೆಗೆ ಅವಕಾಶ ಕೊಡಬೇಕು ಎಂದು ಚೌಧರಿ ಒತ್ತಾಯಿಸಿದರೆ, ಪ್ರಧಾನಿ ಹೇಳಿಕೆ ನೀಡಬೇಕು ಎಂದು ಗೊಗೊಯ್ ಆಗ್ರಹಿಸಿದರು.

### ಮುಖ್ಯಾಂಶಗಳು

- ರಕ್ಷಣಾ ಸಚಿವರಿಂದ ವಿವರವಾದ ಹೇಳಿಕೆ
- ಸಂಸದರ ಅವಕಾಶ ಕಸಿದುಕೊಳ್ಳಲಾಗಿದೆ: ಪ್ರಿಯಾಂಕಾ ಚತುರ್ವೇದಿ
- ಕಾಂಗ್ರೆಸ್, ಸಿಪಿಎಂ, ಸಿಪಿಐ, ಶಿವಸೇನಾ, ಆರ್‌ಜೆಡಿ, ಎಸ್‌ಪಿ, ಜೆಎಂಎಂನಿಂದ ಸಭಾತ್ಯಾಗ

### ಆರ್‌ಜಿಎಫ್‌ಗೆ ದೇಣಿಗೆ ಕುರಿತ ಸತ್ಯಾಂಶ ಕೇಳಲಾಗದೆ ಕಾಂಗ್ರೆಸ್ ಗದ್ದಲ: ಶಾ

ಭಾರತ–ಚೀನಾ ಸೇನಾ ಸಂಘರ್ಷದ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಯಬೇಕು ಎಂಬ ಕಾಂಗ್ರೆಸ್‌ನ ಬೇಡಿಕೆಯನ್ನು ಆ ಪಕ್ಷಕ್ಕೆ ತಿರುಗುಬಾಣವಾಗಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಯತ್ನಿಸಿದ್ದಾರೆ. ರಾಜೀವ್ ಗಾಂಧಿ ಪ್ರತಿಷ್ಠಾನಕ್ಕೆ (ಆರ್‌ಜಿಎಫ್) ಚೀನಾದಿಂದ ಬಂದಿದ್ದ ದೇಣಿಗೆಯ ಕುರಿತ ನಿಜಾಂಶವನ್ನು ಕೇಳಲು ಸಿದ್ಧವಿಲ್ಲದ ಕಾಂಗ್ರೆಸ್, ಸಂಸತ್ತಿನಲ್ಲಿ ಗದ್ದಲ ಸೃಷ್ಟಿಸಿದೆ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಸಂಸದರಾದ ಬೆನ್ನಿ ಬೆಹನನ್ ಮತ್ತು ವಿ.ಕೆ. ಶ್ರೀಕಂಠನ್ ಅವರ ಪ್ರಶ್ನೆಗಳಿಗೆ ಲೋಕಸಭೆಯಲ್ಲಿ ಶಾ ಉತ್ತರಿಸಬೇಕಿತ್ತು, ಗದ್ದಲದಿಂದಾಗಿ ಅದು ಸಾಧ್ಯವಾಗಲಿಲ್ಲ.

ಚೀನಾ ರಾಯಭಾರ ಕಚೇರಿಯಿಂದ ₹1.35 ಕೋಟಿ ಮತ್ತು ಈಗ ನಿಷೇಧಿತ ಇಸ್ಲಾಮಿಕ್ ರಿಸರ್ಚ್ ಪ್ರತಿಷ್ಠಾನದ ಸ್ಥಾಪಕ ಜಾಕಿರ್ ನಾಯ್ಕ್‌ನಿಂದ ₹50 ಲಕ್ಷ ದೇಣಿಗೆ ಪಡೆದ ಕಾರಣಕ್ಕಾಗಿ ಆರ್‌ಜಿಎಫ್‌ನ ನೋಂದಣಿಯನ್ನು ರದ್ದುಪಡಿಸಲಾಗಿದೆ ಎಂದು ಶಾ ಹೇಳಿದ್ದಾರೆ.

'ಪ್ರಶ್ನೆ ಪಟ್ಟಿಯನ್ನು ನಾನು ನೋಡಿದೆ. ಕಾಂಗ್ರೆಸ್‌ನ ಆತಂಕ ನನಗೆ ಅರ್ಥವಾಗುತ್ತದೆ. ಸದನ ನಡೆಯಲು ಅವಕಾಶ ಕೊಟ್ಟಿದ್ದರೆ ಪ್ರಶ್ನೆಗಳಿಗೆ ನಾನು ಉತ್ತರ ನೀಡುತ್ತಿದ್ದೆ' ಎಂದರು.

'ಭಾರತ–ಚೀನಾ ನಡುವಣ ಸಂಬಂಧದ ಬಗ್ಗೆ ಅಧ್ಯಯನ ನಡೆಸುವುದಕ್ಕಾಗಿ ಚೀನಾ ರಾಯಭಾರ ಕಚೇರಿಯಿಂದ ಹಣ ಪಡೆಯಲಾಗಿದೆ ಎಂದು ಆರ್‌ಜಿಎಫ್ ಹೇಳಿದೆ. ಈ ಅಧ್ಯಯನದಲ್ಲಿ 1962ರ ಯುದ್ಧದಲ್ಲಿ ಭಾರತದ ಭೂಪ್ರದೇಶವು ಚೀನಾ ಕೈವಶವಾಗಿದ್ದರ ಉಲ್ಲೇಖ ಇದೆಯೇ' ಎಂದು ಶಾ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮುಖ್ಯಸ್ಥರಾಗಿರುವ ಆರ್‌ಜಿಎಫ್ ಮತ್ತು ರಾಜೀವ್ ಗಾಂಧಿ ಚಾರಿಟಬಲ್ ಟ್ರಸ್ಟ್‌ನ ಪರವಾನಗಿಯನ್ನು ಕೇಂದ್ರ ಗೃಹ ಸಚಿವಾಲಯವು ಕಾನೂನು ಉಲ್ಲಂಘನೆಯ ಆರೋಪದಲ್ಲಿ ಅಕ್ಟೋಬರ್‌ನಲ್ಲಿ ರದ್ದುಪಡಿಸಿದೆ.

ಚೀನಾದ ನಿರ್ಲಜ್ಜ ಅತಿಕ್ರಮಣದಿಂದಾಗಿ ರಾಷ್ಟ್ರೀಯ ಭದ್ರತೆ ಮತ್ತು ಭೌಗೋಳಿಕ ಸಮಗ್ರತೆಗೆ ಧಕ್ಕೆ ಉಂಟಾಗಿದ್ದರೂ ಸರ್ಕಾರವು ಮೂಕ ಪ್ರೇಕ್ಷಕನಾಗಿದೆ

**ಮಲ್ಲಿಕಾರ್ಜುನ ಖರ್ಗೆ,** ವಿರೋಧ ಪಕ್ಷದ ನಾಯಕ, ರಾಜ್ಯಸಭೆ

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಧಿಕಾರದಲ್ಲಿರುವವರೆಗೆ ಭಾರತದ ಒಂದು ಇಂಚು ನೆಲವನ್ನೂ ಯಾರೂ ಕಬಳಿಸಲಾಗದು

**ಅಮಿತ್ ಶಾ,** ಕೇಂದ್ರ ಗೃಹ ಸಚಿವ

### ಗಡಿಯಲ್ಲಿ ಸಾಮಾನ್ಯ ಸ್ಥಿತಿ: ಚೀನಾ

**ಬೀಜಿಂಗ್ (ಪಿಟಿಐ):** ಗಡಿಯಲ್ಲಿನ ಸ್ಥಿತಿಯು ಸಾಮಾನ್ಯವಾಗಿ ಸ್ಥಿರವಾಗಿದೆ ಎಂದು ತವಾಂಗ್ ವಲಯದಲ್ಲಿನ ಸೇನಾ ಸಂಘರ್ಷದ ದಿನಗಳ ಬಳಿಕ ಚೀನಾ ಹೇಳಿದೆ.

ಡಿ.9ರಂದು ಚೀನಾದ ಸೈನಿಕರು ತಮ್ಮ ಭಾಗದಲ್ಲಿ ಎಂದಿನಂತೆ ಗಸ್ತು ನಡೆಸುತ್ತಿದ್ದಾಗ ಭಾರತದ ಸೈನಿಕರು ಅವರನ್ನು ತಡೆದಿದ್ದಾರೆ ಎಂದು ಚೀನಾ ಸೇನೆಯ ಪಶ್ಚಿಮ ಕಮಾಂಡ್‌ನ ವಕ್ತಾರ ಲಾಂಗ್ ಶೋಹುವ ಹೇಳಿದ್ದಾರೆ.

ಗಡಿ ಸಂಬಂಧಿ ಸಮಸ್ಯೆಗಳನ್ನು ರಾಜತಾಂತ್ರಿಕ ಮತ್ತು ಸೇನಾ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವುದಕ್ಕಾಗಿ ಎರಡೂ ದೇಶಗಳು ಅತ್ಯುತ್ತಮವಾದ ಸಂವಹನ ವ್ಯವಸ್ಥೆ ಹೊಂದಿವೆ ಎಂದು ಚೀನಾ ವಿದೇಶಾಂಗ ವಕ್ತಾರ ವಾಂಗ್ ವೆನ್‌ಬಿನ್ ಹೇಳಿದ್ದಾರೆ. ಆದರೆ, ಡಿ.9ರ ಸಂಘರ್ಷದ ಯಾವುದೇ ವಿವರವನ್ನು ಅವರು ನೀಡಿಲ್ಲ.

### ಸತ್ಯ ಮುಚ್ಚಿಡುತ್ತಿರುವ ಸರ್ಕಾರ: ಕಾಂಗ್ರೆಸ್

ರಾಜನಾಥ್ ಸಿಂಗ್ ಅವರ ಹೇಳಿಕೆಯು ಅಪೂರ್ಣ, ಸರ್ಕಾರವು ಸತ್ಯವನ್ನು ಮುಚ್ಚಿಡುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ರಾಜೀವ್ ಗಾಂಧಿ ಪ್ರತಿಷ್ಠಾನದ ಎಫ್‌ಸಿಆರ್‌ಎ (ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ) ನೋಂದಣಿಯನ್ನು ರದ್ದುಪಡಿಸುವ ಮೂಲಕ ಜನರ ಗಮನವನ್ನು ಬೇರೆಡೆಗೆ ಸೆಳೆಯುವುದರ ಬದಲು ಸರ್ಕಾರವು ಸತ್ಯವನ್ನು ಹೇಳಬೇಕು ಎಂದು ಕಾಂಗ್ರೆಸ್ ವಕ್ತಾರ ಗೌರವ್ ಗೊಗೊಯ್ ಹೇಳಿದ್ದಾರೆ.

'ಡಿ.9ರಂದೇ ಘಟನೆ ನಡೆದಿದ್ದರೂ ರಾಜನಾಥ್ ಅವರು ತಡವಾಗಿ ಹೇಳಿಕೆ ನೀಡಲು ಕಾರಣವೇನು? ಸಂಸತ್ತಿನಲ್ಲಿ ಸೋಮವಾರವೇ ಹೇಳಿಕೆ ಕೊಡಬಹುದಿತ್ತಲ್ಲವೇ? ಮುಚ್ಚಿಡುತ್ತಿರುವುದು ಏಕೆ? ಜನರಿಂದ ಸತ್ಯವನ್ನು ಮುಚ್ಚಿಡಲು ಈ ಸರ್ಕಾರವು ಯತ್ನಿಸುತ್ತಿದೆ. ಸತ್ಯವನ್ನು ದೇಶದ ಮುಂದೆ ತೆರೆದಿರಿಸಬೇಕು ಎಂಬುದು ನಮ್ಮ ಒತ್ತಾಯ' ಎಂದು ಗೊಗೊಯ್ ಹೇಳಿದ್ದಾರೆ.

## ನದಿ ಜೋಡಣೆ: ಕರ್ನಾಟಕ ತಕರಾರು

ಒಂದನೇ ಪುಟದಿಂದ...

'ಈ ಅನ್ಯಾಯ ಸರಿಪಡಿಸುವಂತೆ ಕೇಂದ್ರ ಸರ್ಕಾರಕ್ಕೆ 2010ರಿಂದಲೂ ಮನವಿ ಮಾಡಲಾಗುತ್ತಿದೆ. ಈ ನಿಲುವನ್ನು ಕರ್ನಾಟಕ ಮುಖ್ಯಮಂತ್ರಿಯವರು ದಕ್ಷಿಣ ರಾಜ್ಯಗಳ ಪರಿಷತ್ತಿನ ಸಭೆಗಳಲ್ಲಿ ಬಲವಾಗಿ ಪ್ರತಿಪಾದಿಸಿದ್ದಾರೆ' ಎಂದು ಅವರು ಹೇಳಿದ್ದಾರೆ.

ಗೋದಾವರಿ ಮತ್ತು ಕೃಷ್ಣಾ ಕಣಿವೆಗಳ ನದ್ಯ ಜಾಲ್ಗಳಲ್ಲಿರುವ ನ್ಯಾಯಮಂಡಳಿ ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಮಹಾನದಿ ಮತ್ತು ಗೋದಾವರಿ ನದಿಗಳ ಹೆಚ್ಚುವರಿ ನೀರಿನ ಹಂಚಿಕೆಯನ್ನು ನಿರ್ಧರಿಸುವುದಾಗಿ ಕೇಂದ್ರ ಸರ್ಕಾರ 2015ರಲ್ಲಿ ಕರ್ನಾಟಕಕ್ಕೆ ತಿಳಿಸಿದೆ. ಇದರ ಹೊರತಾಗಿಯೂ ಗೋದಾವರಿ ಮತ್ತು ಕಾವೇರಿ ನದಿ ಜೋಡಣೆ ಯೋಜನೆಯ ಡಿಪಿಆರ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಗೋದಾವರಿ ಜಲಾನಯನದ ಹೆಚ್ಚುವರಿ ನೀರಿನಿಂದ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತ ನೀರಿನ ಪ್ರಮಾಣವನ್ನು ಹಂಚಿಕೆ ಮಾಡಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಅಲಮಟ್ಟಿ-ಪೆನ್ನಾರ್ ನದಿ ಜೋಡಣೆ ಯೋಜನೆ ಕುರಿತು ಕರ್ನಾಟಕ ಸರ್ಕಾರ ಈಗಾಗಲೇ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಡಿಪಿಆರ್ ಸಿದ್ಧಪಡಿಸುವ ಪ್ರಕ್ರಿಯೆ ಮುಂದುವರಿಸಬಾರದು ಎಂದು ಆಗ್ರಹಿಸಿದರು.

### ಏನಿದು ಯೋಜನೆ?

ಗೋದಾವರಿ–ಕಾವೇರಿ ನದಿ ಜೋಡಣೆ ಸೇರಿದಂತೆ ದೇಶದ ಐದು ನದಿಗಳ ಜೋಡಣೆಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಸರ್ಕಾರದ 2022–23ನೇ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಗೋದಾವರಿ (ಇಂಚಂಪಲ್ಲಿ)– ಕೃಷ್ಣಾ (ನಾಗಾರ್ಜುನ ಸಾಗರ), ಕೃಷ್ಣಾ (ನಾಗಾರ್ಜುನ ಸಾಗರ)– ಪೆನ್ನಾರ್ (ಸೋಮಶಿಲ), ಪೆನ್ನಾರ್ (ಸೋಮಶಿಲ)– ಕಾವೇರಿ ನದಿ ಜೋಡಿಸುವುದು ಈ ಯೋಜನೆಯ ಉದ್ದೇಶ.

ಮಹಾನದಿ, ಬ್ರಹ್ಮಪುತ್ರ ನದಿ ಕಣಿವೆಗಳ ಹೆಚ್ಚುವರಿ ನೀರನ್ನು ಕೃಷ್ಣಾ, ಪೆನ್ನಾರ್ ಹಾಗೂ ಕಾವೇರಿ ಕಣಿವೆಗೆ ಹರಿಸಲು ಯೋಜಿಸಲಾಗಿದೆ. ಸಂಬಂಧಿತ ರಾಜ್ಯಗಳ ಸಲಹೆ ಪಡೆದು ಡಿಪಿಆರ್ ಸಿದ್ಧಪಡಿಸಲಾಗಿದೆ. ಇದನ್ನು 2021ರ ಏಪ್ರಿಲ್‌ನಲ್ಲಿ ಸಂಬಂಧಿತ ರಾಜ್ಯಗಳಿಗೆ ಜಲಶಕ್ತಿ ಸಚಿವಾಲಯ ನೀಡಿದೆ. ಹೆಚ್ಚುವರಿ ನೀರಿನ ಲಭ್ಯತೆ ಬಗ್ಗೆ ಆಯಾ ರಾಜ್ಯಗಳು ತಕರಾರು ಎತ್ತಿವೆ. ಈ ವರ್ಷದ ಏಪ್ರಿಲ್‌ನಲ್ಲಿ ಜಲ ಅಭಿವೃದ್ಧಿ ಸಂಸ್ಥೆಯು ರಾಜ್ಯಗಳ ಜತೆಗೆ ಸಭೆ ನಡೆಸಿ ಯೋಜನೆ ಬಗ್ಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿತು. ಆ ಬಳಿಕ ತಾಂತ್ರಿಕ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲಾಯಿತು. ಅಕ್ಟೋಬರ್ 18ರಂದು ಸಚಿವಾಲಯವು ಸಂಬಂಧಿತ ರಾಜ್ಯಗಳ ಜತೆ ಸಭೆ ನಡೆಸಿ ಯೋಜನೆಗೆ ಸಹಕಾರ ನೀಡುವಂತೆ ಮನವಿ ಮಾಡಿತು.

## ನೀರಾವರಿ ಯೋಜನೆಗಳಿಗೆ ಅನುಮೋದನೆಗೆ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಮಂಗಳವಾರ ಭೇಟಿ ಮಾಡಿ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ ಬಾಕಿ ಇರುವ ಅನುಮೋದನೆಗಳನ್ನು ದೊರಕಿಸಿ ಕೊಡುವಂತೆ ವಿನಂತಿಸಿದರು.

ರಾಜ್ಯದ ಪ್ರಮುಖ ಯೋಜನೆಗಳಾದ ಮಹದಾಯಿ, ಮೇಕೆದಾಟು, ಕೃಷ್ಣಾ ಮೇಲ್ದಂಡೆ ಕುರಿತು ಚರ್ಚಿಸಲಾಯಿತು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಅನುಮೋದನೆ ನೀಡುವಂತೆ ಕೋರಲಾಯಿತು. ಭದ್ರಾ ಮೇಲ್ದಂಡೆ ಯೋಜನೆಯ ಪ್ರಸ್ತಾವನೆ ಅಂತಿಮ ಹಂತದಲ್ಲಿದ್ದು ಈ ಯೋಜನೆಗೆ ಮುಂದಿನ ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆ ದೊರೆಯುವ ವಿಶ್ವಾಸವಿದೆ ಎಂದು ಕಾರಜೋಳ ತಿಳಿಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕೃಷ್ಣಾ ಹಾಗೂ ಮಹದಾಯಿ ಯೋಜನೆಗಳ ಬಗ್ಗೆ ಸಮಾವೇಶ ನಡೆಸಲು ಕಾಂಗ್ರೆಸ್ ಹೊರಟಿದೆ. ಅಧಿಕಾರದಲ್ಲಿದ್ದ ಐದು ವರ್ಷಗಳ ಅವಧಿಯಲ್ಲಿ ಈ ಯೋಜನೆಗಳ ಜಾರಿಗೆ ಇಚ್ಛಾಶಕ್ತಿ ಪ್ರದರ್ಶಿಸಿಲ್ಲ' ಎಂದರು.

## ಒಳ ಮೀಸಲಾತಿಗೆ ಉಪಸಮಿತಿ

ಒಂದನೇ ಪುಟದಿಂದ...

ಈ ಬೆಳವಣಿಗೆ ಮಧ್ಯೆಯೇ, ಉಪ ಸಮಿತಿ ರಚನೆಯಾಗಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ ಆದೇಶ ಹೊರಬಿದ್ದ ಬೆನ್ನಲ್ಲೇ, ಒಳಮೀಸಲಾತಿಯ ಕೂಗು ಪ್ರಬಲವಾಯಿತು. ಹರಿಹರದಲ್ಲಿ-ರುವ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಪ್ರೊ.ಬಿ. ಕೃಷ್ಣಪ್ಪ ಅವರ ಸಮಾಧಿ ಸ್ಥಳದಿಂದ ಪಾದಯಾತ್ರೆ ಹೊರಟಿದ್ದ ಒಳಮೀಸಲಾತಿ ಪರ ಹೋರಾಟಗಾರರು, ಡಿ.11ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಸಿದ್ದರು. ಈಗ ಅನಿರ್ದಿಷ್ಟಾವಧಿ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ.

## ಬಿಹಾರ: ತೇಜಸ್ವಿಗೆ ಉತ್ತರಾಧಿಕಾರ?

**ಪಟ್ನಾ (ಪಿಟಿಐ):** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರನ್ನು ತಮ್ಮ ಉತ್ತರಾಧಿಕಾರಿಯ-ನ್ನಾಗಿಸುವ ಬಗ್ಗೆ ಮತ್ತೊಮ್ಮೆ ಸುಳಿವು ನೀಡಿದ್ದಾರೆ.

ಆಡಳಿತಾರೂಢ ಮಹಾಘಟಬಂ-ಧನದ ಶಾಸಕರ ಸಭೆಯಲ್ಲಿ ಅವರು ಈ ಕುರಿತು ಮಾತನಾಡಿದ್ದಾರೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಶಾಸಕರು ಹೇಳಿದ್ದಾರೆ.

'ತೇಜಸ್ವಿ ಅವರು ಭವಿಷ್ಯದ ನಾಯಕ. 2025ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯನ್ನು ನಾವೆಲ್ಲಾ ಅವರ ನೇತೃತ್ವದಲ್ಲೇ ಎದುರಿಸಬೇಕು ಎಂದು ನಿತೀಶ್ ಸಭೆಯಲ್ಲಿ ತಿಳಿಸಿದರು' ಎಂದು ಸಿಪಿಐ (ಎಂಎಲ್) ಶಾಸಕಾಂಗ ಪಕ್ಷದ ನಾಯಕ ಮಹಬೂಬ್ ಆಲಂ ಹೇಳಿದ್ದಾರೆ.

ನಿತೀಶ್ ಕುಮಾರ್ ಮತ್ತು ತೇಜಸ್ವಿ ಯಾದವ್

'ತೇಜಸ್ವಿ ಹಾಗೂ ಅವರಂತಹ ಯುವಕರ ಕೈಯಲ್ಲಿ ಈ ದೇಶದ ಭವಿಷ್ಯವಿದೆ ಎಂದು ನಿತೀಶ್ ಅವರು ಸೋಮವಾರ ನಳಂದದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಹೇಳಿದ್ದರು. ಮಂಗಳವಾರವೂ ಇದನ್ನೇ ಪುನ-ರುಚ್ಚರಿಸಿದ್ದಾರೆ' ಎಂದು ನಿತೀಶ್ ಅವರ ಆಪ್ತರಾಗಿರುವ ಸಚಿವ ವಿಜಯ್‌ಕುಮಾರ್ ಚೌಧರಿ ಅವರು ತಿಳಿಸಿದ್ದಾರೆ.

'ತಾವು ಪ್ರಧಾನ ಮಂತ್ರಿ ಹುದ್ದೆಯ ಆಕಾಂಕ್ಷಿಯಲ್ಲ ಎಂಬುದನ್ನು ಶಾಸಕರ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾ-ರೆ. ವಿರೋಧ ಪಕ್ಷಗಳೆಲ್ಲಾ ಒಗ್ಗಟ್ಟಾಗಿ ಚುನಾವಣೆ ಎದುರಿಸಿದರೆ 2024ರಲ್ಲಿ ಆಡಳಿತಾರೂಢ ಬಿಜೆಪಿಯನ್ನು ಮಣಿಸಬಹುದು. ಈ ದಿಸೆಯಲ್ಲಿ ತಾವು ಕೆಲಸ ಮಾಡುವುದಾಗಿ ಅವರು ಹೇಳಿದ್ದಾರೆ' ಎಂದೂ ವಿಜಯ್‌ಕುಮಾರ್ ಮಾಹಿತಿ ನೀಡಿದ್ದಾರೆ.

'ಸದ್ಯ ನಾವು ಒಟ್ಟಾಗಿ ಸರ್ಕಾರ ಮುನ್ನಡೆಸುತ್ತಿದ್ದೇವೆ. 2024ರ ಲೋಕಸಭಾ ಚುನಾವಣೆ ನಮ್ಮ ಮುಂದಿರುವ ಗುರಿ' ಎಂದು ತೇಜಸ್ವಿ ಯಾದವ್ ಪ್ರತಿಕ್ರಿಯಿಸಿದ್ದಾರೆ.

'ನಿತೀಶ್ ಅವರು ಯಾರನ್ನಾದರೂ ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಲು ಇಚ್ಛಿಸಿದ್ದೇ ಆದಲ್ಲಿ ಮೊದಲು ಅಧಿಕಾರ ಹಸ್ತಾಂತರಿಸುವ ಮೂಲಕ ಅವರಿಗೆ ನೈತಿಕ ಬೆಂಬಲ ನೀಡಲಿ. ಆದರೆ ನಿತೀಶ್ ಅಂತಹ ದುಸ್ಸಾಹಸಕ್ಕೆ ಕೈಹಾಕುವುದಿಲ್ಲ. ಹಾಗೊಮ್ಮೆ ಅಧಿಕಾರ ಹಸ್ತಾಂತರಿಸಿದರೆ ಜೆಡಿ(ಯು)ನಲ್ಲಿ ಒಡಕು ಮೂಡುತ್ತದೆ' ಎಂದು ಬಿಜೆಪಿ ಶಾಸಕ ನಿತೀನ್ ನಬಿನ್ ಹೇಳಿದ್ದಾರೆ.

## ಗಡಿಯಲ್ಲಿ ಕಣ್ಗಾವಲು ಹೆಚ್ಚಳ

ಒಂದನೇ ಪುಟದಿಂದ...

ರಾಜನಾಥ್ ಅವರು ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್, ಭೂಸೇನಾ ಮುಖ್ಯಸ್ಥ ಮನೋಜ್ ಪಾಂಡೆ ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ಚರ್ಚಿಸಿದ್ದಾರೆ.

2020ರ ಜೂನ್‌ನಲ್ಲಿ ಗಾಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾದ ಸೈನಿಕರ ನಡುವೆ ನಡೆದ ಹಿಂಸಾತ್ಮಕ ಘರ್ಷಣೆಯ ಬಳಿಕ ದ್ವಿಪಕ್ಷೀಯ ಸಂಬಂಧವು ಪಾತಾಳಕ್ಕೆ ಇಳಿದಿದೆ. ಅದರ ಬಳಿಕ, ಗಡಿ ಭಾಗಗಳಲ್ಲಿ ಎರಡೂ ದೇಶಗಳು ಸೈನಿಕರ ಸಂಖ್ಯೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿವೆ. ಯುದ್ಧೋಪಕ-ರಣಗಳನ್ನೂ ಅಲ್ಲಿ ನಿಯೋಜಿಸಿವೆ.

ಕಳೆದ 2 ವರ್ಷಗಳಲ್ಲಿ, ಕಣ್ಗಾವಲಿನಲ್ಲಿ ಗಣನೀಯ ಸುಧಾರಣೆ ಆಗಿದೆ, ನಿಗಾ ವ್ಯ-ವಸ್ಥೆಯನ್ನು ಗಟ್ಟಿಗೊಳಿಸಲಾಗಿದೆ ಎಂದು ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ.

### ಸಂಸದೀಯ ಸ್ಥಾಯಿ ಸಮಿತಿ ಕಳವಳ

ಗೃಹ ಸಚಿವಾಲಯ ಪರಿಶ್ರಮದ ಹೊರತಾಗಿಯೂ ಈ ಪಡೆಗಳಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಕಡಿಮೆಯೇ ಇದೆ– ವರದಿಯಲ್ಲಿ ಉಲ್ಲೇಖ

## 'ಸಶಸ್ತ್ರ ಪಡೆ: ಮಹಿಳೆಯರ ಸಂಖ್ಯೆ ಕಡಿಮೆ'

**ನವದೆಹಲಿ (ಪಿಟಿಐ):** ಸಿಆರ್‌ಪಿಎಫ್, ಬಿಎಸ್‌ಎಫ್ ಸೇರಿದಂತೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ (ಸಿಎಪಿಎಫ್) ಮಹಿಳೆಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ ಎಂದು ಗೃಹ ವ್ಯವಹಾರಗಳ ಕುರಿತ ಸಂಸದೀಯ ಸ್ಥಾಯಿ ಸಮಿತಿ ಕಳವಳ ವ್ಯಕ್ತಪಡಿಸಿದೆ.

ಗಡಿಗಳಲ್ಲಿರುವ ಸೇನಾ ಠಾಣೆಗಳಲ್ಲಿಮಹಿಳೆಯರು ಕೂಡ ಕರ್ತವ್ಯ ನಿರ್ವಹಿಸಲು ಅನುಕೂಲಕರವಾದ ವಾತಾವರಣ ನಿರ್ಮಿಸಬೇಕು ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಬ್ರಿಜಲಾಲ್ ನೇತೃತ್ವದ ಸ್ಥಾಯಿ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ರಾಜ್ಯಸಭೆಯಲ್ಲಿ ಮಂಗಳವಾರ ಈ ವರದಿಯನ್ನು ಮಂಡಿಸಲಾಯಿತು.

ಸಿಐಎಸ್‌ಎಫ್ ಹಾಗೂ ಸಿಆರ್‌ಪಿಎಫ್‌ಗಳಲ್ಲಿ ಮಹಿಳೆಯರ ನೇಮಕಕ್ಕೆ ಹಲವು ಹಂತಗಳಲ್ಲಿ ನೇಮಕಾತಿ ರ‍್ಯಾಲಿಗಳನ್ನು ಆಯೋಜಿಸಬೇಕು, ಈ ಪಡೆಗಳನ್ನು ಸೇರಲು ಮಹಿಳೆಯರು ಹಿಂಜರಿಯುತ್ತಿರುವುದಕ್ಕೆ ಕಾರಣಗಳನ್ನು ಸಚಿವಾಲಯ ಗುರುತಿಸಿ, ಅವುಗಳಿಗೆ ಪರಿಹಾರ ಕಂಡುಕೊಳ್ಳಬೇಕು ಸೇರಿದಂತೆ ಹಲವಾರು ಶಿಫಾರಸುಗಳನ್ನು ಸಮಿತಿ ಮಾಡಿದೆ.

'ಸಿಎಪಿಎಫ್‌ಗಳ ಒಟ್ಟು ಬಲದಲ್ಲಿ ಮಹಿಳೆಯರ ಸಂಖ್ಯೆ ಕೇವಲ ಶೇ 3.68ರಷ್ಟಿದೆ' ಎಂದು ಸಮಿತಿಯು ವಿಷಾದಿಸಿದ್ದು, 'ಈ ಸಶಸ್ತ್ರ ಪಡೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು' ಎಂದಿದೆ.

### ಗಡಿ ವಿವಾದ: ಶಾ ನೇತೃತ್ವದಲ್ಲಿ ಸಭೆ ಇಂದು

**ನವದೆಹಲಿ:** ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಕುರಿತು ಮಾತುಕತೆ ನಡೆಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉಭಯ ರಾಜ್ಯಗಳ ಮುಖ್ಯಮಂ-ತ್ರಿಗಳ ಸಭೆಯನ್ನು ಬುಧವಾರ ಸಂಜೆ 7 ಗಂಟೆಗೆ ಕರೆದಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಸಂಬಂಧಪಟ್ಟ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಲಿದ್ದಾರೆ.

## 'ನೀರಾವರಿ: ಕಷ್ಟ ಹೇಳಿಕೊಂಡ ಪ್ರಧಾನಿ ಮೋದಿ'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕಾವೇರಿ, ಕೃಷ್ಣಾ, ಮಹದಾಯಿ ಹಾಗೂ ಇತರ ನೀರಾವರಿ ಯೋಜನೆಗಳ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವೇಗೌಡ, 'ನೀರಾವರಿ ವಿಷಯದಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ಬಿಜೆಪಿ ಅವಧಿಯಲ್ಲಿ ಈ ಅನ್ಯಾಯ ಮತ್ತಷ್ಟು ಹೆಚ್ಚಾಗಿದೆ. ಈ ವಿಷಯವನ್ನು ಪ್ರಧಾನಿಯವರ ಗಮನಕ್ಕೆ ತಂದೆ. ಈ ವಿಷಯದಲ್ಲಿ ತೀರ್ಮಾನಕ್ಕೆ ಬರುವುದು ತುಂಬಾ ಕಷ್ಟ ಹಾಗೂ ನಮ್ಮವರೇ ನನಗೆ ಸಹಕಾರ ನೀಡುತ್ತಿಲ್ಲ ಎಂದು ಪ್ರಧಾನಿಯವರು ಕಷ್ಟ ಹೇಳಿಕೊಂಡರು. ಎಲ್ಲ ರಾಜ್ಯಗಳು ತಮ್ಮ ಪಾಲನ್ನು ಕೇಳುತ್ತಿವೆ ಎಂದೂ ಹೇಳಿದರು. ಒಂದು ವೇಳೆ, ಈ ಸಮಸ್ಯೆ ಬಗೆಹರಿಸದಿದ್ದರೆ ಸಂಸತ್ ಹಾಗೂ ವಿಧಾನಸಭೆಯಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದೆ' ಎಂದರು.

'ನೀರಾವರಿ ವಿಷಯದಲ್ಲಿ 1962 ರಿಂದಲೂ ಹೋರಾಟ ಮಾಡುತ್ತಿದ್ದೇನೆ. ನನ್ನಅಧಿಕಾರದ ಅವಧಿಯಲ್ಲಿ ರಾಜ್ಯ ಹಿತ ಕಾಪಾಡಿದ್ದೇನೆ. ರಾಜ್ಯದ ಬಾಕಿ ನೀರಾವರಿ ಯೋಜನೆಗಳಿಗೆ ಶೀಘ್ರದಲ್ಲಿ ಅನುಮೋದನೆ ನೀಡಬೇಕು ಎಂದೂ ಪ್ರಧಾನಿ ಅವರಿಗೆ ಮನವಿ ಮಾಡಿದ್ದೇನೆ' ಎಂದರು.

**ಒಬಿಸಿ ಪಟ್ಟಿಗೆ ಕುಂಚಿಟಿಗರು–ಆಗ್ರಹ:** ಕುಂಚಿಟಿಗರನ್ನು ಇತರ ಹಿಂದುಳಿದ ವರ್ಗಗಳ (ಒಬಿಸಿ) ಕೇಂದ್ರ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ಮನವಿ ಸಲ್ಲಿಸಲಾಗಿದೆ ಎಂದರು.

'ಕುಂಚಿಟಿಗರು ರಾಜ್ಯದ 10 ಜಿಲ್ಲೆಗಳಲ್ಲಿ ಇದ್ದಾರೆ. ಕೃಷಿಯನ್ನು ಮುಖ್ಯ ಕಸುಬು ಮಾಡಿಕೊಂಡಿರುವ ಈ ಸಮುದಾಯ ಆರ್ಥಿಕವಾಗಿ ಹಿಂದುಳಿದಿದೆ. ಈ ಸಮುದಾಯವನ್ನು ಒಬಿಸಿ ಪಟ್ಟಿಗೆ ಸೇರಿಸುವಂತೆ ಕರ್ನಾಟಕ ಸರ್ಕಾರ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರ ಈ ಸಂಬಂಧ ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಮಾಜಿ ಪ್ರಧಾನಿಯಾದ ಕಾರಣಕ್ಕೆ ರಾಜ್ಯ ಸರ್ಕಾರ ನನಗೆ ದೊಡ್ಡ ಕಾರು ಕೊಟ್ಟಿದೆ. ದೆಹಲಿಯಲ್ಲಿ ಸಹ ಕಾರು ನೀಡಲಾಗಿದೆ. ಮಂಡಿ ನೋವಿರುವ ಕಾರಣ ಈ ಕಾರನ್ನು ಹತ್ತಲು ಇಳಿಯಲು ಆಗುವುದಿಲ್ಲ. ಹಾಗಾಗಿ, ಅಂಬಾಸಿಡರ್ ಕಾರು ನೀಡುವಂತೆ ಕೇಳಿಕೊಂಡಿದ್ದೇನೆ' ಎಂದರು.

### 'ಹಾಸನ ಅಭಿವೃದ್ಧಿಗೆ ಬಿಎಸ್‌ವೈ ಅಡ್ಡಿ'

ಹಾಸನ ಜಿಲ್ಲೆಯ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಡ್ಡಿ ಮಾಡುತ್ತಿದ್ದಾರೆ' ಎಂದು ದೇವೇಗೌಡ ಆಕ್ರೋಶ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿಯಾಗಿದ್ದ ವೇಳೆ ಎಚ್.ಡಿ.ಕುಮಾರಸ್ವಾಮಿ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದರು. ಬಳಿಕ ಬಂದ ಯಡಿಯೂರಪ್ಪ ಎಲ್ಲ ಅನುದಾನ ಕಿತ್ತುಕೊಂಡರು. ಒಂದು ರೂಪಾಯಿ ಅನುದಾನ ಕೊಡಲಿಲ್ಲ' ಎಂದು ಕಿಡಿಕಾರಿದರು.

ಹಾಸನ ವಿಮಾನ ನಿಲ್ದಾಣ ನಿರ್ಮಾಣ ವಿಷಯದಲ್ಲೂ ರಾಜಕಾರಣ ಮಾಡಲಾಗುತ್ತಿದೆ. ಈ ಸಂಬಂಧ ಪ್ರಧಾನಿ ಅವರಿಗೆ ಮನವಿ ಸಲ್ಲಿಸಿದ್ದೇನೆ. 2007ರ ಮೂಲ ಯೋಜನೆಯ ಪ್ರಕಾರವೇ ವಿಮಾನ ನಿಲ್ದಾಣ ನಿರ್ಮಿಸಬೇಕು ಎಂಬುದು ನನ್ನ ಒತ್ತಾಯ. ಈ ಸಂಬಂಧ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಆಗ್ರಹಿಸಿದರು.

## ಬಿಲ್ಕಿಸ್ ಬಾನು ಅರ್ಜಿ: ಹಿಂದೆಸರಿದ ನ್ಯಾಯಮೂರ್ತಿ

**ನವದೆಹಲಿ (ಪಿಟಿಐ):** ಸಂತ್ರಸ್ತೆ ಬಿಲ್ಕಿಸ್ ಬಾನು ಪ್ರಕರಣದಲ್ಲಿ 11 ಅಪರಾಧಿಗಳನ್ನು ಶಿಕ್ಷೆ ಅವಧಿಗೂ ಮೊದಲೇ ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ಕ್ರಮ ಪ್ರಶ್ನಿಸಿರುವ ಅರ್ಜಿ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಅವರು ಮಂಗಳವಾರ ಹಿಂದೆ ಸರಿದಿದ್ದಾರೆ.

ಈ ಅರ್ಜಿಯು ನ್ಯಾಯಮೂರ್ತಿ-ಗಳಾದ ಅಜಯ್ ರಸ್ತೋಗಿ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ದ್ವಿಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಾಗ, ನ್ಯಾಯಮೂರ್ತಿ ಬೇಲಾ ಅವರು, ಈ ಅರ್ಜಿ ವಿಚಾರಣೆ ನಡೆಸಲು ಇಚ್ಛಿಸುವುದಿಲ್ಲವೆಂದು ಪ್ರಕಟಿಸಿದರು.

'ತಮ್ಮಲ್ಲಿ ಒಬ್ಬರನ್ನು ಹೊರತುಪಡಿಸಿ, ಉಳಿದ ಸದಸ್ಯರ ಪೀಠದ ಮುಂದೆ ಈ ಅರ್ಜಿ ವಿಚಾರಣೆ ನಡೆಯಲಿದೆ' ಎಂದು ಪ್ರಕಟಿಸಿದ ನ್ಯಾ. ಅಜಯ್ ರಸ್ತೋಗಿ ಅವರಿದ್ದ ಪೀಠವು, ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಿ ಆದೇಶ ಹೊರಡಿಸಿತು.

### ಸಂಕ್ಷಿಪ್ತ ಸುದ್ದಿ

## ನವಲಖಾ ಗೃಹಬಂಧನದ ಅವಧಿ ವಿಸ್ತರಣೆ

**ನವದೆಹಲಿ (ಪಿಟಿಐ):** ಎಲ್ಗಾರ್ ಪರಿಷತ್ ಪ್ರಕರಣ ಸಂಬಂಧ ಬಂಧಿಸಲಾಗಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರ ಗೃಹಬಂಧನದ ಅವಧಿಯನ್ನು 2023ರ ಜನವರಿ ಎರಡನೇ ವಾರದವರೆಗೆ ಸುಪ್ರೀಂ ಕೋರ್ಟ್ ಮಂಗಳವಾರ ವಿಸ್ತರಿಸಿದೆ.

ಜಸಲೋಕ್ ಆಸ್ಪತ್ರೆ ನೀಡಿರುವ ನವಲಖಾ ಅವರ ವೈದ್ಯಕೀಯ ವರದಿಯು 'ದೋಷಪೂರಿತ'ವಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ ದೂರಿತು. ನವಲಖಾ ಅವರಿಗೆ ಉತ್ತಮ ರೀತಿಯಲ್ಲಿಯೇ ಚಿಕಿತ್ಸೆ ನೀಡಲಾಗಿದೆ. ಆದ್ದರಿಂದ ಅವರು ಕಾರಾಗೃಹಕ್ಕೆ ಮರಳಬಹುದು ಎಂದು ವಾದಿಸಿತು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು ಗೃಹಬಂಧನದ ಅವಧಿಯನ್ನು ವಿಸ್ತರಿಸಿದೆ.

## 'ರಷ್ಯಾದಿಂದ ಕಚ್ಚಾತೈಲ ಆಮದು: ₹30,000 ಕೋಟಿ ಉಳಿತಾಯ'

**ನವದೆಹಲಿ:** ರಷ್ಯಾದಿಂದ ಕಚ್ಚಾತೈಲವನ್ನು ಆಮದು ಮಾಡಿಕೊಂಡ ಕಾರಣ ಕೇಂದ್ರ ಸರ್ಕಾರ ₹30,000 ಕೋಟಿ ಉಳಿತಾಯ ಮಾಡಿದೆ ಎಂದು ಕರ್ನಾಟಕದ ಹಾವೇರಿ ಕ್ಷೇತ್ರದ ಸಂಸದ ಶಿವಕುಮಾರ ಉದಾಸಿ ತಿಳಿಸಿದರು.

ಲೋಕಸಭೆಯಲ್ಲಿ ಮಾತನಾಡಿದ ಅವರು, 'ರಷ್ಯಾದಿಂದ ತೈಲ ಖರೀದಿಸದಂತೆ ಯುರೋಪಿಯನ್ ಒಕ್ಕೂಟ ಸಲಹೆ ನೀಡಿತ್ತು. ಆದಾಗ್ಯೂ ತೈಲ ಖರೀದಿಸಿದೆವು. ಉಳಿತಾಯದ ಹಣವನ್ನು ದೇಶ ಕಟ್ಟುವ ಕಾರ್ಯಕ್ಕೆ ಮೀಸಲಿಟ್ಟ ಪ್ರಧಾನಿ ಅವರನ್ನು ವಿಪಕ್ಷಗಳು ಬೆಂಬಲಿಸಬೇಕು' ಎಂದರು.

## ಐವರು ಹೈಕೋರ್ಟ್ ನ್ಯಾಯಮೂರ್ತಿಗಳಿಗೆ 'ಸುಪ್ರೀಂ'ಗೆ ಬಡ್ತಿ: ಕೊಲಿಜಿಯಂ ಶಿಫಾರಸು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಬಡ್ತಿ ನೀಡುವುದಕ್ಕಾಗಿ ವಿವಿಧ ಹೈಕೋರ್ಟ್‌ಗಳ ಐವರು ನ್ಯಾ-ಯಮೂರ್ತಿಗಳ ಹೆಸರುಗಳನ್ನು ಕೇಂದ್ರಕ್ಕೆ ಸುಪ್ರೀಂಕೋರ್ಟ್ ಕೊಲಿಜಿಯಂ ಮಂಗಳವಾರ ಶಿಫಾರಸು ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದಲ್ಲಿ ನಡೆದ ಕೊಲಿಜಿಯಂನ ಮೊದಲ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ನ್ಯಾಯಮೂರ್ತಿ ಪಂಕಜ್ ಮಿಥಾಲ್ (ಪ್ರಸ್ತುತ ರಾಜಸ್ಥಾನ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ), ನ್ಯಾಯಮೂರ್ತಿ ಸಂಜಯ್ ಕರೋಲ್ (ಸಿಜೆ, ಪಟ್ನಾ ಹೈಕೋರ್ಟ್), ನ್ಯಾಯಮೂರ್ತಿ ಪಿ.ವಿ.ಸಂಜಯಕುಮಾರ್ (ಸಿಜೆ, ಮಣಿಪುರ ಹೈಕೋರ್ಟ್), ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ (ನ್ಯಾಯಮೂರ್ತಿ ಪಟ್ನಾ ಹೈಕೋರ್ಟ್) ಹಾಗೂ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ.

ಕೊಲಿಜಿಯಂ ಸದಸ್ಯರಾದ ನ್ಯಾಯಮೂರ್ತಿ-ಗಳಾದ ಸಂಜಯಕಿಶನ್ ಕೌಲ್, ಎಸ್.ಅಬ್ದುಲ್ ನಜೀರ್, ಕೆ.ಎಂ. ಜೋಸೆಫ್, ಎಂ.ಆರ್.ಶಾ ಹಾಗೂ ಸಂಜೀವ್ ಖನ್ನಾ ಅವರು ಸಭೆಯಲ್ಲಿ ಇದ್ದರು.

**ಸದಸ್ಯರ ಸಂಖ್ಯೆ 6ಕ್ಕೆ ಏರಿಕೆ:** ಸುಪ್ರೀಂ ಕೋರ್ಟ್ ಕೊಲಿಜಿಯಂ, ಮುಖ್ಯ ನ್ಯಾಯಮೂರ್ತಿ ಹಾಗೂ ನಾಲ್ವರು ಹಿರಿಯ ನ್ಯಾಯಮೂರ್ತಿಗಳನ್ನು ಒಳಗೊಂಡಿರುತ್ತದೆ. ಆದರೆ, ಈಗ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಕೊಲಿಜಿಯಂನ ಭಾಗವಾಗಿರುವುದರಿಂದ ಸದಸ್ಯರ ಸಂಖ್ಯೆ ಆರಕ್ಕೆ ಏರಿದೆ.

ಸದಸ್ಯರಾಗಿರುವ ಉಳಿದ ನಾಲ್ವರು ನ್ಯಾಯಮೂರ್ತಿಗಳ ಪೈಕಿ ಯಾರೂ ಭವಿಷ್ಯದಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಹುದ್ದೆಗೇರುವು-ದಿಲ್ಲ. ಹೀಗಾಗಿ, ಇವರ ಪೈಕಿ ಯಾರೂ ಕೊಲಿಜಿಯಂನ ಮುಖ್ಯಸ್ಥರಾಗುವುದಿಲ್ಲ. ಈ ಕಾರಣಕ್ಕಾಗಿ ನ್ಯಾಯಮೂರ್ತಿ ಖನ್ನಾ ಅವರನ್ನು ಕೊಲಿಜಿಯಂ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಿಜೆಐ ಚಂದ್ರಚೂಡ್ ಅವರು 2024ರ ನವೆಂಬರ್ 11ರಂದು ನಿವೃತ್ತರಾಗುವರು. ನಂತರ, ನ್ಯಾಯಮೂರ್ತಿ ಖನ್ನಾ ಅವರು ಸಿಜೆಐ ಆಗಲಿದ್ದಾರೆ.


**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಕಾರ್ಯಪಾಲಕ ಅಭಿಯಂತರರ ಕಚೇರಿ–3, ಘನ ತ್ಯಾಜ್ಯ ನಿರ್ವಹಣೆ–1, ದಾಸಪ್ಪ ಆಸ್ಪತ್ರೆ ಕಟ್ಟಡ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ–3/ಘತ್ಯಾನಿ/ಟೆಂಡರ್/04/2022–23/2ನೇ ಕರೆ ದಿನಾಂಕ: 13.12.2022

**ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) 2ನೇ ಕರೆ**

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಟೆಂಡರ್)

ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಇವರು ಅರ್ಹ ಬಿಡ್ಡರುದಾರರಿಂದ ಈ ಕೆಳಕಂಡ ಸಾಮಗ್ರಿಗಳು/ಉಪಕರಣಗಳನ್ನು (materials /equipments) ಸರಬರಾಜು ಮಾಡಲು ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

| ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ) | ಇಎಂಡಿ (₹. ಲಕ್ಷಗಳಲ್ಲಿ) |
|---|---|---|
| Supply of Manually Push Operated 815 Nos Sweeping Machines. | 330.07 | 4.95 |

**ಟೆಂಡರ್ ವೇಳಾಪಟ್ಟಿ:** (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **15.12.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **31.12.2022**ರ ಸಂಜೆ **4:00** ಗಂಟೆಯವರೆಗೆ. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **20.12.2022**ರ ಮಧ್ಯಾಹ್ನ **3:00** ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **21.12.2022**ರ ಸಂಜೆ **4:00** ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **02.01.2023**ರಂದು ಸಂಜೆ **4:00** ಗಂಟೆಯ ನಂತರ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ಡರುದಾರರಿಗೆ ತಿಳಿಸಲಾಗುವುದು. (7) ಯಾವುದೇ ತಿದ್ದುಪಡಿ/ಅಡೆಂಡಮ್ಮನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. (8) ಹೆಚ್ಚಿನ ಮಾಹಿತಿ, ನೋಂದಣಿ ಮತ್ತು ಇ–ಪಾವತಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ಗೆ ಭೇಟಿ ನೀಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22441076ಗೆ ಸಂಪರ್ಕಿಸಿರಿ. ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in** ನಲ್ಲಿ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ

ಸುಭಾಷಿತ

ದಯಾಳುವಾಗಿ ಇರಿ, ಆದರೆ ಕೃತಜ್ಞತೆಯನ್ನು ನಿರೀಕ್ಷಿಸದಿರಿ.
-ಕನ್‌ಫ್ಯೂಷಿಯಸ್

# ಪೂಜಾಕಾರ್ಯದ ಹೆಸರು ಬದಲಾವಣೆ ಧ್ರುವೀಕರಣದ ಮತ್ತೊಂದು ಯತ್ನ

**ಟಿಪ್ಪು ಸುಲ್ತಾನ್** ಕಾಲದಿಂದಲೂ ರಾಜ್ಯದ ಕೆಲವು ದೇವಾಲಯಗಳಲ್ಲಿ ನಡೆಯುತ್ತಿರುವ 'ಸಲಾಂ ಆರತಿ' ಸೇರಿದಂತೆ ಕೆಲವು ಪೂಜಾಕಾರ್ಯಗಳ ಹೆಸರುಗಳನ್ನು ಬದಲಾಯಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಕುಚೋದ್ಯದಿಂದ ಕೂಡಿರುವಂಥದ್ದು. ಹಿಂದುತ್ವವಾದಿಗಳನ್ನು ತುಷ್ಟೀಕರಿಸುವ ಹಾಗೂ ಅಲ್ಪಸಂಖ್ಯಾತರ ಮನಸ್ಸಿಗೆ ಗಾಸಿ ಉಂಟುಮಾಡುವ ಕುತ್ಸಿತ ಮನೋಭಾವವು ಇಂತಹ ತೀರ್ಮಾನದ ಹಿಂದೆ ಕೆಲಸ ಮಾಡಿರುವುದು ಸುಸ್ಪಷ್ಟ. ದೇವಾಲಯಗಳಲ್ಲಿ ನಡೆಯುವ ಸಂಪ್ರದಾಯಗಳನ್ನು 'ಸ್ಥಳೀಯ' ಹೆಸರುಗಳಿಂದ ಕರೆಯುವ ಸಲುವಾಗಿ ಈ ಮರುನಾಮಕರಣ ಮಾಡಲಾಗುತ್ತಿದೆ ಎಂಬ ಪ್ರತಿಪಾದನೆಯನ್ನೇನೋ ಸರ್ಕಾರ ಮಾಡಿದೆ. ಆದರೆ, ಅಸಹಿಷ್ಣುತೆಯ ಧ್ವನಿಗೆ ಬಲ ತುಂಬಿ, ಸಮಾಜದ ಧ್ರುವೀಕರಣಕ್ಕೂ ಕಾರಣವಾಗಿ ರಾಜಕೀಯ ಲಾಭವನ್ನು ಪಡೆಯುವುದೇ ಇಲ್ಲಿನ ಮುಖ್ಯ ಗುರಿಯಾಗಿದೆ. ಕೊಲ್ಲೂರು ಮೂಕಾಂಬಿಕಾ ಹಾಗೂ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಾಲಯ ಸೇರಿದಂತೆ ರಾಜ್ಯದ ಕೆಲವು ದೇವಾಲಯಗಳಲ್ಲಿ ಲಾಗಾಯ್ತಿನಿಂದ ಈ ಆಚರಣೆಗಳು ನಡೆಯುತ್ತಿವೆ. ಇನ್ನುಮುಂದೆ 'ಸಲಾಂ ಆರತಿ', 'ಸಲಾಂ ಮಂಗಳಾರತಿ', 'ದೀವಟಿಗೆ ಸಲಾಂ' ಆಚರಣೆಗಳನ್ನು ಕ್ರಮವಾಗಿ 'ಆರತಿ ನಮಸ್ಕಾರ', 'ಮಂಗಳಾರತಿ ನಮಸ್ಕಾರ', 'ದೀವಟಿಗೆ ನಮಸ್ಕಾರ' ಎಂಬ ಹೆಸರುಗಳಿಂದ ಕರೆಯಲು ನಿರ್ಧರಿಸಲಾಗಿದೆ. 'ಹೆಸರು ಬದಲಿಸಬೇಕು ಎಂದು ಭಕ್ತಾದಿಗಳಿಂದ ಒತ್ತಾಯ ಬಂದಿತ್ತು. ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಿ, ಆಗಮ ಪಂಡಿತರ ಅಭಿಪ್ರಾಯದಂತೆ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ. ಹೆಸರುಗಳಷ್ಟೇ ಬದಲಾಗಲಿದ್ದು, ಈ ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ ಮತ್ತು ಪೂಜಾಕಾರ್ಯಗಳು ಯಥಾಪ್ರಕಾರ ಮುಂದುವರಿಯಲಿವೆ ಎಂದೂ ಸಚಿವೆ ಸ್ಪಷ್ಟಪಡಿಸಿದ್ದಾರೆ. ರಾಜ್ಯ ವಿಧಾನಸಭೆ ಚುನಾವಣೆ ಹತ್ತಿರದಲ್ಲಿರುವಾಗ 'ಭಕ್ತ'ರಿಂದ ಹೇಗೆ ಮತ್ತು ಯಾಕೆ ಈ ದಿಢೀರ್ ಆಗ್ರಹ ಕೇಳಿಬಂತು ಎಂಬ ಪ್ರಶ್ನೆಗೆ ಜೊಲ್ಲೆ ಅವರು ಉತ್ತರಿಸುವ ಗೋಜಿಗೆ ಹೋಗಿಲ್ಲ.

'ಸಲಾಂ ಆರತಿ' ಎಂಬ ನುಡಿಗಟ್ಟು ಬಹುತ್ವದ ಸಂಕೇತ. ಕೋಮು ಭಾವನೆಯಿಂದ ಕದಡಿದ ಮನಸ್ಸುಗಳು ಮಾತ್ರ ಇಂತಹ ಆಚರಣೆಗಳಲ್ಲಿ ತಪ್ಪು ಹುಡುಕಲು ಸಾಧ್ಯ

ಟಿಪ್ಪು ಸುಲ್ತಾನನು ದೇವಾಲಯಗಳಿಗೆ ಭೇಟಿ ನೀಡಿ, ಕಾಣಿಕೆ ಅರ್ಪಿಸಿದ ನೆನಪಿಗಾಗಿ 'ಸಲಾಂ ಆರತಿ' ನಡೆಯುತ್ತಾ ಬಂದಿದೆ ಎನ್ನುವುದು ಒಂದು ವಾದ. ಮೈಸೂರು ರಾಜ್ಯದ ಒಳಿತಿಗಾಗಿ ಟಿಪ್ಪುವೇ ದೇವಾಲಯಗಳಲ್ಲಿ ಈ ಆಚರಣೆಗಳನ್ನು ಆರಂಭಿಸಿದ್ದ ಎನ್ನುವುದು ಇನ್ನೊಂದು ವಾದ. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಟಿಪ್ಪು ಜಯಂತಿ ಆಚರಣೆಯನ್ನು ರದ್ದುಗೊಳಿಸಲಾಯಿತು. ನಾಲ್ಕು ದಶಕಗಳಿಂದಲೂ 'ಟಿಪ್ಪು ಎಕ್ಸ್‌ಪ್ರೆಸ್' ಎಂದೇ ಹೆಸರಾಗಿದ್ದ, ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ಸೂಪರ್‌ಫಾಸ್ಟ್ ರೈಲಿಗೆ ಕೆಲ ತಿಂಗಳ ಹಿಂದೆಯಷ್ಟೇ ಕೇಂದ್ರ ಸರ್ಕಾರವು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಿತು. ಮೊನ್ನೆ ಮೊನ್ನೆ ಮೈಸೂರಿನಲ್ಲಿ ನಿರ್ಮಿಸಲಾಗಿದ್ದ ಬಸ್ ತಂಗುದಾಣವೊಂದು ಅದರ ಮೇಲಿನ ಗುಂಬಜ್‌ಗಳಿಂದಾಗಿ ಮಸೀದಿಯಂತೆ ಕಾಣುತ್ತದೆ ಎಂದು ಬಿಜೆಪಿಯ ಸ್ಥಳೀಯ ಸಂಸದ ಆಕ್ಷೇಪಿಸಿದ್ದರಿಂದ, ಆ ತಂಗುದಾಣದ ಮೇಲಿನ ಗುಂಬಜ್‌ಗಳನ್ನು ರಾತ್ರೋರಾತ್ರಿ ತೆರವುಗೊಳಿಸಲಾಯಿತು. ಪೂಜಾಕಾರ್ಯಗಳ ಆಚರಣೆಗಳಿಗೆ ಮರುನಾಮಕರಣ ಮಾಡುತ್ತಿರುವ ವಿದ್ಯಮಾನವನ್ನು ಮೇಲಿನ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಅವಲೋಕಿಸುವುದು ಅಗತ್ಯ.

ಯಾವುದೇ ಆಚರಣೆ ಇಲ್ಲವೆ ಸಂಪ್ರದಾಯದ ಹೆಸರನ್ನು ಬದಲಾಯಿಸಿದ ಮಾತ್ರಕ್ಕೆ ಅದಕ್ಕಿರುವ ಅರ್ಥ ಮತ್ತು ಮಹತ್ವದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಹೆಸರು ಬದಲಾವಣೆಗೆ ನೀಡಿದ ಕಾರಣವೇನೂ ಗಹನವಾದುದಲ್ಲ. 'ಸಲಾಂ' ಪದದ ಸ್ಥಾನವನ್ನು ತುಂಬಿರುವ ಹೊಸ ಪದ 'ಸಲಾಂ'ಗಿಂತಲೂ 'ಸ್ಥಳೀಯ'ವಾದುದು ಎಂದೇನೂ ಅನಿಸುವುದಿಲ್ಲ. ಅಲ್ಲದೆ, ದೇವರ ಪೂಜೆಗೆ ಯಾವ ಭಾಷೆ ಆದರೇನು? ವಾಸ್ತವವಾಗಿ, 'ಸಲಾಂ ಆರತಿ' ಎಂಬ ನುಡಿಗಟ್ಟು ಬಹುತ್ವದ ಸಂಕೇತವಾಗಿದ್ದು, ಈ ನುಡಿಗಟ್ಟನ್ನು ಮತ್ತು ಅದರ ಹಿಂದಿರುವ ಪರಿಕಲ್ಪನೆಯನ್ನು ನಾವು ಸಂಭ್ರಮಿಸಬೇಕು. ದೇವಾಲಯದ ಕೆಲವು ಆಚರಣೆಗಳಿಗೆ ಮುಸ್ಲಿಂ ದೊರೆಯೊಬ್ಬ ಕಾರಣವಾಗಿದ್ದು ಕೂಡ ಹೆಮ್ಮೆಪಡಬೇಕಾದ ಸಂಗತಿಯೇ ಸರಿ. ಹಲವು ಪೀಳಿಗೆಗಳಿಂದ ಈ ಆಚರಣೆಗಳು ಉಳಿದುಕೊಂಡು ಬಂದಿರುವುದು ಸಮಾಜ ಅವುಗಳನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡಿರುವುದರ ಸಂಕೇತ. ಅಲ್ಲದೆ, ಈ ಆಚರಣೆಗಳು ಸಮುದಾಯಗಳ ನಡುವಿನ ಗಟ್ಟಿ ಸಂಬಂಧದ ಪ್ರತೀಕಗಳೂ ಹೌದು. ಕೋಮು ಭಾವನೆಯಿಂದ ಕದಡಿದ ಮನಸ್ಸುಗಳು ಮಾತ್ರ ಇಂತಹ ಆಚರಣೆಗಳಲ್ಲಿ ತಪ್ಪು ಹುಡುಕಲು ಸಾಧ್ಯ. ಚಾರಿತ್ರಿಕ ಪುರುಷನೊಬ್ಬ ನಿರ್ದಿಷ್ಟ ಸಮುದಾಯಕ್ಕೆ ಸೇರಿದವನು ಎಂಬ ಕಾರಣಕ್ಕಾಗಿ ಅಥವಾ ಪ್ರಸ್ತುತ ಅಧಿಕಾರದಲ್ಲಿರುವ ಪಕ್ಷದ ರಾಜಕೀಯ ನಿರೂಪಣೆಗೆ ವಾಸ್ತವಾಂಶಗಳು ಸರಿಹೊಂದುವುದಿಲ್ಲ ಎಂಬ ಕಾರಣಕ್ಕಾಗಿ ಇತಿಹಾಸವನ್ನು ತಿರುಚುವುದು, ಅಳಿಸಿ ಹಾಕುವುದು ಇಲ್ಲವೆ ಮೂಗಿನ ನೇರಕ್ಕೆ ಮರುಸೃಷ್ಟಿಸುವುದು ದೊಡ್ಡ ತಪ್ಪಾಗುತ್ತದೆ.

## ದಿನದ ಟ್ವೀಟ್

### ಸಚಿವರ ಉತ್ತರ ಏಕೆ?

**ಮೋದಿ ಅವರು ಮುಖ್ಯಮಂತ್ರಿ ಆದಾಗಿನಿಂದ ಹಾಗೂ ನಂತರ ಪ್ರಧಾನಿ ಆದಾಗಿನಿಂದ ಚೀನೀಯರ ಜೊತೆ ಆತ್ಮೀಯ ಸಂಬಂಧ ಹೊಂದಿರುವಾಗ ಸಂಸತ್ತಿನಲ್ಲಿ ಸಚಿವರು ಏಕೆ ಉತ್ತರ ಕೊಡಬೇಕು?**

**ಸುಬ್ರಮಣಿಯನ್ ಸ್ವಾಮಿ,** ಬಿಜೆಪಿ ಮುಖಂಡ

## ಕಿಡಿನುಡಿ

**ಜವಾಹರಲಾಲ್ ನೆಹರೂ ಅವರ ಆಡಳಿತಾವಧಿಯ ಭಾರತದಲ್ಲಿ, 1962ರ ಭಾರತ- ಚೀನಾ ಸಂಘರ್ಷದ ವೇಳೆ 165 ಸಂಸದರು ಸಂಸತ್ತಿನಲ್ಲಿ ಮಾತನಾಡಿದ್ದರು ಮತ್ತು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಪೂರ್ಣ ಸಮಯಾವಕಾಶ ನೀಡಲಾಗಿತ್ತು. ಆದರೆ ಇಂದು ನಮಗೆ ಸಿಗುವುದು ರಕ್ಷಣಾ ಸಚಿವರ ನೀರಸವಾದ ಹೇಳಿಕೆ ಮಾತ್ರ. ಸೈನಿಕರು ತಮ್ಮ ಪ್ರಾಣವನ್ನೇ ಪಣಕ್ಕೆ ಇಡುತ್ತಿರುವಾಗ, ತವಾಂಗ್ ಸಂಘರ್ಷದ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯುವುದಿಲ್ಲವೇಕೆ?**

**ಸಾಗರಿಕಾ ಘೋಷ್,** ಪತ್ರಕರ್ತೆ

## 25 ವರ್ಷಗಳ ಹಿಂದೆ

ಭಾನುವಾರ, 14-12-1997

**• ರಂಗದ ಎಲ್ಲ ಪಕ್ಷಕ್ಕೂ ಒಂದೇ ಪ್ರಣಾಳಿಕೆ**

**ಅಗರ್ತಲ, ಡಿ. 13 (ಯುಎನ್‌ಐ)–** ಸಂಯುಕ್ತರಂಗದ ಎಲ್ಲ ಘಟಕ ಪಕ್ಷಗಳು ಈ ಬಾರಿ ಜಾತ್ಯತೀತ ಹಾಗೂ ಭ್ರಷ್ಟಾಚಾರ ನಿರ್ಮೂಲನದ ತತ್ವಗಳೊಂದಿಗೆ ಒಂದೇ ಪ್ರಣಾಳಿಕೆಯಡಿ ಚುನಾವಣೆ ಎದುರಿಸಲಿವೆ.

ಇಂದು ಈ ವಿಷಯ ತಿಳಿಸಿದ ಸಿಪಿಎಂನ ಪ್ರಧಾನ ಕಾರ್ಯದರ್ಶಿ ಹರ್‌ಕಿಷನ್ ಸಿಂಗ್ ಸುರ್ಜಿತ್ ಅವರು, ಬಹುಭಾಷೆ, ಬಹುಜಾತಿಗಳಿಂದ ತುಂಬಿರುವ ಭಾರತದಲ್ಲಿ ಜಾತ್ಯತೀತ ದೃಷ್ಟಿಯೊಂದೇ ಭದ್ರತೆ ನೀಡಲು ಸಾಧ್ಯ, ಇದು ಸಂಯುಕ್ತ ರಂಗದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಮುಂಬೈನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೂ ಇದೇ ವಿಷಯವನ್ನು ತಿಳಿಸಿ, ರಂಗದ ಎಲ್ಲ 14 ಪಕ್ಷಗಳೂ ಸೇರಿ ಸಾಮಾನ್ಯ ಪ್ರಣಾಳಿಕೆ ಸಿದ್ಧಪಡಿಸುತ್ತವೆ ಎಂದರು.

**• ಮಂಡ್ಯ ಬಳಿ ಬಸ್ಸುಗಳ ಡಿಕ್ಕಿ: 9 ಜನರ ಸಾವು**

**ಮಂಡ್ಯ, ಡಿ. 13–** ಮಂಡ್ಯ– ಬನ್ನೂರು ರಸ್ತೆಯಲ್ಲಿ, ಇಲ್ಲಿಂದ 5 ಕಿ.ಮೀ ದೂರದ ಬೇವಿನಹಳ್ಳಿ ಬಳಿ ಇಂದು ಬೆಳಿಗ್ಗೆ 11 ಗಂಟೆ ವೇಳೆಗೆ ಎರಡು ಖಾಸಗಿ ಬಸ್ಸುಗಳು ಮುಖಾಮುಖಿ ಡಿಕ್ಕಿಯಾಗಿ ಸಂಭವಿಸಿದ ಅಪಘಾತದಲ್ಲಿ 9 ಜನರು ಸತ್ತು, 64 ಜನರು ಗಾಯಗೊಂಡಿದ್ದಾರೆ.

ಮೈಸೂರಿನಿಂದ ಮಂಡ್ಯಕ್ಕೆ ಬರುತ್ತಿದ್ದ 'ಎಟಿಎಸ್' ಬಸ್ಸು ಮತ್ತು ಮಂಡ್ಯದಿಂದ ಬನ್ನೂರಿಗೆ ಹೋಗುತ್ತಿದ್ದ 'ಟಿ.ಟಿ.ಎಸ್' ಬಸ್ಸು ಒಂದಕ್ಕೊಂದು ಡಿಕ್ಕಿಯಾಗಿವೆ.

## 50 ವರ್ಷಗಳ ಹಿಂದೆ

ಗುರುವಾರ, 14-12-1972

**• ನಗರ ವಿ.ವಿ. ಉಪಕುಲಪತಿ ಆಗಿ ಡಾ. ನರಸಿಂಹಯ್ಯ**

**ಬೆಂಗಳೂರು, ಡಿ. 13–** ಬೆಂಗಳೂರು ವಿಶ್ವವಿದ್ಯಾಲಯದ ನೂತನ ಉಪಕುಲಪತಿಯಾಗಿ ನಗರದ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ನರಸಿಂಹಯ್ಯ ಅವರು ನೇಮಕಗೊಂಡಿದ್ದಾರೆ.

ಡಿ. 14ರಿಂದ ಮೂರು ವರ್ಷಗಳ ಅವಧಿಗೆ ಅವರನ್ನು ಉಪಕುಲಪತಿಯಾಗಿ ನೇಮಿಸಲು ರಾಜ್ಯಪಾಲ ಹಾಗೂ ಕುಲಪತಿ ಅವರು ಇಂದು ಆಜ್ಞೆ ಹೊರಡಿಸಿದ್ದಾರೆ. ನಿವೃತ್ತರಾದ ಶ್ರೀ ಟಿ.ಕೆ. ತುಕೋಳ್ ಅವರ ಸ್ಥಾನಕ್ಕೆ ಈ ನೇಮಕ ಮಾಡಲಾಗಿದೆ.

ಗೌರಿಬಿದನೂರು ತಾಲ್ಲೂಕು ಹೊಸೂರಿನ ಬಡ ಕುಟುಂಬವೊಂದರಲ್ಲಿ 1920ರಲ್ಲಿ ಜನಿಸಿದ ಡಾ. ನರಸಿಂಹಯ್ಯ ಮಾಧ್ಯಮಿಕ ಶಿಕ್ಷಣವನ್ನು ಹೊಸೂರಿನಲ್ಲಿ ಪಡೆದರು.

**• ಆಕ್ರಮಿತ ಪಾಕಿಸ್ತಾನ ಪ್ರದೇಶದಿಂದ ಸೇನೆ ವಾಪಸಾತಿ ಆರಂಭ**

**ನವದೆಹಲಿ, ಡಿ. 13 –** ಡಿಸೆಂಬರ್ ಯುದ್ಧ ಕಾಲದಲ್ಲಿ ಕೆಲವು ಕ್ಷೇತ್ರಗಳಲ್ಲಿ ಭಾರತ ಆಕ್ರಮಿಸಿದ್ದ ಪಾಕಿಸ್ತಾನದ ಪ್ರದೇಶಗಳಿಂದ ಭಾರತೀಯ ಸೇನೆ ವಾಪಸಾತಿ ಕಾರ್ಯವು ಆರಂಭವಾಗಿದೆ.

ಇತರ ಕ್ಷೇತ್ರಗಳಲ್ಲಿ ಸೈನ್ಯ ವಾಪಸಾತಿ ಬಗ್ಗೆ ಸಿದ್ಧತಾ ಕಾರ್ಯ ಸಹ ಆರಂಭವಾಗಿದೆ ಎಂದೂ ಅಧಿಕೃತ ಮೂಲಗಳು ಹೇಳಿವೆ.

ಯಾವ ಕ್ಷೇತ್ರಗಳಲ್ಲಿ ಸೇನೆ ವಾಪಸ್ ಕಾರ್ಯ ಆರಂಭವಾಗಿದೆ ಎಂಬುದನ್ನು ವಕ್ತಾರರು ಹೆಸರಿಸಲಿಲ್ಲ. ಬಾರ್ಮೇರ್ ಕ್ಷೇತ್ರದಲ್ಲಿಯೇ ಈ ಕಾರ್ಯ ಆರಂಭವಾಗಿರುವುದು ಎಂದು ನಂಬಲಾಗಿದೆ.

ಈ ಜಾಗತಿಕ ನಿಧಿ ಸ್ಥಾಪನೆಗೆ ಸಿಕ್ಕಿರುವ ಬಹುರಾಷ್ಟ್ರಗಳ ಒಪ್ಪಿಗೆಯು ಮಹತ್ವದ ಬೆಳವಣಿಗೆ

# ನಷ್ಟ ಪರಿಹಾರ ನಿಧಿ: ಬೇಕಿದೆ ಬದ್ಧತೆ

ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

**ಈಜಿಪ್ಟ್‌ನಲ್ಲಿ** ಹಿಂದಿನ ತಿಂಗಳು ನಡೆದ ವಿಶ್ವಸಂಸ್ಥೆಯ ವಾಯುಗುಣ ಬದಲಾವಣೆ ಶೃಂಗಸಭೆಯ ಅತಿ ಮಹತ್ವದ ಸಾಧನೆಯೆಂದರೆ, 'ನಷ್ಟ ಮತ್ತು ಹಾನಿ ಪರಿಹಾರ ನಿಧಿ'ಯ ಸ್ಥಾಪನೆಗೆ 197 ಸದಸ್ಯ ರಾಷ್ಟ್ರಗಳು ನೀಡಿದ ಒಪ್ಪಿಗೆ ಎಂಬುದು ಎಲ್ಲ ಅಭಿವೃದ್ಧಿಶೀಲ ದೇಶಗಳ ಒಮ್ಮತದ ಅಭಿಪ್ರಾಯ. ವಾಯುಗುಣ ಬದಲಾವಣೆಯ ನೇರ ಪರಿಣಾಮವಾಗಿ ಹೆಚ್ಚುತ್ತಿರುವ ನೈಸರ್ಗಿಕ ವಿಕೋಪಗಳಿಂದ, ಬಹುಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಸಂಭವಿಸುತ್ತಿರುವ ತೀವ್ರ ಹಾನಿ ಮತ್ತು ನಷ್ಟವನ್ನು ಭರಿಸುವಂತಹ ಜಾಗತಿಕ ನಿಧಿಯೊಂದನ್ನು ಸ್ಥಾಪಿಸಬೇಕೆಂಬುದು ಬಹುತೇಕ ದೇಶಗಳ ಹಲವಾರು ವರ್ಷಗಳ ಬೇಡಿಕೆಯಾಗಿತ್ತು. ಆದರೆ ಐತಿಹಾಸಿಕವಾಗಿ ವರ್ಷ ವರ್ಷವೂ ಅತ್ಯಧಿಕ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳನ್ನು ಉತ್ಸರ್ಜಿಸಿ, ಇಂದಿನ ವಿಷಮ ಪರಿಸ್ಥಿತಿಗೆ ಕಾರಣವಾಗಿರುವ ಶ್ರೀಮಂತ ದೇಶಗಳು ಈ ಬೇಡಿಕೆಗೆ ಅಡ್ಡಗಾಲು ಹಾಕುತ್ತಲೇ ಬಂದಿದ್ದವು. ಈ ನೆಲೆಯಲ್ಲಿ ಪರಿಹಾರ ನಿಧಿಯ ಸ್ಥಾಪನೆಗೆ ದೊರೆತಿರುವ ಒಪ್ಪಿಗೆ ಒಂದು ಮಹತ್ವದ ಬೆಳವಣಿಗೆ.

ಆದರೆ ಈ ಪರಿಹಾರ ನಿಧಿಯ ಸ್ಥಾಪನೆ ದೀರ್ಘವಾದ ಪ್ರಕ್ರಿಯೆ. ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ, 24 ದೇಶಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯೊಂದು ರೂಪುಗೊಳ್ಳಲಿದೆ. ಪರಿಹಾರ ನಿಧಿಯ ರೂಪುರೇಷೆ ಹೇಗಿರಬೇಕು, ಯಾವ ದೇಶ ಎಷ್ಟು ಹಣವನ್ನು ಈ ನಿಧಿಗೆ ನೀಡಬೇಕು, ಹೀಗೆ ಸಂಗ್ರಹವಾದ ಹಣವನ್ನು, ನೈಸರ್ಗಿಕ ವಿಕೋಪಗಳಿಗೆ ತುತ್ತಾದ ದೇಶಗಳಿಗೆ ಯಾವ ಪ್ರಮಾಣದಲ್ಲಿ ಹೇಗೆ ವಿತರಿಸಬೇಕು ಎಂಬಂತಹ ವಿವರಗಳನ್ನು ಚರ್ಚಿಸಿ, ಸೂಕ್ತವಾದ ಶಿಫಾರಸುಗಳನ್ನು ಈ ಸಮಿತಿ ಮಾಡಲಿದೆ. 2023ರಲ್ಲಿ ದುಬೈನಲ್ಲಿ ನಡೆಯಲಿರುವ ವಾಯುಗುಣ ಶೃಂಗಸಭೆಯಲ್ಲಿ (ಸಿಒಪಿ 28) ಈ ಶಿಫಾರಸುಗಳ ಪರಿಶೀಲನೆ ನಡೆಯಲಿದೆ.

ಈ ಪರಿಹಾರ ನಿಧಿಯ ಪರಿಕಲ್ಪನೆ ಸ್ವಾಗತಾರ್ಹವಾದರೂ ವಿವಿಧ ದೇಶಗಳ ಕೊಡುಗೆ ಸುಲಭವಾಗಿ ಬರುವುದಿಲ್ಲವೆಂಬ ಸೂಚನೆಗಳು ಈಗಾಗಲೇ ದೊರೆತಿವೆ. ಈ ನಿಧಿಗೆ ನೀಡುವ ದೇಣಿಗೆ ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿರಬೇಕು. ಅಲ್ಲಿ ಒತ್ತಾಯ ಇರಬಾರದು. ಈ ರೀತಿಯ ಕೊಡುಗೆ ಶ್ರೀಮಂತ ದೇಶಗಳಿಗೆ ಮಾತ್ರ ಸೀಮಿತವಾಗದೆ ಎಲ್ಲ ದೇಶಗಳಿಗೂ ಅನ್ವಯವಾಗಬೇಕೆಂಬ ಅಂಶವನ್ನು ಶ್ರೀಮಂತ ದೇಶಗಳು ಈಗಾಗಲೇ ಸ್ಪಷ್ಟಪಡಿಸಿವೆ. ಜಾಗತಿಕ ಮಟ್ಟದಲ್ಲಿ ಈ ರೀತಿಯ ನಿಧಿ ಸ್ಥಾಪನೆಯ ಪ್ರಯತ್ನಗಳು ಈ ಹಿಂದೆಯೂ ನಡೆದಿವೆ. ಉದಾಹರಣೆಗೆ, 2001ರಲ್ಲಿ, ಅತಿ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಬೆಂಬಲ ನೀಡುವ ಕ್ಲೈಮೇಟ್ ಫಂಡ್, ಸ್ಪೆಷಲ್ ಕ್ಲೈಮೇಟ್ ಚೇಂಜ್ ಫಂಡ್ ಮತ್ತು ಅಡಾಪ್ಟೇಶನ್ ಫಂಡ್ ಎಂಬ ಮೂರು ನಿಧಿಗಳನ್ನು ವಿಶ್ವಸಂಸ್ಥೆ ಸ್ಥಾಪಿಸಿತು. ಆದರೆ ಈ ಯಾವ ನಿಧಿಗೂ ನಿರೀಕ್ಷಿತ ಪ್ರಮಾಣದಲ್ಲಿ ಹಣ ಹರಿದುಬರಲಿಲ್ಲ. 2009ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದ 15ನೆಯ ವಾಯುಗುಣ ಬದಲಾವಣೆಯ ಶೃಂಗಸಭೆಯಲ್ಲಿ (ಸಿಒಪಿ 15), 2020ರ ವೇಳೆಗೆ ಪ್ರತಿವರ್ಷವೂ 10,000 ಕೋಟಿ ಡಾಲರ್‌ಗಳಷ್ಟು ವಾಯುಗುಣ ನಿಧಿಯನ್ನು, 43 ಕೈಗಾರಿಕೀಕೃತ, ಶ್ರೀಮಂತ ದೇಶಗಳಿಂದ ಸಂಗ್ರಹಿಸುವ ನಿರ್ಧಾರ ಕೈಗೊಳ್ಳಲಾಯಿತು. ಆದರೆ ಇಂದಿಗೂ ಈ ಗುರಿಯನ್ನು ಮುಟ್ಟಲಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹೊಸದೊಂದು ನಿಧಿಗೆ ಹಣ ಎಲ್ಲಿಂದ ಬರಲಿದೆಯೆಂಬ ಪ್ರಶ್ನೆಗೆ ಖಚಿತ ಉತ್ತರ ದೊರೆತಿಲ್ಲ.

ವಾಯುಗುಣ ಬದಲಾವಣೆ ಸಮಸ್ಯೆಗಳ ನಿರ್ವಹಣೆಗೆ ಈಗಾಗಲೇ ವಿವಿಧ ನಿಧಿಗಳಲ್ಲಿರುವ ಹಣವನ್ನು ಮರು ವಿತರಣೆ ಮಾಡಿ ನಷ್ಟ ಮತ್ತು ಹಾನಿ ಪರಿಹಾರಕ್ಕೆ ಬಳಸಬಹುದೆಂಬ ಯೋಚನೆಯೂ ಇದೆ. ಇಂಡೊನೇಷ್ಯಾದಲ್ಲಿರುವ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಲ್ಲಿ ಕಲ್ಲಿದ್ದಲ ಬಳಕೆಯನ್ನು 2030ರ ಹೊತ್ತಿಗೆ ಸಂಪೂರ್ಣವಾಗಿ ನಿಲ್ಲಿಸಲು, ಅಮೆರಿಕ ಮತ್ತು ಜಪಾನ್ 2,000 ಕೋಟಿ ಡಾಲರ್‌ಗಳ ಆರ್ಥಿಕ ನೆರವನ್ನು ಘೋಷಿಸಿವೆ. ಈ ರೀತಿಯ ಎಲ್ಲ ನೆರವನ್ನೂ ಮುಂದೆ ನಷ್ಟ ಮತ್ತು ಹಾನಿ ಪರಿಹಾರ ನಿಧಿಯಡಿಯಲ್ಲಿ ನೀಡುವ ಚಿಂತನೆಯೂ ನಡೆದಿದೆ. ಪರಿಹಾರ ನಿಧಿಗೆ ಸಂಬಂಧಪಟ್ಟ ಒಪ್ಪಂದದ ಪತ್ರವನ್ನು ಪರಿಶೀಲಿಸಿರುವ ಪರಿಣತರು 'ಈಗಿರುವ ನೆರವಿನ ವ್ಯವಸ್ಥೆಗೆ ಮತ್ತಷ್ಟು ಹಣ ಸೇರಿಸಿ, ಕೊರತೆಯನ್ನು ತುಂಬಿ, ಎಲ್ಲ ನೆರವನ್ನೂ ಪರಿಹಾರ ನಿಧಿಯಡಿಯಲ್ಲಿ ತರುವ ಯೋಚನೆಗೇ ಹೆಚ್ಚಿನ ಒಲವನ್ನು ಅಭಿವೃದ್ಧಿ ಹೊಂದಿದ ದೇಶಗಳು ತೋರಲಿವೆ' ಎಂದಿದ್ದಾರೆ. ಈ 20 ವರ್ಷಗಳಲ್ಲಿ ವಾಯುಗುಣ ಬದಲಾವಣೆ ಸಮಸ್ಯೆಗಳ ನಿರ್ವಹಣೆಗೆ ವಿಶ್ವಸಂಸ್ಥೆಯ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ವಿವಿಧ ನಿಧಿಗಳ ಕೆಲಸ ಕಾರ್ಯಗಳನ್ನು ಪರಿಶೀಲಿಸುತ್ತ ಬಂದಿರುವ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧಕ ಬೆನಿಟೋ ಮ್ಯುಲರ್, ಈ ಪ್ರಸ್ತಾವಿತ ಪರಿಹಾರ ನಿಧಿಯನ್ನು ಕೇವಲ 'ನೆಪಮಾತ್ರದ ನಿಧಿ', ಅಭಿವೃದ್ಧಿ ದೇಶಗಳು ನಿಧಿಗೆ ನೀಡುವ ಕೊಡುಗೆಯ ಬಗ್ಗೆ ಯಾವ ಬದ್ಧತೆಯನ್ನೂ ವ್ಯಕ್ತಪಡಿಸಿಲ್ಲ ಎನ್ನುತ್ತಾರೆ.

ಹಿಂದಿನ ತಿಂಗಳು ವಾಯುಗುಣ ಶೃಂಗಸಭೆ ನಡೆಯುತ್ತಿದ್ದ ಸಮಯದಲ್ಲೇ ವಿಶ್ವಸಂಸ್ಥೆಯ 16 ಸಣ್ಣ ದ್ವೀಪ ದೇಶಗಳ ಒಕ್ಕೂಟವು ವನ್ವಾಟು ಗಣರಾಜ್ಯದ ನಾಯಕತ್ವದಲ್ಲಿ ವಿನೂತನ ಕಾರ್ಯತಂತ್ರವೊಂದಕ್ಕೆ ಅಂತಿಮ ಸ್ಪರ್ಶ ನೀಡಿದೆ. ವನ್ವಾಟು, ಆಸ್ಟ್ರೇಲಿಯಾದ ಪೂರ್ವಕ್ಕೆ 1,800 ಕಿ.ಮೀ.ಗಳ ದೂರದಲ್ಲಿರುವ,

3 ಲಕ್ಷ ಜನಸಂಖ್ಯೆಯ, 50 ಸಣ್ಣ ಸಣ್ಣ ದ್ವೀಪಗಳಿಂದಾದ ದೇಶ. ವನ್ವಾಟುವಿನಂತಹ ಸುಮಾರು 40 ದೇಶಗಳಿವೆ. ಇವುಗಳ ಒಟ್ಟು ವಾರ್ಷಿಕ ಹಸಿರುಮನೆ ಅನಿಲದ ಉತ್ಸರ್ಜನೆಯ ಪ್ರಮಾಣವು ಇಡೀ ಪ್ರಪಂಚದ ಒಟ್ಟು ಉತ್ಸರ್ಜನೆಯ ಶೇ 1ಕ್ಕಿಂತ ಕಡಿಮೆ. ಹೀಗಾಗಿ ವಾಯುಗುಣ ಬದಲಾವಣೆ ತರುತ್ತಿರುವ ನೈಸರ್ಗಿಕ ವಿಕೋಪಗಳಿಗೆ ಇವುಗಳ ಕೊಡುಗೆ ಅತ್ಯಲ್ಪ. ಆದರೆ ಅದರ ಮಾರಕ ಪರಿಣಾಮಗಳನ್ನು ಮಾತ್ರ ಈ ದೇಶಗಳೇ ಗರಿಷ್ಠ ಪ್ರಮಾಣದಲ್ಲಿ ಅನುಭವಿಸುತ್ತಿವೆ.

2021ರ ವಿಶ್ವಸಂಸ್ಥೆಯ 'ವರ್ಲ್ಡ್ ರಿಸ್ಕ್ ರಿಪೋರ್ಟ್' ಪ್ರಕಾರ, ವಾಯುಗುಣ ಬದಲಾವಣೆಯಿಂದ ಅತಿ ಹೆಚ್ಚಿನ ಅಪಾಯಕ್ಕೆ ಈಡಾಗುವ ದೇಶಗಳ ಪಟ್ಟಿಯಲ್ಲಿ ವನ್ವಾಟು ಮೊದಲನೆಯ ಸ್ಥಾನದಲ್ಲಿದೆ. ಈ ಶತಮಾನದ ಅಂತ್ಯದೊಳಗೆ ವನ್ವಾಟು ಪೆಸಿಫಿಕ್ ಸಾಗರದಲ್ಲಿ ಮುಳುಗಲಿದೆ ಎಂಬ ಮುನ್ಸೂಚನೆಯಿದೆ. ಹೀಗಾಗಿ ತಮ್ಮ ಉಳಿವಿಗಾಗಿ ಹೋರಾಡುತ್ತಿರುವ ಇಂತಹ ದೇಶಗಳು ವಿಶ್ವಸಂಸ್ಥೆಯ ನೆರವನ್ನು ಕೋರುವುದರ ಜೊತೆಗೆ, ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋಗಲು ಸಿದ್ಧತೆ ನಡೆಸಿವೆ. 'ವಾಯುಗುಣ ಬದಲಾವಣೆ ತರುತ್ತಿರುವ ಪ್ರಾಣಾಂತಿಕ ಪರಿಣಾಮಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಹಾಗೂ ಮುಂದಿನ ಜನಾಂಗವನ್ನು ರಕ್ಷಿಸಲು ನಮಗಿರುವ ಹಕ್ಕುಗಳೇನು ಮತ್ತು ಈ ಪರಿಸ್ಥಿತಿಗೆ ಕಾರಣವಾಗಿರುವ ದೇಶಗಳ ಹೊಣೆಗಾರಿಕೆಯೇನು' ಎಂಬ ಬಗ್ಗೆ ಕಾನೂನಾತ್ಮಕ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಕೋರಲಿವೆ. ಆದರೆ ಇವು ನೇರವಾಗಿ ಈ ನ್ಯಾಯಾಲಯದ ಮೆಟ್ಟಿಲೇರುವಂತಿಲ್ಲ. ಅದಕ್ಕೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸರಳ ಬಹುಮತದ ಅನುಮೋದನೆ ಬೇಕು. ಹೀಗಾಗಿ ಈ ತಿಂಗಳ ಒಳಗಾಗಿ ನಡೆಯಲಿರುವ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಈ ಪ್ರಸ್ತಾವದ ಬಗ್ಗೆ ಠರಾವೊಂದನ್ನು ಮಂಡಿಸಲಿವೆ. ಅದಕ್ಕೆ ಅನುಮೋದನೆ ದೊರೆತ ನಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುತ್ತದೆ.

ಸಣ್ಣ ದ್ವೀಪ ದೇಶಗಳ ಒಕ್ಕೂಟದ ಅಹವಾಲನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ನ್ಯಾಯಾಲಯ ತನ್ನ ನಿಲುವನ್ನು ಪ್ರಕಟಿಸುತ್ತದೆ. ಆದರೆ ಇದು ನ್ಯಾಯಾಲಯದ ಕಾನೂನು ಅಭಿಪ್ರಾಯವಾಗಬಹುದೇ ಹೊರತಾಗಿ ಎಲ್ಲ ದೇಶಗಳೂ ಪಾಲಿಸಲೇಬೇಕಾದ ಆದೇಶವಾಗುವುದಿಲ್ಲ. ಆದರೆ ಈ ಜಾಗತಿಕ ನ್ಯಾಯಾಲಯದ ಅಭಿಪ್ರಾಯಕ್ಕೆ ಅಪಾರವಾದ ನೈತಿಕ ಬಲವಿದ್ದು, ಬಹುತೇಕ ದೇಶಗಳು ಅಂತಹ ಅಭಿಪ್ರಾಯವನ್ನು ಗೌರವಿಸುತ್ತವೆ.

ವಾಯುಗುಣ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ಹೊಸ ಕಾನೂನುಗಳನ್ನು ರೂಪಿಸುವಾಗಲೂ ಅಂತರರಾಷ್ಟ್ರೀಯ ನ್ಯಾಯಾಲಯದ ಅಭಿಪ್ರಾಯ ನೆರವಾಗಲಿದೆ. ವನ್ವಾಟು ಗಣರಾಜ್ಯದ ಈ ವಿನೂತನ ಪ್ರಯತ್ನಕ್ಕೆ ದಿನಕಳೆದಂತೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ಬೆಂಬಲ ಹೆಚ್ಚುತ್ತಿದ್ದು, ಒಕ್ಕೂಟದ ಪ್ರಸ್ತಾವಕ್ಕೆ ಸರಳ ಬಹುಮತ ದೊರೆಯುವುದು ಬಹುತೇಕ ಖಚಿತವಾಗಿದೆ. ಈ ಮಧ್ಯೆ ಅಭಿವೃದ್ಧಿಶೀಲ ರಾಷ್ಟ್ರಗಳು, ಈಜಿಪ್ಟ್ ಶೃಂಗಸಭೆಯಲ್ಲಿನ ತಮ್ಮ ಸಾಧನೆಯಿಂದ ಸಂತುಷ್ಟಗೊಂಡಿವೆ. ಪರಿಹಾರ ನಿಧಿಯ ಒಪ್ಪಂದದ ಯಾವ ಹಂತದಲ್ಲೂ ಖಚಿತವಾದ, ಪಾಲಿಸಲೇಬೇಕಾದ ಆಶ್ವಾಸನೆಯನ್ನು ನೀಡುವ ಒತ್ತಡದಿಂದ ತಪ್ಪಿಸಿಕೊಂಡ ಶ್ರೀಮಂತ ರಾಷ್ಟ್ರಗಳೂ ಖುಷಿಯಾಗಿವೆ!

## ಚುರುಮುರಿ

### ಕ್ಷೇತ್ರ ರಿಪೇರಿ

• ಮಣ್ಣೆರಾಜು

**'ಮ್ಯಾಂಡಸ್** ಚಂಡಮಾರುತದ ಚಳಿಗೇ ನಡುಗುವ ನೀವು ಚಳಿಗಾಲದ ಅಧಿವೇಶನದಲ್ಲಿ ಅದೆಷ್ಟು ನಡುಗುವಿರೋ...' ಶಾಸಕರಿಗೆ ಕಾಫಿ ತಂದುಕೊಟ್ಟ ಪತ್ನಿ, 'ಮರೆಯದೇ ಅಧಿವೇಶನಕ್ಕೆ ಶಾಲು, ಸ್ವೆಟರ್, ಕೋಟು ತಗೊಂಡು ಹೋಗಿ' ಎಂದರು.

'ಅಗತ್ಯವಿಲ್ಲ, ಸದನದಲ್ಲಿ ಬಿಸಿಬಿಸಿ ಚರ್ಚೆ ನಡೆಯುತ್ತದೆ. ಆಡಳಿತ ಪಕ್ಷ- ವಿರೋಧ ಪಕ್ಷದವರು ಪರಸ್ಪರ ಚಳಿ ಬಿಡಿಸಲು ಸಜ್ಜಾಗಿದ್ದಾರೆ' ಎಂದರು ಶಾಸಕರು.

'ಜಡಿಮಳೆಗೆ ಕಂಗಾಲಾಗಿದ್ದೇವೆ, ಶಾಸಕರು ಬಂದು ನಮ್ಮ ಕಷ್ಟ ಕೇಳಲಿಲ್ಲ ಎಂದು ಚಟ್ನಹಳ್ಳಿ ಜನ ಮನೆಗೆ ಬಂದು ಕಷ್ಟ ಹೇಳಿಕೊಂಡರು'.

'ನಾನು ಹೋಗಿ ಅವರಿಗೆ ಛತ್ರಿ ಹಿಡಿಯಬೇಕಾಗಿತ್ತಂತಾ...' ಶಾಸಕರಿಗೆ ಸಿಟ್ಟು.

'ಎಲೆಕ್ಷನ್ ಬರುತ್ತಿರುವುದರಿಂದ ಛತ್ರಿ ಹಿಡಿಯಲೇಬೇಕೂರೀ. ಈ ಬಾರಿ ನೀವು ಸೋಲುವಿರಿ ಅಂತ ಕ್ಷೇತ್ರದ ಆಂತರಿಕ ಸಮೀಕ್ಷಾ ವರದಿ ಹೇಳಿದೆ...'

'ಈ ಕ್ಷೇತ್ರ ಬಿಟ್ಟು ಸುರಕ್ಷಿತ ಕ್ಷೇತ್ರ ಹುಡುಕುತ್ತಿದ್ದೇನೆ...'

'ನಿವೇಶನ ಖರೀದಿಸಿ ಮನೆ ಕಟ್ಟುವ ಬದಲು ಇರುವ ಮನೆಯ ಡ್ಯಾಮೇಜ್ ರಿಪೇರಿ ಮಾಡಿಕೊಳ್ಳುವುದು ಜಾಣತನ. ಕಾರ್ಯಕರ್ತರು ಪರಪಕ್ಷದ ಪಾಲಾಗದಂತೆ ಅವರ ಬೇಕುಬೇಡಗಳನ್ನು ಪೂರೈಸಿರಿ, ಮತದಾರರ ಮನ ಗೆಲ್ಲಿರಿ'.

'ಎದುರು ಪಕ್ಷದ ಅಭ್ಯರ್ಥಿ ಮನೆಗೊಂದು ಕುಕ್ಕರ್ ಕೊಟ್ಟಿದ್ದಾನೆ. ಕುಕ್ಕರ್‌ಗಳ ವಿಶಲ್‌ಗಳು ಅವನ ಪರ ಕೂಗುತ್ತಿವೆ. ನನ್ನ ಕೂಗು ಯಾರಿಗೂ ಕೇಳಿಸುತ್ತಿಲ್ಲ...'

'ಪ್ರತಿಪಕ್ಷದವರು ವೆಲ್ತ್ ಕ್ಯಾಂಪ್ ಮಾಡಿ ದುಡ್ಡು ವಿತರಣೆ ಮಾಡ್ತಿದ್ದಾರಂತೆ, ನೀವಿನ್ನೂ ಹೆಲ್ತ್ ಕ್ಯಾಂಪ್, ರಕ್ತದಾನ ಶಿಬಿರದಲ್ಲೇ ಇದ್ದೀರಿ, ಜನರ ಅಭಿರುಚಿಗೆ ತಕ್ಕಂತೆ ಅಪ್‌ಡೇಟ್ ಆಗಬೇಕು'.

ಶಾಸಕರು ನಿಟ್ಟುಸಿರುಬಿಟ್ಟರು.

'ನೀವು ಆಡುವ ಲ್ಯಾಂಗ್ವೇಜ್, ಬಾಡಿ ಲ್ಯಾಂಗ್ವೇಜ್ ಸರಿಯಿಲ್ಲವಂತೆ. ಈ ಎರಡೂ ಲ್ಯಾಂಗ್ವೇಜ್‌ಗಳನ್ನು ರಿಪೇರಿ ಮಾಡಿಕೊಂಡು ನಾಲಿಗೆ ಕೋಪ, ರೌಡಿ ರೂಪಕ್ಕೆ ಕಡಿವಾಣ ಹಾಕಿಕೊಳ್ಳಿ...' ಶಾಸಕರಿಗೆ ಸಲಹೆ ನೀಡಿದರು ಪತ್ನಿ.

## ಸಂಗತ

# ಬಾಲೆಯರಿಗೆ ಮತ್ತೆ ಸಿಕ್ಕೀತೇ 'ಶುಚಿ'?

**ಕೊರೊನಾ ಕಾಲದಲ್ಲಿ ಸ್ಥಗಿತಗೊಂಡಿದ್ದ, ಶಾಲಾ ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ನೀಡುವ ಶುಚಿ ಯೋಜನೆ ಈವರೆಗೂ ಆರಂಭವಾಗದಿರುವುದು ದುರದೃಷ್ಟಕರ**

• ಡಾ. ಕೆ.ಎಸ್.ಚೈತ್ರಾ

**'ಬರೀ ಶಾಲಾ-** ಕಾಲೇಜು ಹುಡುಗಿಯರಿಗಷ್ಟೇ ಅಲ್ಲ, ಪದವಿ ಓದುವ ಹೆಣ್ಣುಮಕ್ಕಳಿಗೂ ಈ ಯೋಜನೆಯ ಪ್ರಯೋಜನ ಸಿಗಲಿ ಎಂಬುದು ನಮ್ಮ ಮನವಿಯಾಗಿತ್ತು. ಅದು ಹಾಗಿರಲಿ, ಈಗ ಕೊರೊನಾ ಬಂದದ್ದೇ ನಿಂತ ಯೋಜನೆ ಇನ್ನೂ ಆರಂಭವಾಗಿಯೇ ಇಲ್ಲ. ತಿಂಗಳಿಗೆ ನಾಲ್ಕರಿಂದ ಐದು ದಿನ ಹೆಣ್ಣುಮಕ್ಕಳು ಅನಿವಾರ್ಯವಾಗಿ ಮನೆಯಲ್ಲೇ ಇರಲು ಇದು ಮುಖ್ಯ ಕಾರಣ. ಬರೀ ಓದಲ್ಲ ಆರೋಗ್ಯ ಕೂಡಾ ಇದರಿಂದ ಕೆಡುತ್ತಿದೆ. ದಯವಿಟ್ಟು ಗಮನಿಸಿ' ಆರೋಗ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಲಾ ಶಿಕ್ಷಕಿಯರ ಒಕ್ಕೊರಲ ಅಭಿಪ್ರಾಯ ಇದು.

ಆರೋಗ್ಯ ಇಲಾಖೆಯು 'ಶುಚಿ' ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಹದಿಹರೆಯದ ವಿದ್ಯಾರ್ಥಿನಿಯರಿಗೆ ಮುಟ್ಟಿನ ಸಂದರ್ಭದಲ್ಲಿ ಬೇಕಾಗುವ ಸ್ಯಾನಿಟರಿ ಪ್ಯಾಡ್‌ಗಳನ್ನು ಪೂರೈಸುತ್ತಿತ್ತು. 2013-14ರಲ್ಲಿ ಕೇಂದ್ರ ಸರ್ಕಾರದ ಪ್ರಾಯೋಜನೆ ಅಡಿಯಲ್ಲಿ ಈ ಯೋಜನೆ ಆರಂಭವಾಯಿತು. ಅನಂತರ ಇದನ್ನು ಮುಂದುವರಿಸುವ ಹೊಣೆ ರಾಜ್ಯ ಸರ್ಕಾರಗಳ ಹೆಗಲಿಗೇರಿತು. ನಮ್ಮ ರಾಜ್ಯದಲ್ಲಿಯೂ ಇದು ಜಾರಿಗೆ ಬಂತು. ಆದರೆ, 2020ರಲ್ಲಿ ಜಗತ್ತನ್ನೇ ತಲ್ಲಣಗೊಳಿಸಿದ ಕರಾಳ ಕೊರೊನಾ ಅದಕ್ಕೆ ಕಲ್ಲು ಹಾಕಿತು. ಆಗ ಶಾಲೆ ಇರಲಿಲ್ಲ, ಹೊರಗೆ ಕಾಲಿಡುವ ಪ್ರಶ್ನೆಯೇ ಇರಲಿಲ್ಲ. ಈಗ ಲಸಿಕೆ ಬಂದಿದೆ, ಕೊರೊನಾ ತೀವ್ರತೆ ಕಡಿಮೆಯಾಗಿದೆ. ಶಾಲೆ ಶುರುವಾಗಿದೆ... ಪ್ಯಾಡ್ ಇನ್ನೂ ಸಿಗುತ್ತಿಲ್ಲ!

ಅಂಗಡಿಯಲ್ಲಿ ಕೊಂಡರೆ ಕನಿಷ್ಠ ಐದು ದಿನಗಳಿಗೆ ಹತ್ತು ಪ್ಯಾಡ್ ಆದರೂ ಬೇಕು. ಏನಿಲ್ಲ ಎಂದರೂ ನೂರು ರೂಪಾಯಿ. ತಿಂಗಳಿಗೆ ಮೂರು ಸಾವಿರ ರೂಪಾಯಿ ಆದಾಯವಿರುವ ಕುಟುಂಬಕ್ಕೆ ಈ ನೂರು ರೂಪಾಯಿ ಖರ್ಚು ಅನವಶ್ಯಕ ಎನಿಸುವುದು ಸಹಜವೇ. ಏನಿದ್ದರೂ ಹಳೆ ಬಟ್ಟೆಯ ಬಳಕೆಯೇ ಗತಿ. ಆದರೆ ಮುಟ್ಟು ಎಂದರೆ ಗುಟ್ಟು ಎನ್ನುವ ಸ್ಥಿತಿಯಲ್ಲಿ ಈ ಬಟ್ಟೆಯ ಶುಚಿತ್ವದ ಬಗ್ಗೆ ಗಮನಹರಿಸುವವರು ಯಾರು? ಅವಸರವಸರವಾಗಿ ತೊಳೆದು, ಎಲ್ಲೋ ಕತ್ತಲ ಮೂಲೆಯಲ್ಲಿ ಒಣಗಿಸಿ, ಅರ್ಧಂಬರ್ಧ ಒಣಗಿದ ಬಟ್ಟೆಯನ್ನು ದಿನವಿಡೀ ದೇಹದ ಒಳಭಾಗದಲ್ಲಿ ಇಟ್ಟುಕೊಂಡು ಶಾಲೆಗೆ ಹೋಗುವುದು ಹೆಣ್ಣುಮಕ್ಕಳಿಗೆ ಅನಿವಾರ್ಯ.

ಇಂಥ ಸ್ಥಿತಿಯಲ್ಲಿ ಪಾಠ ಕಲಿಯುವುದು ಹಾಗಿರಲಿ ಆರೋಗ್ಯದ ಗತಿ ಏನಾದೀತು? ತೊಡೆಯ ಸೂಕ್ಷ್ಮ ಚರ್ಮದಲ್ಲಿ ಕೆಂಪು ಗುಳ್ಳೆ, ತುರಿಕೆ, ಫಂಗಲ್ ಸೋಂಕು, ಮೂತ್ರನಾಳದ ಸಮಸ್ಯೆ ಹೀಗೆ ನಡೆದಾಡಲೇ ಕಷ್ಟವಾಗುವ ಪರಿಸ್ಥಿತಿ. ಪ್ರತೀ ತಿಂಗಳು ಅನುಭವಿಸಬೇಕಾದ ಈ ಯಮಯಾತನೆ ಹೇಳಿಕೊಳ್ಳಲು ಸಂಕೋಚ. ಅರಿಸಿನ, ಎಣ್ಣೆಯ ಮನೆಮದ್ದು ಅಥವಾ ಸಿಕ್ಕ ಸಿಕ್ಕ ಕ್ರೀಂ ಬಳಿದುಕೊಂಡು ಅವನ್ನು ತಡೆಯುವ ಪ್ರಯತ್ನ. ಜತೆಗೇ ಶಾಲೆಗೆ ಹೋಗದೆ ಮನೆಯಲ್ಲೇ ಇದ್ದು ಮೌನವಾಗಿ ಅನುಭವಿಸುವುದು, ಕಲಿಕೆಯಲ್ಲಿ ಹಿಂದುಳಿಯುವುದು!

ಈ ಎಲ್ಲಾ ರೋದನೆಗೆ ಸಂಜೀವಿನಿಯಾಗಿ ಬಂದಿತ್ತು ಶುಚಿ ಯೋಜನೆ. ಹುಡುಗಿಯರ ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರ ಮುಖದಲ್ಲಿ ನಗು ಅರಳಿಸಿತ್ತು. ಈ ಯೋಜನೆ ಜಾರಿಯಾದ ನಂತರ ಆರೋಗ್ಯ ಮತ್ತು ಹಾಜರಾತಿಯಲ್ಲಿ ಗಮನೀಯ ಏರಿಕೆ ಕೂಡಾ ಕಂಡುಬಂದಿತ್ತು. 2021ರಲ್ಲಿ ಈ ಯೋಜನೆಗೆ ₹ 49 ಕೋಟಿ ಖರ್ಚು ಮಾಡಲು ರಾಜ್ಯ ಸಚಿವ ಸಂಪುಟದ ಅನುಮೋದನೆಯೂ ದೊರಕಿತ್ತು. ಆದರೆ ಅನುಷ್ಠಾನ ಮಾತ್ರ ಇನ್ನೂ ಆಗಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಈ ಪ್ಯಾಡ್‌ಗಳ ವಿತರಣೆ ಮತ್ತು ಬಳಸುವ ವಿವರಣೆಯ ಹೊಣೆ ಕುರಿತು ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಎರಡೂ ಪರಸ್ಪರರನ್ನು ದೂರುತ್ತವೆ. ಸಾರಿಗೆ ವ್ಯವಸ್ಥೆ ಸೂಕ್ತವಾಗಿಲ್ಲ ಎಂಬ ಉತ್ತರವೂ ಸಿಗುತ್ತದೆ. ಅನೇಕ ಸರ್ಕಾರಿ ಶಾಲೆಗಳಲ್ಲಿ ಈ ಪ್ಯಾಡ್ ಸಿಗಲು ಸುಲಭವಾಗುವಂತೆ ಡಿಸ್‌ಪೆನ್ಸಿಂಗ್ ಮಶೀನ್ ಸ್ಥಾಪಿಸಲಾಗಿದೆ. ಆದರೆ ಅವುಗಳನ್ನು ಬಳಸುವ ಬಗ್ಗೆ ಮಾಹಿತಿ ಇಲ್ಲ. ಜತೆಗೆ ಉಪಯೋಗಿಸಲು ವಿದ್ಯುತ್ ವ್ಯವಸ್ಥೆಯ ಅನುಕೂಲವಿಲ್ಲ. ಹಾಗಾಗಿ ಇವು ನಿಂತಲ್ಲೇ ನಿಂತಿವೆ.

ಇದರೊಂದಿಗೆ ಸರ್ಕಾರವು ಹಾನಿಕಾರಕ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸುವ ದೃಷ್ಟಿಯಿಂದ ಎರಡು ಜಿಲ್ಲೆಗಳಲ್ಲಿ ಮೈತ್ರಿ ಪೀರಿಯಡ್ಸ್ ಕಪ್ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೊಂಡಿದೆ. ವೈಯಕ್ತಿಕ ಸ್ವಚ್ಛತೆ ಮತ್ತು ಆರ್ಥಿಕ ದೃಷ್ಟಿಯಿಂದ ಇದು ಪರಿಣಾಮಕಾರಿ. ಆದರೆ ಈ ಕಪ್‌ಗಳನ್ನು ಉಪಯೋಗಿಸುವಾಗ ಸ್ವಲ್ಪ ಮಟ್ಟಿಗಿನ ಅನುಭವ ಅಗತ್ಯ. ಅದನ್ನು ಹೇಗೆ ದೇಹದೊಳಕ್ಕೆ ಹಾಕಬೇಕು, ಎಷ್ಟು ಬಾರಿ ಹೊರತೆಗೆದು ಸ್ವಚ್ಛಗೊಳಿಸಬೇಕು, ಚೊಕ್ಕವಾಗಿಸುವ ವಿಧಾನ ಇವುಗಳ ಬಗ್ಗೆ ಶಿಕ್ಷಕರಿಗೇ ಬಹಳಷ್ಟು ಅನುಮಾನಗಳಿವೆ. ಈಗೆಲ್ಲ ಕೆಲವು ಮಕ್ಕಳು ಆರು-ಏಳನೇ ತರಗತಿಗೇ ಮೈನೆರೆಯುವುದರಿಂದ ಆ ಮಕ್ಕಳಿಗೆ ಅರ್ಥ ಮಾಡಿಸುವುದೂ ಕಷ್ಟವೇ. ಹೀಗಾಗಿ ಇವು ಅತ್ಯುತ್ತಮ ವಿಧಾನವಾದರೂ ಅವುಗಳ ಸಾರ್ವತ್ರಿಕ ಬಳಕೆಗೆ ಮುನ್ನ ಶಿಕ್ಷಕಿಯರಿಗೆ ಸಂಪೂರ್ಣ ಮಾಹಿತಿ ಸಿಗಬೇಕು. ಒಟ್ಟಿನಲ್ಲಿ ಇದು ಯಶಸ್ವಿಯಾಗುವವರೆಗೆ ಶುಚಿ ಪ್ಯಾಡ್‌ಗಳು ಎಲ್ಲೆಡೆ ಜಾರಿಯಲ್ಲಿರಲಿ.

ಹೆಣ್ಣುಮಕ್ಕಳ ಆರೋಗ್ಯ- ಶಿಕ್ಷಣ ಎರಡನ್ನೂ ಗಮನದಲ್ಲಿ ಇಟ್ಟುಕೊಂಡು ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆ ಶುಚಿ ಯೋಜನೆಯನ್ನು ತಕ್ಷಣ ಆರಂಭಿಸಲಿ ಎನ್ನುವುದು ಎಲ್ಲರ ಬೇಡಿಕೆ ಮತ್ತು ಒತ್ತಾಯ.

## ವಾಚಕರ ವಾಣಿ

### ಸ್ಫೋಟವೂ ಅಲ್ಲ, ಅನಿಲ ಸೋರಿಕೆಯೂ ಅಲ್ಲ

ಮಾಗಡಿ ಬಳಿಯ ಮರೂರಿನ ಎಂಜಿನಿಯರಿಂಗ್ ವಿದ್ಯಾರ್ಥಿನಿಯೊಬ್ಬಳು ಸ್ನಾನದ ಮನೆಯಲ್ಲಿ ನೀರು ಕಾಯಿಸುವ ಅನಿಲ ಸಿಲಿಂಡರಿನ ಸ್ಫೋಟದಿಂದ ಸಾವಪ್ಪಿದ ಸುದ್ದಿ ಮೊನ್ನೆ (ಪ್ರ.ವಾ., ಡಿ. 11) ಪ್ರಕಟವಾಯಿತಷ್ಟೆ. ಅದು ಸ್ಫೋಟವೂ ಅಲ್ಲ, ಅನಿಲದ ಸೋರಿಕೆಯೂ ಅಲ್ಲ. ಸ್ನಾನದ ಮನೆಯಲ್ಲಿ ಗ್ಯಾಸ್ ಗೀಸರಿನ ಒಲೆ ಉರಿಯುತ್ತಿರುವಾಗಲೇ ಬಾಗಿಲು ಮತ್ತು ಜಾಲಂಧ್ರವನ್ನು ಮುಚ್ಚಿ ಬಟ್ಟೆ ತೊಳೆಯುತ್ತ, ಸ್ನಾನ ಮಾಡುತ್ತ ತುಂಬ ಜಾಸ್ತಿ ಹೊತ್ತು ಕಳೆದರೆ ಪ್ರಾಣಕ್ಕೆ ಕಂಟಕ ಬರುತ್ತದೆ. ಏಕೆಂದರೆ, ಅನಿಲದ ನೀಲಿ ಜ್ವಾಲೆ ಉರಿಯುತ್ತ ಸ್ನಾನದ ತೊಟ್ಟಿಯ ಆಮ್ಲಜನಕವನ್ನು ಹೀರಿಕೊಂಡು ಕಾರ್ಬನ್ ಡಯಾಕ್ಸೈಡ್ ಅನಿಲವನ್ನು ಕಕ್ಕುತ್ತಿರುತ್ತದೆ. ಅದಕ್ಕೆ ವಾಸನೆ ಕೂಡ ಇರುವುದಿಲ್ಲ. ಒಳಗಿದ್ದವರಿಗೆ ಉಸಿರುಕಟ್ಟುವ ಅನುಭವವೂ ಆಗುವುದಿಲ್ಲ. ನಿಧಾನಕ್ಕೆ ಬಟ್ಟೆಯನ್ನೋ ತಲೆಗೂದಲನ್ನೋ ತೊಳೆಯುತ್ತಿದ್ದಂತೆ ಕ್ರಮೇಣ ನಿದ್ದೆ ಬಂದಂತಾಗುತ್ತದೆ. ಪ್ರಜ್ಞೆ ತಪ್ಪುತ್ತದೆ. ವಿಷಗಾಳಿಯ ಸಾಂದ್ರತೆ ಹೆಚ್ಚುತ್ತ ಹೋದಂತೆ ಸಾವು ಬರುತ್ತದೆ (ಒಳಚರಂಡಿ ಸ್ವಚ್ಛ ಮಾಡುವವರೂ ಹೀಗೇ ವಿಷಗಾಳಿಗೆ ಪ್ರಜ್ಞೆ ತಪ್ಪಿ ಕೂತಲ್ಲೇ ಒರಗುತ್ತಾರೆ). ಸ್ನಾನದ ತೊಟ್ಟಿಯ ವಿದ್ಯಮಾನ ಮನೆಯವರಿಗೆ ಗೊತ್ತಾಗುವಷ್ಟರಲ್ಲಿ ತೀರ ತಡವಾಗಿರುತ್ತದೆ. ಮನೆಯಲ್ಲಿ ಒಬ್ಬಳೇ ಇದ್ದ ವಿದ್ಯಾರ್ಥಿನಿ ಅನನ್ಯ ಹೀಗೆ ನಿಷ್ಕಾರಣವಾಗಿ ಜೀವ ತೆರುವಂತಾಯಿತು. ಆಮ್ಲಜನಕ ಇಲ್ಲದೆ ಕ್ರಮೇಣ ಜ್ವಾಲೆ ಆರಿ, ಇಂಧನ ಅನಿಲ ಮಾತ್ರ ಹೊರಸೂಸುತ್ತ ಸಿಲಿಂಡರ್ ಖಾಲಿಯಾಗುತ್ತದೆ. ಅದು ಸೋರಿಕೆ ಅಲ್ಲ.

ಹೀಗಾಗದಂತೆ ಕೆಲವು ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ: ಅನಿಲ ಸಿಲಿಂಡರಿನ ಉರಿಯಿಂದ ನೀರು ಕಾಯಿಸಿದ ನಂತರ, ಜ್ವಾಲೆಯನ್ನು ನಂದಿಸಿ ಆಮೇಲೆ ಸ್ನಾನದ ಮನೆಯೊಳಕ್ಕೆ ಹೊಗಬೇಕು. ಹೊಕ್ಕಾಗ ಮೂರು– ನಾಲ್ಕು ಬಾರಿ ಬಾಗಿಲನ್ನು ಹಾಕಿ ತೆರೆದು ಮಾಡಿದರೆ ಒಳಗಿನ ವಿಷಗಾಳಿ ಆಚೆ ಹೋಗಿರುತ್ತದೆ. ಅಥವಾ ಅಲ್ಲಿ ಮಡುಗಟ್ಟುವ ವಿಷಗಾಳಿ ಹೊರಕ್ಕೆ ಹೋಗುವಂತೆ ಎಕ್ಸ್‌ಹಾಸ್ಟ್ ಫ್ಯಾನ್ ಹಾಕಿಕೊಂಡೇ ಸ್ನಾನ ಮಾಡಬೇಕು. ಅಥವಾ ಹತ್ತೇ ನಿಮಿಷಗಳಲ್ಲಿ ಸ್ನಾನ ಮಾಡಿ ಹೊರಕ್ಕೆ ಬರಬೇಕು. ಸ್ನಾನದ ಮನೆಗೆ ಗ್ಯಾಸ್ ಗೀಸರನ್ನು ಪೂರೈಸುವ ಕಂಪನಿಗಳು ಈ ಎಚ್ಚರಿಕೆ ಕ್ರಮಗಳನ್ನು ಸಿಲಿಂಡರಿನ ಮೇಲೆ ದೊಡ್ಡಕ್ಷರಗಳಲ್ಲಿ ಮುದ್ರಿಸಬೇಕು. ಬಳಕೆದಾರರಿಗೆ ತಿಳಿವಳಿಕೆಯನ್ನು ಕೊಡಬೇಕು. ಇಲ್ಲಾಂದರೆ ಇಂಥ ದುರ್ಘಟನೆ ಮತ್ತೆ ಮತ್ತೆ ಸಂಭವಿಸುತ್ತಿರುತ್ತದೆ.

**ನಾಗೇಶ ಹೆಗಡೆ,** ಕೆಂಗೇರಿ

### ಫಲಕ ಹಾಕುವ ಮುನ್ನ ಇರಲಿ ಎಚ್ಚರ

ಬೆಂಗಳೂರಿನ ಕತ್ರಿಗುಪ್ಪೆ ಬಡಾವಣೆಯ ರಾಕ್ ಗಾರ್ಡನ್ ಉದ್ಯಾನದಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ವತಿಯಿಂದ ಅಳವಡಿಸಿರುವ ಬಸವಣ್ಣನವರ ಪರಿಚಯ ಫಲಕದಲ್ಲಿ ಇರುವ ತಪ್ಪುಗಳ ಬಗ್ಗೆ ಪುಟ್ಟೇಗೌಡ ಎಂಬುವರು ಪ್ರಸ್ತಾಪ ಮಾಡಿದ್ದಾರೆ (ಪ್ರ.ವಾ., ಡಿ. 12). ಜೊತೆಗೆ ನಮೂದಿಸಿರುವ ಜನನ ಮತ್ತು ಮರಣದ ಇಸವಿ ಕೂಡ ನಿಖರವಾಗಿಲ್ಲ. ಬಸವಣ್ಣನವರಿಗೆ 'ಹಿಂದೂ ತತ್ವಜ್ಞಾನಿ' ಎಂಬ ಅನಗತ್ಯ ವಿಶೇಷಣವನ್ನು ಬಳಸಲಾಗಿದೆ. ಬಸವಣ್ಣನವರು ಹಿಂದೂ ಧರ್ಮದ ನ್ಯೂನತೆಗಳನ್ನು ಸರಿಪಡಿಸಲಾಗದೆ ಬೇಸತ್ತು, ಹೊರಗಡೆ ಬಂದು ಲಿಂಗಾಯತ ಧರ್ಮ ಸ್ಥಾಪಿಸಿದ, ಮನುಜ ಕುಲಕ್ಕೇ ಸಲ್ಲುವ ವ್ಯಕ್ತಿ. ಅವರನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸುವುದು ಬಸವಣ್ಣನವರಿಗೆ ಮಾಡುವ ಅಪಮಾನ.

ಕನ್ನಡ ಕಾಗುಣಿತ, ವ್ಯಾಕರಣ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ವಲ್ಪಮಟ್ಟಿಗಾದರೂ ತಿಳಿದಿರುವ ಅಧಿಕಾರಿಗಳ ನೆರವು ಪಡೆದಿದ್ದರೆ ಇಂತಹ ಪ್ರಮಾದ ಆಗುತ್ತಿರಲಿಲ್ಲ. ಇಂತಹ ವಿಷಯಗಳಲ್ಲಿ ಬಿಬಿಎಂಪಿ ಎಚ್ಚರ ವಹಿಸುವುದು ಅಗತ್ಯ.

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

### ಹೆದ್ದಾರಿ ಕಾಮಗಾರಿ: ಅವ್ಯವಸ್ಥೆ ಕೊನೆಗೊಳ್ಳಲಿ

ಹೆದ್ದಾರಿಗಳ ಕಾಮಗಾರಿಗೆ ಸಂಬಂಧಿಸಿದ ವರದಿಯು (ಪ್ರ.ವಾ., ಡಿ. 12) ನಮ್ಮ ರಾಜ್ಯದಲ್ಲಿ ಹೆದ್ದಾರಿ ಕಾಮಗಾರಿಗಳ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬವನ್ನು ಅಂಕಿಅಂಶಗಳ ಮೂಲಕ ಚೆನ್ನಾಗಿ ವಿಶ್ಲೇಷಣೆ ಮಾಡಿದೆ. ಈ ವಿಳಂಬಕ್ಕೆ ಯಾವ ರಾಜ್ಯವೂ ಹೊರತಲ್ಲ. ಕಾಮಗಾರಿಗಳದು ಆಮೆಯ ನಡಿಗೆ, ಕಾಲಮಿತಿಯಲ್ಲಿ ಪೂರ್ಣಗೊಳ್ಳುವುದು ಕನಸಿನ ಮಾತು. ಗುಣಮಟ್ಟ ಕಾಯ್ದುಕೊಳ್ಳುವುದರಲ್ಲಿಯೂ ನಾವು ಸೋತಿದ್ದೇವೆ. ರಸ್ತೆಗಳ ನಿರ್ಮಾಣ ಕಾರ್ಯ ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ವಿಳಂಬದಿಂದಾಗಿ ವೆಚ್ಚ ಹೆಚ್ಚಾಗುತ್ತದೆ. ಅಲ್ಲದೆ ಅಪೂರ್ಣ ರಸ್ತೆಗಳು ಅಪಘಾತಗಳಿಗೂ ಕಾರಣವಾಗುತ್ತಿವೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಕತೆ ಇದಾದರೆ, ನಗರ ಪ್ರದೇಶಗಳಲ್ಲಿನ ಕಾಮಗಾರಿಗಳ ವಿಳಂಬವು ನಾಗರಿಕರಿಗೆ ಇನ್ನೂ ಹೆಚ್ಚು ತ್ರಾಸ ಕೊಡುತ್ತದೆ. ರಸ್ತೆಯನ್ನು ಅಗೆದು ತಿಂಗಳುಗಟ್ಟಲೆ ಹಾಗೇ ಬಿಡುತ್ತಾರೆ. ಮನಸ್ಸಿಗೆ ಬಂದಾಗ ಜಲ್ಲಿ ಹಾಕುತ್ತಾರೆ. ನಂತರ ಎಷ್ಟೋ ದಿನಗಳ ಬಳಿಕ ಕಾಂಕ್ರೀಟು ಹಾಕುತ್ತಾರೆ. ಅಲ್ಲಿಯವರೆಗೂ ಪಾದಚಾರಿಗಳಿಗೆ, ವಾಹನ ಸವಾರರಿಗೆ ಕಿರಿಕಿರಿ ತಪ್ಪಿದ್ದಲ್ಲ. ನಗರ, ಪಟ್ಟಣಗಳಲ್ಲಿ ರಸ್ತೆಗುಂಡಿಗಳ ಹಾವಳಿ ಮತ್ತೊಂದು ಬಗೆಯದು. ಸವಾರರಿಗೆ ಅವು ಸವಾಲು ಎಸೆಯುತ್ತವೆ.

**ಪ.ಚಂದ್ರಕುಮಾರ ಗೌನಹಳ್ಳಿ,** ಹಿರಿಯೂರು

### ಐಒಎ ಉತ್ತುಂಗಕ್ಕೇರಲಿ

ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷೆಯಾಗಿ ಪಿ.ಟಿ.ಉಷಾ ಅವರು ನೇಮಕಗೊಂಡಿರುವುದು ಸ್ವಾಗತಾರ್ಹ. ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕ್ರೀಡೆಗೆ ಸರ್ಕಾರಗಳು, ಸಂಘ ಸಂಸ್ಥೆಗಳು ಹೆಚ್ಚಿನ ಪ್ರೋತ್ಸಾಹ ನೀಡುತ್ತಿವೆ. ಆದರೂ ಪುರುಷ ಪ್ರಾಧಾನ್ಯವೇ ಹೆಚ್ಚಿರುವ ಐಒಎ ಅಂಗಸಂಸ್ಥೆಗಳಲ್ಲಿ ಕೆಲವು ನ್ಯೂನತೆಗಳು ಇನ್ನೂ ಇವೆ. ಸ್ವತಃ ಉತ್ಕೃಷ್ಟ ಕ್ರೀಡಾಪಟುವಾಗಿ, ಅಧಿಕಾರಿಯಾಗಿ ತಮ್ಮದೇ ಕ್ರೀಡಾ ತರಬೇತಿ ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಿ ಅಗಾಧ ಅನುಭವ ಹೊಂದಿರುವ ಉಷಾ ಅವರು ಐಒಎ ಅನ್ನು ಸರ್ಕಾರದ, ಜನತೆಯ, ಕ್ರೀಡಾಪಟುಗಳ ಆಶಯಕ್ಕೆ ಅನುಗುಣವಾಗಿ ಉತ್ತುಂಗಕ್ಕೆ ಕೊಂಡೊಯ್ಯುವರೆಂಬ ಭರವಸೆ ಇದೆ.

**ಬಿ.ರಮೇಶ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಚೀನಾ ಗಡಿ ತಂಟೆಗಿಲ್ಲ ಕೊನೆ

2020ರ ಮೇನಲ್ಲಿ ಗಾಲ್ವನ್ ಕಣಿವೆಯಲ್ಲಿ ಚೀನಾ ಸ್ಥಾಪಿಸಿರುವ ಸೇನಾ ನೆಲೆಯ ಉಪಗ್ರಹ ಚಿತ್ರ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಭಾರತ ಮತ್ತು ಚೀನಾದ ನಡುವಣ ಗಡಿ ವಿವಾದವನ್ನು, ಜಗತ್ತಿನ ಅತ್ಯಂತ ದೀರ್ಘಾವಧಿಯ ಗಡಿ ವಿವಾದ ಎಂದೇ ಗುರುತಿಸಲಾಗುತ್ತದೆ. ಈ ವಿವಾದವನ್ನು ಬಗೆಹರಿಸುವ ಸರ್ಕಾರದ ಮಟ್ಟದ ಯತ್ನಗಳು 1912ರಲ್ಲಿ ಆರಂಭವಾದವು. ಆದರೆ, ಅದಕ್ಕೂ 100 ವರ್ಷಗಳ ಹಿಂದೆಯೇ ಈ ವಿವಾದ ಇತ್ತು ಎಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ. 1912ನ್ನು ಒಂದು ಮೈಲುಗಲ್ಲಾಗಿ ತೆಗೆದುಕೊಂಡರೂ, ಭಾರತ ಮತ್ತು ಚೀನಾ ಗಡಿ ವಿವಾದಕ್ಕೆ ಈಗಾಗಲೇ 108 ವರ್ಷ ಸಂದಿದೆ.

ಲಡಾಖ್ ಪ್ರಾಂತ್ಯ, ಹಿಮಾಚಲ ಪ್ರದೇಶ-ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದ ಗಡಿಗಳಿಗೆ ಸಂಬಂಧಿಸಿದಂತೆ ಎರಡೂ ದೇಶಗಳ ನಡುವೆ ವಿವಾದ ಇದೆ. ಪೂರ್ವ ಲಡಾಖ್‌ನ ಅಕ್ಸಾಯ್‌ಚಿನ್ ಪ್ರದೇಶ ತನ್ನದೆಂದು ಚೀನಾ 1906ರಲ್ಲಿ ಪ್ರಕಟಿಸಿರುವ ಭೂಪಟದಲ್ಲಿ ಪ್ರತಿಪಾದಿಸಿದೆ. ಅರುಣಾಚಲ ಪ್ರದೇಶ ಸಂಪೂರ್ಣವಾಗಿ ತನ್ನದೆಂದು ಆ ಭೂಪಟದಲ್ಲಿ ಪ್ರತಿಪಾದಿಸಲಾಗಿದೆ. ಭಾರತವು (ಆಗಿನ ಬ್ರಿಟಿಷ್ ಸರ್ಕಾರ) ಚೀನಾದ ಪ್ರತಿಪಾದನೆಯನ್ನು ನಿರಾಕರಿಸಿತ್ತು ಮತ್ತು ಈ ಪ್ರದೇಶಗಳು ತನ್ನದೆಂದು ದೃಢವಾಗಿ ಹೇಳಿತ್ತು. ಈ ಬೆಳವಣಿಗೆಯೇ ಭಾರತ ಮತ್ತು ಚೀನಾ ನಡುವಣ ಗಡಿ ವಿವಾದ ಬಗೆಹರಿಸುವಲ್ಲಿನ ಯತ್ನಗಳಿಗೆ ಕಾರಣ ಎಂದು ಗುರುತಿಸಲಾಗಿದೆ.

ಭಾರತ ಮತ್ತು ಚೀನಾ ನಡುವಣ ಗಡಿಯನ್ನು ಅಂತಿಮಗೊಳಿಸಲು ಬ್ರಿಟಿಷ್ ಅಧಿಕಾರಿ ಸರ್ ಹೆನ್ರಿ ಮೆಕ್‌ಮಹನ್ ಅವರ ನೇತೃತ್ವದಲ್ಲಿ ಬ್ರಿಟನ್ ಸರ್ಕಾರವು ಸಮಿತಿಯನ್ನು 1910ರ ದಶಕದಲ್ಲಿ ರಚನೆ ಮಾಡುತ್ತದೆ. ಈ ಸಮಿತಿಯು, ಸರ್ವೇಕ್ಷಣೆ ನಡೆಸಿ ಗಡಿಯನ್ನು ಭೂಪಟದಲ್ಲಿ ಗುರುತು ಮಾಡುತ್ತದೆ. ಈ ಬಗ್ಗೆ ಚೀನಾದೊಂದಿಗೆ ಮಾತುಕತೆ ನಡೆಸುವ ಯತ್ನ 1912ರಲ್ಲಿ ಆರಂಭವಾಯಿತು. ಬಹಳ ಪ್ರಯತ್ನದ ನಂತರ 1913ರಲ್ಲಿ ಟಿಬೆಟ್ ಮಾತುಕತೆಗೆ ಬರುತ್ತದೆ ಮತ್ತು 1914ರಲ್ಲಿ ಮಾತುಕತೆ ಅಂತ್ಯವಾಗುತ್ತದೆ. ಆಗ ಟಿಬೆಟ್ ಮತ್ತು ಬ್ರಿಟಿಷ್ ಸರ್ಕಾರದ ಮಧ್ಯೆ 'ಶಿಮ್ಲಾ ಒಪ್ಪಂದ' ನಡೆಯುತ್ತದೆ.

ಶಿಮ್ಲಾ ಒಪ್ಪಂದ ಮತ್ತು ಮೆಕ್‌ಮಹನ್ ರೂಪಿಸಿದ್ದ ಗಡಿಯನ್ನು ಒಪ್ಪಿಕೊಳ್ಳಲು ಚೀನಾ ನಿರಾಕರಿಸುತ್ತದೆ. ಆದರೆ, ಈ ಗಡಿಯನ್ನು ಭಾರತ ಒಪ್ಪಿಕೊಳ್ಳುತ್ತದೆ. 1914ರಿಂದ ಅಸ್ತಿತ್ವಕ್ಕೆ ಬಂದ ಮೆಕ್‌ಮಹನ್ ಗಡಿಯನ್ನು ಮೆಕ್‌ಮಹನ್ ಲೈನ್ ಎಂದೇ ಗುರುತಿಸಲಾಗುತ್ತದೆ. ನಂತರದ ದಿನಗಳಲ್ಲಿ ಚೀನಾವು ಈ ಗಡಿಯನ್ನು 'ಕಾನೂನುಬಾಹಿರ ಮೆಕ್‌ಮಹನ್ ಲೈನ್' ಎಂದು ತನ್ನ ಭೂಪಟಗಳಲ್ಲಿ ಮತ್ತು ದಾಖಲೆಗಳಲ್ಲಿ ಉಲ್ಲೇಖಿಸಿದೆ. ಅನಂತರದ ವರ್ಷಗಳಲ್ಲಿ ಎರಡೂ ದೇಶಗಳ ಮಧ್ಯೆ ತೀರಾ ದೊಡ್ಡಮಟ್ಟದ ಸಂಘರ್ಷ ನಡೆದಿರಲಿಲ್ಲ. 1954ರಲ್ಲಿ ಭಾರತದ 'ಸರ್ವೆ ಆಫ್ ಇಂಡಿಯಾ' ದೇಶದ ಮೊದಲ ಅಧಿಕೃತ ನಕ್ಷೆಯನ್ನು ಬಿಡುಗಡೆ ಮಾಡಿತು. ಇದಕ್ಕೆ ಚೀನಾ ಆಕ್ಷೇಪ ದಾಖಲಿಸಿತ್ತು.

1956ರಲ್ಲಿ ಎರಡೂ ದೇಶದ ಸೈನಿಕರ ಮಧ್ಯೆ ವಿವಾದಿತ ಗಡಿಗಳ ಕೆಲ ಠಾಣೆಗಳಲ್ಲಿ ಸಣ್ಣಮಟ್ಟದ ಸಂಘರ್ಷ ನಡೆಯಿತು. 'ಭಾರತದ ಸೈನಿಕರು ನಮ್ಮ ನೆಲವನ್ನು ಅತಿಕ್ರಮಿಸಿದ್ದಾರೆ' ಎಂದು ಚೀನಾದ ಅಧ್ಯಕ್ಷ 'ಚೌ ಎನ್-ಲೇ' ಜಾಗತಿಕ ನಾಯಕರಿಗೆ, ನಕ್ಷೆ ಸಹಿತ ಸುದೀರ್ಘ ಪತ್ರ ಬರೆದಿದ್ದರು. (ಈ ಪತ್ರವನ್ನು 1962ರಲ್ಲಿ ಚೀನಾದ ಪೀಕಿಂಗ್ ಪಬ್ಲಿಷಿಂಗ್ ಸಂಸ್ಥೆಯ ವಿದೇಶಿ ಭಾಷಾ ವಿಭಾಗವು ಪುಸ್ತಕರೂಪದಲ್ಲಿ ಪ್ರಕಟಿಸಿದೆ) 1959ರ ವೇಳೆಗೆ ವಿವಾದ ತೀವ್ರತೆ ಪಡೆಯಿತು. 1961ರಲ್ಲಿ ಚೀನಾದ ಸೈನಿಕರು ಯುದ್ಧಕ್ಕೆ ಸಿದ್ಧತೆ ನಡೆಸಿದ್ದರು. 1962ರಲ್ಲಿ ಯುದ್ಧ ನಡೆಯಿತು. ಕದನ ವಿರಾಮ ಘೋಷಣೆಯಾಯಿತಾದರೂ, ಗಡಿ ವಿವಾದ ಇನ್ನೂ ಮುಂದುವರಿದಿದೆ.

**ಪ್ರಜಾವಾಣಿ ಪ್ರಜಾಧ್ವನಿ** – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಅಲ್ಲ 57% ಹೌದು 43%

ಎರಡು ಸಾವಿರ ರೂಪಾಯಿ ಮುಖಬೆಲೆಯ ನೋಟು ರದ್ದು ಮಾಡುವಂತೆ ಬಿಜೆಪಿ ಸಂಸದ ಸುಶೀಲ್‌ಕುಮಾರ್ ಮೋದಿ ರಾಜ್ಯಸಭೆಯಲ್ಲಿ ಒತ್ತಾಯಿಸಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

## 'ಮೆಕ್‌ಮಹನ್ ಲೈನ್'

1914ರಲ್ಲಿ ಬ್ರಿಟಿಷ್ ಸರ್ಕಾರ ಮತ್ತು ಟಿಬೆಟ್ ನಡುವಣ ಒಪ್ಪಂದದ ಮೂಲಕ ಈ ಗಡಿರೇಖೆಯನ್ನು ಗುರುತಿಸಲಾಗಿತ್ತು. ಆದರೆ ಈ ಗಡಿರೇಖೆಯನ್ನು ಚೀನಾ ಒಪ್ಪಿಕೊಂಡಿಲ್ಲ. 'ಟಿಬೆಟ್ ಪ್ರದೇಶವು ಚೀನಾದ ಭಾಗ. ಹೀಗಾಗಿ ಗಡಿ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಟಿಬೆಟ್‌ಗೆ ಇಲ್ಲ. ಹೀಗಾಗಿ 'ಮೆಕ್‌ಮಹನ್ ಲೈನ್' ಅನ್ನು ಗಡಿ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂಬುದು ಚೀನಾದ ಪ್ರತಿಪಾದನೆ.

- 'ಮೆಕ್‌ಮಹನ್ ಲೈನ್'ನಿಂದ ದಕ್ಷಿಣಕ್ಕಿರುವ ಭಾರತದ ಅರುಣಾಚಲ ಪ್ರದೇಶದ ಬಹುಪಾಲು ಭಾಗ ತನ್ನದು ಎಂಬುದು ಚೀನಾದ ವಾದ
- 1962ರಲ್ಲಿ ಕದನ ವಿರಾಮ ಘೋಷಣೆಯಾದ ನಂತರ ಈ ಗಡಿಯನ್ನು 'ಕದನ ವಿರಾಮ ಗಡಿ' ಎಂದು ಘೋಷಿಸಲಾಯಿತು. 1993ರ ದ್ವಿಪಕ್ಷೀಯ ಒಪ್ಪಂದದಲ್ಲಿ ಇದನ್ನು ವಾಸ್ತವ ಗಡಿ ರೇಖೆ (ಲೈನ್ ಆಫ್ ಆಕ್ಚುಯಲ್ ಕಂಟ್ರೋಲ್-ಎಲ್‌ಎಸಿ) ಎಂದು ಘೋಷಿಸಲಾಯಿತು

**34,750** ಚದರ ಕಿ.ಮೀ.

ಪ್ರದೇಶವನ್ನು ಚೀನಾ ಅತಿಕ್ರಮಿಸಿಕೊಂಡಿದೆ. ಇಲ್ಲಿನ ಇನ್ನೂ 20,250 ಚದರ ಕಿ.ಮೀ. ಪ್ರದೇಶ ತನ್ನದೆಂದು ಪ್ರತಿಪಾದಿಸುತ್ತಿದೆ

## ಕಾರಾಕೋರಂ ಪ್ರದೇಶ

ಕಾರಾಕೋರಂ ಪ್ರದೇಶವು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಾಗ. ಚೀನಾ ಮತ್ತು ಪಾಕಿಸ್ತಾನದ ಗಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು 1963ರಲ್ಲಿ ಎರಡೂ ದೇಶಗಳು ಒಪ್ಪಂದ ಮಾಡಿಕೊಂಡವು. ಈ ಒಪ್ಪಂದದ ಭಾಗವಾಗಿ ಕಾರಾಕೋರಂ ಪ್ರದೇಶವನ್ನು ಪಾಕಿಸ್ತಾನವು ಚೀನಾಕ್ಕೆ ಬಿಟ್ಟುಕೊಟ್ಟಿತು.ಆದರೆ, ಇದು ಭಾರತದ ನೆಲ. ಚೀನಾದ ಮಹತ್ವಾಕಾಂಕ್ಷಿ 'ಸಿಲ್ಕ್‌ರೂಟ್' ಕಾರಾಕೋರಂ ಪರ್ವತ ಪ್ರದೇಶವನ್ನು ಹಾದುಹೋಗುತ್ತದೆ

## ಗಾಲ್ವನ್ ಸಂಘರ್ಷ

ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ 2020ರಲ್ಲಿ ಭಾರತ ಮತ್ತು ಚೀನಾ ಸೈನಿಕರ ಮಧ್ಯೆ ದೊಡ್ಡ ಸಂಘರ್ಷ ನಡೆದಿತ್ತು. 1967ರ ನಾತುಲಾ ಸಂಘರ್ಷದ ನಂತರ ನಡೆದ ಅತ್ಯಂತ ದೊಡ್ಡ ಸಂಘರ್ಷವಿದು. 1967ರ ನಂತರದ ಸಂಘರ್ಷದಲ್ಲಿ ಸೈನಿಕರು ಮೊದಲ ಬಾರಿ ಜೀವಕಳೆದುಕೊಂಡಿದ್ದೂ ಇದೇ ಸಂಘರ್ಷದಲ್ಲಿ. ಎಲ್‌ಎಸಿಯು ಗಾಲ್ವಾನ್ ಕಣಿವೆಗೆ ಸಮನಾಂತರವಾಗಿಯೇ ಇದೆ. ಕೆಲವೆಡೆ ಕಣಿವೆಯ ಪೂರ್ವಭಾಗದಲ್ಲಿ ಮತ್ತು ಕೆಲವೆಡೆ ಕಣಿವೆಯ ಉತ್ತರ ಭಾಗದಲ್ಲಿ ಎಲ್‌ಎಸಿ ಇದೆ. 2020ರ ಮೇನಲ್ಲಿ ಚೀನಾ ಸೈನಿಕರು ಈ ಕಣಿವೆಯನ್ನು ದಾಟಿ, ಗಾಲ್ವಾನ್ ನದಿಯ ದಕ್ಷಿಣ ದಂಡೆಗೆ ಬಂದಿದ್ದರು. ಅದನ್ನು ಭಾರತೀಯ ಸೈನಿಕರು ಪ್ರತಿಭಟಿಸಿದಾಗ ಮಾರಾಮಾರಿ ನಡೆದಿತ್ತು. ಭಾರತದ 20ಕ್ಕೂ ಹೆಚ್ಚು ಸೈನಿಕರು ಮೃತಪಟ್ಟಿದ್ದರು. ಚೀನಾದ ಹಲವು ಸೈನಿಕರೂ ಮೃತಪಟ್ಟಿದ್ದರು, ಆದರೆ ಮೃತರ ಅಧಿಕೃತ ಸಂಖ್ಯೆ ಲಭ್ಯವಿಲ್ಲ. ಭಾರತದ ನೆಲದಲ್ಲಿ ನಿರ್ಮಿಸಿದ್ದ ಡೇರೆ, ಬ್ಯಾರಕ್‌ಗಳನ್ನು ತೆರವು ಮಾಡಲು ಚೀನಾ 10ಕ್ಕೂ ಹೆಚ್ಚು ತಿಂಗಳು ತೆಗೆದುಕೊಂಡಿತು. ಈಗ ಈ ಪ್ರದೇಶದಲ್ಲಿ ಎರಡೂ ಕಡೆಯ ಸೈನಿಕರು ಸದಾ ಗಸ್ತು ನಡೆಸುತ್ತಾರೆ.

## ಅಕ್ಸಾಯ್‌ಚಿನ್

ಪೂರ್ವ ಲಡಾಖ್‌ನ ಈ ಭಾಗವನ್ನು ಚೀನಾ ಅತಿಕ್ರಮಿಸಿಕೊಂಡಿದೆ ಮತ್ತು ತನ್ನದೆಂದು ಪ್ರತಿಪಾದಿಸುತ್ತಿದೆ. 1959ರಲ್ಲಿ ಇಲ್ಲಿ ಎರಡೂ ದೇಶಗಳ ಸೈನಿಕರ ಮಧ್ಯೆ ಸಣ್ಣಮಟ್ಟದ ಸಂಘರ್ಷ ನಡೆದಿತ್ತು. ಆದರೆ, 1962ರಲ್ಲಿ ಯುದ್ಧನಡೆದ ಪ್ರದೇಶಗಳಲ್ಲಿ ಇದೂ ಒಂದು. ಪೂರ್ವ ಲಡಾಖ್‌ನಲ್ಲಿರುವ ಪ್ಯಾಂಗಾಂಗ್ ಸರೋವರದ ದಕ್ಷಿಣ ದಂಡೆಯವರೆಗಿನ ಪ್ರದೇಶ ಮತ್ತು ಉತ್ತರ ದಂಡೆಯ ಫಿಂಗರ್-ಫೈವರೆಗಿನ ಪ್ರದೇಶ ಮಾತ್ರ ಈಗ ಭಾರತದ ನಿಯಂತ್ರಣದಲ್ಲಿದೆ. ಅಲ್ಲಿಂದ ಉತ್ತರಕ್ಕೆ ಮತ್ತು ಪೂರ್ವಕ್ಕೆ ಇರುವ ಅಕ್ಸಾಯ್‌ಚಿನ್ ಪ್ರದೇಶ ಸಂಪೂರ್ಣವಾಗಿ ಚೀನಾದ ಹಿಡಿತದಲ್ಲಿ ಇದೆ. ಈ ಪ್ರದೇಶದಲ್ಲಿ ಭಾರತ-ಚೀನಾ ಸೇನೆಗಳು ಸದಾ ಮುಖಾಮುಖಿಯಾಗುತ್ತಿರುತ್ತವೆ. 2013ರಲ್ಲಿ 156 ದಿನ ಮತ್ತು 2017ರಲ್ಲಿ ಮೂರು ವಾರ ಎರಡೂ ಸೇನೆಗಳು ಮುಖಾಮುಖಿಯಾಗಿದ್ದವು.

**38,000** ಚದರ ಕಿ.ಮೀ.

ಪ್ರದೇಶವನ್ನು ಚೀನಾ ಅತಿಕ್ರಮಿಸಿಕೊಂಡಿದೆ

## ಪ್ಯಾಂಗಾಂಗ್ ಸರೋವರ

ಭಾರತದ ಲಡಾಖ್ ಮತ್ತು ಟಿಬೆಟ್ ಮಧ್ಯೆ ಹಂಚಿಹೋಗಿರುವ ಈ ಸರೋವರದ ಅಗಲ 135 ಕಿ.ಮೀ. ಇದರಲ್ಲಿ 90 ಕಿ.ಮೀ. ನಷ್ಟು ಪ್ರದೇಶವು ಭಾರತದ ಗಡಿಯೊಳಗೆ ಇದೆ. ಆದರೆ, 2020ರಲ್ಲಿ ಈ ಪ್ರದೇಶದ ಬಹುಪಾಲನ್ನು ಚೀನಾ ಅತಿಕ್ರಮಿಸಿತ್ತು. ಸತತ ಸಂಘರ್ಷ ಮತ್ತು ನಂತರದಲ್ಲಿ ನಡೆದ ಮಾತುಕತೆಗಳ ಫಲವಾಗಿ ಎರಡೂ ಕಡೆಯ ಸೈನಿಕರನ್ನು ವಾಪಸ್ ಕರೆಸಿಕೊಳ್ಳಲಾಗಿದೆ

ಗಾಲ್ವನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ಚೀನಾ–ಭಾರತ ಸೈನಿಕರ ಮಧ್ಯೆ ಸಂಘರ್ಷ ನಡೆದಿತ್ತು

## ನಾಥೂಲಾ ಮತ್ತು ದೋಕಲಾ ಸಂಘರ್ಷ

ದೋಕಲಾ ಪ್ರದೇಶದಲ್ಲಿ ಬರುವ 'ನಾಥೂಲಾ ಪಾಸ್'ನಲ್ಲಿ 1967ರಲ್ಲಿ ಎರಡೂ ದೇಶದ ಸೈನಿಕರ ಮಧ್ಯೆ ಸಶಸ್ತ್ರ ಸಂಘರ್ಷ ನಡೆಯಿತು. ಈ ಸಂಘರ್ಷದಲ್ಲಿ ಭಾರತದ 80 ಸೈನಿಕರು ಮೃತಪಟ್ಟದ್ದರೆ, ಚೀನಾದ 400 ಸೈನಿಕರು ಜೀವ ಕಳೆದುಕೊಂಡಿದ್ದರು. ಇದೇ ಪ್ರದೇಶದಲ್ಲೇ 2017ರಲ್ಲಿ ಮತ್ತೆ ಸಂಘರ್ಷ ನಡೆಯಿತು. ಅದನ್ನು ದೋಕಲಾ ಸಂಘರ್ಷ ಎಂದೇ ಗುರುತಿಸಲಾಗುತ್ತದೆ.

2017ರ ಜೂನ್‌ನಲ್ಲಿ ಭಾರತ–ಚೀನಾ ನಡುವೆ ಭೂತಾನ್ ಗಡಿಯ ದೋಕಲಾ ಎಂಬಲ್ಲಿ ಸಂಘರ್ಷ ಏರ್ಪಟ್ಟಿತ್ತು. ದೋಕಲಾದಲ್ಲಿ ಚೀನಾ ನಡೆಸಿದ್ದ ಮೂಲಸೌಕರ್ಯ ನಿರ್ಮಾಣ ಚಟುವಟಿಕೆಗೆ ಭಾರತೀಯ ಸೈನಿಕರು ತಡೆ ಒಡ್ಡಿದ್ದರು. ಹಿಂದೆ ಸರಿಯಲು ಎರಡೂ ಪಡೆಗಳು ಒಪ್ಪದ ಕಾರಣ, 73 ದಿನಗಳ ಕಾಲ ಬಿಗುವಿನ ಸ್ಥಿತಿ ಇತ್ತು. ಉಭಯ ದೇಶಗಳು ಒಪ್ಪಂದಕ್ಕೆ ಬಂದು, ಯಥಾಸ್ಥಿತಿ ಕಾಪಾಡಿಕೊಳ್ಳಲು ನಿರ್ಧರಿಸಿದ್ದವು. ಈ ಸಂಘರ್ಷದ ಹಿಂದೆಯೂ ಚೀನಾದ ಗಡಿ ವಿಸ್ತರಣೆಯ ದಾಹ ಕಾಣಿಸುತ್ತದೆ.

ರಕ್ಷಣೆ ದೃಷ್ಟಿಯಿಂದ ಅತಿ ಮಹತ್ವದ ಸ್ಥಳವಾಗಿರುವ ದೋಕಲಾ ಮೇಲೆ ಚೀನಾ ಹಾಗೂ ಭೂತಾನ್ ಹಕ್ಕು ಸ್ಥಾಪಿಸಿವೆ. ಭೂತಾನ್ ಪರವಾಗಿ ಭಾರತ ನಿಂತಿದೆ. ದೋಕಲಾ ಪ್ರಸ್ಥಭೂಮಿಯಲ್ಲಿ ಬರುವ ಝುಂಪೇರಿ ರಿಡ್ಜ್ ಎಂಬ ಪ್ರದೇಶಕ್ಕೆ ಪ್ರವೇಶ ಪಡೆಯುವುದು ಚೀನಾದ ಉದ್ದೇಶವಾಗಿತ್ತು. ಈ ಜಾಗವು ಭಾರತದ ಮಹತ್ವಾಕಾಂಕ್ಷಿ ಸಿಲಿಗುರಿ ಕಾರಿಡಾರ್ ಅನ್ನು ಸಂಪರ್ಕಿಸುತ್ತದೆ. ಈ ಕಾರಿಡಾರ್, ಈಶಾನ್ಯ ರಾಜ್ಯಗಳನ್ನು ಭಾರತದ ಇತರೆ ಭಾಗದ ಜೊತೆ ಸಂಪರ್ಕಿಸುತ್ತದೆ. ಝುಂಪೇರಿ ರಿಡ್ಜ್ ಮೂಲಕ ಸಿಲಿಗುರಿ ಕಾರಿಡಾರ್‌ಗೆ ಚೀನಾ ಪ್ರವೇಶ ಸಾಧ್ಯವಾದರೆ ಅದು, ಭಾರತದ ಸಾರ್ವಭೌಮತೆಗೆ ಬೆದರಿಕೆಯಾಗುತ್ತದೆ ಎಂದು ವಿಶ್ಲೇಷಿಸಲಾಗಿದೆ.

## ಭೌಗೋಳಿಕ ಆಯಕಟ್ಟು ತವಾಂಗ್, ಯಾಂಗ್‌ತ್ಸೆ

ಅರುಣಾಚಲ ಪ್ರದೇಶದ ತವಾಂಗ್ ಮೂಲಕ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಹಾದುಹೋಗಿದೆ. ಚೀನಾ ಹಾಗೂ ಭಾರತ ಗಡಿಯ ತವಾಂಗ್‌ನಲ್ಲಿ ಎರಡೂ ಕಡೆಯ ಯೋಧರು ಗಸ್ತು ತಿರುಗುತ್ತಿದ್ದಾರೆ. ಇದೇ ಶುಕ್ರವಾರ ಘರ್ಷಣೆ ನಡೆದಿರುವುದು ತವಾಂಗ್‌ನಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು 35 ಕಿಲೋಮೀಟರ್ ದೂರದಲ್ಲಿರುವ ಯಾಂಗ್‌ತ್ಸೆಯಲ್ಲಿ. ಭೌಗೋಳಿಕವಾಗಿ ಈ ಪ್ರದೇಶ ಎರಡೂ ದೇಶಗಳಿಗೆ ಮಹತ್ವದ್ದು.

ಈಗ ಭಾರತದ ನಿಯಂತ್ರಣದಲ್ಲಿರುವ 17,000 ಅಡಿ ಎತ್ತರದ ಯಾಂಗ್‌ತ್ಸೆ ಪರ್ವತದ ಮೇಲೆ ಚೀನಾ ಕಣ್ಣಿಟ್ಟಿರುವುದೇ ಘರ್ಷಣೆಗೆ ಕಾರಣ ಎನ್ನಲಾಗಿದೆ. ಹಿಮಚ್ಛಾದಿತ ಈ ಪರ್ವತದ ಮೇಲಿನಿಂದ ವಾಸ್ತವ ನಿಯಂತ್ರಣ ರೇಖೆಯಲ್ಲಿ ನಡೆಯುವ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡಬಹುದು. 2021ರ ಅಕ್ಟೋಬರ್‌ನಲ್ಲಿ ಈ ಜಾಗಕ್ಕೆ ಒಳನುಸುಳುವ ಯತ್ನವನ್ನು ಚೀನಾ ಪಡೆಗಳು ಮಾಡಿದ್ದವು. ಇದೇ ಶುಕ್ರವಾರ ನಡೆದಿರುವ ಘಟನೆಯು, ಯಾಂಗ್‌ತ್ಸೆ ಪರ್ವತದ ಮೇಲೆ ಹಿಡಿತ ಸಾಧಿಸುವ ಚೀನಾದ ಮತ್ತೊಂದು ಯತ್ನವಾಗಿದೆ. ತವಾಂಗ್‌ನ ಗಡಿಯಲ್ಲಿ ಕಳೆದ 10 ವರ್ಷಗಳಿಂದ ಚೀನಾ ತನ್ನ ಸೇನಾ ಮೂಲಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುತ್ತಿದೆ ಎಂಬ ಆರೋಪವಿದೆ. ಟಿಬೆಟ್ ಪ್ರಸ್ಥಭೂಮಿಗೆ ಹೊಂದಿಕೊಂಡ ತನ್ನ ಜಾಗದಲ್ಲಿ, ಹೊಸ ಹೆದ್ದಾರಿಗಳು, ಸೇನಾ ಗಡಿ ಠಾಣೆಗಳು, ಹೆಲಿಪ್ಯಾಡ್, ಕ್ಷಿಪಣಿ ಉಡ್ಡಯನ ಸ್ಥಳಗಳನ್ನು ಚೀನಾ ನಿರ್ಮಿಸಿದೆ. ಈ ಎಲ್ಲ ಕಾಮಗಾರಿಗಳನ್ನು ತವಾಂಗ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾಡಲಾಗಿದೆ ಎನ್ನಲಾಗಿದೆ. ತವಾಂಗ್‌ನಲ್ಲಿ ಘರ್ಷಣೆ ನಡೆದಿರುವುದು ಇದೇ ಹೊಸದಲ್ಲ. 1962ರಲ್ಲಿ ಭಾರತ ಹಾಗೂ ಚೀನಾ ನಡುವಣ ಪೂರ್ಣ ಪ್ರಮಾಣದ ಯುದ್ಧದಲ್ಲಿ ತವಾಂಗ್ ಕೇಂದ್ರಬಿಂದುವಾಗಿತ್ತು. 1962ರ ಅಕ್ಟೋಬರ್ 23ರಂದು ಚೀನಾದ 16 ಸಾವಿರ ಯೋಧರ ಬೃಹತ್ ಪಡೆಯು ತವಾಂಗ್ ಅನ್ನು ಸುತ್ತುವರಿದಿತ್ತು. ಟಿಬೆಟ್ ಗಡಿಯನ್ನು ಸಂಪರ್ಕಿಸುವ ಥಾಂಗ್ಲಾ ರಿಡ್ಜ್ ಮತ್ತು ಬುಮ್ಲಾ ಪಾಸ್ ಮೂಲಕ ಚೀನಾ ಸೈನಿಕರು ಒಳನುಸುಳಿದ್ದರು. ಈ ಬುಮ್ಲಾ ಪಾಸ್, ತವಾಂಗ್‌ನಿಂದ 35 ಕಿಲೋಮೀಟರ್ ದೂರದಲ್ಲಿದೆ. ಯುದ್ಧದಲ್ಲಿ ಭಾರತದ 800 ಸೈನಿಕರು ಮೃತಪಟ್ಟಿದ್ದರು.




## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಸೂರ್ಯಗ್ರಹಣ** ಸಂಭವಿಸುವ ವಿಶ್ವಾಸಾರ್ಹ ಮಾಹಿತಿಯನ್ನು ಹಿಂದೂ ಪಂಚಾಗದ ಮೂಲಕ ಮಾತ್ರವೇ ಪಡೆಯಬಹುದು ಎಂದು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ನಾಸಾ) ಒಪ್ಪಿಕೊಂಡಿದೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. '₹120 ಕೋಟಿ ಖರ್ಚು ಮಾಡಿ, ಮೂರು ಬಾರಿ ಅಭಿಪ್ರಾಯವನ್ನು ಬದಲಿಸಿದ ಬಳಿಕ, ಪಂಚಾಂಗದಲ್ಲಿ ಮಾತ್ರ ಸೂರ್ಯಗ್ರಹಣದ ಖಚಿತ ಮಾಹಿತಿ ಇದೆ ಎಂಬುದನ್ನು ನಾಸಾ ಒಪ್ಪಿಕೊಂಡಿದೆ' ಎಂಬ ಪೋಸ್ಟ್ ಹರಿದಾಡುತ್ತಿದೆ. ಇದು ನಾಸಾದ ಖಗೋಳಶಾಸ್ತ್ರಜ್ಞರೊಬ್ಬರ ಹೇಳಿಕೆಯನ್ನು ಆಧರಿಸಿದೆ ಎಂದು ಹೇಳಲಾಗಿದೆ. ಆದರೆ ಇದು ದಾರಿ ತಪ್ಪಿಸುವ ಮಾಹಿತಿ.

**ಸೂರ್ಯಗ್ರಹಣದ** ಮಾಹಿತಿಗೆ ಪಂಚಾಂಗವನ್ನು ಬಳಕೆ ಮಾಡುವುದಾಗಿ ನಾಸಾ ಹೇಳಿಕೊಂಡಿಲ್ಲ ಎಂದು 'ಲಾಜಿಕಲ್ ಇಂಡಿಯನ್' ತಿಳಿಸಿದೆ. ಸೂರ್ಯಗ್ರಹಣವನ್ನು ಗಣಿತಶಾಸ್ತ್ರ ಹಾಗೂ ನ್ಯೂಟನ್ ಚಲನೆಯ ನಿಯಮಗಳ ಆಧಾರದಲ್ಲಿ ಖಚಿತವಾಗಿ ಲೆಕ್ಕಹಾಕುವ ಸಂಪೂರ್ಣ ವಿಧಾನವನ್ನು ನಾಸಾ ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ. ಗ್ರಹಣ ಹಾಗೂ ಹಿಂದೂ ಪಂಚಾಂಗಕ್ಕೆ ಸಂಬಂಧಿಸಿದಂತೆ ನಾಸಾದ ಅಧಿಕೃತ ಜಾಲತಾಣದ ವೇದಿಕೆಯೊಂದರಲ್ಲಿ ನಡೆದ ಚರ್ಚೆಯಲ್ಲಿ ಭಾಗಿಯಾಗಿದ್ದ ನಾಸಾದ ಖಗೋಳಶಾಸ್ತ್ರಜ್ಞರು, ಗ್ರಹಣಗಳ ಬಗ್ಗೆ ಪ್ರಾಚೀನ ಹಿಂದೂಗಳಿಗೆ ಗೊತ್ತಿತ್ತು ಎನಿಸುತ್ತದೆ ಎಂದು ವ್ಯಕ್ತಿಯೊಬ್ಬರ ಪ್ರಶ್ನೆಗೆ ಉತ್ತರಿಸಿದ್ದರು. ಆದರೆ, ಪಂಚಾಂಗ ಆಧರಿಸಿ ಗ್ರಹಣದ ಮಾಹಿತಿಯನ್ನು ನಾಸಾ ನೀಡುತ್ತದೆ ಎಂಬುದು ಸತ್ಯಕ್ಕೆ ದೂರವಾದುದು. ಸಾಮಾಜಿಕ ಜಾಲತಾಣಗಳಲ್ಲಿರುವ ಪೋಸ್ಟ್‌ನ ಮೂಲ ಮಾಹಿತಿಯು, ವಿಡಂಬನಾ ಬರಹಗಳನ್ನು ಪ್ರಕಟಿಸುವ 'ದಿ ಫಾಕ್ಸಿ' ಎಂಬ ವೆಬ್‌ಸೈಟ್‌ನಲ್ಲಿದೆ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಡಿಸೆಂಬರ್ 14, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶೀರ್ಷ ಕೃಷ್ಣ ಷಷ್ಠಿ ಗಂ. 23-43 ನಕ್ಷತ್ರ: ಮಘಾ ಗಂ. 29-16 ಯೋಗ: ವೈಧೃತಿ ಗಂ. 06-54 ಕರಣ: ಗರಜೆ ಗಂ. 10-34, ವೃಶ್ಚಿಕ ಮಾಸದ 27 ನೇ ದಿನ.
**ರಾಹುಕಾಲ :** ಮಧ್ಯಾಹ್ನ 12-00 -01-30
**ಸೂರ್ಯೋದಯ :** 06-48 ಸೂರ್ಯಾಸ್ತ : 06-02
**ಮುಸ್ಲಿಂ ದಿನಾಂಕ :** 19 ಜುಮಾದುಲ್ಲಾವಲ್
**ಅದೃಷ್ಟ ಸಂಖ್ಯೆ :** 1, 4

**ಮೇಷ:** ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ವೃತ್ತಿಯನ್ನು ಸವಾಲೆಂಬಂತೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತದೆ. ದಿನೇ ದಿನೇ ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ. ಸುಬ್ರಮಣ್ಯನನ್ನು ಪೂಜಿಸಿ.

**ವೃಷಭ:** ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ದೇಹದಲ್ಲಿ ಉಷ್ಣಾಂಶ ಅಧಿಕವಾಗುವುದರಿಂದ ಸಣ್ಣ-ಪುಟ್ಟ ಅನಾರೋಗ್ಯ ಎದುರಾಗಬಹುದು. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

**ಮಿಥುನ:** ಕಾರ್ಯ ಸಾಧನೆಗೆ ಅಕ್ಕ-ಪಕ್ಕದವರ ಅಡ್ಡಗಾಲು ಅಥವಾ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಸೂಕ್ಷ್ಮವಾಗಿ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು.

**ಕರ್ಕಾಟಕ:** ಹಣಕಾಸಿನ ವಿಚಾರದಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದರಲ್ಲಿ ವ್ಯತ್ಯಾಸವಾಗಬಹುದು. ಶ್ರಮದ ಫಲವು ಇನ್ನೊಬ್ಬರ ಪಾಲಾಗಲಿದೆ. ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು.

**ಸಿಂಹ:** ಸಾಂಸಾರಿಕವಾಗಿ ಮುಖ್ಯ ವಿಷಯದಲ್ಲಿ ಶುಭ ವಾರ್ತೆ ಕೇಳುವಿರಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಇಂದಿನಿಂದ ವಿಶೇಷ ಆಸಕ್ತಿ ಮೂಡುವುದು. ಇದುವರೆಗೂ ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯದಿಂದ ಬಗೆಹರಿಯುವವು.

**ಕನ್ಯಾ:** ಸಂಗೀತ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅಧಿಕ ಸಮಯ ಸಿಗುವುದು. ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ.

**ತುಲಾ:** ನಿಮ್ಮೆಲ್ಲಾ ಕಾರ್ಯಗಳಿಗೂ ಹಿರಿಯರ ಆಶೀರ್ವಾದ ಲಭಿಸುವುದು. ಹಲವಾರು ಅವಕಾಶಗಳು ನಿಮಗೆದುರಾಗಿದ್ದರೂ ಗೊಂದಲಗೊಳ್ಳದೆ ಸರಿಯಾಗಿರುವುದನ್ನೇ ಆಯ್ಕೆ ಮಾಡಿಕೊಳ್ಳುವಿರಿ. ವೃತ್ತಿ ಜೀವನ ಆರಂಭಗೊಳ್ಳುವುದು.

**ವೃಶ್ಚಿಕ:** ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಹೆಚ್ಚಿನ ಪ್ರಶಂಸೆ ದೊರೆತು ಬಡ್ತಿ ಸಿಗುವುದು. ಅನಿರೀಕ್ಷಿತ ಧನಲಾಭ ಉಂಟಾಗುವುದು. ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ.

**ಧನು:** ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ. ಸೋದರನನ್ನು ಸೇರಿಸಿಕೊಂಡು ನೂತನ ಘಟಕ ಆರಂಭಿಸಬಹುದು.

**ಮಕರ:** ವೃತ್ತಿಯಲ್ಲಿನ ಬದಲಾವಣೆ ಮಾಡುವ ಬಗ್ಗೆ ಹೆಂಡತಿಯೊಡನೆ ಮತ್ತು ಸ್ನೇಹಿತರೊಡನೆ ಚರ್ಚಿಸಿ ತೀರ್ಮಾನಿಸುವುದು ಒಳ್ಳೆಯದು. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಇಟ್ಟಂತಹ ಹರಕೆ ಮರೆಯದಿರಿ.

**ಕುಂಭ:** ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಮುಂದುವರಿಯುವಿರಿ. ಮಂದಗತಿಯಲ್ಲಿ ಸಾಗುತ್ತಿರುವ ಕೆಲಸಗಳನ್ನು ಶೀಘ್ರವಾಗಿ ಪೂರೈಸಲು ಸಿಬ್ಬಂದಿಗೆ ಒತ್ತಡ ಹೇರಬೇಕಾಗುವುದು.

**ಮೀನ:** ಹೊರ ದೇಶದಲ್ಲಿರುವ ಮಕ್ಕಳು ಮನೆಗೆ ಬರುವಂತಹ ಸಂತಸದ ಸುದ್ದಿ ಕೇಳಿ ಬರುತ್ತದೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಅಥವಾ ರಿಪೇರಿಗಳಿಂದ ಆದಾಯ ಹೆಚ್ಚುವುದು.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಸಂಸ್ಕಾರದಿಂದ ದರ್ಶನ

ಸಾಮಾನ್ಯರೂಪದಲಿ, ಸಂಸಾರಿ ವೇಷದಲಿ |
ಸ್ವಾಮಿ ನಿನ್ನೆಡೆಗೆ ಬರಬಹುದು ವರ ನೀಡಿ ||
ಮೈಮೆ ಕಾಂಬೊಡೆ ನಿನಗೆ ಸಂಸ್ಕಾರವಿರಬೇಕು |
ತಾಮಸಿಗೆ ವರವೆಲ್ಲಿ? – ಮಂಕುತಿಮ್ಮ || 777 ||

ಪದ-ಅರ್ಥ: ನಿನ್ನೆಡೆಗೆ = ನಿನ್ನ + ಎಡೆಗೆ(ಕಡೆಗೆ), ಮೈಮೆ = ಮಹಿಮೆ, ಕಾಂಬೊಡೆ = ಕಾಣಬೇಕಾದರೆ, ತಾಮಸಿಗೆ = ತಾಮಸಗುಣ ಉಳ್ಳವನಿಗೆ.

ವಾಚ್ಯಾರ್ಥ: ಭಗವಂತ ನಿನ್ನ ಬಳಿಗೆ ಸಾಮಾನ್ಯರೂಪದಲ್ಲಿಯೋ, ಸಂಸಾರಿವೇಷದಲ್ಲಿಯೋ, ವರ ನೀಡಲು ಬರಬಹುದು. ಆದರೆ ಅವನ ಮಹಿಮೆ ಕಾಣುವುದಕ್ಕೆ ನಿನಗೆ ಸಂಸ್ಕಾರವಿರಬೇಕು. ತಾಮಸಗುಣವುಳ್ಳವನಿಗೆ ವರ ಎಲ್ಲಿಯದು?

ವಿವರಣೆ: ಶ್ವೇತಾಶ್ವತರ ಉಪನಿಷತ್ತು ಭಗವಂತನ ರೂಪವನ್ನು ಹೇಳುವುದು ಹೀಗೆ,
ಏಕೋ ದೇವ: ಸರ್ವಭೂತೇಷು ಗೂಢ:
ಸರ್ವವ್ಯಾಪೀ ಸರ್ವಭೂತಾಂತರಾತ್ಮ |

"ದೇವರು ಒಬ್ಬನೇ. ಅವನು ಸರ್ವವಸ್ತುಗಳಲ್ಲಿ ರಹಸ್ಯವಾಗಿ ಅಡಗಿಕೊಂಡಿದ್ದಾನೆ. ಎಲ್ಲೆಡೆಗೂ ಹರಡಿದ್ದಾನೆ. ಎಲ್ಲ ಪ್ರಾಣಿಗಳಲ್ಲೂ ಆತ್ಮರೂಪಿಯಾಗಿದ್ದಾನೆ". ಆದ್ದರಿಂದ ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಂದು ಜೀವವೂ ದೈವಸ್ವರೂಪವೇ. ಆದರೆ ನಮಗೆ ಕಾಣುವುದು ದೇಹ ಮಾತ್ರ. ಅದರಿಂದ ನಾವು ಜೀವಿಗಳನ್ನು ಸಾಮಾನ್ಯರೆಂದೋ, ದೊಡ್ಡವರೆಂದೋ ಗುರುತಿಸುತ್ತೇವೆ. ದೇಹದಲ್ಲಿ ಅಂತರ್ಗತವಾದ ದೈವವನ್ನು ಗುರುತಿಸದೆ ಹೋಗುತ್ತೇವೆ. ನಮ್ಮ ಬದುಕಿಗೆ ಸರಿಯಾದ ಸಂಸ್ಕಾರ ದೊರಕಿದರೆ, ಸರ್ವರಲ್ಲೂ ದೇವರನ್ನು ಕಾಣಬಹುದು ಎಂಬುದು ಉಪನಿಷತ್ತಿನ ಅಂತರಾರ್ಥ.

ಒಬ್ಬ ಕವಿ ಶಬರಿ ಪ್ರಸಂಗವನ್ನು ಸುಂದರವಾಗಿ ನಿರೂಪಿಸುತ್ತಾನೆ. ರಾಮ-ಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಬಂದು ಆಕೆಯ ಅತಿಥ್ಯವನ್ನು ಸ್ವೀಕರಿಸಿ ಹೋದ ಮೇಲೆ ಆಶ್ರಮದ ನಿವಾಸಿಯೊಬ್ಬರು ಶಬರಿಯನ್ನು ಕೇಳುತ್ತಾರೆ, "ಶಬರಿ, ನೀನು ಹಿಂದೆ ಎಂದೂ ರಾಮ ಲಕ್ಷ್ಮಣರನ್ನು ಕಂಡಿದ್ದಿಲ್ಲ. ಈಗ ಬಂದವರೇ ರಾಮ- ಲಕ್ಷ್ಮಣರು ಎಂದು ನಿನಗೆ ಹೇಗೆ ಗೊತ್ತಾಯಿತು?" ಶಬರಿಯ ಉತ್ತರ ಅದ್ಭುತ. "ನನ್ನ ಹೃದಯ ಹೇಳಿತು, ಅವರೇ ರಾಮ- ಲಕ್ಷ್ಮಣರೆಂದು. ಅದಲ್ಲದೆ ಇಷ್ಟು ವರ್ಷಗಳಲ್ಲಿ ನನ್ನ ಆಶ್ರಮಕ್ಕೆ ಬಂದು ಹೋದವರೆಲ್ಲರೂ ರಾಮ-ಲಕ್ಷ್ಮಣರೇ"! ಬಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ತನ್ನ ದೈವವನ್ನು ಕಂಡವಳು ಶಬರಿ. ಅದಕ್ಕೆ ಕಾರಣ ಅವಳಿಗೆ ದೊರಕಿದ್ದ ಆತ್ಮ ಸಂಸ್ಕಾರ. ಮಂಗಳಾರತಿಯ ಹೊತ್ತಿಗೆ ಭಗವಂತನನ್ನು ತೋರಿಸುತ್ತೇನೆ ಎಂದಿದ್ದರು ಕನಕದಾಸರು. ಸರಿಯಾಗಿ ಆ ಹೊತ್ತಿಗೆ ಮುಂದೆ ಒಂದು ನಾಯಿ ಬಂದಿತು. ಉಳಿದವರಿಗೆ ಕಂಡಿದ್ದು ನಾಯಿ ಮಾತ್ರ. ಆದರೆ ವ್ಯಾಸರಾಯರಿಗೆ ಮತ್ತು ಕನಕದಾಸರಿಗೆ ಮಾತ್ರ ಕೃಷ್ಣ ಕಂಡ.

ಮರುದಿನ ಮತ್ತೆ ಅದೇ ನಿರೀಕ್ಷೆ. ಆಗ ಉಳಿದವರಿಗೆ ಕೇವಲ ಸರ್ಪ ಕಾಣಿಸಿದರೆ ಇವರಿಬ್ಬರಿಗೆ ಕೃಷ್ಣ ದರ್ಶನ. ಇದರರ್ಥ, ಸಂಸ್ಕಾರದಂತೆ ದರ್ಶನ. ಈ ಕಗ್ಗದ ಸಂದೇಶ ಇದೇ, ಭಗವಂತ ಯಾವ ರೂಪದಲ್ಲಿ ಮುಂದೆ ಬರುತ್ತಾನೋ ತಿಳಿಯದು. ಅದು ಸಾಮಾನ್ಯನ ರೂಪವಿರಬಹುದು, ಸನ್ಯಾಸಿ ವೇಷವಿರಬಹುದು. ಅವನು ಬರುವುದು ನಿನ್ನ ಉದ್ಧಾರಕ್ಕೇ, ವರನೀಡಲೆಂದು. ಆದರೆ ಆತನ ಮಹಿಮೆ ಕಾಣಲು ನಿನಗೆ ಸಂಸ್ಕಾರ ಬೇಕು. ತಾಮಸದ ಗುಣವುಳ್ಳವನಿಗೆ ದರ್ಶನ, ವರ ಹೇಗೆ ಸಾಧ್ಯ?

## ಪದಬಂಧ 5168

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ತಿಂಗಳ ಕೊನೆಗೆ ಒಂದಾಗಿ ಸೇರಿಸಿದುದು (3)
3.ಅವಸರದಲ್ಲಿರುವ ರಾಜ (3)
6.ಈತ ಕರುಣಾಳು (3)
7.ಮಣಿ ಧರಿಸಿರುವ ನಲ್ಲೆ (3)
8.ಟಾರ ರಸ್ತೆ ಬದಿಯಲ್ಲಿನ ಚರಂಡಿ (3)
10.ಮುದ್ದು ಮಾಡುತ್ತಾ ಕುಡಿಸಿದ ಔಷಧ (2)
11.ಕನ್ನ ಕೊರೆದಾಗ ಕಾಣಿಸಿರುವ ದರ್ಪಣ (3)
13.ಹಣವೆಂದಾಗ ಬಾಯ್ಬಿಡುವ ಶವ! (2)
14.ಧನ ಕನಕಗಳಿಗಾಗಿ ನಡೆದ ಯುದ್ಧ (3)
15.ಗೆಲವು ಹೀಗೆ ದೊರಕಿದೆ (3)
16.ಹಾರ ಧರಿಸಿರುವ ಬ್ರಾಹ್ಮಣ (3)
17.ಈ ರೀತಿ ಕೆಳಕ್ಕೆ ಬೀಳಿಸು (3)
18.ಇದು ಹೊಸದು (3)

**ಮೇಲಿಂದ ಕೆಳಕ್ಕೆ**
1.ಮಧುರವಾದ ಸ್ವಪ್ನ (5)
2.ಸರ ಕೊಟ್ಟದ್ದಕ್ಕೇ ಈ ಸಲಿಗೆ! (3)
3.ಅಗಲು ನುಂಗುವಾಗ ಬಂದಿರುವ ದುಃಖ (2)
4.ಹದ್ದು ಕುಳಿತಿರುವ ಜಾಗವೇ ಎಲ್ಲೆ! (4)
5.ಹಂಗಿಗೆ ಒಳಗಾದವನು (2)
9.ಮದುವೆಯಲ್ಲಿ ಮುಂಗೈಗೆ ಕಟ್ಟುವ ರಕ್ಷಾ ಸೂತ್ರ (3)
10.ಉಡಿ ಅಥವಾ ಆಶ್ರಯ (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
13.ಮಹತ್ವಾಕಾಂಕ್ಷೆಯಿದು (4)
14.ವನದ ಬಗ್ಗೆ ಬರೆದಿರುವ ಪದ್ಯ (3)
15.ಅಡ್ಡಿ ಹೀಗೆ ಬಂದಿದೆ (2)
16.ಹಾವುಗೆ ಹತ್ತಿರವಿರುವ ಉರಗ (2)

| | | | | | | | | |
|---|---|---|---|---|---|---|---|---|
| 1 | | 2 | ■ | 3 | | 4 | ■ | 5 |
| | ■ | 6 | | | ■ | 7 | | |
| 8 | | | ■ | ■ | ■ | | ■ | ■ |
| | ■ | ■ | 9 | ■ | 10 | | ■ | ■ |
| | ■ | ■ | 11 | | | ■ | ■ | 12 |
| ■ | ■ | 13 | | ■ | | ■ | ■ | |
| ■ | ■ | | ■ | ■ | ■ | 14 | | |
| 15 | | | ■ | 16 | | | ■ | |
| | ■ | 17 | | | ■ | 18 | | |

### 5167 ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅಭಿಭವ 3.ಬುದ್ಧಿವಾದ 5.ನೆಮ್ಮದಿ 6.ತವಕ 8.ಪಾಮರ 9.ವಿಯೋಗ 10.ಗುಲಾಮ 12.ಕುಣಿಕೆ 14.ಕಳೇಬರ 15.ಕಚಗುಳಿ .

**ಮೇಲಿಂದ ಕೆಳಕ್ಕೆ:**
1.ಅಭಿಜಾತ 2.ವರ್ತನೆ 3.ಬುನಾದಿ 4.ದರಕಾರ 7.ಕರಗ 8.ಪಾರಾಗು 9.ವಿನಾಯಕ 11.ಮರೆಗುಳಿ 12.ಕುಠಾರ 13.ಕೆಡುಕ

## ಸುಡೊಕು 5554

| | | | | | | | | |
|---|---|---|---|---|---|---|---|---|
| | 5 | 4 | | 7 | | | 3 | |
| 7 | | | 2 | | 3 | 6 | | 8 |
| 8 | | | | 4 | | | 2 | |
| 4 | | 3 | | 1 | | 8 | | 6 |
| | | | 9 | | 4 | | 7 | |
| 9 | | 8 | | 3 | | 4 | | 1 |
| 1 | | 9 | 3 | | 5 | | 8 | 7 |
| | 6 | | | 9 | | | | |
| 5 | | 7 | 4 | | 1 | 9 | | 3 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5553 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 1 | 6 | 8 | 3 | 9 | 7 | 5 |
| 9 | 8 | 5 | 2 | 4 | 7 | 6 | 1 | 3 |
| 7 | 6 | 3 | 1 | 9 | 5 | 8 | 4 | 2 |
| 4 | 5 | 9 | 8 | 2 | 1 | 7 | 3 | 6 |
| 6 | 1 | 7 | 3 | 5 | 4 | 2 | 9 | 8 |
| 8 | 3 | 2 | 9 | 7 | 6 | 4 | 5 | 1 |
| 3 | 2 | 4 | 7 | 1 | 8 | 5 | 6 | 9 |
| 5 | 9 | 6 | 4 | 3 | 2 | 1 | 8 | 7 |
| 1 | 7 | 8 | 5 | 6 | 9 | 3 | 2 | 4 |

## ರಾಜ್ ಕುಂದ್ರಾಗೆ 'ಸುಪ್ರೀಂ'ನಿಂದ ನಿರೀಕ್ಷಣಾ ಜಾಮೀನು

ನವದೆಹಲಿ (ಪಿಟಿಐ): ಅಶ್ಲೀಲ ವಿಡಿಯೊಗಳನ್ನು ಬಿತ್ತರಿಸಿರುವ ಪ್ರಕರಣದಲ್ಲಿ ಉದ್ಯಮಿ ರಾಜ್ ಕುಂದ್ರಾ, ನಟಿಯರಾದ ಶೆರ್ಲಿನ್ ಚೋಪ್ರಾ, ಪೂನಂ ಪಾಂಡೆ ಹಾಗೂ ಇತರರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ತನಿಖೆಗೆ ಸಹಕರಿಸುವಂತೆ ಆರೋಪಿಗಳಿಗೆ ನ್ಯಾಯಪೀಠವು ನಿರ್ದೇಶನ ನೀಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form






LOOKING TO BUILD, BUY OR SELL A PROPERTY
Please refer Classifieds on Sunday

# ಮೋದಿ ಹತ್ಯೆ ಹೇಳಿಕೆ: ಕಾಂಗ್ರೆಸ್ ಮುಖಂಡ ರಾಜ ಬಂಧನ

## ಪಕ್ಷದಿಂದ ಶೋಕಾಸ್ ನೋಟಿಸ್: ಜಾಮೀನು ನಿರಾಕರಣೆ

ಭೋಪಾಲ್/ದಮೋಹ್ (ಪಿಟಿಐ): 'ಸಂವಿಧಾನ ಉಳಿಸುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹತ್ಯೆ ಮಾಡಲು ಸಿದ್ಧರಾಗಿ' ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದ ಮಧ್ಯಪ್ರದೇಶದ ಮಾಜಿ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ರಾಜ ಪಟೇರಿಯಾ ಅವರನ್ನು ಮಂಗಳವಾರ ಬಂಧಿಸಲಾಗಿದೆ.

'ದಮೋಹ್ ಜಿಲ್ಲೆಯ ಹಾತಾ ನಗರದಲ್ಲಿರುವ ರಾಜ ಅವರ ನಿವಾಸಕ್ಕೆ ಮಂಗಳವಾರ ಬೆಳಿಗ್ಗೆ 5.30ರ ಸುಮಾರಿಗೆ ತೆರಳಿದ್ದ ಪೊಲೀಸರ ತಂಡವು ಅವರನ್ನು ಬಂಧಿಸಿದೆ' ಎಂದು ಹಾತಾ ಉಪ ವಿಭಾಗದ ಪೊಲೀಸ್ ಅಧಿಕಾರಿ ವೀರೇಂದ್ರ ಬಹದ್ದೂರ್ ಸಿಂಗ್ ತಿಳಿಸಿದ್ದಾರೆ.

'ನ್ಯಾಯಾಲಯವು ರಾಜ ಅವರಿಗೆ ಜಾಮೀನು ನೀಡಲು ನಿರಾಕರಿಸಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಇದರ ವಿರುದ್ಧ ಉನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲಿದ್ದೇವೆ' ಎಂದು ವಕೀಲ ಗೋವಿಂದ್ ನಾರಾಯಣ್ ಬಫೇಲಾ ಹೇಳಿದ್ದಾರೆ.

ರಾಜ ಪಟೇರಿಯಾ ಅವರನ್ನು ಮಂಗಳವಾರ ಬಂಧಿಸಿ ಕರೆದೊಯ್ದ ಪೊಲೀಸರು –ಪಿಟಿಐ ಚಿತ್ರ

'ರಾಜ ವಿರುದ್ಧ ದಾಖಲಾಗಿರುವ ಎಫ್ಐಆರ್‌ನಲ್ಲಿ ಹೆಚ್ಚುವರಿಯಾಗಿ ಐಪಿಸಿ ಸೆಕ್ಷನ್ 115 ಮತ್ತು 117ನ್ನು ಸೇರ್ಪಡೆ ಮಾಡಲಾಗಿದೆ' ಎಂದು ಮಧ್ಯ ಪ್ರದೇಶದ ಗೃಹ ಸಚಿವ ನರೋತ್ತಮ್ ಮಿಶ್ರಾ ಮಾಹಿತಿ ನೀಡಿದ್ದಾರೆ.

ಪವಯ್‌ನಲ್ಲಿರುವ ಪಿಡಬ್ಲ್ಯುಡಿ ಅತಿಥಿಗೃಹದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಸಲು ಅನುಮತಿ ಪಡೆದಿರಲಿಲ್ಲ ಎಂದೂ ಹೇಳಲಾಗಿದೆ.

ಬಂಧನದ ಬೆನ್ನಲ್ಲೇ ಮಧ್ಯಪ್ರದೇಶ ಕಾಂಗ್ರೆಸ್ ಘಟಕವು ರಾಜ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ.

'ಪ್ರಧಾನಿ ವಿರುದ್ಧ ನೀವು ನೀಡಿರುವ ಹೇಳಿಕೆ ಖಂಡನೀಯವಾದುದು. ನಿಮ್ಮನ್ನು ಪಕ್ಷದಿಂದ ಏಕೆ ವಜಾಗೊಳಿಸಬಾರದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಪವಯ್‌ನಲ್ಲಿ ನಡೆದಿದ್ದ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದ ರಾಜ, 'ಮೋದಿ ಅವರು ಜಾತಿ, ಧರ್ಮ ಮತ್ತು ಭಾಷೆಯ ಆಧಾರದಲ್ಲಿ ದೇಶವನ್ನು ಒಡೆಯಲಿದ್ದಾರೆ. ದಲಿತರು, ಬುಡಕಟ್ಟು ಸಮುದಾಯದವರು ಮತ್ತು ಅಲ್ಪಸಂಖ್ಯಾತರ ಭವಿಷ್ಯ ಅಪಾಯದಲ್ಲಿದೆ. ನೀವು ಸಂವಿಧಾನವನ್ನು ಉಳಿಸಬೇಕೆಂದಿದ್ದರೆ ಮೋದಿ ಅವರನ್ನು ಹತ್ಯೆ ಮಾಡಲು ಸಿದ್ಧರಾಗಿ' ಎಂದು ಹೇಳಿದ್ದರು. ಈ ವಿಡಿಯೊ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

## ಕೊಬಾಡ್ ಗಾಂಧಿ ಜೀವನ ಚರಿತ್ರೆ: ಪ್ರಶಸ್ತಿ ಹಿಂಪಡೆದ 'ಮಹಾ'

ಮುಂಬೈ (ಪಿಟಿಐ): ಮಾವೊವಾದಿ ಸಿದ್ಧಾಂತದ ಪ್ರತಿಪಾದಕರೆಂದು ಆರೋಪಿಸಲಾಗಿರುವ ಕೊಬಾಡ್ ಗಾಂಧಿ ಅವರ ಜೀವನ ಚರಿತ್ರೆಯ ಮರಾಠಿ ಅನುವಾದಕ್ಕೆ ಘೋಷಿಸಿದ್ದ ಪ್ರಶಸ್ತಿಯನ್ನು ಮಹಾರಾಷ್ಟ್ರ ಸರ್ಕಾರ ಹಿಂದಕ್ಕೆ ಪಡೆದಿದೆ.

ಕೊಬಾಡ್ ಅವರ 'ಫ್ರಾಕ್ಚರ್ಡ್ ಫ್ರೀಡಂ: ಎ ಪ್ರಿಸನ್ ಮೆಮ್‌ವಾರ್' ಎಂಬ ಕೃತಿಯ ಅನುವಾದಕ್ಕಾಗಿ ಅನಘಾ ಲೆಲೆ ಅವರಿಗೆ ಡಿಸೆಂಬರ್ 6 ರಂದು ಮರಾಠಿ ಭಾಷಾ ಇಲಾಖೆಯು 2021ನೇ ಸಾಲಿನ 'ದಿವಂಗತ ಯಶವಂತರಾವ್ ಚೌಹಾಣ್ ಸಾಹಿತ್ಯ ಪ್ರಶಸ್ತಿ'ಯನ್ನು ಘೋಷಿಸಿತ್ತು. ಇದು ₹ 1 ಲಕ್ಷ ನಗದನ್ನು ಒಳಗೊಂಡಿತ್ತು.

## 'ಮಹಿಳಾ ಅಧಿಕಾರಿಗಳಿಗೆ ಬಡ್ತಿ: ವಿಶೇಷ ಆಯ್ಕೆ ಮಂಡಳಿಯಿಂದ ಪರಿಶೀಲನೆ'

ನವದೆಹಲಿ (ಪಿಟಿಐ): 'ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 246 ಮಹಿಳಾ ಅಧಿಕಾರಿಗಳಿಗೆ ಬಡ್ತಿ ನೀಡುವ ವಿಚಾರವಾಗಿ ರಚಿಸಲಾಗಿರುವ ವಿಶೇಷ ಆಯ್ಕೆ ಮಂಡಳಿಯು ಜನವರಿ 9ರಿಂದ ಪರಿಶೀಲನಾ ಕಾರ್ಯ ಆರಂಭಿಸಲಿದೆ' ಎಂದು ಕೇಂದ್ರ ಸರ್ಕಾರವು ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಆರ್. ಬಾಲಸುಬ್ರಮಣಿಯನ್ ಅವರು, 'ಮಹಿಳಾ ಅಧಿಕಾರಿಗಳ ಬಡ್ತಿ ವಿಚಾರವನ್ನು ವಿಶೇಷ ಆಯ್ಕೆ ಮಂಡಳಿ–3 ಪರಿಗಣನೆಗೆ ತೆಗೆದುಕೊಳ್ಳಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠಕ್ಕೆ ತಿಳಿಸಿದರು.

ನ್ಯಾಯಪೀಠವು ವಿಚಾರಣೆಯನ್ನು ಜನವರಿ 30ಕ್ಕೆ ಮುಂದೂಡಿತು.

## ರಾಷ್ಟ್ರಗೀತೆಗೆ ಅಪಮಾನ: ಬಿಜೆಪಿ ಆಕ್ರೋಶ

ಪಟ್ನಾ (ಪಿಟಿಐ): ಬಿಹಾರ ವಿಧಾನ ಸಭೆ ಅಧಿವೇಶನದ ಮೊದಲ ದಿನವಾದ ಸೋಮವಾರ, ರಾಷ್ಟ್ರಗೀತೆ ಹಾಡುವಾಗ ಕಾಂಗ್ರೆಸ್ ಶಾಸಕ ಅಬಿದುರ್ ರೆಹಮಾನ್ ಅವರು ಎದ್ದುನಿಂತು ಗೌರವ ಸೂಚಿಸಲಿಲ್ಲ. ಶಾಸಕರ ಈ ವರ್ತನೆಗೆ ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕಾಲಿನಲ್ಲಿ ನೋವಿದ್ದ ಕಾರಣ ರಾಷ್ಟ್ರಗೀತೆ ಹಾಡುವ ವೇಳೆ ಎದ್ದುನಿಲ್ಲಲು ಆಗಲಿಲ್ಲ' ಎಂದು ರೆಹಮಾನ್ ಹೇಳಿದ್ದಾರೆ.

ಆದರೆ, ಕಲಾಪ ಆರಂಭಕ್ಕೂ ಮುನ್ನ ಗಣ್ಯರ ನಿಧನಕ್ಕೆ ಸಂತಾಪ ಸೂಚಿಸುವ ವೇಳೆ ಇವರು ಎರಡು ನಿಮಿಷ ಎದ್ದುನಿಂತಿದ್ದರು.

## ಸುದ್ದಿ 2 ನಿಮಿಷ

### ದೆಹಲಿ: 450 ಬಗೆಯ ವೈದ್ಯಕೀಯ ಪರೀಕ್ಷೆಗಳು ಉಚಿತ

ನವದೆಹಲಿ (ಪಿಟಿಐ): ದೆಹಲಿಯ ಎಎಪಿ ಸರ್ಕಾರವು ತನ್ನ ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಲ್ಲಿ 450 ಬಗೆಯ ವೈದ್ಯಕೀಯ ಪರೀಕ್ಷೆಗಳನ್ನು ಜನವರಿ 1ರಿಂದ ಉಚಿತವಾಗಿ ನಡೆಸಲಿದೆ.

ಈ ಪೈಕಿ ಈಗಾಗಲೇ 212 ಬಗೆಯ ವೈದ್ಯಕೀಯ ಪರೀಕ್ಷಾ ಸೇವೆಯನ್ನು ದೆಹಲಿ ಸರ್ಕಾರ ಉಚಿತವಾಗಿ ನೀಡುತ್ತಿದೆ. ತನ್ನ ಆಸ್ಪತ್ರೆ ಮತ್ತು ಮೊಹಲ್ಲಾ ಕ್ಲಿನಿಕ್‌ಗಳಲ್ಲಿ ಹೆಚ್ಚುವರಿಯಾಗಿ 238 ಪರೀಕ್ಷೆಗಳನ್ನು ಉಚಿತವಾಗಿ ನಡೆಸುವ ಕುರಿತು ಆರೋಗ್ಯ ಇಲಾಖೆಯಿಂದ ಬಂದಿದ್ದ ಪ್ರಸ್ತಾವಕ್ಕೆ ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಹಿ ಮಾಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ದುಬಾರಿ ಶುಲ್ಕ ಪಾವತಿಸಲಾಗದವರಿಗೆ ಇದು ಅನುಕೂಲವಾಗಲಿದೆ' ಎಂದು ಅರವಿಂದ ಕೇಜ್ರಿವಾಲ್ ಪ್ರತಿಕ್ರಿಯಿಸಿದ್ದಾರೆ.

'ಉತ್ತಮ ಆರೋಗ್ಯ ಮತ್ತು ಗುಣಮಟ್ಟದ ಶಿಕ್ಷಣ ಎಲ್ಲರಿಗೂ ದೊರೆಯಬೇಕು ಎಂಬುದು ನಮ್ಮ ಆಶಯ. ಆರೋಗ್ಯ ಚಿಕಿತ್ಸೆಯಂತೂ ಈಗ ದುಬಾರಿಯಾಗಿದೆ. ಈ ಕಾರಣದಿಂದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದು ಸಾಕಷ್ಟು ಜನರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ನಮ್ಮ ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರದಿಂದ ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆ' ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

ಈ ಸೌಲಭ್ಯ ದೆಹಲಿಯ ಜನರಿಗೆ ಮಾತ್ರ ದೊರೆಯಲಿದೆ.

### ದೆಹಲಿ: ಮಹಿಳೆಯರೇ ಉಪ ನೋಂದಣಾಧಿಕಾರಿಗಳು

ನವದೆಹಲಿ (ಪಿಟಿಐ): ದೇಶದ ರಾಜಧಾನಿಯ ಎಲ್ಲ ಉಪ ನೋಂದಣಾಧಿಕಾರಿ ಕಚೇರಿಗಳಲ್ಲೂ ಪ್ರಸ್ತುತ ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ದೆಹಲಿಯ ಆಸ್ತಿ ನೋಂದಣಿಯಿಂದ ವಿವಾಹ ನೋಂದಣಿಯವರೆಗಿನ ಎಲ್ಲ ಕಾರ್ಯಗಳೂ ಇವರ ಸುಪರ್ದಿಗೆ ಬರಲಿವೆ.

ಸಾಮಾನ್ಯ ಜನರೊಂದಿಗೆ ನೇರವಾಗಿ ವ್ಯವಹರಿಸುವ ಈ ಕಚೇರಿಗಳಲ್ಲಿನ ಉಪ ನೋಂದಣಾಧಿಕಾರಿ ಹುದ್ದೆಗಳಿಗೆ ಮಹಿಳೆಯರನ್ನೇ ನೇಮಿಸಬೇಕು ಎಂದು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಇತ್ತೀಚೆಗೆ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರಿಗೆ ನಿರ್ದೇಶನ ನೀಡಿದ್ದರು. ಅದೀಗ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿದೆ.

ಇದರ ಪರಿಣಾಮ, ದೆಹಲಿ ಸರ್ಕಾರದ ಕಂದಾಯ ಇಲಾಖೆಯ ಎಲ್ಲ 22 ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಇದೇ ಮೊದಲ ಬಾರಿಗೆ ಮಹಿಳಾ ಅಧಿಕಾರಿಗಳ ಸಾರಥ್ಯ ಆರಂಭವಾಗಿದೆ.

'ಈ ಕಚೇರಿಗಳಲ್ಲಿ ಸಾಮಾನ್ಯ ಜನರು ಎದುರಿಸುತ್ತಿರುವ ಭ್ರಷ್ಟಾಚಾರ, ಅನಗತ್ಯ ಕಿರುಕುಳ, ಶೋಷಣೆಗಳು ಮಹಿಳಾ ಅಧಿಕಾರಿಗಳ ನೇಮಕದಿಂದ ತಗ್ಗಲಿವೆ ಎಂಬ ವಿಶ್ವಾಸವಿದೆ' ಎಂದು ಲೆಫ್ಟಿನೆಂಟ್ ಗವರ್ನರ್ ಕಚೇರಿಯ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ ಜಿಲ್ಲೆಯಾದ್ಯಂತ ನಿಮ್ಮ ಯಾವುದೇ ಆಫೀಸ್/ ಫ್ಯಾಕ್ಟರಿ ಕೆಲಸಕ್ಕೆ ಹುಡುಗರು/ ಹುಡುಗಿಯರು ಬೇಕಾಗಿದ್ದಲ್ಲಿ ಸಂಪರ್ಕಿಸಿ: 9008062377, 9164277549, ಯಾವುದೇ ಕೆಲಸ ಬೇಕಾಗಿದ್ದಲ್ಲಿ ಸಹ ಸಂಪರ್ಕಿಸಿ.

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್‌ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಬಳ: 13,000. ಉಚಿತ ಊಟ+ವಸತಿ ಕೊಡಲಾಗುವುದು. ಸಂಪರ್ಕಿಸಿ: 9902817655

ಶ್ರೀ ಮುರುಳಿ ವಿದ್ಯಾ ಸಂಸ್ಥೆ (ರಿ.) EST: 1964
ನಂ. 14, 1ನೇ ಮುಖ್ಯರಸ್ತೆ, 5ನೇ ಕ್ರಾಸ್, 'ಎ' ಶಾಂತಿನಿವಾಸ ಮಹಡಿ, ಹನುಮಂತಪುರ, ತುಮಕೂರು–572103. Clg: 080-7725416, Res: 0816-2270945
ನೇಮಕಾತಿ ಪ್ರಕಟಣೆ
ನಮ್ಮ ಸಂಸ್ಥೆಯಿಂದ ನಡೆಸಲಾಗುತ್ತಿರುವ ಶ್ರೀ ಶ್ರೀನಿವಾಸ ಸ್ಮಾರಕ ಪ್ರೌಢಶಾಲೆ ನೆಲಮಂಗಲ ಇಲ್ಲಿ ರಾಜಿನಾಮೆಯಿಂದ ತೆರವಾದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಅರ್ಹ ಅಭ್ಯರ್ಥಿಗಳಿಂದ ಭರ್ತಿಸಲು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಇವರ ಜಾಪನಾ ಸಂಖ್ಯೆ: ಸಿ(8)1, ಖಾ.ಹು.ಭ: 02/2003–04 ದಿನಾಂಕ: 29–11–2003ರಂತೆ ಅನುಮತಿ ನೀಡಲಾಗಿದೆ. ಅರ್ಹ ಅಭ್ಯರ್ಥಿಗಳು ಕಾರ್ಯದರ್ಶಿಗಳು ಶ್ರೀ ಮುರುಳಿ ವಿದ್ಯಾ ಸಂಸ್ಥೆ (ರಿ.) ನಂ.14, 1ನೇ ಮುಖ್ಯ ರಸ್ತೆ, 5ನೇ 'ಎ' ಕ್ರಾಸ್, ಶಾಂತಿ ನಿವಾಸ ಬಿಲ್ಡಿಂಗ್, ಹನುಮಂತಪುರ, ತುಮಕೂರು ಇವರ ಹೆಸರಿನಲ್ಲಿ ರೂ.500/– ಗಳ ಡಿಡಿ ಯೊಂದಿಗೆ ಅರ್ಹ ದಾಖಲೆಗಳನ್ನೊಳಗೊಂಡ ಜೆರಾಕ್ಸ್ ಪ್ರತಿಯನ್ನು ಹಾಗೂ ಉಪನಿರ್ದೇಶಕರು ಸಾ.ಶಿ.ಇಲಾಖೆ ಬೀರಸಂದ್ರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಪ್ರಕಟಣೆಯಾದ 21 ದಿನಗಳೊಳಗಾಗಿ ಸಂಸ್ಥೆಯ ವಿಳಾಸಕ್ಕೆ ತಲುಪಿಸಬೇಕು. ನಿಗದಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಹತೆ, ವಯೋಮಿತಿ ಮತ್ತು ನೇಮಕಾತಿ, ಸಂದರ್ಶನದ ಸರ್ಕಾರದ ಆಧಿ–ನಿಯಮಗಳು ಹಾಗೂ ಅನುದಾನಿತ ಶಾಲಾ ನೀತಿ ಸಂಹಿತೆ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.
ಕಾರ್ಯದರ್ಶಿ
ಶ್ರೀ ಮುರುಳಿ ವಿದ್ಯಾ ಸಂಸ್ಥೆ, ಹನುಮಂತನಗರ, ತುಮಕೂರು.

ಸುವರ್ಣಾವಕಾಶ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗೂ ಇಲ್ಲದ ಯುವಕ/ಯುವತಿಯರು ಬೇಕಾಗಿದ್ದಾರೆ, ಸಂಬಳ+ಓಟಿ 15,800/- 29000/- ಸಂಪರ್ಕಿಸಿ: 9164188386, 9164805206

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 8792156697, 8792155097

ಬೆಂಗಳೂರಿನ ಹತ್ತಿರ ಇರುವ ವೃದ್ಧಾಶ್ರಮಕ್ಕೆ ಒಳ್ಳೆಯ ಸಸ್ಯಹಾರಿ ಅಡುಗೆಯವರು ಬೇಕಾಗಿದ್ದಾರೆ. ಸಂಬಳ ರೂ. 15,000/ ಉಚಿತ ಊಟ, ವಸತಿ. ಇದೇ ಆಶ್ರಮಕ್ಕೆ ಸೆಕ್ಯೂರಿಟಿ ಮತ್ತು ಸ್ವಚ್ಛತೆ ಕೆಲಸಕ್ಕೆ ಗಂಡಸರು ಮತ್ತು ಹೆಂಗಸರು ಬೇಕಾಗಿದ್ದಾರೆ. ವಸತಿ ಉಚಿತ, ಸೂಕ್ತ ಸಂಬಳ. ಸಂಪರ್ಕಿಸಿ 988085505

Marketing & Sales

DIPLOMA/DEGREE CANDIDATE with Motorcycle 3 years experience to market Thermal Insulations products in Karnataka shall apply for a company at Nelamangala. insulationsblr@gmail.com 9480056374/9448143883

SALES & MARKETING EXECUTIVES Urgently required for reputed Company. Young target oriented preferable. ATTRACTIVE SALRY & INCENTIVES .Send resumes to whatsApp : +919440807570.

ಸಾರ್ವಜನಿಕ ಪ್ರಕಟಣೆ

Timac AGRO PUBLIC NOTICE
In pursuance of S.O. 2900 (E) dated 24/10/2015 and clause 13 and clause 21 of the Fertilizer (Control) Order, 1985, we hereby intimate our intent to sell the following grades of hundred per cent water soluble fertilizer corresponding to the general specifications of FCO in the state of Karnataka:KSC-I (NPK 14-40-5), KSC-III (NPK 15-5-35) and KSC-V (NPK 8-16-42).
TIMAC AGRO INDIA PRIVATE LIMITED
No. 426, Between 7th and 8th Cross, Sampige Road, Malleswaram, Bangalore 560003
Regd. Office: 8/2, Unique Sterling 3rd Cross, Nungambakkam, Chennai, Tamil Nadu 600034

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ಧಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9845560219/ 9739847429.

02.02.2023 ರಿಂದ 11 ದಿನಗಳು (ವಿಮಾನ/ A/C ಬಸ್ಸಿನಲ್ಲಿ) ಉಜ್ಜಯಿನಿ,ಸೋಮನಾಥ್ ದ್ವಾರಕಾ ಸರ್ದಾರ್ ವಲ್ಲಭ ಬಾಯಿ ಪಟೇಲರ ಪ್ರತಿಮೆ ನಿಷ್ಕಳಂಕ ಮಹಾದೇವ ಸಂಪರ್ಕಿಸಿ: ಅನಿತಾ ಟ್ರಾವಲ್ಸ್ ಶೇಷಾದ್ರಿಪುರ ಬೆಂಗಳೂರು-20. 9448602641 9900589030

ಕಾಶಿ ಪ್ರಯಾಗರಾಜ್ ಗಯಾ,ಕೋಲ್ಕತ, ಪೂರಿ ಜಗನ್ನಾಥ್ ಭುವನೇಶ್ವರ್. ಮತ್ತು ಶಿರಡಿ ಸಾಯಿ ಬಾಬಾ ಅಷ್ಟ ಜ್ಯೋತಿರ್ಲಿಂಗ ಯಾತ್ರಾ ಫೆಬ್ರವರಿ ಮಾರ್ಚ್ 2023. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು-03. 9448294477

ಜನವರಿ 21 ರಿಂದ ವಿಮಾನದಲ್ಲಿ ಕಾಶಿ ಗಯಾ, ಬುದ್ಧಗಯಾ, ಅಯೋಧ್ಯ ಪ್ರಯೋಗ ನೈಮಿಷಾರಣ್ಯ 29000/ ಮತ್ತು 23/2/23 ರಿಂದ ನೇಪಾಳ 45000/ ಶ್ರೀರಾಮ್ ಟೂರ್ 9108933383, 9606600383

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ,ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 26.01.2023 ರಿಂದ 15/10 ದಿನಗಳು. ವಿಯವಾಡ, ಭದ್ರಾಚಲಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು ಗೌಹಾಟಿ,ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 03.02.2023 ರಿಂದ 14 ದಿನಗಳು. ಕಾಶಿ,ಗಯಾ,ಪ್ರಯಾಗ ನೈಮೀಶಾರಣ್ಯ 26.01.2023 ರಿಂದ 8 ದಿನಗಳು ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಶಿವರಾತ್ರಿ ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

| Per word | Ordinary | Bold | Ordinary Semi Display | Bold Semi Display |
|---|---|---|---|---|
| | 70 | 100 | 80 | 135 |

| CD Per Sqcm | Single Col | Double Col | Multi Col |
|---|---|---|---|
| | 480 | 450 | 475 |

SPECIAL OFFER

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
conditions apply*

# ಉಕ್ರೇನ್ ಯುದ್ಧ: ದಾಳಿ–ಪ್ರತಿ ದಾಳಿಗೆ 8 ಸಾವು

ಕೀವ್/ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ): ಕೆರ್ಸಾನ್ ಮೇಲೆ ರಷ್ಯಾ ಪಡೆಗಳು 24 ತಾಸುಗಳಲ್ಲಿ 57 ಬಾರಿ ನಡೆಸಿರುವ ಶೆಲ್ ದಾಳಿಯಲ್ಲಿ ಮೂವರು ನಾಗರಿಕರು ಹತರಾಗಿದ್ದು, 15 ಜನ ಗಾಯಗೊಂಡಿರುವುದಾಗಿ ಉಕ್ರೇನ್ ಹೇಳಿದೆ.

ಡೊನೆಟ್‌ಸ್ಕ್ ಗಣರಾಜ್ಯದ (ಡಿಪಿಆರ್) ಮೇಲೆ ಉಕ್ರೇನ್ ಸೈನಿಕರು 43 ಬಾರಿ ಶೆಲ್ ದಾಳಿ ಮಾಡಿದ್ದು, ಐವರು ನಾಗರಿಕರು ಹತರಾಗಿದ್ದಾರೆ ಎಂದು ಉಕ್ರೇನ್ ಯುದ್ಧಾಪರಾಧಗಳ ಸಂಬಂಧಿತ ಜಂಟಿ ನಿಯಂತ್ರಣ ಮತ್ತು ಸಮನ್ವಯ ಕೇಂದ್ರ ವರದಿ ಮಾಡಿದೆ.

ಕೆರ್ಸಾನ್ ಮೇಲೆ ಸೋಮವಾರ ನಡೆದಿದ್ದ ದಾಳಿಯಲ್ಲಿ ಇಬ್ಬರು ಹತರಾಗಿ, ಐವರು ಗಾಯಗೊಂಡಿದ್ದರು.

ರಷ್ಯಾದ ದಕ್ಷಿಣದ ಬ್ರಿಯಾನ್‌ಸ್ಕ್ ಪ್ರದೇಶದ ಕ್ಲಿನ್‌ಸ್ಟಿ ಪಟ್ಟಣದ ಮೇಲೆ ಉಕ್ರೇನ್ ಪಡೆಗಳು ತಡರಾತ್ರಿ ಶೆಲ್ ದಾಳಿ ನಡೆಸಿವೆ. ಆದರೆ, ಯಾವುದೇ ಜೀವ ಹಾನಿಯಾಗಿಲ್ಲ ಎಂದು ಪ್ರಾದೇಶಿಕ ಗವರ್ನರ್ ಹೇಳಿದ್ದಾರೆ.

ಉಕ್ರೇನ್ ಮೇಲಿನ ಯುದ್ಧವನ್ನು ಪುಟಿನ್ ಕೊನೆಗೊಳಿಸಿದರೆ ರಷ್ಯಾ ಮತ್ತು ಜರ್ಮನಿ ಮಧ್ಯೆ ಆರ್ಥಿಕ ಸಹಕಾರ, ವ್ಯಾಪಾರ ಪುನರಾರಂಭಿಸಲು ಸಾಧ್ಯ ಎಂದು ಓಲಾಫ್ ಸ್ಕೋಲ್ಜ್ ಸೋಮವಾರ ಬರ್ಲಿನ್‌ನಲ್ಲಿ ಹೇಳಿದ್ದಾರೆ.

**ಕ್ಷಿಪಣಿ ಪೂರೈಕೆ:** ಅತ್ಯಾಧುನಿಕ ಕಡಿಮೆ ದೂರ ವ್ಯಾಪ್ತಿಯ ಕ್ಷಿಪಣಿಗಳನ್ನು ರಷ್ಯಾಕ್ಕೆ ಪೂರೈಸುವ ಒಪ್ಪಂದಕ್ಕೆ ಇರಾನ್ ಬಂದಿದೆ. ಇದರ ಬೆನ್ನಲ್ಲೇ, ರಷ್ಯಾ ವಿರುದ್ಧ ಪ್ರತಿದಾಳಿಗೆ ದೂರ ವ್ಯಾಪ್ತಿ ದಾಳಿಯ ಶಸ್ತ್ರಾಸ್ತ್ರ ಒದಗಿಸುವಂತೆ ಜಿ7 ರಾಷ್ಟ್ರಗಳಿಗೆ ಉಕ್ರೇನ್ ಕೋರಿದೆ.

**ಶಸ್ತ್ರಾಸ್ತ್ರ ನಿಯೋಜಿಸಿಲ್ಲ -ರಷ್ಯಾ:** ಝಪೊರಿಝಿಯಾ ಅಣು ಸ್ಥಾವರದ ಬಳಿ ಭಾರಿ ಶಸ್ತ್ರಾಸ್ತ್ರ ನಿಯೋಜಿಸಿಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಸ್ಥಾವರದ ಸುರಕ್ಷತೆ ಖಾತ್ರಿ ಕುರಿತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಹೇಳಿಕೆ ಬೆನ್ನಲ್ಲೇ ಈ ಪ್ರತಿಕ್ರಿಯೆ ಹೊರಬಿದ್ದಿದೆ.

ಪುಟಿನ್ ಆಡಳಿತ ಕಚೇರಿ ವಕ್ತಾರ ಡಿಮಿಟ್ರಿ ಪೆಸ್ಕೋವ್, 'ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ ಜತೆಗೆ ರಷ್ಯಾ ಸಂಪರ್ಕದಲ್ಲಿದೆ. ಸ್ಥಾವರದ ಸುತ್ತ ನಿಶಸ್ತ್ರೀಕರಣ ವಲಯ ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

## ಮೋದಿ–ಪುಟಿನ್ ಭೇಟಿ ರದ್ದು ವರದಿ ಅಲ್ಲಗಳೆದ ರಷ್ಯಾ

ಮಾಸ್ಕೊ (ರಾಯಿಟರ್ಸ್): ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭೇಟಿ ಮಾಡಲು ನಿರಾಕರಿಸಿದರು ಎಂಬ ವರದಿಗಳನ್ನು ರಷ್ಯಾದ ವಿದೇಶಾಂಗ ಸಚಿವಾಲಯ ಅಲ್ಲಗಳೆದಿದೆ.

ಉಕ್ರೇನ್ ಯುದ್ಧದಲ್ಲಿ ಅಣ್ವಸ್ತ್ರಗಳನ್ನು ಬಳಸುವುದಾಗಿ ಪುಟಿನ್ ಬೆದರಿಕೆಯೊಡ್ಡಿದ ಹಿನ್ನೆಲೆಯಲ್ಲಿ ಉಭಯ ನಾಯಕರ ಭೇಟಿಯು ರದ್ದಾಗಿದೆ ಎಂದು ಈ ಹಿಂದೆ 'ಬ್ಲೂಮ್ ಬರ್ಗ್ ನ್ಯೂಸ್' ಕಳೆದ ವಾರ ವರದಿ ಮಾಡಿತ್ತು.

ಸಭೆ ರದ್ದುಪಡಿಸುವ ನಿರ್ಧಾರವನ್ನು ಹಿಂದೆಯೇ ತೆಗೆದುಕೊಳ್ಳಲಾಗಿತ್ತು. ಅಣ್ವಸ್ತ್ರ ಬಳಕೆ ವಿಷಯ ಇದಕ್ಕೆ ಕಾರಣವಲ್ಲ ಎಂದು ಭಾರತ ಸರ್ಕಾರದ ಮೂಲಗಳು ತಿಳಿಸಿವೆ.

## ಗುಂಡಿನ ಚಕಮಕಿ ಇಬ್ಬರು ಅಧಿಕಾರಿ ಸೇರಿ 6 ಸಾವು

ಬ್ರಿಸ್ಬೇನ್ (ಎಪಿ): ಆಸ್ಟ್ರೇಲಿಯದ ಗ್ರಾಮವೊಂದರಲ್ಲಿ ದಾಳಿಕೋರರು ಮತ್ತು ಪೊಲೀಸರ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಸೇರಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ನಾಪತ್ತೆಯಾಗಿದ್ದ ದುಷ್ಕರ್ಮಿ ಅಡಗಿರುವ ಮಾಹಿತಿ ಆಧರಿಸಿ ಪೊಲೀಸರು ವಿಯಾಂಬಿಲ್ಲಾದಲ್ಲಿ ಸೋಮವಾರ ಸಂಜೆ ಶೋಧನಡೆಸಿದ್ದರು. ಆಗ ಇಬ್ಬರು ಶಸ್ತ್ರಸಜ್ಜಿತ ವ್ಯಕ್ತಿಗಳು ಪೊಲೀಸರ ಮೇಲೆ ಗುಂಡಿನ ದಾಳಿ ಆರಂಭಿಸಿದರು. ಪೊಲೀಸರೂ ಪ್ರತಿದಾಳಿ ನಡೆಸಿದರು.

## ಕಾಬೂಲ್ ತೊರೆಯಲು ಚೀನಾ ಪ್ರಜೆಗಳಿಗೆ ಸಲಹೆ

ಇಸ್ಲಾಮಾಬಾದ್ (ಎಪಿ) : 'ಎಷ್ಟು ಸಾಧ್ಯವೋ, ಅಷ್ಟು ಬೇಗ' ಅಫ್ಗಾನಿಸ್ತಾನದಿಂದ ಹೊರನಡೆಯಿರಿ ಎಂದು ಚೀನಾ ತನ್ನ ನಾಗರಿಕರಿಗೆ ಸಲಹೆ ಮಾಡಿದೆ. ಚೀನಾ ಮಾಲೀಕತ್ವದ ಹೋಟೆಲ್ ಮೇಲೆ ದಾಳಿ ಹಿನ್ನೆಲೆಯಲ್ಲಿ ಈ ಸಲಹೆ ನೀಡಲಾಗಿದೆ.

ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಅವರು, ದಾಳಿ ಕೃತ್ಯದಿಂದ ದಿಗ್ಭ್ರಮೆಯಾಗಿದೆ. ಇದೊಂದು ಅತಿರೇಕದ ಕೃತ್ಯ. ತಾಲಿಬಾನ್ ಸರ್ಕಾರ ಸಮಗ್ರ ತನಿಖೆ ನಡೆಸಬೇಕು ಎಂದು ಪ್ರತಿಕ್ರಿಯಿಸಿದರು.

ಅಫ್ಗಾನಿಸ್ತಾನದಲ್ಲಿ ಇರುವ ಚೀನಾದ ನಾಗರಿಕರು ಮತ್ತು ಸಂಸ್ಥೆಗಳು, ಯೋಜನೆಗಳ ರಕ್ಷಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರಸ್ತುತ ಸ್ಥಿತಿಯಲ್ಲಿ ನಾಗರಿಕರು ಆದಷ್ಟು ಬೇಗ ಅಫ್ಗಾನಿಸ್ತಾನದಿಂದ ನಿರ್ಗಮಿಸಬೇಕು ಎಂದು ಹೇಳಿದರು.

ಈ ಬೆಳವಣಿಗೆಯು ಅಫ್ಗಾನಿಸ್ತಾನದಲ್ಲಿನ ತಾಲಿಬಾನ್ ಆಡಳಿತಕ್ಕೆ ಹಿನ್ನಡೆ ಎನ್ನಲಾಗಿದೆ. ಈಗಾಗಲೇ ಅಫ್ಗಾನಿಸ್ತಾನದಲ್ಲಿ ಆರ್ಥಿಕತೆ ಕುಸಿದಿದ್ದು, ಈ ಕೃತ್ಯದಿಂದಾಗಿ ಹೂಡಿಕೆ ಅವಕಾಶಗಳು ಕುಗ್ಗಬಹುದು ಎಂಬ ಭಾವನೆ ಹೆಚ್ಚಿದೆ.

## ಕೋವಿಡ್ ಕ್ಷಿಪ್ರ ಏರಿಕೆ

ಬೀಜಿಂಗ್ (ರಾಯಿಟರ್ಸ್): ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಕೋವಿಡ್ ಪ್ರಕರಣಗಳು ಏರುತ್ತಿದೆ. ಆಸ್ಪತ್ರೆಯಲ್ಲಿ ದಾಖಲಾಗಿರುವ 50 ಜನರ ಸ್ಥಿತಿ ಗಂಭೀರ ಅಥವಾ ಚಿಂತಾಜನಕವಾಗಿದೆ ಎಂದು ಸರ್ಕಾರಿ ಸುದ್ದಿ ಸಂಸ್ಥೆ 'ಶಿನ್ಹುವಾ' ಮಂಗಳವಾರ ವರದಿ ಮಾಡಿದೆ.

ದೇಶದಲ್ಲಿ ಸೌಮ್ಯ ಲಕ್ಷಣ ಮತ್ತು ಲಕ್ಷಣ ರಹಿತ ಪ್ರಕರಣಗಳು ಹೆಚ್ಚುತ್ತಿವೆ ಎಂದು ವರದಿ ತಿಳಿಸಿದೆ. ಮಂಗಳವಾರ ಸೌಮ್ಯ ಲಕ್ಷಣದ 2,315, ಲಕ್ಷಣ ರಹಿತ 5,364 ಪ್ರಕರಣಗಳು ವರದಿಯಾಗಿವೆ ಎಂದು ತಿಳಿಸಿದೆ.

## ಅಣುಶಕ್ತಿ ಉತ್ಪಾದನೆ: ಅಮೆರಿಕ ಚಾರಿತ್ರಿಕ ಸಾಧನೆ

ವಾಷಿಂಗ್ಟನ್ (ಎಎಫ್‌ಪಿ): ಶುದ್ಧ ಅಪರಿಮಿತ ಇಂಧನ ಉತ್ಪಾದನೆಯಲ್ಲಿ ಮಹತ್ವದ ಸಂಶೋಧನೆ ನಡೆಸಿರುವ ಅಮೆರಿಕದ ಸಂಶೋಧಕರು, ಅಣು ವಿದಳನ ಪ್ರಕ್ರಿಯೆಯಲ್ಲಿ ಚಾರಿತ್ರಿಕವಾದ ಸಾಧನೆ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ.

'ಅನಿಯಮಿತ, ಶುದ್ಧ ಇಂಧನ ಮೂಲದ ಅನ್ವೇಷಣೆಯಲ್ಲಿ ಇದು ಅಸಾಧಾರಣ ಸಾಧನೆ' ಎಂದು ಬಣ್ಣಿಸಿರುವ ಸಂಶೋಧಕರು, ಇಂಧನ ಶಕ್ತಿಗೆ ಇನ್ನು ಮುಂದೆ ಪಳೆಯುಳಿಕೆ ಇಂಧನ ಮೂಲಗಳನ್ನು ಅವಲಂಬಿಸುವ ಅವಶ್ಯಕತೆ ಕೊನೆಯಾಗಲಿದೆ ಎಂದು ಹೇಳಿದ್ದಾರೆ.

ಅಣುಶಕ್ತಿ ಉತ್ಪಾದನೆಯಲ್ಲಿ ಲೇಸರ್ ಆಧಾರಿತ ವಿದ್ಯುತ್‌ಗಿಂತ ಅಣು ವಿದಳನದ ಹೊಸ ವಿಧಾನದಿಂದ (ಫ್ಯೂಸನ್ ಇಗ್ನೀಷನ್) ಹೆಚ್ಚು ಇಂಧನ ಉತ್ಪಾದನೆ ಸಾಧ್ಯ ಎನ್ನುವುದು ಪ್ರಯೋಗದಿಂದ ಸಾಬೀತಾಗಿದೆ ಎಂದು ಕ್ಯಾಲಿಫೋರ್ನಿಯಾದ ಲಾರೆನ್ಸ್ ಲಿವರ್‌ಮೋರ್ ರಾಷ್ಟ್ರೀಯ ಪ್ರಯೋಗಾಲಯ ಹೇಳಿದೆ.

ಅಮೆರಿಕದ ಇಂಧನ ಸಚಿವಾಲಯ, ಫ್ಯೂಷನ್ ಇಗ್ನೀಷನ್ ಸಂಶೋಧನೆ ಪ್ರಮುಖವಾದ ವೈಜ್ಞಾನಿಕ ಪ್ರಗತಿ ಎಂದು ಶ್ಲಾಘಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

### ಎರಡನೇ ಸೆಮಿಫೈನಲ್ ಹಣಾಹಣಿ ಇಂದು: ಫ್ರಾನ್ಸ್ ತಂಡಕ್ಕೆ ಜಯದ ವಿಶ್ವಾಸ

# ಕಿಲಿಯನ್ ಬಲಕ್ಕೆ ಮೊರೊಕ್ಕೊ ಸವಾಲು

**ದೋಹಾ (ಎಪಿ/ಎಎಫ್‌ಪಿ/ರಾಯಿಟರ್ಸ್):** ಅಚ್ಚರಿಯ ಮೂಟೆ ಹೊತ್ತು ಸಾಗಿರುವ ಮೊರೊಕ್ಕೊ ತಂಡವು ಕಿಲಿಯನ್ ಎಂಬಾಪೆ ಅವರನ್ನು ಕಟ್ಟಿಹಾಕುವುದೇ; ಸತತ ಎರಡನೇ ಟ್ರೋಫಿಯ ಕನಸು ಹೊತ್ತಿರುವ ಫ್ರಾನ್ಸ್‌ನ ಪ್ರಶಸ್ತಿ ಸುತ್ತು ತಲುಪುವ ಆಸೆ ಈಡೇರುವುದೇ?

ಬುಧವಾರ ಅಲ್‌ಬೈತ್ ಕ್ರೀಡಾಂಗಣದಲ್ಲಿ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿದ್ದು, ಈ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ.

ಭಾರೀ ಸಂಖ್ಯೆಯಲ್ಲಿ ಸೇರಲಿರುವ ಮೊರೊಕ್ಕೊ ಅಭಿಮಾನಿಗಳು ತಂಡಕ್ಕೆ ನೈತಿಕ ಬಲ ತುಂಬಲಿದ್ದಾರೆ. ಬೆಲ್ಜಿಯಂ, ಸ್ಪೇನ್ ಮತ್ತು ಪೋರ್ಚುಗಲ್‌ನಂತಹ ಪ್ರಮುಖ ತಂಡಗಳಿಗೆ ಸೋಲಿನ ರುಚಿ ತೋರಿಸಿರುವ ಮೊರೊಕ್ಕೊ ಇಲ್ಲಿ ಮತ್ತೊಂದು ಆಘಾತಕ್ಕೆ ಕಾರಣವಾದರೆ ಅಚ್ಚರಿಯಿಲ್ಲ. ಟೂರ್ನಿಯಲ್ಲಿ ಎದುರಾಳಿ ಆಟಗಾರರಿಗೆ ಒಂದೇ ಒಂದು ಗೋಲು ಗಳಿಸುವ ಅವಕಾಶ ನೀಡದ ಮೊರೊಕ್ಕೊ ಎದುರು ಫ್ರಾನ್ಸ್ ವಿಜೃಂಭಿಸುವುದೇ ಎಂಬುದು ಕುತೂಹಲದ ಸಂಗತಿಯಾಗಿದೆ.

ಫಾರ್ವರ್ಡ್ ಆಟಗಾರ ಕಿಲಿಯನ್ ಎಂಬಾಪೆ ಅವರಲ್ಲದೆ, ಅಟ್ಯಾಕರ್ ಆ್ಯಂಟನಿ ಗ್ರಿಜ್‌ಮನ್, ಉಸ್ಮಾನ್ ದೆಂಬೆಲೆ, ಒಲಿವಿಯರ್ ಜಿರೋಡ್ ಕೂಡ ಫ್ರಾನ್ಸ್ ತಂಡದ ಶಕ್ತಿಯಾಗಿದ್ದಾರೆ. ಹಕೀಂ ಜಿಯೆಚ್, ಅಶ್ರಫ್ ಹಕೀಮಿ, ಸೋಫಿಯಾನ್ ಬೌಫಲ್ ಮತ್ತು ಯೂಸೆಫ್ ಎನ್ ನೆಸಿರಿ ಅವರು ಮೊರೊಕ್ಕೊ ತಂಡದ ಪ್ರಮುಖ ಆಟಗಾರರಾಗಿ ಹೊರಹೊಮ್ಮಿದ್ದಾರೆ. ಹೀಗಾಗಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಬಹುದು.

ಇದುವರೆಗಿನ ಪಂದ್ಯಗಳಲ್ಲಿ ಚುರುಕಿನ ದಾಳಿಯ ಮೂಲಕ ಅಪಾಯಕಾರಿಯಾಗಿ ಕಂಡುಬಂದಿರುವ ಮೊರೊಕ್ಕೊ ಈ ಹಣಾಹಣಿಯಲ್ಲಿ ಯಾವ ರೀತಿಯ ರಣತಂತ್ರ ರೂಪಿಸಲಿದೆ ಎಂಬುದನ್ನು ಕಾದುನೋಡಬೇಕಿದೆ.

‘ಮೊರೊಕ್ಕೊಗೆ ಇಲ್ಲಿ ಅಪಾರ ಬೆಂಬಲಿಗರಿದ್ದಾರೆ. ಪಂದ್ಯದ ವೇಳೆ ಜೋರಾದ ಶಿಳ್ಳೆ ಮತ್ತು ಕಿವಿ ಗಢಚಿಕ್ಕುವ ಚಪ್ಪಾಳೆಗಳು ಸಾಮಾನ್ಯ. ಪಂದ್ಯಕ್ಕೆ ನಾವು ಕಾತರರಾಗಿದ್ದೇವೆ’ ಎಂದು ಫ್ರಾನ್ಸ್ ಕೋಚ್ ಡಿಡಿಯರ್ ಡೆಸ್‌ಚಾಂಪ್ಸ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

**ಗಾಯದ ಚಿಂತೆ:** ಡಿಫೆನ್ಸ್ ಆಟಗಾರರಾದ ನಯೆಫ್ ಅಗುವೆರ್ಡ್ ಮತ್ತು ರೊಮೇನ್ ಸೈಸ್ ಗಾಯಗೊಂಡಿರುವುದು ಮೊರೊಕ್ಕೊ ತಂಡದ ಕಳವಳಕ್ಕೆ ಕಾರಣವಾಗಿದೆ.

ಈ ಪಂದ್ಯದಲ್ಲಿ ಜಯಿಸಿದ ತಂಡವು ಫೈನಲ್‌ನಲ್ಲಿ, ಅರ್ಜೆಂಟೀನಾ ಮತ್ತು ಕ್ರೊವೇಷ್ಯಾ ನಡುವಣ ಇನ್ನೊಂದು ಸೆಮಿಫೈನಲ್ ವಿಜೇತರನ್ನು ಭಾನುವಾರ ಎದುರಿಸಲಿದೆ.

ಮೊರೊಕ್ಕೊ ತಂಡದ ಅಶ್ರಫ್ ಹಕೀಮಿ (ಎಡ) ಮತ್ತು ಫ್ರಾನ್ಸ್‌ನ ಕಿಲಿಯನ್ ಎಂಬಾಪೆ– ಎಎಫ್‌ಪಿ ಚಿತ್ರ

## ಪ್ರಮುಖ ಅಂಶಗಳು

- ಐದು ಪಂದ್ಯಗಳಲ್ಲಿ ಐದು ಗೋಲು ಗಳಿಸಿರುವ ಫ್ರಾನ್ಸ್ ತಂಡದ ಕಿಲಿಯನ್ ಎಂಬಾಪೆ. 23 ವರ್ಷದ ಆಟಗಾರ ವಿಶ್ವಕಪ್‌ನ ಒಟ್ಟು 12 ಪಂದ್ಯಗಳಲ್ಲಿ 9 ಬಾರಿ ಚೆಂಡನ್ನು ಗುರಿ ಸೇರಿಸಿದ್ದಾರೆ.
- ವಿಶ್ವಕಪ್ ಸೆಮಿಫೈನಲ್ ತಲುಪಿರುವ ಮೊದಲ ಆಫ್ರಿಕನ್ ಮತ್ತು ಅರಬ್ ತಂಡ ಎನಿಸಿರುವ ಮೊರೊಕ್ಕೊ ಮತ್ತೊಂದು ಪ್ರಮುಖ ಸಾಧನೆಯ ಹೊಸ್ತಿಲಲ್ಲಿದೆ.
- 24 ವರ್ಷಗಳ ಬಳಿಕ, ವಿಶ್ವಕಪ್ ಸೆಮಿಫೈನಲ್ ತಲುಪಿದ ಹಾಲಿ ಚಾಂಪಿಯನ್ ತಂಡ ಎನಿಸಿಕೊಂಡಿರುವ ಫ್ರಾನ್ಸ್. 1998ರಲ್ಲಿ ಬ್ರೆಜಿಲ್ ಈ ಸಾಧನೆ ಮಾಡಿತ್ತು.
- ಈ ವಿಶ್ವಕಪ್‌ನಲ್ಲಿ ಮೊರೊಕ್ಕೊ ತಂಡವು ಯಾವುದೇ ಎದುರಾಳಿ ಆಟಗಾರನಿಗೆ ಗೋಲು ಗಳಿಸುವ ಅವಕಾಶ ಬಿಟ್ಟುಕೊಟ್ಟಿಲ್ಲ. ಕೆನಡಾ ವಿರುದ್ಧದ ಗುಂಪು ಹಂತದ ಪಂದ್ಯದಲ್ಲಿ ಮೊರೊಕ್ಕೊ ಡಿಫೆಂಡರ್ ನಯೆಫ್ ಅಗುಯೆರ್ಡ್ ಆಕಸ್ಮಿಕವಾಗಿ ತಮ್ಮದೇ ತಂಡದ ಗೋಲ್‌ಪೋಸ್ಟ್‌ಗೆ ಚೆಂಡು ಸೇರಿಸಿದ್ದರು.

**ಮುಖಾಮುಖಿ**

| | |
|---|---|
| 5 | ಪಂದ್ಯಗಳು |
| 3 | ಫ್ರಾನ್ಸ್ ಗೆಲುವು |
| 1 | ಮೊರೊಕ್ಕೊ ಜಯ |
| 1 | ಡ್ರಾ |

**ಇಂದಿನ ಸೆಮಿಫೈನಲ್**

ಫ್ರಾನ್ಸ್ Vs ಮೊರೊಕ್ಕೊ — ತಡರಾತ್ರಿ 12.30

ಕ್ರೀಡಾಂಗಣ: ಅಲ್ ಬೈತ್

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

# ಅಸಾಧಾರಣ ಎದುರಾಳಿ: ಲಾರಿಸ್

**ದೋಹಾ (ಎಎಫ್‌ಪಿ):** ಈ ವಿಶ್ವಕಪ್ ಟೂರ್ನಿಯಲ್ಲಿ ಮೊರೊಕ್ಕೊ ತಂಡದ ಗಮನಾರ್ಹ ಸಾಧನೆಯ ಕುರಿತು ಗೌರವ ಮತ್ತು ಮೆಚ್ಚುಗೆಯಿದೆ ಎಂದು ಫ್ರಾನ್ಸ್ ತಂಡದ ನಾಯಕ ಹ್ಯುಗೊ ಲಾರಿಸ್ ಹೇಳಿದ್ದಾರೆ.

‘ನಾವು ಸೆಮಿಫೈನಲ್‌ನಲ್ಲಿ ’ಅಸಾಧಾರಣ‘ ಎದುರಾಳಿಗಳ ವಿರುದ್ಧ ಆಡಲಿದ್ದೇವೆ. ಎಚ್ಚರಿಕೆ ವಹಿಸುವುದು ಅಗತ್ಯ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ಬೆಲ್ಜಿಯಂ, ಸ್ಪೇನ್ ಮತ್ತು ಪೋರ್ಚುಗಲ್ ತಂಡಗಳನ್ನು ಮಣಿಸಿ ಗುಂಪುಹಂತದಲ್ಲಿ ಅಗ್ರಸ್ಥಾನ ಗಳಿಸಿದ್ದ ಮೊರೊಕ್ಕೊ ನಿಸ್ಸಂಶಯವಾಗಿ ಉತ್ತಮ ಕೌಶಲಗಳನ್ನು ಹೊಂದಿದೆ’ ಎಂದು ಲಾರಿಸ್ ಅಭಿಪ್ರಾಯಪಟ್ಟಿದ್ದಾರೆ.

ಫ್ರಾನ್ಸ್, 1962ರ ಬಳಿಕ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಮೊದಲ ತಂಡ ಎನಿಸಿಕೊಳ್ಳುವ ಹಾದಿಯಲ್ಲಿದೆ. ಆ ವರ್ಷ ಬ್ರೆಜಿಲ್ ತಂಡವು ಸತತ 2ನೇ ಪ್ರಶಸ್ತಿ ಜಯಿಸಿತ್ತು.

ಹ್ಯುಗೊ ಲಾರಿಸ್– ಎಎಫ್‌ಪಿ ಚಿತ್ರ

## 50 ವರ್ಷದ ನಂತರ ನಿಷೇಧದಿಂದ ವಿನ್ಸಿ ಮ್ಯಾಥ್ಯೂಸ್‌ಗೆ ಮುಕ್ತಿ!

**ನ್ಯೂಯಾರ್ಕ್ (ಎಪಿ):** ಜನಾಂಗೀಯ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಿದ್ದಕ್ಕಾಗಿ ನಿಷೇಧ ಶಿಕ್ಷೆಗೊಳಗಾಗಿದ್ದ ಅಮೆರಿಕದ ಅಥ್ಲೀಟ್ ವಿನ್ಸಿ ಮ್ಯಾಥ್ಯೂಸ್ ಅವರನ್ನು 50 ವರ್ಷಗಳ ನಂತರ ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿಯು ಒಲಿಂಪಿಕ್ ಕೂಟಕ್ಕೆ ಸ್ವಾಗತಿಸಿದೆ.

ಅಮೆರಿಕ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್‌ಗೆ ಐಒಸಿಯು ಈ ಕುರಿತು ಪತ್ರ ಬರೆದಿದ್ದು, ಮುಂಬರುವ ಒಲಿಂಪಿಕ್ ಕೂಟಗಳಲ್ಲಿ ಮ್ಯಾಥ್ಯೂ ಹಾಜರಾಗಬಹುದು ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ. ಮ್ಯಾಥ್ಯೂಸ್ ಅವರಿಗೆ ಈಗ 74 ವರ್ಷಗಳಾಗಿವೆ.

1972ರಲ್ಲಿ ಮ್ಯೂನಿಕ್‌ನಲ್ಲಿ ನಡೆದ ಒಲಿಂಪಿಕ್ಸ್‌ನ ಪುರುಷರ 400 ಮೀ. ಓಟದಲ್ಲಿ ಅಮೆರಿಕದ ಕಪ್ಪು ಜನಾಂಗದವರಾದ ಮ್ಯಾಥ್ಯೂಸ್ ಮತ್ತು ವೇಯ್ನ್ ಕಾಲೆಟ್ ಅವರು ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದಿದ್ದರು. ಪದಕ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಗೀತೆ ಮೊಳಗುವಾಗ ಅವರು ಜನಾಂಗೀಯ ದ್ವೇಷವನ್ನು ಪ್ರತಿಭಟಿಸಿದ್ದರು. ರಾಷ್ಟ್ರಗೀತೆಗೆ ಎಲ್ಲರೂ ಗೌರವಿಸುವ ಭಂಗಿಯಲ್ಲಿ ನಿಂತಿದ್ದರು. ಆದರೆ, ಮ್ಯಾಥ್ಯೂಸ್ ತಮ್ಮ ಮೇಕೆದಾಡಿಯನ್ನು ಸವರಿಕೊಂಡರು. ನಂತರ ಕೈಕಟ್ಟಿ ನಿಂತು ಪ್ರತಿಭಟಿಸಿದ್ದರು.

## ಇರಾನ್ ಫುಟ್‌ಬಾಲ್ ಆಟಗಾರನಿಗೆ ಮರಣದಂಡನೆ?

**ಪ್ಯಾರಿಸ್ (ಎಎಫ್‌ಪಿ):** ಇರಾನ್‌ನಲ್ಲಿ ಮಹಿಳಾ ಹಕ್ಕುಗಳಿಗಾಗಿ ನಡೆದ ಪ್ರತಿಭಟನೆಗೆ ಸಂಬಂಧಿಸಿ ಆ ದೇಶದ ಫುಟ್‌ಬಾಲ್ ಆಟಗಾರ ಅಮಿರ್ ನಾಸರ್ ಅಜದಾನಿ ಮರಣದಂಡನೆಗೆ ಗುರಿಯಾಗುವ ಸಾಧ್ಯತೆಯಿದ್ದು, ಈ ಕುರಿತು ವಿಶ್ವ ವೃತ್ತಿಪರ ಫುಟ್‌ಬಾಲ್ ಆಟಗಾರರ ಒಕ್ಕೂಟ ಆಘಾತ ವ್ಯಕ್ತಪಡಿಸಿದೆ.

‘ಇಸ್ಫಹಾನ್ ನಗರದಲ್ಲಿ ನಡೆದ ‘ಸಶಸ್ತ್ರ ದಂಗೆ’ಯಲ್ಲಿ ಪಾಲ್ಗೊಂಡಿದ್ದ ಆರೋಪದ ಮೇಲೆ ಅಜದಾನಿ ಅವರನ್ನು ಸೆ.16ರಂದು ಬಂಧಿಸಲಾಗಿದೆ’ ಎಂದು ನ್ಯಾಯಾಂಗ ಇಲಾಖೆ ಮುಖ್ಯಸ್ಥ ಅಬ್ದುಲ್ಲಾ ಜಾಫರಿ ಹೇಳಿದ್ದಾರೆ.

### ಪ್ರೊ ಕಬಡ್ಡಿ ಲೀಗ್: ದಬಾಂಗ್ ಡೆಲ್ಲಿ ವಿರುದ್ಧ ಜಯಭೇರಿ

# ಸೆಮಿಗೆ ಬೆಂಗಳೂರು ಬುಲ್ಸ್

**ಮುಂಬೈ:** ಭರತ್ ಮತ್ತು ವಿಕಾಶ್ ಖಂಡೋಲಾ ಅವರ ಅಮೋಘ ಆಟದ ಬಲದಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಡೊಮ್, ಎನ್‌ಎಸ್‌ಸಿಐ ಎಸ್‌ವಿಪಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಬೆಂಗಳೂರು ತಂಡವು 56–24 ರಿಂದ ದಬಾಂಗ್ ಡೆಲ್ಲಿ ವಿರುದ್ಧ ಜಯಿಸಿತು.

ಮಿಂಚಿನ ದಾಳಿ ನಡೆಸಿದ ಬೆಂಗಳೂರು ತಂಡದ ಭರತ್ 15 ಹಾಗೂ ವಿಕಾಶ್ ಖಂಡೋಲಾ 13 ಅಂಕ ಗಳಿಸಿ ಗೆಲುವಿನ ರೂವಾರಿಗಳಾದರು.

ಬುಲ್ಸ್ ಆರಂಭದಿಂದಲೇ ಪಾರಮ್ಯ ಮೆರೆಯಿತು. ಪ್ರಥಮಾರ್ಧದಲ್ಲಿ 31–14 ಅಂಕಗಳ ದೊಡ್ಡ ಮುನ್ನಡೆ ಗಳಿಸಿತು. ದಬಂಗ್ ತಂಡಕ್ಕೆ ಯಾವುದೇ ಹಂತದಲ್ಲಿಯೂ ಮೇಲುಗೈ ಸಾಧಿಸಲು ಬಿಡಲಿಲ್ಲ. ಕೊನೆಯವರೆಗೂ ಬಿಗಿಹಿಡಿತ ಸಾಧಿಸಿದ ತಂಡವು ಗೆಲುವನ್ನು ಒಲಿಸಿಕೊಂಡಿತು. ಡೆಲ್ಲಿ ನಾಯಕ ನವೀನ್ ಕುಮಾರ್ ಮತ್ತು ಆಲ್‌ರೌಂಡರ್ ವಿಜಯ್ ಮಲಿಕ್ ಅವರು ಕ್ರಮವಾಗಿ ಎಂಟು ಹಾಗೂ 6 ಅಂಕ ಗಳಿಸಿದರು. ಆದರೆ, ತಂಡದ ರಕ್ಷಣಾತಂತ್ರಗಳು ಫಲ ನೀಡಲಿಲ್ಲ. ಬೆಂಗಳೂರು ತಂಡವು ಸೆಮಿಯಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಎದುರಿಸಲಿದೆ.

ಯುಪಿ– ಯೋಧಾಸ್ ತಮಿಳ್ ತಲೈವಾಸ್ ನಡುವಣ ಇನ್ನೊಂದು ಎಲಿಮಿನೇಟರ್ ಪಂದ್ಯವು 36–36ರಿಂದ ಟೈ ಆಗಿತ್ತು. ಬಳಿಕ ಉಭಯ ತಂಡಗಳಿಗೆ ತಲಾ 5 ರೈಡ್ ನೀಡಿದಾಗ ತಲೈವಾಸ್ 6-4 ಪಾಯಿಂಟ್ಸ್‌ನಿಂದ ಜಯ ಸಾಧಿಸಿ ಸೆಮಿಗೆ ಲಗ್ಗೆಯಿಟ್ಟಿತು.

ಬೆಂಗಳೂರು ಬುಲ್ಸ್ ತಂಡದ ವಿಕಾಶ್ ಖಂಡೋಲಾ ರೇಡಿಂಗ್– ಪ್ರೊ ಕಬಡ್ಡಿ ಮೀಡಿಯಾ ಟ್ವಿಟರ್ ಚಿತ್ರ

# ಅಂಧರ ವಿಶ್ವಕಪ್ ಕ್ರಿಕೆಟ್: ಭಾರತಕ್ಕೆ ಜಯ

**ಕಟಕ್ (ಪಿಟಿಐ):** ಭಾರತ ತಂಡವು ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಜಯ ಸಂಪಾದಿಸಿತು.

ಮಂಗಳವಾರ ಇಲ್ಲಿಯ ಬಾರಾಬತಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಏಳು ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡಕ್ಕೆ ಸೋಲುಣಿಸಿತು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ 4 ವಿಕೆಟ್ ಕಳೆದುಕೊಂಡು 166 ರನ್ ಗಳಿಸಿತು. ಆರಂಭಿಕ ಆಘಾತ ಅನುಭವಿಸಿದ್ದ ತಂಡಕ್ಕೆ ಮೂರನೇ ವಿಕೆಟ್ ಜೊತೆಯಾಟದಲ್ಲಿ ಮೊಹಮ್ಮದ್ ಆಶಿಕುರ್ ರೆಹಮಾನ್ (75) ಮತ್ತು ಮೊಹಮ್ಮದ್ ಆರಿಫ್ (33) ಅವರು 84 ರನ್ ಸೇರಿಸಿ ಬಲ ತುಂಬಿದರು.

ಗುರಿ ಬೆನ್ನತ್ತಿದ ಭಾರತದ ಪರ ಟಿ. ದುರ್ಗಾರಾವ್ (73) ಮತ್ತು ನಕುಲ ಬಡಾನಾಯಕ್ (36) ಮೊದಲ ವಿಕೆಟ್ ಜೊತೆಯಾಟಕ್ಕೆ 95 ರನ್ ಸೇರಿಸಿ ತಂಡದ ಜಯವನ್ನು ಸುಲಭಗೊಳಿಸಿದರು. 13.1 ಓವರ್‌ಗಳಲ್ಲಿ ಭಾರತ ಜಯದ ಗುರಿ ತಲುಪಿತು.

**ಸಂಕ್ಷಿಪ್ತ ಸ್ಕೋರು:** ಬಾಂಗ್ಲಾದೇಶ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 166 (ಮೊಹಮ್ಮದ್ ಆಶಿಕುರ್ ರೆಹಮಾನ್ 75, ಮೊಹಮ್ಮದ್ ಆರಿಫ್ 33). ಭಾರತ 13.1 ಓವರ್‌ಗಳಲ್ಲಿ 3 ವಿಕೆಟ್‌ಗೆ 167 (ಟಿ. ದುರ್ಗಾರಾವ್ 73, ನಕುಲ ಬಡಾನಾಯಕ್ 36). ಫಲಿತಾಂಶ: ಭಾರತ ತಂಡಕ್ಕೆ ಏಳು ವಿಕೆಟ್‌ಗಳ ಜಯ

**ಸಂಕ್ಷಿಪ್ತ ಸುದ್ದಿ**

## ಐಪಿಎಲ್ ಮಿನಿ ಹರಾಜಿಗೆ 405 ಆಟಗಾರರು

**ನವದೆಹಲಿ (ಪಿಟಿಐ):** 2023ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮಿನಿ ಹರಾಜಿಗೆ ಲಭ್ಯರಿರುವ 405 ಆಟಗಾರರ ಪಟ್ಟಿಯನ್ನು ಬಿಸಿಸಿಐ ಮಂಗಳವಾರ ಬಿಡುಗಡೆ ಮಾಡಿದೆ. ಇಂಗ್ಲೆಂಡ್‌ನ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಮತ್ತು ಆಸ್ಟ್ರೇಲಿಯಾದ ಕ್ಯಾಮರೂನ್ ಗ್ರೀನ್ ಪಟ್ಟಿಯಲ್ಲಿರುವ ಪ್ರಮುಖ ಆಟಗಾರರು.

ಆರಂಭದಲ್ಲಿ 991 ಆಟಗಾರರಿದ್ದ ಪಟ್ಟಿ ಸದ್ಯ 405ಕ್ಕೆ ಇಳಿದಿದೆ. ಡಿಸೆಂಬರ್ 23ರಂದು ಕೊಚ್ಚಿಯಲ್ಲಿ ನಡೆಯಲಿರುವ ಮಿನಿ ಹರಾಜಿನಲ್ಲಿ 87 ಆಟಗಾರರನ್ನು ತಂಡಗಳು ಆಯ್ಕೆ ಮಾಡಿಕೊಳ್ಳಲಿವೆ.

ಸ್ಟೋಕ್ಸ್ ಮತ್ತು ಗ್ರೀನ್ ಅವರಿಗೆ ತಲಾ ₹ 2 ಕೋಟಿ ಮೂಲಬೆಲೆ ನಿಗದಿಪಡಿಸಲಾಗಿದೆ. ಇಂಗ್ಲೆಂಡ್‌ನ ಜೊ ರೂಟ್ ಅವರೂ ಪಟ್ಟಿಯಲ್ಲಿದ್ದು ಅವರಿಗೆ ₹ 1 ಕೋಟಿ ಮೂಲಬೆಲೆ ಇದೆ. ಕನ್ನಡಿಗರಾದ ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರಿಗೆ ₹ 1 ಕೋಟಿ ಮೂಲಬೆಲೆ ಇದೆ. ‘405 ಆಟಗಾರರಲ್ಲಿ 273 ಭಾರತೀಯ ಮತ್ತು 132 ವಿದೇಶಿ ಮತ್ತು ನಾಲ್ಕು ಮಂದಿ ಅಸೋಸಿಯೇಟ್ ರಾಷ್ಟ್ರಗಳ ಆಟಗಾರರು ಇದ್ದಾರೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

## ಫುಟ್‌ಬಾಲ್: ಜಾಮೊರಿನ್‌ಗೆ ಪ್ರಶಸ್ತಿ

**ಬೆಂಗಳೂರು:** ಕೇರಳದ ಜಾಮೊರಿನ್ ಹೈಯರ್ ಸೆಕೆಂಡರಿ ಸ್ಕೂಲ್ ತಂಡವು, ಇಕ್ವಾಲಿಟಿ ಕಪ್‌ಗಾಗಿ ನಡೆದ ಪರಿಕ್ರಮ ಚಾಂಪಿಯನ್ಸ್ ಲೀಗ್ 16 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮಂಗಳವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಜಾಮೊರಿನ್ 2–0ಯಿಂದ ದೆಹಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು ನಾರ್ತ್ ತಂಡದ ವಿರುದ್ಧ ಗೆದ್ದಿತು. ಚೆನ್ನೈನ ಡಾನ್ ಬಾಸ್ಕೊ ತಂಡವು ಮೂರನೇ ಸ್ಥಾನ ಗಳಿಸಿತು. ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಡಾನ್ ಬಾಸ್ಕೊ 2–0ಯಿಂದ ತೆಲಂಗಾಣದ ಟಿಎಸ್‌ಡಬ್ಲ್ಯುಆರ್‌ಐಇಎಸ್ ಎದುರು ಗೆದ್ದಿತು.

ಪ್ಲೇಟ್ ವಿಭಾಗದಲ್ಲಿ ಪರಿಕ್ರಮ ಸೆಂಟರ್ ಫಾರ್ ಲರ್ನಿಂಗ್ ತಂಡವು 1–0ಯಿಂದ ಟಿಐಎಸ್‌ಬಿ ಎದುರು ಜಯಿಸಿತು.

**ಷೇರುಪೇಟೆ ವಹಿವಾಟು** (▲ 402)





**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 18497 |
| ಇಂದಿನ ಅಂತ್ಯ | 18608 |
| ▲ | 110 |
| ದಿನದ ಕನಿಷ್ಠ | 18617 |

**ವಿನಿಮಯ ದರ**

| | |
|---|---|
| $ ಡಾಲರ್ | 82.60 |
| £ ಪೌಂಡ್ | 101.65 |
| € ಯುರೊ | 87.3 |
| ¥ ಯೆನ್ (100ಕ್ಕೆ) | 61.04 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹540 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹540 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1530(1530) |
| ಸೋಯಾ (ರಿಫೈನ್ಡ್) | ₹1210(1210) |
| ಸೂರ್ಯಕಾಂತಿ (ರಿಫೈನ್ಡ್) | ₹1330(1330) |
| ಪಾಮೋಲಿನ್ | ₹925(912) |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1500-2200 |
| ಮಧ್ಯಮ | ₹1000-1500 |
| ಸಣ್ಣ | ₹500-1000 |

**ತೆಂಗು ಧಾರಣೆ (ಸಾವಿರಕ್ಕೆ)**

| | |
|---|---|
| ಮಂಗಳೂರು | |
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹139 |
| ಆರ್‌ಎಸ್‌ಎಸ್-5 | ₹131 |
| ಗುಡ್ ಲಾಟ್ | ₹124 |

### ಬ್ಲೂಚಿಪ್ ಸೂಚ್ಯಂಕ: ಬ್ಯಾಂಕ್ ಆಫ್ ಅಮೆರಿಕ ಅಂದಾಜು

# ನಿಫ್ಟಿ ಮುಂದಿನ ವರ್ಷ ಶೇ 5 ಗಳಿಕೆ

**ಬೆಂಗಳೂರು (ರಾಯಿಟರ್ಸ್):** ರಾಷ್ಟ್ರೀಯ ಷೇರುಪೇಟೆಯ ನಿಫ್ಟಿ-50 ಸೂಚ್ಯಂಕವು ಮುಂದಿನ ವರ್ಷದಲ್ಲಿ ಸರಿಸುಮಾರು ಶೇಕಡ 5ರಷ್ಟು ಏರಿಕೆ ಕಾಣಲಿದೆ ಎಂದು ಬ್ಯಾಂಕ್ ಆಫ್ ಅಮೆರಿಕ ಸೆಕ್ಯುರಿಟೀಸ್ ಮಂಗಳವಾರ ಹೇಳಿದೆ. ಈ ಬೆಳವಣಿಗೆಯು ಐದು ವರ್ಷಗಳಲ್ಲಿ ನಿಫ್ಟಿ-50ರ ಅತ್ಯಂತ ನಿಧಾನಗತಿಯ ಬೆಳವಣಿಗೆ ಆಗಲಿದೆ.

ಜಾಗತಿಕ ಆರ್ಥಿಕ ಹಿಂಜರಿತ ಎದುರಾದಲ್ಲಿ ಭಾರತದ ಷೇರುಪೇಟೆಗಳ ಮೇಲೆ ಹೂಡಿಕೆ ಮಾಡುವುದು ಒಳ್ಳೆಯ ಆಯ್ಕೆ ಆಗಿರಲಿದೆ ಎಂದೂ ಬ್ಯಾಂಕ್ ಆಫ್ ಅಮೆರಿಕ ಸೆಕ್ಯುರಿಟೀಸ್ ಅಭಿಪ್ರಾಯ ವ್ಯಕ್ತಪಡಿಸಿದೆ.

2023ರಲ್ಲಿ ಈ ಬ್ಲೂಚಿಪ್ ಸೂಚ್ಯಂಕವು 19,500 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಲಿದೆ. ಮಾರುಕಟ್ಟೆಯಲ್ಲಿ ಅಸ್ಥಿರ ವಹಿವಾಟು ನಡೆಯಲಿದ್ದು ಸೂಚ್ಯಂಕವು 2023ರಲ್ಲಿ 17 ಸಾವಿರದಿಂದ 20 ಸಾವಿರದ ನಡುವೆ ಹೊಯ್ದಾಡಬಹುದು.

ಈ ವರ್ಷದಲ್ಲಿ ನಿಫ್ಟಿ ಸೂಚ್ಯಂಕವು ಶೇ 7ಕ್ಕಿಂತ ತುಸು ಹೆಚ್ಚು ಗಳಿಕೆ ಕಂಡಿದೆ. ಇದಕ್ಕೂ ಮೊದಲು ಸತತ ಮೂರು ವರ್ಷಗಳಲ್ಲಿ ಎರಡು ಅಂಕಿಗಳ ಬೆಳವಣಿಗೆ ದಾಖಲಿಸಿತ್ತು.

ಸೂಚ್ಯಂಕವು 17 ಸಾವಿರ ಅಂಶಗಳ ಸನಿಹಕ್ಕೆ ಕುಸಿದಾಗಲೆಲ್ಲ ಹೂಡಿಕೆಗೆ ಮುಂದಾಗಬಹುದು. ಭಾರತದ ಆರ್ಥಿಕ ಬೆಳವಣಿಗೆ ಮೇಲೆ ಜಾಗತಿಕ ಹಿಂಜರಿತದ ಪ್ರಮಾಣ ಕಡಿಮೆ ಇರುತ್ತದೆ ಮತ್ತು ಭಾರತದ ಷೇರುಪೇಟೆಗಳು ಹಿಂಜರಿತರ ಪರಿಸ್ಥಿತಿಯಲ್ಲಿಯೂ ಕಡಿಮೆ ನಷ್ಟ ಕಾಣುತ್ತವೆ. ಹಾಗೂ ಹಿಂಜರಿತದ ನಂತರದಲ್ಲಿ ಉತ್ತಮವಾಗಿ ಚೇತರಿಕೆ ಕಾಣುತ್ತವೆ. ಹಿಂಜರಿತದ ನಂತರದ 12 ತಿಂಗಳುಗಳಲ್ಲಿ ಭಾರತದ ಷೇರು ಮಾರುಕಟ್ಟೆಗಳು ಅಮೆರಿಕ ಮಾರುಕಟ್ಟೆಗಳಿಗಿಂತ ಹೆಚ್ಚಿನ ಲಾಭಾಂಶವನ್ನು ಕೊಡುತ್ತವೆ ಎಂದು ಅದು ಹೇಳಿದೆ.

ಭಾರತದ ಕಂಪನಿಗಳ ಷೇರುಗಳನ್ನು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹೊಂದಿರುವುದು ಈಗ ಹಲವು ವರ್ಷಗಳ ಕನಿಷ್ಠ ಮಟ್ಟವಾದ ಶೇ 18ರಲ್ಲಿ ಇದೆ. ಹೀಗಾಗಿ, ಇನ್ನೂ ಹೆಚ್ಚಿನ ವಿದೇಶಿ ಹೂಡಿಕೆ ಹೊರಹರಿವು ಕಂಡುಬರುವ ಸಾಧ್ಯತೆ ಕಡಿಮೆ ಎಂದು ಹೇಳಿದೆ.

**ಮುಖ್ಯಾಂಶಗಳು**

- ವಿದೇಶಿ ಹೂಡಿಕೆ ಮತ್ತಷ್ಟು ಹೊರಹೋಗುವ ಸಾಧ್ಯತೆ ಕಡಿಮೆ
- ಹಿಂಜರಿತದ ಸಂದರ್ಭದಲ್ಲಿಯೂ ಭಾರತದ ಷೇರುಪೇಟೆ ಹೂಡಿಕೆ ಉತ್ತಮ

## ವಾಹನ ಸಗಟು ಮಾರಾಟ ಏರಿಕೆ

**ನವದೆಹಲಿ (ಪಿಟಿಐ):** ಪ್ರಯಾಣಿಕ ವಾಹನಗಳ ಸಗಟು ಮಾರಾಟವು ನವೆಂಬರ್ ತಿಂಗಳಲ್ಲಿ ಶೇಕಡ 28ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘ (ಎಸ್‌ಐಎಎಂ) ಮಂಗಳವಾರ ತಿಳಿಸಿದೆ.

ಕಂಪನಿಗಳಿಂದ ಡೀಲರ್‌ಗಳಿಗೆ ಒಟ್ಟು 2.76 ಲಕ್ಷ ವಾಹನಗಳು ರವಾನೆಯಾಗಿವೆ. ಹಿಂದಿನ ವರ್ಷದ ಇದೇ ತಿಂಗಳಲ್ಲಿ ಒಟ್ಟು 2.15 ಲಕ್ಷ ವಾಹನಗಳು ರವಾನೆಯಾಗಿದ್ದವು. ‘ಗ್ರಾಹಕರಿಂದ ಬಂದ ಒಳ್ಳೆಯ ಬೇಡಿಕೆಯು ವಾಹನಗಳ ಮಾರಾಟ ಹೆಚ್ಚಲು ಕಾರಣವಾಗಿದೆ’ ಎಂದು ಎಸ್‌ಐಎಎಂ ಅಧ್ಯಕ್ಷ ವಿನೋದ್ ಅಗರ್ವಾಲ್ ಹೇಳಿದ್ದಾರೆ.

ಪ್ರಯಾಣಿಕ ವಾಹನಗಳ ಮಾರಾಟವು ಈ ವರ್ಷ (2022–23) ನವೆಂಬರ್‌ವರೆಗೆ ದಾಖಲೆಯ ಹೆಚ್ಚಿನ ಮಟ್ಟದಲ್ಲಿದೆ. ದ್ವಿಚಕ್ರವಾಹನಗಳ ಮಾರಾಟವು 2016–17ನೆಯ ಸಾಲಿಗಿಂತ ಕಡಿಮೆ ಇದೆ ಎಂದು ಎಸ್‌ಐಎಎಂ ಮಹಾನಿರ್ದೇಶಕ ರಾಜೇಶ್ ಮೆನನ್ ತಿಳಿಸಿದ್ದಾರೆ.

## ಜನವರಿಯಿಂದ ಟಾಟಾ ವಾಹನ ಬೆಲೆ ಹೆಚ್ಚಳ

**ನವದೆಹಲಿ (ಪಿಟಿಐ):** ಟಾಟಾ ಮೋಟರ್ಸ್ ಕಂಪನಿಯು ವಾಣಿಜ್ಯ ಬಳಕೆ ವಾಹನಗಳ ಬೆಲೆಯನ್ನು ಶೇಕಡ 2ರವರೆಗೆ ಹೆಚ್ಚಿಸಲಿದೆ. ಇದು ಜನವರಿಯಿಂದ ಜಾರಿಗೆ ಬರಲಿದೆ. ತಯಾರಿಕಾ ವೆಚ್ಚದಲ್ಲಿನ ಏರಿಕೆಯನ್ನು ನಿಭಾಯಿಸುವ ಉದ್ದೇಶದಿಂದ ಕಂಪನಿಯು ಬೆಲೆ ಏರಿಕೆಗೆ ತೀರ್ಮಾನಿಸಿದೆ.

ಬೆಲೆ ಏರಿಕೆಯ ಪ್ರಮಾಣದಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸ ಇರಲಿದೆ ಎಂದು ಕಂಪನಿ ಹೇಳಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 250-300 |
| ನಡುಗೋಲು | 450-480 |
| ರಾಶಿ | 480- 500 |
| ರಾಶಿ ಉತ್ತಮ | 550-600 |
| ಜರಡಿ | 700 - 750 |
| ಹೆರಕಿದ್ದು | 1,000-1,100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1,000 |
| ಹಸಿರು ಅತಿ ಉತ್ತಮ | 1,250-1,350 |
| ಕಾಳು ಮೆಣಸು - | 490 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12,500-25,000 |
| ಹೊಸತು | 27,500-38,000 |
| ಹಳತು | 48,000-54,500 |
| **ಭದ್ರಾವತಿ** | |
| ರಾಶಿ | 40,599-42,099 |
| **ಚನ್ನಗಿರಿ** | |
| ರಾಶಿ | 39,299-42,300 |
| **ಕಾರ್ಕಳ** | |
| ಹೊಸತು | 30,000-37,500 |
| ಹಳತು | 40,000-54,500 |
| **ಕುಂದಾಪುರ** | |
| ಹಳೆಚಾಲಿ | 53,000-55,000 |
| ಹೊಸಚಾಲಿ | 40,000-47,500 |
| **ಪುತ್ತೂರು** | |
| ಹೊಸತು | 32,000-38,000 |
| **ಸಾಗರ** | |
| ಬಿಳಿಗೋಟು | 19,599-28,299 |
| ಚಾಲಿ | 36,519-36,699 |
| ರಾಶಿ | 40,499-41,199 |
| ಸಿಪ್ಪೆಗೋಟು | 10,199-19,799 |
| **ಶಿವಮೊಗ್ಗ** | |
| ಬೆಟ್ಟೆ | 45,290-49,509 |
| ಗೊರಬಲು | 17,000-31,803 |
| ಹೊಸತು | 40,299-41,669 |
| ರಾಶಿ | 39,009-42,009 |
| **ಸಿದ್ದಾಪುರ** | |
| ಬಿಳಿಗೋಟು | 27,109-32,899 |
| ಚಾಲಿ | 36,299-39,344 |
| ಕೋಕ | 26,089-30,899 |
| ಕೆಂಪುಗೋಟು | 24,699-26,699 |
| ರಾಶಿ | 39,699-41,209 |
| ತಟ್ಟಿಬೆಟ್ಟೆ | 36,699-37,099 |
| **ಶಿರಸಿ** | |
| ಬೆಟ್ಟೆ | 26029-40899 |
| ಬಿಳಿಗೋಟು | 21,899-34,299 |
| ಚಾಲಿ | 28,899-41,212 |
| ಕೆಂಪುಗೋಟು | 26,399-27,010 |
| ರಾಶಿ | 38,679-42,509 |
| **ಯಲ್ಲಾಪುರ** | |
| ಬಿಳಿಗೋಟು | 26,612-33,229 |
| ಚಾಲಿ | 35,521-40,369 |
| ಕೋಕ | 16,899-27,299 |
| ಕೆಂಪುಗೋಟು | 29,199-32,799 |
| ರಾಶಿ | 45,199-46,899 |
| ತಟ್ಟಿಬೆಟ್ಟೆ | 36,399-40,010 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
|---|---|---|---|
| ಎಪಿ | 13000 | 13100 | 167.05 ಸೆಂಟ್ಸ್ |
| ಎಸಿ | 6700 | 6100 | |
| ಆರ್‌ಪಿ | 8500 | --- | ಲಂಡನ್ |
| ಆರ್‌ಸಿ | 4200 | 4200 | 1903 ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ** 13–12–2022

| | |
|---|---|
| ಜಾವಾ 70/80(ಹೊಸ) | 11800-11850 |
| ಜಾವಾ 80/90(ಹೊಸ) | 10900-10950 |
| ದಪ್ಪ ಮಧ್ಯಪ್ರದೇಶ(ಹೊಸ) | 9400-9500 |
| ದಪ್ಪ ಗುಜರಾತ್(ಹೊಸ) | 10050-10150 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1540(1540) |
| ಒಂದು ವಾರದ ಡೆಲಿವರಿ | 1535(1535) |
| ಸೋಯಾ ಕಚ್ಚಾ | 1125(1120) |
| ಪಾಮ್ ವಾರದ ಡೆಲಿವರಿ | 923(910) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | -- (--) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ 54000(53700)

ಬೆಳ್ಳಿ ಕೆ.ಜಿ 67400(67050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹ 455-713 |
| ದ್ವಿತಳಿ (ಬಿ.ವಿ) | ₹625-833 |

**ಕೊಬ್ಬರಿ ಧಾರಣೆ**

| | |
|---|---|
| ಅರಸೀಕೆರೆ | ₹11100-12020 |
| ಕೆ.ಆರ್.ಪೇಟೆ (ಇತರ) | ₹8433-8450 |
| ತುರುವೇಕೆರೆ | ₹12000-12000 |

## ಪ್ರಶ್ನೋತ್ತರ

**ಪ್ರಮೋದ ಶ್ರೀಕಾಂತ ದೈತೋಟ**

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ವಿನಾಯಕ,** ಬೆಳಗಾವಿ

- **ಪ್ರಶ್ನೆ:** ನಾನು ಸರ್ಕಾರಿ ನೌಕರ. ನನ್ನ ವಯಸ್ಸು 27 ವರ್ಷ. ತಿಂಗಳ ಒಟ್ಟು ಸಂಬಳ ಅಂದಾಜು ₹ 33 ಸಾವಿರ ಹಾಗೂ ಕೈಗೆ ಸಿಗುವ ಸಂಬಳ ಸುಮಾರು ₹ 27 ಸಾವಿರ. ಈ ಹಿಂದೆ, ಯು.ಪಿ. ಪುರಾಣಿಕ್ ಅವರು ಅಂಕಣ ಬರೆಯುತ್ತಿದ್ದಾಗ ಅವರ ಮಾರ್ಗದರ್ಶನ ಪಡೆದು ಬ್ಯಾಂಕ್ ಒಂದರಲ್ಲಿ ತಿಂಗಳಿಗೆ ₹ 5,000ದ ಆರ್.ಡಿ ತೆರೆದು ಮೂರು ವರ್ಷಗಳಿಗೆ ಕಂತು ಪಾವತಿಸುತ್ತಿದ್ದೇನೆ. ಮುಂದಿನ ವರ್ಷ ಡಿಸೆಂಬರ್ ತಿಂಗಳಲ್ಲಿ ಕೊನೆಯ ಕಂತು ಪಾವತಿಸುವವನಿದ್ದು 2024ರ ಜನವರಿಯಲ್ಲಿ ಸುಮಾರು ₹ 1.96 ಲಕ್ಷ ಮರಳಿ ಸಿಗುತ್ತದೆ ಎಂದು ಬ್ಯಾಂಕ್ ಮ್ಯಾನೇಜರ್ ತಿಳಿಸಿರುತ್ತಾರೆ. ನನ್ನ ಪ್ರಶ್ನೆ, ಮುಂದೆ ಏಳನೆಯ ವೇತನ ಆಯೋಗದಿಂದ ನಮ್ಮ ವೇತನ ಹೆಚ್ಚಾದರೆ ಹಾಗೂ ಆರ್.ಡಿ.ಯಿಂದ ಬರುವ ಬಡ್ಡಿಗೆ ತೆರಿಗೆ ಕಟ್ಟಬೇಕೆ? ಒಂದು ವೇಳೆ ತೆರಿಗೆ ಬರುವುದಿದ್ದರೆ, ತೆರಿಗೆ ಉಳಿತಾಯಕ್ಕೆ ಸಲಹೆ ನೀಡಿ.

**ಉತ್ತರ:** ನೀವು ಈ ಅಂಕಣದ ಮೂಲಕ ಸಲಹೆ ಪಡೆದು ಉಳಿತಾಯ ಮಾಡುವ ನಿರ್ಧಾರ ಕೈಗೊಂಡದ್ದು ಒಳ್ಳೆಯದು. ನಿಮ್ಮ ಮುಂದಿನ ಹೆಚ್ಚುವರಿ ಆದಾಯಕ್ಕೆ ಹಾಗೂ ಆರ್.ಡಿ.ಗೆ ಸಿಗುವ ಬಡ್ಡಿಯ ತೆರಿಗೆ ವಿಚಾರವನ್ನು ಪ್ರಶ್ನೆಯಲ್ಲಿ ಉಲ್ಲೇಖಿಸಿದ್ದೀರಿ. ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಒಟ್ಟಾರೆ ವಾರ್ಷಿಕ ವೇತನ ಆದಾಯ ₹ 4 ಲಕ್ಷದ ಸಮೀಪವಿದೆ. ಅದೇ ರೀತಿ ನಿಮ್ಮ ಆರ್.ಡಿ ಮೇಲಿನ 3 ವರ್ಷಗಳ ಒಟ್ಟು ಬಡ್ಡಿ ಆದಾಯ ಅಂದಾಜು ₹ 16 ಸಾವಿರದಷ್ಟು. 60 ವರ್ಷದವರೆಗೆ, ಗರಿಷ್ಠ ತೆರಿಗೆ ವಿನಾಯಿತಿ ಆದಾಯ ಮಿತಿ ₹ 2.50 ಲಕ್ಷ ಆಗಿದ್ದರೂ ತೆರಿಗೆ ವಿನಾಯಿತಿ ಹಾಗೂ ನಿರ್ದಿಷ್ಟ ಉಳಿತಾಯ ಯೋಜನೆಗಳಲ್ಲಿ ಹೂಡಿಕೆ ಮಾಡುವ ಮೂಲಕ ತೆರಿಗೆ ಇಲ್ಲದಂತೆ ಮಾಡಬಹುದು ಅಥವಾ ಅದರ ಪ್ರಮಾಣವನ್ನು ತಗ್ಗಿಸಬಹುದು.

ಆದಾಯ ತೆರಿಗೆಯ ಸೆಕ್ಷನ್ 87-ಎ ಪ್ರಕಾರ, ಯಾವುದೇ ವ್ಯಕ್ತಿಗೆ ತೆರಿಗೆಗೆ ಒಳಪಡುವ ನಿವ್ವಳ ತೆರಿಗೆ ಆದಾಯ ₹ 5 ಲಕ್ಷ ಮೀರಿರದಿದ್ದರೆ, ಅಂಥವರು ವಿಶೇಷ ತೆರಿಗೆ ವಿನಾಯಿತಿಯಾಗಿ, ಸಂಪೂರ್ಣ ತೆರಿಗೆ ಅಥವಾ ₹ 12,500, ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ವಿನಾಯಿತಿಯಾಗಿ ಪಡೆಯಲು ಅರ್ಹರು. ಹೀಗಾಗಿ ನೀವು ಮುಂದೆ ಈ ಆದಾಯ ಮಿತಿಯೊಳಗೆ ಬಂದರೆ ವಿಶೇಷ ತೆರಿಗೆ ವಿನಾಯಿತಿ ಪಡೆಯಬಹುದು. ಮಾತ್ರವಲ್ಲದೆ, ನೀವು ಸೆಕ್ಷನ್ 80ಸಿ ಅಡಿ ವಿಮಾ ಯೋಜನೆ, ಪಿಪಿಎಫ್, ತೆರಿಗೆಗೆ ಸಂಬಂಧಿಸಿದ ಯುಲಿಪ್, ಮ್ಯೂಚುವಲ್ ಫಂಡ್ ಇತ್ಯಾದಿಗಳಲ್ಲಿ ಹೂಡಿಕೆ ಮಾಡುವ ಮೂಲಕವೂ ವರ್ಷಕ್ಕೆ ₹ 1.50 ಲಕ್ಷದವರೆಗೆ ಆದಾಯದಿಂದ ಕಡಿತ ಪಡೆದು ತೆರಿಗೆ ಪ್ರಮಾಣವನ್ನು ಕಡಿಮೆ ಮಾಡಬಹುದು. ಒಂದು ವೇಳೆ ಹಳೆಯ ವರ್ಷದ ವೇತನವನ್ನು ಒಂದೇ ಬಾರಿಗೆ ನೀಡುವುದಿದ್ದು ತೆರಿಗೆ ಕಡಿತವಾದರೆ, ಸೆಕ್ಷನ್ 89 ಅಡಿ ಹಿಂದಿನ ವರ್ಷದ ಆದಾಯಕ್ಕೆ ಸಂಬಂಧಿತ ಅರಿಯರ್ಸ್ (ಹಿಂಬಾಕಿ) ಮೇಲೆ ವಿಶೇಷ ವಿನಾಯಿತಿ ಪಡೆಯಬಹುದು.

ಮುಂದೆ ವೇತನ ಹೆಚ್ಚಾದಾಗ, ನಿಖರ ಮಾಹಿತಿಯೊಂದಿಗೆ ಸರಿಯಾದ ತೆರಿಗೆ ಮಾಹಿತಿ ಪಡೆಯಲು ಸಮೀಪದ ಸಲಹೆಗಾರರನ್ನು ಸಂಪರ್ಕಿಸಿ.

**ಆನಂದ್,** ಕಲ್ಯಾಣ ನಗರ, ಬೆಂಗಳೂರು

- **ಪ್ರಶ್ನೆ:** ನನಗೆ ಇಬ್ಬರು ಮಕ್ಕಳು, ಅವರ ಹೆಸರಲ್ಲಿ ನಾನು ಒಂದಷ್ಟು ಉಳಿತಾಯ ಮಾಡುತ್ತಿದ್ದೇನೆ. ನನಗೆ ನಿಮ್ಮಿಂದ ಅಗತ್ಯವಿರುವ ಸಲಹೆ; ಮಕ್ಕಳಿಗೆ ಮುಂದಕ್ಕೆ ಅನುಕೂಲ ಆಗುವಂತೆ ಹೇಗೆ ಉಳಿತಾಯದ ಬಗ್ಗೆ ಅರಿವು ಮೂಡಿಸುವುದು ಎಂಬ ಬಗ್ಗೆ. ನಾವು ಆರ್ಥಿಕವಾಗಿ ಮಧ್ಯಮ ವರ್ಗದವರಾಗಿದ್ದು ಹೆಚ್ಚಿನ ಶಿಕ್ಷಣ ಹೊಂದಿಲ್ಲ. ಆದರೆ ಮಕ್ಕಳು ಚೆನ್ನಾಗಿ ಓದಬೇಕೆನ್ನುವುದು ನಮ್ಮ ಉದ್ದೇಶ. ಸಲಹೆ ನೀಡಿ.

**ಉತ್ತರ:** ನಿಮ್ಮ ಮಕ್ಕಳಲ್ಲಿ ಉಳಿತಾಯದ ಬಗ್ಗೆ ಚಿಕ್ಕ ವಯಸ್ಸಿನಲ್ಲೇ ಅರಿವು ಮೂಡಿಸುವ ನಿಮ್ಮ ಪ್ರಯತ್ನ ಒಳ್ಳೆಯದೇ. ಇದು ಅವರ ಮುಂದಿನ ಬದುಕಿಗೆ ನೆರವಾಗಲಿದೆ ಹಾಗೂ ಹಣದ ದುಂದುವೆಚ್ಚ ತಡೆಯುವಂತೆ ಮಾಡುತ್ತದೆ. ಉಳಿತಾಯವು ಭವಿಷ್ಯದ ಬಳಕೆಗಾಗಿ ಹಣವನ್ನು ಮೀಸಲಿಡುವುದು ಮಾತ್ರವಲ್ಲದೆ ಯಾವುದೇ ನಿರ್ದಿಷ್ಟ ಗುರಿಯನ್ನು ಆರ್ಥಿಕ ದೃಷ್ಟಿಯಿಂದ ಸಫಲಗೊಳಿಸುವಲ್ಲಿ ಸಹಕಾರಿ. ಇದಕ್ಕಾಗಿ ಕೆಲವೆಲ್ಲ ಸಣ್ಣ ಪುಟ್ಟ ವಿಚಾರಗಳನ್ನೇ ಮಾದರಿಯಾಗಿ ಅಳವಡಿಸಿ ನೀವು ಮಕ್ಕಳಿಗೆ ತಿಳಿಸಿಕೊಡಬಹುದು.

1. ಯಾವುದೇ ಹೂಡಿಕೆಗೆ ಮುನ್ನ ನೀವು ಹೂಡಿಕೆಯ ಉದ್ದೇಶವನ್ನು ಮಕ್ಕಳಿಗೆ ವಿವರಿಸಿ. ಉದಾಹರಣೆಗೆ, ಮುಂದಿನ ಎರಡು ವರ್ಷಗಳ ತರುವಾಯ ಪಾವತಿಸಬೇಕಾಗುವ ಕಾಲೇಜು ಶುಲ್ಕಕ್ಕಾಗಿ, ಸೈಕಲ್ ಖರೀದಿಸಲು ಅಥವಾ ಶಿಕ್ಷಣಕ್ಕಾಗಿ ಬೇಕಾಗುವ ಕಂಪ್ಯೂಟರ್ ತೆಗೆದುಕೊಳ್ಳಲು ಇತ್ಯಾದಿ.
2. ಯಾವುದೇ ವೆಚ್ಚ ಮಾಡುವ ಮುನ್ನ ಮಕ್ಕಳಿಗೆ ವೆಚ್ಚ ಅಂದಾಜಿಸುವ ಬಗ್ಗೆ ಅಥವಾ ಬೆಲೆಗಳಲ್ಲಿ ಆಗುವ ಬದಲಾವಣೆಯ ಬಗ್ಗೆ ಅವರ ಮಟ್ಟದಲ್ಲಿ ಅರಿವು ಮೂಡಿಸಿ. ಇದು ಒಂದರ್ಥದಲ್ಲಿ ಬಜೆಟಿಂಗ್ ಇದ್ದಂತೆ. ಇದರಿಂದ ಮಕ್ಕಳಲ್ಲಿ ಪ್ರತಿ ವಿಚಾರಕ್ಕೆ ಸಂಬಂಧಿಸಿ ಆರ್ಥಿಕ ಅರಿವು ಮೂಡುತ್ತದೆ ಹಾಗೂ ಇತಿಮಿತಿಯೊಳಗೆ ಖರ್ಚು ಮಾಡುವ ಧೋರಣೆಯನ್ನು ಎಳೆಯ ವಯಸ್ಸಿನಿಂದಲೇ ರೂಢಿಸಿಕೊಳ್ಳುವ ಹವ್ಯಾಸ ಮೂಡುತ್ತದೆ.
3. ಮಕ್ಕಳನ್ನು ತಮ್ಮ ವಯೋಮಾನಕ್ಕನುಗುಣವಾಗಿ ಹಾಗೂ ಶಿಕ್ಷಣಕ್ಕೆ ಧಕ್ಕೆ ಬರದ ರೀತಿಯಲ್ಲಿ ನಿಮ್ಮ ಕೆಲಸಗಳಿಗೂ ನೆರವಾಗುವಂತೆ ತೊಡಗಿಸಿಕೊಳ್ಳಬಹುದು. ಇದರಿಂದ ನಿಮ್ಮ ಒಂದಷ್ಟು ಹೊರೆ ಹಗುರವಾಗುವುದರ ಜೊತೆಗೆ ತಾವು ಮುಂದೆ ಸ್ವಂತ ಬದುಕು ಕಂಡುಕೊಳುವ ಕುರಿತಾಗಿ ಸ್ಪಷ್ಟ ಆಲೋಚನೆಗಳು ಮಕ್ಕಳಲ್ಲಿ ಅರಳುತ್ತವೆ. ಸ್ವಂತ ದುಡಿಮೆಗೆ ಇರುವ ಮೌಲ್ಯ ಹಾಗೂ ಗೌರವವನ್ನು ಅರಿಯುವಂತೆ ಮಾಡುತ್ತದೆ.
4. ನೀವು ಬ್ಯಾಂಕ್ ವ್ಯವಹಾರ ನಡೆಸುವಾಗ ಮಕ್ಕಳನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗಿ. ಅಲ್ಲಿನ ವಿವಿಧ ಸೇವೆಗಳ ಬಗ್ಗೆ, ಉಳಿತಾಯ ಯೋಜನೆಗಳ ಬಗ್ಗೆ ಅವರಿಗೆ ತಿಳಿಯುವ ರೀತಿಯಲ್ಲಿ ಮಾಹಿತಿ ನೀಡಿ. ಆರ್ಥಿಕ ಸಾಕ್ಷರತೆ ಕುರಿತಾಗಿ ಇಂದಿನ ಶಿಕ್ಷಣ ವ್ಯವಸ್ಥೆಯು ಹೆಚ್ಚಿನ ಅರಿವು ಮೂಡಿಸುತ್ತಿಲ್ಲವಾದ ಕಾರಣ ದಿನನಿತ್ಯದ ವ್ಯಾವಹಾರಿಕ ಅನುಭವವೇ ಮುಂದೆ ಅವರಿಗೆ ಹೆಚ್ಚಿನ ಸಂಗತಿಗಳನ್ನು ತಿಳಿಯಲು ಸಹಕಾರಿಯಾಗಬಹುದು.
5. ಸಮೀಪದ ಅಂಗಡಿಯಿಂದ ಅಗತ್ಯ ವಸ್ತುಗಳನ್ನು ಕೊಂಡು ಬರುವಂತೆ ಮಕ್ಕಳಿಗೆ ಸೂಚಿಸಿ. ಖರೀದಿಯ ನಂತರ ಉಳಿದ ಹಣದ ಲೆಕ್ಕವಿಡಲು ಹೇಳಿ. ಇದನ್ನು ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಜಮಾ ಮಾಡಿಸಿ. ನೀವು ಕೊಟ್ಟ ಹಣ, ಅವರು ಸಂದಾಯ ಮಾಡಿದ ಹಣ, ಉಳಿಕೆಯಾದ ಹಣ - ಇದಕ್ಕೆ ದಿನವಹಿ ಒಂದು ಸಣ್ಣ ಲೆಕ್ಕ ಪುಸ್ತಕ ಇಟ್ಟು ಮಾಹಿತಿ ಬರೆಯಲು ತಿಳಿಸಿ.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ-ಮೇಲ್: businessdesk@prajavani.co.in

### ವಿಶ್ವ ಟೆಸ್ಟ್ ಫೈನಲ್ ಕನಸಿಗೆ ಬಲ ತುಂಬಲು ಬಾಂಗ್ಲಾ ಎದುರು ಜಯ ಅನಿವಾರ್ಯ

# ರಾಹುಲ್ ನಾಯಕತ್ವಕ್ಕೆ ಕಠಿಣ 'ಟೆಸ್ಟ್'

ಅಭ್ಯಾಸ ನಿರತ ಭಾರತ ತಂಡದ ಆರ್. ಅಶ್ವಿನ್– ಎಎಫ್‌ಪಿ ಚಿತ್ರ

ಚಿತ್ತೋಗ್ರಾಮ, ಬಾಂಗ್ಲಾ(ಪಿಟಿಐ): ಭಾರತ ಕ್ರಿಕೆಟ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ತಲುಪಬೇಕಾದರೆ ತಾನು ಆಡಲಿರುವ ಮುಂದಿನ ಆರು ಪಂದ್ಯಗಳಲ್ಲಿ ಜಯಿಸಬೇಕಾದ ಒತ್ತಡದಲ್ಲಿದೆ.

ಈ ಹಾದಿಯ ಮೊದಲ ಸವಾಲು ಬುಧವಾರದಿಂದ ಆರಂಭವಾಗಲಿರುವ ಬಾಂಗ್ಲಾದೇಶ ಎದುರಿನ ಎರಡು ಪಂದ್ಯಗಳು ಮತ್ತು ಮುಂದಿನ ವರ್ಷ ಆಸ್ಟ್ರೇಲಿಯಾ ಎದುರಿನ ಸರಣಿಯ ನಾಲ್ಕು ಪಂದ್ಯಗಳು ಭಾರತಕ್ಕೆ ಮಹತ್ವದ್ದಾಗಿವೆ.

ಸದ್ಯ ಭಾರತ ತಂಡವು ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿ (52.08% ಪಾಯಿಂಟ್) ನಾಲ್ಕನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ (75%), ದಕ್ಷಿಣ ಆಫ್ರಿಕಾ (60%) ಹಾಗೂ ಶ್ರೀಲಂಕಾ (64%) ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ. ಭಾರತವು ತನ್ನ ತವರಿನಂಗಳದಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಎದುರು ಸರಣಿಯಲ್ಲಿ ಕ್ಲೀನ್‌ಸ್ವೀಪ್ ಮಾಡಿದರೆ ಅವಕಾಶ ಗಿಟ್ಟಸಲಿದೆ. ಅದಕ್ಕೂ ಮುನ್ನ ಬಾಂಗ್ಲಾ ಎದುರಿನ ಸರಣಿಯನ್ನೂ ಜಯಿಸುವುದು ಕೂಡ ಮುಖ್ಯವಾಗಿದೆ.

ಕಳೆದ ಏಕದಿನ ಸರಣಿಯಲ್ಲಿ ಗಾಯಗೊಂಡು ಹೊರಬಿದ್ದಿರುವ ರೋಹಿತ್ ಶರ್ಮಾ ಬದಲಿಗೆ ಬಾಂಗ್ಲಾ ಎದುರಿನ ಸರಣಿಯಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವ ವಹಿಸಲಿದ್ದಾರೆ. ವೇಗಿ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ರವೀಂದ್ರ ಜಡೇಜ ಅವರೂ ಅಲಭ್ಯರಾಗಿದ್ದಾರೆ. ಆದ್ದರಿಂದ ರಾಹುಲ್ ಹೊಣೆ ಹೆಚ್ಚಿದೆ.

'ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ತಲುಪುವ ಹಾದಿ ಸವಾಲಿನದ್ದಾಗಿದೆ. ಆದ್ದರಿಂದ ನಾವು ಆಕ್ರಮಣಶೀಲ ಆಟವಾಡುವುದು ಮುಖ್ಯವಾಗಿದೆ. ಇದಕ್ಕಾಗಿ ನಮ್ಮ ಪ್ರದರ್ಶನ ಹೇಗಿರಬೇಕು ಎಂಬ ಅರಿವು ಇದೆ. ಅದಕ್ಕೆ ತಕ್ಕಂತೆ ಆಡುವ ವಿಶ್ವಾಸವೂ ಇದೆ' ಎಂದು ರಾಹುಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ರಾಹುಲ್ ತಮ್ಮ ನಾಯಕತ್ವದ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಲಯ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಲಯ ಕಂಡುಕೊಂಡಿರುವ ವಿರಾಟ್ ಕೊಹ್ಲಿ ದೀರ್ಘ ಮಾದರಿಯಲ್ಲಿಯೂ ತಮ್ಮ ಹಳೆಯ ವೈಭವಕ್ಕೆ ಮರಳುವ ಭರವಸೆ ಮೂಡಿಸಿದ್ದಾರೆ. ಮರಳಿ ಸ್ಥಾನ ಪಡೆದುಕೊಂಡಿರುವ ಚೇತೇಶ್ವರ್ ಪೂಜಾರ ಅವರಿಗೂ ಈ ಸರಣಿಯು ಪರೀಕ್ಷೆಯೇ ಆಗಿದೆ.

ಯುವ ಆಟಗಾರರಾದ ಅಭಿಮನ್ಯು ಈಶ್ವರನ್, ಶುಭಮನ್ ಗಿಲ್ ಮತ್ತು ಬೌಲರ್ ಸೌರಭ್ ಕುಮಾರ್ ತಮಗೆ ಲಭಿಸುವ ಅವಕಾಶವನ್ನು ಫಲಪ್ರದಗೊಳಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ. ಸುಮಾರು ಒಂದು ದಶಕದ ನಂತರ ಟೆಸ್ಟ್ ತಂಡಕ್ಕೆ ಮರಳಿರುವ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ಅವರಿಂದಲೂ ನಿರೀಕ್ಷೆ ಮೂಡಿದೆ.

ಭಾರತ ತಂಡವು ಬಾಂಗ್ಲಾದೇಶ ಎದುರು ಆಡಿರುವ 11 ಪಂದ್ಯಗಳಲ್ಲಿ ಒಂಬತ್ತರಲ್ಲಿ ಜಯಿಸಿದೆ. ಎರಡು ಡ್ರಾ ಆಗಿವೆ. ಈ ಅಜೇಯ ಓಟವನ್ನು ಮುಂದುವರಿಸುವ ಛಲದಲ್ಲಿ ಪ್ರವಾಸಿ ಬಳಗವಿದೆ. ಆದರೆ ಏಕದಿನ ಸರಣಿಯನ್ನು ಗೆದ್ದಿರುವ ವಿಶ್ವಾಸದಲ್ಲಿರುವ ಆತಿಥೇಯ ತಂಡವು ಭಾರತ ತಂಡದ ಓಟಕ್ಕೆ ತಡೆಯೊಡ್ಡುವತ್ತ ಚಿತ್ತ ನೆಟ್ಟಿದೆ.

### ಪಿಚ್ ಹೇಗಿದೆ?

ಇದುವರೆಗೆ ಇಲ್ಲಿ ನಡೆದಿರುವ 22 ಪಂದ್ಯಗಳಲ್ಲಿ ಬ್ಯಾಟರ್‌ಗಳಿಗೇ ಹೆಚ್ಚು ನೆರವು ಲಭಿಸಿದೆ. 2018ರಲ್ಲಿ ಇಲ್ಲಿ ನಡೆದ ಪಂದ್ಯದಲ್ಲಿ ಶ್ರೀಲಂಕಾ 700ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿತ್ತು.

ಈ ಪಂದ್ಯದಲ್ಲಿಯೂ ಬ್ಯಾಟರ್‌ಗಳಿಗೆ ಮೊದಲೆರಡು ದಿನಗಳಲ್ಲಿ ಹೆಚ್ಚು ನೆರವು ಸಿಗುವ ಸಾಧ್ಯತೆ ಇದೆ ಎನ್ನಲಾಗಿದೆ.

# ಜಯದತ್ತ ಕೌರ್ ಪಡೆ ನೋಟ

### ಭಾರತ –ಆಸ್ಟ್ರೇಲಿಯಾ ಮೂರನೇ ಟಿ20 ಪಂದ್ಯ ಇಂದು

ಮುಂಬೈ (ಪಿಟಿಐ): ಮೂರು ದಿನಗಳ ಹಿಂದೆಯಷ್ಟೇ ಸೂಪರ್ ಓವರ್‌ನಲ್ಲಿ ರೋಚಕ ಜಯ ಸಾಧಿಸಿದ ಭಾರತದ ಮಹಿಳಾ ಕ್ರಿಕೆಟ್ ತಂಡ ಭರ್ತಿ ಆತ್ಮವಿಶ್ವಾಸದಲ್ಲಿದೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಬುಧವಾರ ನಡೆಯಲಿರುವ 3ನೇ ಪಂದ್ಯದಲ್ಲಿಯೂ ಭರ್ಜರಿ ಜಯಸಾಧಿಸುವ ಛಲದಲ್ಲಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಸೋತಿದ್ದ ಹರ್ಮನ್‌ಪ್ರೀತ್ ಕೌರ್ ಬಳಗವು ಎರಡನೇ ಪಂದ್ಯದಲ್ಲಿ ಅಪೂರ್ವ ರೀತಿಯಲ್ಲಿ ಪುಟಿದೆದ್ದಿತು. ಸ್ಮೃತಿ ಮಂದಾನ ಅವರ ಅಮೋಘ ಆಟದಿಂದಾಗಿ ಸೂಪರ್ ಓವರ್ ಜಯ ದಾಖಲಿಸಿ ಇತಿಹಾಸ ಬರೆಯಿತು. ಅದರಿಂದಾಗಿ ಸರಣಿಯಲ್ಲಿ 1–1ರ ಸಮಬಲ ಸಾಧಿಸಿದೆ. ಇನ್ನುಳಿದಿರುವ ಮೂರು ಪಂದ್ಯಗಳಲ್ಲಿ ಕನಿಷ್ಠ ಎರಡರಲ್ಲಿ ಜಯಿಸುವ ತಂಡಕ್ಕೆ ಸರಣಿ ಕಿರೀಟ ಒಲಿಯುವುದು ಖಚಿತ.

ಆತಿಥೇಯ ತಂಡದ ರಿಚಾ ಘೋಷ್, ನಾಯಕಿ ಹರ್ಮನ್ ಮತ್ತು ಶಫಾಲಿ ಉತ್ತಮ ಲಯದಲ್ಲಿದ್ದಾರೆ. ಆದರೆ ಜಿಮಿಮಾ ರಾಡ್ರಿಗಸ್ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಅವರು ಫಾರ್ಮ್ ಕಂಡುಕೊಂಡರೆ ಭಾರತ ತಂಡಕ್ಕೆ ಅವಕಾಶ ಇದೆ.

ಆಸ್ಟ್ರೇಲಿಯಾದ ಬೆತ್ ಮೂನಿ ಎರಡೂ ಪಂದ್ಯಗಳಲ್ಲಿ ಅರ್ಧಶತಕಗಳನ್ನು ಗಳಿಸಿದ್ದಾರೆ. ತಹಿಲಾ ಮೆಕ್‌ಗ್ರಾ ಕೂಡ ಅಮೋಘ ಲಯದಲ್ಲಿದ್ದಾರೆ. ಅವರಿಬ್ಬರನ್ನೂ ಕಟ್ಟಿಹಾಕುವುದೇ ಭಾರತದ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಆದರೆ ಅವರಲ್ಲದೇ ಗಾರ್ಡನರ್, ಎಲೈಸಾ ಪೆರಿ ಅವರು ಕೂಡ ಉತ್ತಮ ಬ್ಯಾಟರ್‌ಗಳಾಗಿದ್ದಾರೆ.

**ಪಂದ್ಯ ಆರಂಭ:** ಸಂಜೆ 7

## ಸಂಕ್ಷಿಪ್ತ ಸುದ್ದಿ

### ರಾಷ್ಟ್ರೀಯ ಸ್ಕೇಟಿಂಗ್: ಧನುಷ್‌ಗೆ 2ನೇ ಚಿನ್ನ

ಬೆಂಗಳೂರು: ಕರ್ನಾಟಕದ ಧನುಷ್ ಬಾಬು ಅವರು ಇಲ್ಲಿ ನಡೆಯುತ್ತಿರುವ 60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು.

ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಆಶ್ರಯದಲ್ಲಿ ತ್ಯಾಗರಾಜನಗರದಲ್ಲಿರುವ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಸ್ಕೇಟಿಂಗ್ ರಿಂಕ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಧನುಷ್ ರೇಸ್ ಸೀನಿಯರ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ಅವರು 500 ಮೀಟರ್ಸ್ ಗುರಿಯನ್ನು 42.729 ಸೆಕೆಂಡುಗಳಲ್ಲಿ ತಲುಪಿದರು.

ವಿವಿಧ ವಿಭಾಗಗಳಲ್ಲಿ ರಾಜ್ಯದ ಅರ್ಪಿತಾ ನಿಶಾಂತ್ (ಜೂನಿಯರ್ ವಿಭಾಗ), ದೇವಿಕಾ ಗೌಡ, ಆರವ್ ಕಿರಣ್, ಮುಹಮ್ಮದ್ ಶಮಿಲ್ ಅರ್ಷದ್, ರಾಘವೇಂದ್ರ ಜಿ.ವಿ, ಮೋನಿಷಾ ಎ, ನಿಮಿಷಾ ಶ್ರೀಧರ್, ಪೂರ್ವಿ ಭದಾ, ಈಸ್ತರ್ ಬರ್ನಾರ್ಡ್ ಚಿನ್ನ ಜಯಿಸಿದರೆ, ಸಮೀಕ್ಷಾ, ತಸ್ಮಯಿ ಶೆಟ್ಟಿ, ರಿಯಾ ಎಲಿಜಬೆತ್ ಅಚ್ಚಯ್ಯ ಬೆಳ್ಳಿ ಗೆದ್ದರು.

ಅಕ್ಷಯ್, ಅದಿತಿ ಪಾಂಡ್ಯ ಕಂಚು ತಮ್ಮದಾಗಿಸಿಕೊಂಡರು.

### ವಿಮಾನ ಅಪಘಾತ: ರುಡಿಶಾ ಪಾರು

ನೈರೋಬಿ (ರಾಯಿಟರ್ಸ್): 800 ಮೀಟರ್ಸ್ ಓಟದಲ್ಲಿ ಎರಡು ಬಾರಿ ಒಲಿಂಪಿಕ್ ಚಾಂಪಿಯನ್ ಆಗಿರುವ ಕೆನ್ಯಾದ ಡೇವಿಡ್ ರುಡಿಶಾ ವಿಮಾನ ಅಪಘಾತದಲ್ಲಿ ಸಾವಿನಿಂದ ಪಾರಾಗಿದ್ದಾರೆ. ಶನಿವಾರ ಕ್ರೀಡಾಕೂಟವೊಂದರಲ್ಲಿ ಪಾಲ್ಗೊಳ್ಳಲು ಕಿಮಾನಾಗೆ ತೆರಳುತ್ತಿದ್ದಾಗ ಅವರು ಪ್ರಯಾಣಿಸುತ್ತಿದ್ದ ವಿಮಾನವು ಪೈಲಟ್ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದು ನೆಲಕ್ಕಪ್ಪಳಿಸಿದೆ. ಈ ವೇಳೆ ರುಡಿಶಾ ಹೆಚ್ಚಿನ ಗಾಯಗಳಾಗದೆ ಪಾರಾಗಿದ್ದಾರೆ.

ನಿಕಿನ್ ಜೋಸ್ ಬ್ಯಾಟಿಂಗ್–ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

# ಪದಾರ್ಪಣೆಯಲ್ಲಿ ಮಿಂಚಿದ ನಿಕಿನ್, ವಿಶಾಲ್

### ರಣಜಿ ಟ್ರೋಫಿ: ದಿವೇಶ್ ದಾಳಿಗೆ ಕುಸಿದ ಅನುಭವಿ ಬ್ಯಾಟರ್‌ಗಳು; ಮಳೆಯಾಟದ್ದೇ ಮೇಲುಗೈ

• ಗಿರೀಶ ದೊಡ್ಡಮನಿ

ಬೆಂಗಳೂರು: ರಣಜಿ ಟ್ರೋಫಿ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ ಮೈಸೂರಿನ ನಿಕಿನ್ ಜೋಸ್ ಮತ್ತು ಬೆಂಗಳೂರಿನ ವಿಶಾಲ್ ಒನತ್ ಮಂಗಳವಾರ ಸರ್ವಿಸಸ್ ತಂಡದ ಎದುರು ಕರ್ನಾಟಕವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದರು.

ರಣಜಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮುಖಾಮುಖಿಯಾಗಿರುವ ಉಭಯ ತಂಡಗಳ ಪಂದ್ಯದ ಮೊದಲ ದಿನ ಕೇವಲ 40 ಓವರ್‌ಗಳ ಆಟ ನಡೆಯಿತು. ಮಳೆ ಮತ್ತು ಮಂದಬೆಳಕಿನ ಆಟದ ನಡುವೆ ಆತಿಥೇಯ ತಂಡವು ಗಳಿಸಿದ್ದು 6 ವಿಕೆಟ್‌ಗಳಿಗೆ 148 ರನ್‌ಗಳ ಸಾಧಾರಣ ಮೊತ್ತ. ಈ ಪೈಕಿ ನಿಕಿನ್ ಮತ್ತು ವಿಶಾಲ್ ಮೂರನೇ ವಿಕೆಟ್‌ಗೆ ಸೇರಿಸಿದ 84 (132ಎಸೆತ) ರನ್‌ಗಳ ಜೊತೆಯಾಟವೊಂದೇ ಕರ್ನಾಟಕದ ಪಾಲಿನ ಚೇತೋಹಾರಿ ವಿಷಯ.

ಉಳಿದಂತೆ ಎದುರಾಳಿ ತಂಡದ ಮಧ್ಯಮವೇಗಿ ದಿವೇಶ್ ಪಠಾಣಿಯಾ (40ಕ್ಕೆ5) ಅವರ ಆಟದ್ದೇ ರಂಗು.

ಅವರು ಅನುಭವಿ ಬ್ಯಾಟರ್‌ಗಳಾದ ಆರ್. ಸಮರ್ಥ್, ಮಯಂಕ್ ಅಗರವಾಲ್, ನವಪ್ರತಿಭೆ ವಿಶಾಲ್, ಮನೀಷ್ ಪಾಂಡೆ ಹಾಗೂ ಶ್ರೇಯಸ್ ಗೋಪಾಲ್ ವಿಕೆಟ್ ಕಬಳಿಸಿದರು. ಇದರಲ್ಲಿ ವಿಶಾಲ್ (33; 79ಎ, 4X6) ಮಾತ್ರ ಉಪಯುಕ್ತ ಕಾಣಿಕೆ ನೀಡಿದರು. ಭರವಸೆಯ ಬ್ಯಾಟರ್ ಶ್ರೇಯಸ್ ಖಾತೆಯನ್ನೇ ತೆರೆಯಲಿಲ್ಲ.

ಬೆಳಿಗ್ಗೆ ಸುರಿದ ಮಳೆಯಿಂದಾಗಿ ಪಂದ್ಯವು ನಿಗದಿಯ ಸಮಯಕ್ಕಿಂತ ಸುಮಾರು 70 ನಿಮಿಷ ತಡವಾಗಿ ಆರಂಭವಾಯಿತು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಸರ್ವಿಸಸ್ ತಂಡದ ನಾಯಕ ರಜತ್ ಪಲೀವಾಲಾ ನಿರ್ಧಾರವನ್ನು ದಿವೇಶ್ ಸಮರ್ಥಿಸಿಕೊಂಡರು.

ಇನಿಂಗ್ಸ್‌ನ ಮೊದಲ ಎಸೆತವನ್ನು ಬೌಂಡರಿಗಟ್ಟಿದ ಸಮರ್ಥ್ ಭರವಸೆ ಮೂಡಿಸಿದರು. ಇನ್ನೊಂದು ಬದಿಯಲ್ಲಿ ನಾಯಕ ಮಯಂಕ್ ಅಗರವಾಲ್ ಕೂಡ ನಂತರ ಓವರ್‌ನಲ್ಲಿ ಬೌಂಡರಿ ಹೊಡೆದರು. ಇದರಿಂದಾಗಿ ಉತ್ತಮ ಆರಂಭ ದೊರೆಯುವ ವಿಶ್ವಾಸ ಕುಡಿಯೊಡೆದಿತ್ತು.

ಆದರೆ, ಐದನೇ ಓವರ್‌ನಲ್ಲಿ ಪಠಾಣಿಯಾ ಎಸೆತವನ್ನು ಆಡುವ ಭರದಲ್ಲಿ ಮಯಂಕ್ ವಿಕೆಟ್‌ಕೀಪರ್ ದೇವೆಂದ್ರ ಲೊಹ್ಚಾಬ್‌ಗೆ ಕ್ಯಾಚಿತ್ತರು. ಇನಿಂಗ್ಸ್‌ನ ಏಳನೇ ಓವರ್‌ನಲ್ಲಿ ಸಮರ್ಥ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಪಠಾಣಿಯಾ ಕೇಕೆ ಹಾಕಿದರು.

ಈ ಹಂತದಲ್ಲಿ ವಿಶಾಲ್ ಮತ್ತು ನಿಕಿನ್ ಜೊತೆಗೂಡಿದರು.

ವಿಜಯ್ ಹಜಾರೆ ಟ್ರೋಫಿಯಲ್ಲಿ ಕರ್ನಾಟಕದ ಪರ ಹೆಚ್ಚು ರನ್ ಗಳಿಸಿದ್ದ ನಿಕಿನ್(62; 83ಎ, 4X6) ಚೆಂದದ ಡ್ರೈವ್‌ಗಳನ್ನು ಆಡಿದರು. ವಿಶಾಲ್ ಕೂಡ ಆತ್ಮವಿಶ್ವಾಸದಿಂದಲೇ ಆಡಿದರು. ಊಟದ ವಿರಾಮದ ನಂತರ ಇವರಿಬ್ಬರ ಜೊತೆಯಾಟದಿಂದ ರನ್‌ಗಳು ಸರಾಗವಾಗಿ ಹರಿದುಬಂದವು.

ಆದರೆ, ವಿಶಾಲ್ 28ನೇ ಓವರ್‌ನಲ್ಲಿ ಔಟಾದ ನಂತರ ಮತ್ತೆ ಕುಸಿತ ಆರಂಭವಾಯಿತು. ನಿಕಿನ್ ಜೋಸ್ ಚಹಾ ವಿರಾಮಕ್ಕೂ ಮುನ್ನ ಅರ್ಪಿತ್ ಎಸ್ ಗುಲೇರಿಯಾ ಎಸೆತದಲ್ಲಿ ಪುಲ್ಕಿತ್‌ಗೆ ಕ್ಯಾಚಿತ್ತರು. ಈ ಹಂತದಲ್ಲಿ ಜೊತೆಗೂಡಿದ ಬಿ.ಆರ್. ಶರತ್ (ಬ್ಯಾಟಿಂಗ್ 9) ಮತ್ತು ಕೆ. ಗೌತಮ್ (ಬ್ಯಾಟಿಂಗ್ 10) ಕ್ರೀಸ್‌ನಲ್ಲಿದ್ದಾರೆ. ಮಧ್ಯಾಹ್ನ 3 ಗಂಟೆಯ ನಂತರ ಮಳೆ ಮತ್ತು ಮಂದಬೆಳಕಿನ ಕಾರಣದಿಂದಾಗಿ ಆಟ ಸ್ಥಗಿತಗೊಳಿಸಲಾಯಿತು.

### ಸ್ಕೋರ್ ಕಾರ್ಡ್

**ಕರ್ನಾಟಕ ಮೊದಲ ಇನಿಂಗ್ಸ್ 6ಕ್ಕೆ148 (40 ಓವರ್)**

ಸಮರ್ಥ್ ಎಲ್‌ಬಿಡ್ಲ್ಯು ಪಠಾಣಿಯಾ 8 (22ಎ, 4X1), ಮಯಂಕ್ ಸಿ ದೇವೆಂದ್ರ ಬಿ ಪಠಾಣಿಯಾ 8 (13ಎ, 4X2), ವಿಶಾಲ್ ಎಲ್‌ಬಿಡಬ್ಲ್ಯು ಪಠಾಣಿಯಾ 33 (79ಎ, 4X6), ನಿಕಿನ್ ಸಿ ಪುಲಕಿತ್ ಬಿ ಅರ್ಪಿತ್ 62 (83ಎ, 4X6), ಮನೀಷ್ ಬಿ ಪಠಾಣಿಯಾ 10 (10ಎ, 4X1) ಶ್ರೇಯಸ್ ಸಿ ದೇವೆಂದ್ರ ಬಿ ಪಠಾಣಿಯಾ 0 (7ಎ), ಶರತ್ ಬ್ಯಾಟಿಂಗ್ 9 (23ಎ, 4X1), ಕೆ. ಗೌತಮ್ ಬ್ಯಾಟಿಂಗ್ 10 (7ಎ, 4X2)

**ಇತರೆ** 8 (ಲೆಗ್‌ಬೈ 3, ವೈಡ್ 1, ನೋಬಾಲ್ 4)

**ವಿಕೆಟ್ ಪತನ:** 1–13 (ಮಯಂಕ್ ಅಗರವಾಲ್;4.3), 2–16 (ಸಮರ್ಥ್; 6.3), 3–100 (ವಿಶಾಲ್ ಒನತ್;27.5), 4–122 (ಮನೀಷ್ ಪಾಂಡೆ; 31.6), 5–124 (ಶ್ರೇಯಸ್ ಗೋಪಾಲ್; 33.3), 6–133 (ನಿಕಿನ್ ಜೋಸ್; 37.4)

**ಬೌಲಿಂಗ್:** ದಿವೇಶ್ ಪಠಾಣಿಯಾ 12–3–40–5, ನಿಶಾನ್ ಸಿಂಗ್ 13–3–42–0, ಅರ್ಪಿತ್ ಗುಲೇರಿಯಾ 10–0–42–1, ರಾಹುಲ್ ಸಿಂಗ್ 5–0–21–0

### ವಿಜಯ್ ಮರ್ಚಂಟ್: ಕರ್ನಾಟಕಕ್ಕೆ ಜಯ

ಬೆಂಗಳೂರು: ಕರ್ನಾಟಕ ತಂಡವು ಬಿಸಿಸಿಐ 16 ವರ್ಷದೊಳಗಿನವರ ವಿಜಯ್ ಮರ್ಚಂಟ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿದೆ.

ಮಹಾರಾಷ್ಟ್ರದ ವಿದರ್ಭ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಕರ್ನಾಟಕ 10 ವಿಕೆಟ್‌ಗಳಿಂದ ಗೋವಾ ತಂಡವನ್ನು ಸೋಲಿಸಿತು.

**ಸಂಕ್ಷಿಪ್ತ ಸ್ಕೋರು:** ಗೋವಾ: ಮೊದಲ ಇನಿಂಗ್ಸ್: 88.1 ಓವರ್‌ಗಳಲ್ಲಿ 211. 2ನೇ ಇನಿಂಗ್ಸ್: 51.1 ಓವರ್‌ಗಳಲ್ಲಿ 125 (ವೇದಾಂತ್ ದಬ್ರಾಲ್ ಔಟಾಗದೆ 37, ಸಮ್ಯಕ್ ವೆಲ್ಲಾಲೂರ್ 21ಕ್ಕೆ 3, ತೇಜಸ್ ಕೆ.ಎ. 31ಕ್ಕೆ 2, ಮಣಿಕಂಠ ಶಿವಾನಂದ 26ಕ್ಕೆ 3). ಕರ್ನಾಟಕ: ಮೊದಲ ಇನಿಂಗ್ಸ್: 91 ಓವರ್‌ಗಳಲ್ಲಿ 9ಕ್ಕೆ 306 ಡಿ. (ಅಕ್ಷತ್ ಪ್ರಭಾಕರ್ 69, ತೇಜಸ್ ಕೆ.ಎ. ಔಟಾಗದೆ 86; ಸಮರ್ಥ್ 20ಕ್ಕೆ 2, ಸಾತ್ವಿಕ್ ನಾಯಕ್ 47ಕ್ಕೆ 2, ವೇದಾಂತ್ ದಬ್ರಾಲ್ 62ಕ್ಕೆ 2). ಎರಡನೇ ಇನಿಂಗ್ಸ್: 9.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 32 (ಸಿದ್ದೇಶ್ ಅಸಲ್ಕರ್ ಔಟಾಗದೆ 28). ಫಲಿತಾಂಶ: ಕರ್ನಾಟಕ ತಂಡಕ್ಕೆ 10 ವಿಕೆಟ್‌ಗಳ ಜಯ.

# ಅಲ್ಪಮೊತ್ತಕ್ಕೆ ಕುಸಿದ ಹರಿಯಾಣ

ರೋಹ್ಟಕ್ (ಪಿಟಿಐ): ವೈಭವ್ ಅರೋರಾ (15ಕ್ಕೆ4) ಮತ್ತು ಸಿದ್ಧಾರ್ಥ್ ಶರ್ಮಾ (12ಕ್ಕೆ3) ಬೌಲಿಂಗ್ ಮುಂದೆ ಹರಿಯಾಣ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು.

ಚೌಧರಿ ಬನ್ಸಿಲಾಲ್ ಕ್ರೀಡಾಂಗಣದಲ್ಲಿ ನಡೆದ ರಣಜಿ ಟೂರ್ನಿಯ ಪಂದ್ಯದ ಮೊದಲ ದಿನವಾದ ಮಂಗಳವಾರ ಹರಿಯಾಣ ತಂಡವು ಹಿಮಾಚಲ ಪ್ರದೇಶದ ಎದುರು 20.4 ಓವರ್‌ಗಳಲ್ಲಿ 46 ರನ್ ಗಳಿಸಿ ಆಲೌಟ್ ಆಯಿತು.

ಬ್ಯಾಟಿಂಗ್ ಆರಂಭಿಸಿದ ಹಿಮಾಚಲ ತಂಡವು ದಿನದಾಟದ ಕೊನೆಗೆ 67 ಓವರ್‌ಗಳಲ್ಲಿ 1 ವಿಕೆಟ್‌ಗೆ 246 ರನ್ ಗಳಿಸಿತು. ಒಟ್ಟು 200 ರನ್‌ಗಳ ಮುನ್ನಡೆ ಪಡೆಯಿತು. ಪ್ರಶಾಂತ್ ಚೋಪ್ರಾ (137; 181ಎ, 4X16, 4X16) ಅಮೋಘ ಶತಕ ಬಾರಿಸಿದರು. ರಾಘವ್ ಧವನ್ (ಬ್ಯಾಟಿಂಗ್ 86) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ರೋಹ್ಟಕ್: ಹರಿಯಾಣ 20.4 ಓವರ್‌ಗಳಲ್ಲಿ 46 (ವೈಭವ್ ಅರೋರಾ 15ಕ್ಕೆ4, ಸಿದ್ಧಾರ್ಥ್ ಶರ್ಮಾ 12ಕ್ಕೆ3) ಹಿಮಾಚಲಪ್ರದೇಶ: 1 ವಿಕೆಟ್‌ಗೆ 246 (ಪ್ರಶಾಂತ್ ಚೋಪ್ರಾ 137, ರಾಘವ್ ಧವನ್ ಬ್ಯಾಟಿಂಗ್ 86).

ಕೋಲ್ಕತ್ತದಲ್ಲಿ; ಉತ್ತರಪ್ರದೇಶ: 63.5 ಓವರ್‌ಗಳಲ್ಲಿ 198 (ರಿಂಕು ಸಿಂಗ್ 79, ಪ್ರಿಯಂ ಗರ್ಗ್ 53, ಇಶಾನ್ ಪೊರೆಲ್ 35ಕ್ಕೆ5) ಬಂಗಾಳ: 4ಕ್ಕೆ29 (ಶಿವಂ ಮಾವಿ 14ಕ್ಕೆ3)

ಸೊವಿಮ್‌ನಲ್ಲಿ: ಉತ್ತರಾಖಂಡ 78 ಓವರ್‌ಗಳಲ್ಲಿ 282 (ಕುನಾಲ್ ಚಾಂಡೆಲಾ 92, ದೀಕ್ಷಾಂಶು ನೇಗಿ 83, ಆಕಾಶ್ ಸಿಂಗ್ 45ಕ್ಕೆ3), ನಾಗಾಲ್ಯಾಂಡ್: ವಿಕೆಟ್ ನಷ್ಟವಿಲ್ಲದೇ 9.

ಕಟಕ್‌ನಲ್ಲಿ: ಒಡಿಶಾ 5ಕ್ಕೆ214 (ಶಂತನು ಮಿಶ್ರಾ 61, ಶುಭ್ರಾಂಶು ಸೇನಾಪತಿ 52, ಲುಕ್‌ಮನ್ ಮೆರಿವಾಲಾ 46ಕ್ಕ2) ವಿರುದ್ಧ ಬರೋಡಾ.

ಮುಲ್ಲನಪುರದಲ್ಲಿ: ಪಂಜಾಬ್ 85 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 363 (ಅಭಿಷೇಕ್ ಶರ್ಮಾ 100, ಪ್ರಭಸಿಮ್ರನ್ ಸಿಂಗ್ 202, ನಮನ್ ಧೀರ್ 34, ರೋಹಿತ್ ದಂಡಾ 50ಕ್ಕೆ2) ವಿರುದ್ಧ ಚಂಡೀಗಢ.